ಮಣಿಕರ್ಣಿಕಾ

ಮಲ್ಲಿಕಾ

ಮಣಿಕರ್ಣಿಕಾ

ಮಲ್ಲಿಕಾ

ವಿಘ್ನಕೃದ್ದುಷ್ಟ ವರ್ಗಸ್ಯ
ಡಿಘ್ನ ಹೃತ್ಸಜ್ಜನಸ್ಯ ಚ।
ಯೋಗಣೇಶೋ ನಮಸ್ತಸ್ಮೈ
ಗಿರಿಜಾ ಶಿವಸೂನವೇ

Manikarnika in Kannada by 'Mallika'
Published by Lakshmi Prakashana,
170, Langford Road, Bangalore-560 025.

ಪ್ರಥಮ ಮುದ್ರಣ : ೧೯೯೦

ಬೆಲೆ : ಮೂವತ್ತು ರೂಪಾಯಿಗಳು

ಮುದ್ರಕರು :

ನ್ಯೂ ಐಡಿಯಾಸ್
ನಂ. 30, 15ನೇ ಮುಖ್ಯ ರಸ್ತೆ
ಮೂರನೆಯ ವಿಭಾಗ, ಜಯನಗರ
ಬೆಂಗಳೂರು–560 011

॥ ವಿಶ್ವಮಾತಾರ್ಪಣಮಸ್ತು ॥

ಮಣಿಕರ್ಣಿಕಾ

ಮಲ್ಲಿಕಾ

ಲಕ್ಷ್ಮೀ ಪ್ರಕಾಶನ
170, ಲ್ಯಾಂಗ್ ಫೋರ್ಡ್ ರೋಡ್
ಬೆಂಗಳೂರು–560 025

ಪರಿವಿಡಿ

ನಿವೇದನೆ

ಕಲಾಜಗತ್ತಿನಲ್ಲಿ ಸತ್ ಸಾಹಿತ್ಯ ಸುಂದರಿಯು ಸರ್ವಶ್ರೇಷ್ಠಗಾದಿಯನ್ನೇರಿದ ಜ್ಞಾನಶ್ರೀಲಕ್ಷ್ಮಿ. ಇತರ ಎಲ್ಲಾ ಕಲೆಗಳೂ ಬಾಹ್ಯಸೌಂದರ್ಯ ವೈಭವದಿಂದ ವಿಜೃಂಭಿಸುತ್ತಿರುವುದು ಸತ್ಯ. ಸಾಹಿತ್ಯಲಕ್ಷ್ಮಿಯ ರೀತಿಯೇಬೇರೆ. ಆಂತರಿಕವಾದ ಜ್ಞಾನ ಸೌಂದರ್ಯದಿಂದ ಬೆಳಗಿ ವಾಙ್ಮಯ ಶರೀರಿಯಾಗಿ ರಾಗರಸಭಾವಗಳಿಂದ ಜನಮನವನ್ನು ಆಕರ್ಷಿಸುವುದಲ್ಲದೆ ಸಕಲ ಜ್ಞಾನ ದಾನಕ್ಕೆ ಸರ್ವತ್ರ ಸದಾಸಿದ್ಧ. ಅವಳ ಕೊಡಿಗೆಗೆ ಎಣೆಯೇ ಇಲ್ಲ. ವರ್ಗಬೇಧವಿಲ್ಲದೆ ಧನಿಕ ಬಡವರಲ್ಲಿ ಸಮಾನತೆಯಿಂದ ಜ್ಞಾನಜ್ಯೋತಿಯನ್ನು ಬೆಳಗಿಸಿ ಉತ್ತುಂಗಕ್ಕೇರಿಸುವ ಕಲ್ಯಾಣಿ. ಜ್ಞಾನಿಗಳನ್ನು ವ್ಯಕ್ತದ ಅಂಚಿಗೆ ಎಳೆದೊಯ್ದು ಅವ್ಯಕ್ತದ ಮಹಾ ಗಂಭೀರತೆಯನ್ನು ತೆರೆದ ಕಣ್ಣುಗಳಿಂದ ವೀಕ್ಷಿಸುವಂತೆ ಮಾಡುವ ಸಾಮರ್ಥ್ಯ ಹೊಂದಿದ ಮಹಾ ತಪಸ್ವಿನಿ. ಯಾವತ್ತೂ ನಿತ್ಯ ನೂತನ ಶೈಲಿಯಿಂದ ಲೋಕಜ್ಞಾನವನ್ನು ನೀಡುವ ಜ್ಞಾನದಾಯಿ, ಸದಯಿ, ಸರ್ವಮಂಗಳೆ.

ಸಾಹಿತ್ಯವು, ವೇದಶಾಸ್ತ್ರದೊಂದಿಗೆ ಎಲ್ಲಾ ವಿದ್ಯಾಶಾಸ್ತ್ರಗಳೂ ಸರ್ವಾಂಗೀಣ ಭಾವಗಳಿಂದ ಉದ್ದೀಪನಗೊಂಡು ಆಲೋಚನೆ ಮತ್ತು ಕಲ್ಪನೆಗಳೆಲ್ಲ ಸಮರಸವಾಗಿ ಬೆರೆತು ಭೂಮವಾಗಿ ಬೆಳೆದುಕೊಂಡರೆ ಮಾತ್ರ ಸತ್‌ಸಾಹಿತ್ಯವೆನಿಸುತ್ತದೆ. ಇವುಗಳಾವುವೂ ಇಲ್ಲದೆ ಕೇವಲ ಲಘುವಾಗಿ ನಾಟಕೀಯವಾಗಿ

ಅಸಹ್ಯವಾಗಿ ಬರಡು ಬರಡಾಗಿ ಹರಿದ ಲೇಖನವಾಹಿ ಇಂದು ಸರ್ವವ್ಯಾಪಿಯಾಗಿ ಬೆಳೆಯುತ್ತ ಸತ್ ಸಾಹಿತ್ಯಕ್ಕೆ ಪ್ರತಿ ಸಂವಾದಿಯಾಗಿ ನಿಂತಿರುವುದನ್ನು ಸರ್ವತ್ರ ಕಾಣುತ್ತೇವೆ. ಆದರೆ ಸತ್ವಾಸತ್ವಗಳನ್ನು ಅಳೆಯಬಲ್ಲ ದಿವ್ಯಜ್ಞಾನ ಸತ್ ಸಾಹಿತ್ಯದ ಎಳೆಎಳೆಯನ್ನೂ ಮುಟ್ಟಿ ಮುಟ್ಟಿ ಆನಂದಿಸಬಲ್ಲುದು. ಮುಳುಗಿ ತೇಲಿ ಸವಿಯಬಲ್ಲುದು.

ಅಂದಮೇಲೆ, ಅಂಥ ದಿವ್ಯ ಚೇತನವಾಹಿ ಸತ್ ಸಾಹಿತ್ಯ ಜ್ಯೋತಿಗೆ ತೈಲವೆರೆದು ಉಜ್ವಲವಾಗಿ ಉರಿಸಬಲ್ಲದು. ಅರ್ಥಾತ್, ಭಾವರಸವಾಹಿನಿಯನ್ನು ಮನಮನಕ್ಕೂ ಮುಟ್ಟಿಸಿ ಜಾಗೃತಗೊಳಿಸಬಲ್ಲದು. ಜೀವಸತ್ವರಸ ದೂಟಿ ಅನುಚ್ಛಾಸವಾಗಿ ಹರಿಯುತ್ತಿರಬೇಕಾದರೆ ಒಳಗಣ್ಣುಗಳು ತೆರೆಯಲೇಬೇಕು, ಸತ್ ಸಾಹಿತ್ಯ ವಿಶ್ವವ್ಯಾಪಿಯಾಗುವಂತೆ.

ಪ್ರಮೋದ ನಾಮ ಸಂವತ್ಸರದ
ಮಾರ್ಗಶಿರ ಶುಕ್ಲ ಮಲ್ಲಿಕಾ
ದ್ವಾದಶಿ–ಗುರುವಾರ ೨೯–೧೧–೧೯೯೦

ಚೆನ್ನೀಯಾಂಗ್

Old is Gold

೧

ಜಾಂಗ್–ಜೆಮಿನ್ ನಡೆದು ಬರುವ ರೀತಿಯೇ ಬೇರೆ. ಯಾರಾದರೂ, ಯಾವ ಗಳಿಗೆಯಲ್ಲಾದರೂ ಅವನ ಹೆಜ್ಜೆಗಳ ಸಪ್ಪಳದಲ್ಲಿ ಅಥವಾ ಕ್ರಮದಲ್ಲಿ ಸುಲಭವಾಗಿ ಗುರುತಿಸುವ ವಿಶಿಷ್ಟತೆ ಇದೆ. ತಾಯಿ ಚೆನ್ನೀಯಾಂಗಳಿಗಂತೂ ಇನ್ನೂ ದೂರದಲ್ಲಿರುವಾಗಲೇ ಗುರುತಿಸುವಷ್ಟು ಸರಾಗವೆಂದರೆ ಅತ್ಯುಕ್ತಿಯಲ್ಲ. ನಯನದ್ವಯಗಳು ತಕ್ಷಣ ಸದ್ದು ಬಂದೆಡೆಗೆ ಹರಿಯುತ್ತವೆ ಅಭಿಮಾನ ಪೂರ್ವಕವಾಗಿ.

ಬೀಜಿಂಗ್ ಉಪನಗರದ ಬಳಿಯಲ್ಲಿ ಜನ ಸಂಖ್ಯೆ ವಿರಳವಿದ್ದ ಸುಂದರ ಹಳ್ಳಿಯಲ್ಲಿ ಜಾಂಗ್–ಜೆಮಿನ್ ವಾಸ್ತವ್ಯ ಹೂಡಿದ್ದು ಪಿತ್ರಾರ್ಜಿತವಾದ ಹಳೆಯ ಮನೆಯಲ್ಲಿ. ಅವನ ತಂದೆ ಹುಟ್ಟಿ ಬೆಳೆದ ಮನೆ ಅದು. ಜಮೀನು ತೋಟಗಳಿರುವುದು ಮನೆಯ ಪರಿಸರದಲ್ಲೇ. ಜಾಂಗ್–ಜೆಮಿನ್ ಬೀಜಿಂಗ್ ನಗರದಲ್ಲಿ ಉದ್ಯಮಿ. ಅಲ್ಲಿಂದಲೇ ಹೋಗಿ ಬರುತ್ತಾನೆ ನಗರಿಗೆ. ಅಂದಿಂದಿಗೂ ಅದೇ ರೂಢಿ. ಆಗಾಗ ನಗರಿಯಿಂದ ತನ್ನ ಗೆಳೆಯರ ತಂಡವನ್ನು ಹಳ್ಳಿಗೆ ಆಹ್ವಾನಿಸಿ ಔತಣ ನೀಡುವುದು ವಾಡಿಕೆ. ಆ ಗೆಳೆಯರಿಗೂ ಹಳ್ಳಿಯ ಪರಿಸರ ಮತ್ತು ಪ್ರಕೃತಿಯ ಸೌಂದರ್ಯದಲ್ಲಿ ಎಲ್ಲಿಲ್ಲದ ಆಸ್ಥೆ ಮತ್ತು ಶಾಂತ ವಾತಾವರಣದಲ್ಲೂ ದಿವಿನಾದ ಆಸಕ್ತಿ. ಆದ್ದರಿಂದ ಎಲ್ಲರೂ ಔತಣ ಕೂಟಗಳಿಗೆ ಬಂದೇ ಬರುತ್ತಾರೆ.

ಜಾಂಗ್–ಜೆಮಿನ್ ಹಳೆಯ ಮನೆಗೆ ಹೊಸರೂಪು ಕೊಡುವ ಗೋಜಿಗೆ ಹೋಗಲಿಲ್ಲ. ಅದರಲ್ಲೇ ನಾಗರಿಕರಿಗೆ ಸಂತೋಷ ಕೂಟಗಳ ಮೋಜು.

ಹಳ್ಳಿಯ ಜಮೀನೇನೂ ಫಲವತ್ತಾಗಿರಲಿಲ್ಲ. ಪ್ರಕೃತಿ ಸೌಂದರ್ಯ ವಿಶೇಷ ಅಗಾಧವಾದುದು. ಬೆಟ್ಟ ಗುಡ್ಡಗಳ ಸಾಲು ಮನಮತಿಗಳನ್ನು ಮಂತ್ರ ಮುಗ್ಧಗೊಳಿಸುವಂತಹ ಮೋಹಕ, ನಯನದ್ವಯಗಳ ರಸದೃಷ್ಟಿಗೆ ಹಬ್ಬದೂಟ.

ಜಾಂಗ್–ಜೆಮಿನ್‌ನ ಮಡದಿ ಷಿನ್–ಲೀ ಬೀಜಿಂಗ್‌ನಿಂದ ಬಂದ ಹೆಣ್ಣು. ಅವಳಿಗೆ ನಗರವಾಸ ಮತ್ತು ನಾಗರಿಕತೆ ಬಹಳ ಇಷ್ಟ. ಹಳ್ಳಿ ಬಿಡಲು ಗಂಡ ಒಪ್ಪಲಿಲ್ಲವಾದ್ದರಿಂದ ಅವಳಿಗೂ ಅಲ್ಲಿಯೇ ವಾಸ್ತವ್ಯ ಹೂಡುವ ಬಲಾತ್ಕಾರ ಮಾಘಸ್ನಾನ.

ಚೆನ್ನೀಯಾಂಗ್ ಒಳ್ಳೆಯ ಕಸೂತಿ ಕಲೆಗಾತಿ. ಇಳಿವಯಸ್ಸಿನಲ್ಲಿಯೂ ಅತ್ಯಂತ ನವುರಾದ ಕಸೂತಿಯಲ್ಲಿ ಬಲು ಶ್ರದ್ಧೆ, ಕೈಗಳಿಗೆ ಬಿಡುವಿಲ್ಲದ ಕೆಲಸ. ಅವಳದನ್ನು ಹಿರಿಯರಿಂದಲೇ ಕಲಿತ ನಿಷ್ಣಾತೆ. ಶಾಲೆಗೆ ಹೋದವಳಲ್ಲ. ಕಾಲಗತಿಗೆ ಹೊಂದಿಕೊಳ್ಳುವಂತಹ ಮನೋಧರ್ಮದಿಂದ ಆಕೆ ಪರಮ ಸುಖಿ.

ಜಾಂಗ್–ಜೆಮಿನ್ ಒಳ ಬರುತ್ತಲೇ ಹೇಳಿದ ಮಡದಿ ಷಿನ್-ಲೀ–ಗೆ.

"ಈ ರಾತ್ರಿಗೆ ಪಾರ್ಟಿಯಿದೆ ನನ್ನ ಬಾಸ್ ಕೂಡ ಬರುತ್ತಾರೆ. ಅವರು ಕಾರ ತಿನ್ನುವುದಿಲ್ಲ. ಹೆಚ್ಚು ಕಾರ ಬಳಸಬೇಡ. ನಾಲ್ಕಾರು ಬಗೆಯ ಭಕ್ಷ್ಯವಿರಲಿ."

ಅದರಂತೆಯೇ ಭಕ್ಷ್ಯಭೋಜ್ಯಗಳನ್ನು ತಯಾರಿಸಿದರು ಅತ್ತೆ ಸೊಸೆಯರು ಕೂಡಿ. ಮುಸ್ಸಂಜೆ ಕವಿಯುವುದರಲ್ಲಿ ಮುಗಿಯಿತು ಒಳಗಣ ಕೆಲಸ. ಘಮಘಮಿಸಿತು ಸ್ವಾದಿಷ್ಟವಾದ ಆಹಾರ.

ಚೆನ್ನೀಯಾಂಗ್ ಉಡಿಗೆ ತೊಡಿಗೆಗಳಲ್ಲಿ ನಾಗರಿಕತೆ ಅರಿಯಳು. ಹೇಗೆ ಹೇಗೋ ಅಡ್ಡಾದಿಡ್ಡಿ ಉಟ್ಟು ತೊಡುವ ಉಡುಪು. ಮುದುಡು ಮುದುಡಾದರೂ ಲಕ್ಷ್ಯವಿಲ್ಲ. ಅಸ್ತವ್ಯಸ್ತನೇ ಸರ್ವತ್ರ ಸದಾ. ಪಾರ್ಟಿಯಲ್ಲಿ ಸ್ತ್ರೀ ಪುರುಷರು ಕೂಡಿಯೇ ಬರುತ್ತಾರೆ. ಅವರ ಮುಂದೆ ಇದೊಂದು ವಿಪರ್ಯಾಸ. ದಂಪತಿಗಳಿಗೆ ಮನದಲ್ಲಿ ಕಿರಿಕಿರಿ, ಕಸಿವಿಸಿ ಆ ತಾಯಿಯ ಅನಾಗರಿಕತೆ.

"ಅಮ್ಮಾ, ನೀನು ಮೊದಲೇ ಊಟ ಮುಗಿಸಿ ಮಲಗಿಬಿಡು" ಎಂದ ಜಾಂಗ್–ಜೆಮಿನ್.

"ಅದೇಕೆ...?"

"ನಿನಗೇಕೆ ನಮ್ಮ ಗದ್ದಲ–ಗಲಾಟೆ?"

"ಅದಕ್ಕೇನಂತೆ ಇರಲಿ, ಪರವಾಗಿಲ್ಲ. ಬೇಗ ನಿದ್ದೆ ಬರುವುದಿಲ್ಲ ನನಗೆ."

"ನೀನು ಗಲಾಟೆ ತಡೆಯಲಾರೆ....ಈ ಸಲ ಬರುವವರೆಲ್ಲ ಹೊಸಬರು."

ಕಿಸಕಿಸ ನಕ್ಕು ಬಿಟ್ಟಳು ಅವಳು, ಅವನ ಸಲಹೆಯನ್ನು ನಿರ್ಲಕ್ಷಿಸಿ. ಆಗ ದಂಪತಿಗಳಿಗೆ ಏನು ಮಾಡುವುದೆಂಬ ಯೋಚನೆ ತಲೆಯಲ್ಲಿ. ಜಾಂಗ್–ಜೆಮಿನ್ ಬಾಯಿ ಬಿಟ್ಟು,

"ಬಂದವರೆಲ್ಲಾ ತುಂಬಾ ಆಡಂಬರವಾಗಿ ನವನಾಗರಿಕತೆಯಿಂದ ಮೆರೆಯುತ್ತಿರುತ್ತಾರೆ. ನೀನು ಅವರ ಮುಂದೆ ಹೀಗಿದ್ದರೆ ಏನು ಚೆನ್ನ ? ಈವೊತ್ತೊಂದು ದಿನ ನಿನ್ನ ತಂಗಿಯ ಮನೆಗಾದರೂ ಹೋಗು. ಬಂದವರೆಲ್ಲಾ ನೋಡಿ ನಕ್ಕಾರು."

"ನಕ್ಕರೆ ನಗಲಿ, ನಾನು ಹೇಗಿದ್ದರೆ ಏನು ?" ಮರು ಸವಾಲು ಹಾಕಿದಳು ತಾಯಿ.

"ನಾಗರಿಕತೆಗೆ ಹೀಗಿದ್ದರೆ ಹೇಗೆ ? ಇದೆಲ್ಲ ಸರಿ ಹೋಗುವುದಿಲ್ಲ. ನಡೆಯಿರಿ ನಿಮ್ಮನ್ನು ಆಂಟಿ ಮನೆಗೆ ಬಿಟ್ಟು ಬರುವೆ. ಅತಿಥಿಗಳು ಹೋದ ನಂತರ ಬಂದರಾಯ್ತು."

ಷೀನ್–ಲೀ ಸ್ವಲ್ಪ ಗಡಸಿನಿಂದಲೇ ನುಡಿದಳು.

ಚೆನ್ನೀಯಾಂಗ್ ಮಾತಾಡಲಿಲ್ಲ. ಎದೆಯಾಳದಲ್ಲಿ ಕಸಿವಿಸಿ ಮೂಡಿತು.

ಂ ಂ ಂ ಂ

ಅತಿಥಿಗಳು ನೆರೆದರು. ನಗೆ ಮಾತುಗಳ ಹಾಸ್ಯ ಚಟಾಕಿ ಹಾರಿದುವು. ಪ್ರಸ್ತುತ, ರಾಷ್ಟ್ರ ಪರಿಸ್ಥಿತಿಯ ವಿಷಯ ಪ್ರಸ್ತಾಪಕ್ಕೆ ವಸ್ತುವಾಯಿತು.

ಹಿರಿಯ ವಿಜ್ಞಾನಿ ಲೌತ್ಸೆ ಅಂದ "...ಇಸ್ರೇಲಿನ ಮಿಲಿಟರಿ ಅಸ್ತ್ರ ಸಂಗ್ರಹದ ಏರು ಪೇರುಗಳನ್ನು ಗಮನಿಸಿ ಅರಬ್‌ಲೀಗ್ ಪರಮಾಣು ಶಸ್ತ್ರಾಸ್ತ್ರಗಳನ್ನು ನಿಷೇಧಿಸುವಂತಿಲ್ಲ. ನಾವು ಯಾವತ್ತೂ ಸಿದ್ಧರಿರಬೇಕು ಎಂಬ ವಾದವನ್ನು ಮುಂದಿಟ್ಟಿದೆ. ಅಮೆರಿಕದ ಯುದ್ಧ ತಂತ್ರ ನಿಪುಣರ ನಿಲುವಿಗೆ ಇದು ತಕ್ಕ ಉತ್ತರ; ಎಂದರೆ ನೀವೇನು ಹೇಳುತ್ತೀರಿ?"

ಆ ಮಾತಿಗೆ ಜಾಂಗ್-ಜೆಮಿನ್ ನುಡಿದ "ಕೇಳು, ಅಮೆರಿಕ ಅಧ್ಯಕ್ಷರು ಇಂದಿನ ಪರಿಸ್ಥಿತಿಗನುಗುಣವಾಗಿ ರಾಸಾಯನಿಕ ಅಸ್ತ್ರಗಳ ನಿಷೇಧ ಒಪ್ಪಂದ ವನ್ನು ಜಾರಿಗೆ ತರುವುದು ಒಳ್ಳಿತು ಎಂದು ಹೇಳಿರುವುದಂತೂ ಬಲು ಮುಖ್ಯ. ಕ್ರಮಕ್ರಮೇಣ ಯುದ್ಧವಾದಿಗಳು ಬಾಲ ಮುದುಡಬೇಕಾಗುತ್ತದೆ."

"ಉದ್ದೇಶಗಳು ಅತಿ ಶ್ರೇಷ್ಠವಾಗಿದ್ದರೂ ಅನೇಕ ಲೋಪದೋಷಗಳಿಂದ ಕೂಡಿರುವುದು ಸತ್ಯ. ಅಂತಹ ಅಸ್ತ್ರಗಳನ್ನು ತಯಾರಿಸಿ ರಾಷ್ಟ್ರಗಳು ಸಂಗ್ರಹಿ ಸಿಡಬಹುದೇ? ಎಂಬ ಪ್ರಶ್ನೆಗೆ ಉತ್ತರ ಇನ್ನೂ ಸಿಕ್ಕಿಲ್ಲ. ಇದರ ಪರಿಣಾಮ ವಾಗಿ ಒಪ್ಪಂದಕ್ಕೆ ಬದ್ಧವಲ್ಲದ ಅಸ್ತ್ರಪ್ರಾಬಲ್ಯದ ವಿರುದ್ಧ ಸಹಿಹಾಕಿದ ರಾಷ್ಟ್ರ ಗಳು ರಾಸಾಯನಿಕ ಅಸ್ತ್ರಗಳ ಸಂಗ್ರಹದ ಹಕ್ಕನ್ನು ಭದ್ರವಾಗಿ ಕಾಯ್ದಿರಿಸಿ ಕೊಂಡಿವೆ.

"ಹೌದು...ಹೌದು. ಇಂಥ ಪ್ರಾಮಾಣಿಕ ನಿಯಮಗಳನ್ನು ಪರಿ ಪಾಲಿಸಬೇಕೆಂಬ ಸರ್ವಸಮ್ಮತಾಭಿಪ್ರಾಯ ಐರೋಪ್ಯ ರಾಷ್ಟ್ರಗಳ ನಡುವೆ 1899ರಲ್ಲೇ ಮೂಡಿ ಬಂದಿತ್ತು. ಮೊಟ್ಟಮೊದಲ ಹೇಗ್ ಸಮ್ಮೇಳನದಲ್ಲಿ ಮೂಡಿದ ಈ ಅಭಿಪ್ರಾಯವನ್ನು 1907ರಲ್ಲಿ ಮತ್ತೆ ಮತ್ತೆ ಪುನರುಚ್ಚರಿಸ ಲಾಯಿತು. ಆದರೂ, ಮೊದಲ ವಿಶ್ವಯುದ್ಧದಲ್ಲಿ ರಾಸಾಯನಿಕ ಅಸ್ತ್ರ ಗಳನ್ನು ಪ್ರಯೋಗಿಸದಂತೆ ತಡೆಯಲು ಆಗಲೇ ಇಲ್ಲ. ಇದರಿಂದಾದ ದುಷ್ಪರಿ ಣಾಮ ವಿಶ್ವವನ್ನೇ ತಲ್ಲಣಗೊಳಿಸಿದ ವಿಚಾರ ಯಾರಿಗೆ ಗೊತ್ತಿಲ್ಲ? ಪರಿಸ್ಥಿತಿ ಹೀಗಿರುವಾಗ...."

ಗ್ಲಾಡಿಸ್-ಯಾಂಗ್ ನಡುವೆ ಬಾಯಿ ಹಾಕಿದ "ಈ ವಿಚಾರವಾಗಿ ಎಷ್ಟು ಚರ್ಚೆ ಮಾಡಿದರೂ ಆಗುತ್ತಿರುವ ಯಾವೊಂದು ಅನಾಹುತವನ್ನೂ

ನಾವು ತಪ್ಪಿಸಲಾರೆವು. ಅಂದಮೇಲೆ, ಯುದ್ಧ ವಿರೋಧಿ ರಾಷ್ಟ್ರಗಳ ಒಕ್ಕೂಟ ಮಾಡಬೇಕಾದುದು ತುಂಬಾ ಇದೆ. ಇವರೆಂದೂ ಕೈಕಟ್ಟಿ ಸುಮ್ಮನೆ ಕೂಡಬಾರದು."

ಲೂವಿಾ–ಷಿನ್‌ವೇ "ಅದಿರಲಿ, ಇಲ್ಲಿಕೇಳಿ ಚೀನಿ ಸಾಮ್ರಾಜ್ಯದ ಮೊದಲ ಚಕ್ರವರ್ತಿ ಚಿನ್ ಮಹಾಸ್ವಾರ್ಥಿ. ತನ್ನ ಆಳ್ವಿಕೆ ಅಜರಾಮರವಾಗಿ ಉಳಿಯಬೇಕೆಂಬ ಏಕಮಾತ್ರ ಉದ್ದೇಶದಿಂದ ಏನೆಲ್ಲ ಮಾಡಿದ...? ಈ ಸ್ವಾರ್ಥ ಸಾಧನೆ ಅಂದು ಮಾತ್ರವಲ್ಲ. ಅಂದಿಂದಿಗೂ ನಡೆದು ಬಂದಿದೆ. ಮುಂದೆಯೂ ಮುಗಿಯುವಂಥಾದ್ದಲ್ಲ. ಕಲಿತವರೆಲ್ಲಾ ಹೇಳುವುದೊಂದು ಮಾಡುವುದೊಂದು. ಈವರೆಗೆ ಯಾವೊಂದು ಒಪ್ಪಂದವೂ ಕ್ರಮಬದ್ಧವಾಗಿ ಉಳಿದಿಲ್ಲ. ಒಪ್ಪಂದದ ಅಂಕಿತ ಕಡತದಲ್ಲಿ. ಇವರೆಲ್ಲಾ ಇನ್ನೆಲ್ಲೋ..."

ಎಲ್ಲರ ಮುಖದ ಮೇಲೂ ನಗುವಿನ ಹೊನಲು ಉಕ್ಕಿ ಹರಿಯಿತು.

"ರಾಷ್ಟ್ರಗಳ ಮಟ್ಟದಲ್ಲೇ ಹೀಗಾದರೆ ಸಾಮಾನ್ಯರ ಪಾಡೇನು?" ಎಂದಳು ಷಿನ್–ಲೀ.

"ಚೀನೀ ಸಾಮ್ರಾಜ್ಯದ ಚಕ್ರವರ್ತಿ ಚಿನ್ ಮಾಡಿದ್ದು ಅಷ್ಟೇ ಏನು? ತನ್ನ ಆಳ್ವಿಕೆಯ ಮೇಲೆ ಯಾವ ನೆರಳೂ ಚಾಚದಿರಲೆಂದು ಹಿಂದಿನವರ ಹೆಸರು ಕಿಂಚಿತ್ತೂ ಉಳಿಯದಂತೆ ಪ್ರಾಚೀನ ದಾಖಲೆಗಳನ್ನೆಲ್ಲ ಅಳಿಸಿ ಹಾಕಲು ಆಜ್ಞೆ ಮಾಡಿದ. ಆ ಕಾರ್ಯಾಚರಣೆಯಲ್ಲಿ ಸರಕಾರಿ ದಾಖಲೆಗಳು ಮಾತ್ರ ವಲ್ಲ. ಪ್ರಾಚೀನ ಸಾಹಿತ್ಯವೂ ನಾಶವಾಗಿ ಹೋಯಿತು!"

ಮಾತುಕತೆ ಪ್ರಪಂಚ ರಾಜಕೀಯದ ಕಡೆ ಹರಿಯುತ್ತಿದ್ದಂತೆಯೇ ಊಟೋಪಚಾರ ಮುಗಿದು ಎಲ್ಲರೂ ಬೈಠಕ್ ಖಾನೆಗೆ ಬಂದು ಕುಳಿತರು. ಬೈಠಕ್ ಖಾನೆಯನ್ನು ಅಲಂಕರಿಸಿದ ಅತ್ಯಂತ ನವುರಾದ ಮತ್ತು ಬಲೂ ಸೂಕ್ಷ್ಮವಾದ ಕಸೂತಿಯ ವಸ್ತ್ರಗಳನ್ನು ನೋಡಿ ಅಚ್ಚರಿಯ ಕುಂಡದಲ್ಲಿ ಮುಳುಗೆದ್ದರು ಅತಿಥಿಗಳು. ಎಲ್ಲರ ಮುಖದಲ್ಲೂ ಆನಂದಾಶ್ಚರ್ಯದ ಮುದ್ರೆಯೇ.

“ಅಃ ಎಂತಹ ಅಮೋಘವಾದ ಕರಕುಶಲತೆ ? ಎಲ್ಲಿಂದ ಬಂದುವು ? ಕೊಂಡುಕೊಂಡಿರೋ ಅಥವಾ...?”

ಆಗ ಷಿನ್–ಲೀ ಮುಂದಾಗಿ ನುಡಿದಳು “ಇವೆಲ್ಲಾ ನಮ್ಮವೇ ಕೈಗಾರಿಕೆ. ಕೊಂಡುಕೊಂಡವೇನೂ ಅಲ್ಲ.”

“ನಿಜವಾಗಿ...?” ಅತ್ಯಾಶ್ಚರ್ಯದಿಂದ ಕೇಳಿದ ಬಾಸ್.

“ಹೌದು....ಹೌದು...”

ಅವನು ತನ್ನ ಮಡದಿಯ ಕಡೆ ತಿರುಗಿ ಅಂದ “ಹಾಗಾದರೆ ನೀನೂ ಕಲಿತುಕೊಳ್ಳಬಹುದಲ್ಲವೆ...?”

“ಹೌದಲ್ಲಾ, ಎಂತಹ ಸೂಕ್ಷ್ಮತರವಾದ ಕುಶಲ ಕಲೆ !”

ಎಲ್ಲರೂ ಅವುಗಳ ಮೇಲೆ ಕಣ್ಣಾಡಿಸಿ ಅತ್ಯಾನಂದ ಚಕಿತರಾದರು.

“ನೀನು ನನಗೆ ಹೇಳಿಕೊಡಬಲ್ಲೆಯಾ?” ಕೇಳಿದಳು ಲೂವಿಾ–ಷಿನ್‌ವೇ.

ಆಗ ಷಿನ್–ಲೀ ಸಿಕ್ಕು ಬಿದ್ದಳು. ಅವಳಿಗೆ ಕಸೂತಿಯ ಗಂಧವೇ ಇರಲಿಲ್ಲ. ಎಲ್ಲರೆದುರಿಗೆ ತನ್ನದೇ ಎಂಬಂತೆ ಪ್ರದರ್ಶನ ಮಾಡಿದ್ದಳಾಕೆ.

ಅವರ ಸಹಾಯಕ್ಕೆ ಜಾಂಗ್–ಜೆಮಿನ್ ಬರಬೇಕಾಯಿತು.

“ಅವನ್ನು ನನ್ನ ತಾಯಿ ಚೆನ್ನೀಯಾಂಗ್ ತಯಾರಿಸಿದ್ದಾಳೆ. ಅವಳು ಚಿಕ್ಕಂದಿನಿಂದಲೇ ಕಸೂತಿ ಕಲೆಯಲ್ಲಿ ನುರಿತವಳು...ಬಹಳ ಚಾಲೂಕು. ಈಗಲೂ ಅವಳು ಕೈಬಿಟ್ಟಿಲ್ಲ.”

“ಎಲ್ಲಿ ಹಾಗಾದರೆ...ನಾವು ನೋಡಬೇಕಲ್ಲ?”

“ಅವಳು ವೃದ್ಧೆ. ಹೆಚ್ಚು ಜನರ ಕೂಟದಿಂದ ತೊಂದರೆಯಾಗಬಹುದೆಂದು ನನ್ನ ಚಿಕ್ಕಮ್ಮನ ಮನೆಗೆ ಬಿಟ್ಟುಬಂದೆ.”

“ಇನ್ನೊಮ್ಮೆ ಬರುವೆ ಅವಳನ್ನು ನೋಡಬೇಕು. ಇಂತಹ ಕಲೆಗಾತಿಯನ್ನು ನಮ್ಮ ಕಣ್ಣಿಗೆ ದೂರವಾಗಿ ಕಳಿಸಿದ್ದೀರಲ್ಲ ಏಕೆ ?”

ಷಿನ್–ಲೀಗೆ ಮೈಮನಗಳೆಲ್ಲಾ ಸಂಕೋಚದ ಗೂಡಾಗಿ ಹೇಳಲಾರದೆ ಹೇಳಿದಳು.

“ಮುದುಕಿಗೆ ತೊಂದರೆಯಾಗದಿರಲಿ ಅಂತ.”

“ಓ, ಹಾಗೇನೂ ಒಳ್ಳೆಯದಾಯ್ತು ಪಾಪ, ಹಿರಿಯರಿಗೆ ವಿಶ್ರಾಂತಿ ಬೇಕು. ಹಾಗೆ ಕಳಿಸಿದ್ದು ಒಳ್ಳೆಯದಾಯ್ತು. ಆಗಲಿ, ನಾವು ಅವರನ್ನು ನೋಡಲಿಕ್ಕೆ ಇನ್ನೊಮ್ಮೆ ಬರುವುದುಂಟು.”

“ಆಗಲಿ, ಆಗಲಿ. ಅವಳು ಮನೆಯಲ್ಲೇ ಇರುತ್ತಾಳೆ.”

“ಬರುತ್ತೇನೆ ನಮಸ್ಕಾರ...”

○ ○ ○ ○

ಮಧ್ಯರಾತ್ರಿಯು ಕಳೆದು ಹೋದುದರಿಂದ ಚೆನ್ನೀಯಾಂಗಳನ್ನು ಕರೆ ತರುವ ಯೋಚನೆ ಕೈ ಗೂಡಲಿಲ್ಲ.

ಇರುಳು ಉರುಳಿತು. ಮುಂಬೆಳಕು ಮೂಡಿತು.

ಲೋಕವೆಲ್ಲ ದಿನಚರಿಯನ್ನು ಆಚರಿಸುವ ಸಲುವಾಗಿ ಎದ್ದು ಗಡ ಬಡಿಸಿತು.

ಚೆನ್ನೀಯಾಂಗ್ ಸಾಲು ಮೆಟ್ಟಿಲುಗಳನ್ನು ಹತ್ತಿ ಒಳ ಬಂದಾಗಲೇ ಜಾಂಗ್-ಜೆಮಿನ್ ಅಂದ “ಅಮ್ಮಾ, ರಾತ್ರಿ ಪಾರ್ಟಿ ಕಳೆಯುವಾಗ ಮಧ್ಯ ರಾತ್ರಿ ಕಳೆದಿತ್ತು. ನೀವು ಅಲ್ಲಿ ಉಳಿದಿದ್ದು ಲೇಸಾಯ್ತು.”

“ಹಾಗಾದರೆ ಕುಣಿತ-ಕುಡಿತಗಳ ಮೋಜು ಜೋರು ಅನ್ನು.”

ಅವನು ದೊಡ್ಡ ದನಿಯಲ್ಲಿ ನಕ್ಕುಬಿಟ್ಟ.

ಕಿವಿಗಿಂಪಾಗಿ ಹರಿದು ಬರುವ ಪಕ್ಷಿಗೊರಳ ಸುಪ್ರಭಾತದ ರಸಮಾಧು ರ್ಯವನ್ನು ಮನದುಂಬಿಕೊಳ್ಳುತ್ತ ನುಡಿದಳು ತಾಯಿ “ನಾನು ದೂರವಿದ್ದುದು ಒಳ್ಳೆಯದಾಯ್ತು ಬಿಡು, ಹೊಸದರೊಂದಿಗೆ ಈ ಹಳತು ಹೊಂದುತ್ತಿರಲಿಲ್ಲ.”

“ಹಾಗೆನ್ನುವಂತಿಲ್ಲ ನಿಮಗೆ ಆಯಾಸವಾಗುತಿತ್ತು ಅಷ್ಟೆ.”

ಅವಳು ಮಾತಾಡದೆ ಜಗಲಿಯಂಚಿನ ಕುರ್ಚಿಯ ಮೇಲೆ ಕುಳಿತು ಕೊಂಡಳು. ಬೆಳಗಿನ ಪ್ರಶಾಂತ ವಾತಾವರಣ ಪರಿಪುಷ್ಟಿ ನೀಡಿತು ತನು ಮನಗಳಿಗೆ.

"ಕೈ ಕಾಲು ಗಟ್ಟಿ ಇರುವ ಚೇತನವನ್ನೇ ಮುದುಕಿ ಎಂದು ಈಗಲೇ ಮೂಲೆಗೆ ತಳ್ಳಿದವರು ನೀವು. ಯೋಚಿಸಿ ನೋಡಿದರೆ ಮುಂದೇನೋ ಎನಿಸುತ್ತೆ ನನಗೆ..."

"ಹಾಗೇನಿಲ್ಲ ಬಿಡಿ. ನಿಮ್ಮನ್ನು ಹೇಗಿಡಬೇಕೋ ಹಾಗಿಡೋಣ."

ತುಂಟನಗೆ ಬೀರಿದ ಜಾಂಗ್–ಜೆಮಿನ್.

"ನನಗೂ ಬೇಕು-ಬೇಡಗಳಿವೆ. ನಾನು ಬಯಸಿದ್ದು ನನಗೆ ಕೈಗೆಟುಕುವಂತಿರಬೇಕು. ನಾನು ಯಾವತ್ತೂ ಸಂಸಾರಕ್ಕೆ ಭುಜ ಕೊಟ್ಟವಳೆ. ಇಡೀ ಜೀವಮಾನವೆಲ್ಲ ದುಡಿಯುವುದರಲ್ಲೇ ಕಳೆದೆ. ವಿಶ್ರಾಂತಿ ಬಯಸಿದವಳಲ್ಲ. ಸೋಮಾರಿತನ ಈ ಬಳಿಯಲ್ಲಿ ಸುಳಿಯಲಿಲ್ಲ. ಈ ಹೊತ್ತೂ ನಾನು ನಿಮ್ಮಿಂದ ಏನನ್ನೂ ನಿರೀಕ್ಷಿಸಲಿಲ್ಲ. ಕಡೆಗಾಲದಲ್ಲಿ ನನಗೆ ಬೇಕಾದುದು ಶಾಂತಿ ಮಾತ್ರ. ನನ್ನ ದುಡಿಮೆಯೇ ಕೊನೆಗಾಲದವರೆಗೂ ನನಗೆ ಅನ್ನ ನೀಡಲು ಸಾಕು... ನಿನಗೆ ಇನ್ನೊಂದು ಮಾತು ಹೇಳುತ್ತೇನೆ ಕೇಳು. ನನಗೆ ಸ್ವಾತಂತ್ರ್ಯ ಜನ್ಮಸಿದ್ಧ ಹಕ್ಕು. ಅದನ್ನು ನೀನು ಕಸಿಯಲಾರೆ, ಎಂದರೆ ಏನು ಹೇಳುತ್ತಿ? ನನಗೆ ಎಲ್ಲಾದರೂ ಇರುವ ಹಕ್ಕಿದೆ."

"ಬಿಡಿ, ನಿಮ್ಮ ಸ್ವಾತಂತ್ರ್ಯವನ್ನೇನೂ ಕಸಿಯುವುದಿಲ್ಲ ನಾನು."

"ಒಂದು ವೇಳೆ ನಾನು ನರಳುವಂತಹ ರೋಗಕ್ಕೀಡಾದರೆ ನನಗೆ ನಾನೇ ಮೃತ್ಯುವಾಗುವಂತಹ ಸ್ವಾತಂತ್ರ್ಯ ಬೇಕು."

"ಹಾಗೆಂದರೆ ಏನರ್ಥ?"

"ನನಗೆ ವಿಷ ತೆಗೆದುಕೊಳ್ಳುವ ನೈತಿಕ ಹಕ್ಕು ಇರಬೇಕು."

ಆ ಮುಹೂರ್ತದಲ್ಲಿ ನಿಬ್ಬೆರಗಾದಂತೆ ಸುಮ್ಮನಾದ ಜಾಂಗ್–ಜೆಮಿನ್.

o o o o

ಅಂದು, ಬಾಸ್ ಮಡದಿಯೊಂದಿಗೆ ಬಂದಿಳಿದ ಪ್ರಸನ್ನ ಮುಖದಲ್ಲಿ ಹಸನಾದ ನಗು ಅರಳಿತ್ತು.

ಜಾಂಗ್–ಜೆಮಿನ್ ಮತ್ತು ಷಿನ್–ಲೀ ಬಲು ಆತ್ಮೀಯತೆಯಿಂದ ಬರಮಾಡಿಕೊಂಡರು. ಬಾಸ್ ಒಳ ಬಂದವನೇ ಕೇಳಿದ "ಅಮ್ಮಾ ಎಲ್ಲಿ?"

ಮುದುಡಿಯೂ ಹಾಗೆಂದೇ ಕೇಳಿದಳು, ದನಿಯಲ್ಲಿ ಹಾಲ್ಜೇನೇ ಹರಿದು ಬಂತು.

ಷಿನ್-ಲೀ ಒಳ ಹೋಗಿ ತಾಯಿಯನ್ನು ಕರೆತಂದಳು.

ಚೆನ್ನೀಯಾಂಗ್ ಎದುರಿಗೆ ಬರುತ್ತಲೂ ದಂಪತಿಗಳು ಎದ್ದುನಿಂತು ಸಂಧ್ಯಾವಂದನೆಯನ್ನು ಸಲ್ಲಿಸಿದರು. ಅವರಿಬ್ಬರೂ ಎದ್ದುದರಿಂದ ಜಾಂಗ್-ಜೆಮಿನ್ ಸಹ ಎದ್ದು ನಿಂತು ಗೌರವ ತೋರಿದ. ಚೆನ್ನೀಯಾಂಗ್ ಅತಿಥಿಗಳನ್ನು ಕುಳಿತುಕೊಳ್ಳ ಹೇಳಿ ತಾನೂ ಕುಳಿತುಕೊಂಡಳು.

ಪರಸ್ಪರ ಕ್ಷೇಮ ಸಮಾಚಾರಗಳ ವಿನಿಯೋಗ ನಡೆಯಿತು. ಆತ್ಮೀಯತೆಯ ಸನ್ನಿಧಿಯಲ್ಲಿ ಹೊತ್ತು ಸರಾಗವಾಗಿ ಕಳೆಯಿತು.

ವೃದ್ಧೆಯ ಅಸ್ತವ್ಯಸ್ತ ಉಡುಪಿನಿಂದಾಗಲೀ ಮಾತುಕತೆಯಿಂದಲಾಗಲಿ ಅತಿಥಿಗಳು ಮನ ಮುದುಡಿ ಜಿಗುಪ್ಸೆಗೊಳ್ಳಲಿಲ್ಲ. ನಗೆ ಚಟಾಕಿಗಳನ್ನು ಹಾರಿಸುತ್ತ ಸಂತೋಷದಿಂದಲೇ ಹೊತ್ತು ಕಳೆದರು. ಚಹ ತಿಂಡಿಗಳ ವಿನಿಯೋಗವೂ ಆಯಿತು.

ಅನಂತರ ಬಾಸ್ ಕೇಳಿದ "ನಿಮ್ಮ ಕಸೂತಿ ಕಲೆಯಿಂದ ನಮಗೆ ತುಂಬಾ ಸಂತೋಷ ಉಂಟಾಗಿದೆ. ನೀವು ಇಷ್ಟು ಸುಂದರವಾದ ಕಲೆಯ ಅಭ್ಯಾಸ ಹೇಗೆ ಮಾಡಿದಿರಿ? ಎಲ್ಲಿ ಕಲಿತಿರಿ? ನಿಮ್ಮ ಕರ ಕುಶಲತೆ ಆಶ್ಚರ್ಯಕರವಾಗಿದೆ. ಖಂಡಿತವಾಗಿಯೂ ಮೆಚ್ಚುವಂತಹ ಕೆಲಸ."

ಕುಳ್ಳು ದೇಹದ ಗುಜ್ಜು ಗುಜ್ಜಾದ ಮೈಯಿನ ವೃದ್ಧೆ ತಲೆಯಲ್ಲಿ ಕೆದರಿದ ಕೂದಲುಗಳನ್ನು ಹಿಂದಕ್ಕೆ ತಳ್ಳಿ ನುಡಿದಳು "ಈ ಕಲೆ ನಮ್ಮ ವಂಶ ಪಾರಂಪರ್ಯವಾದುದು. ಅಜ್ಜಿಯ ಕಾಲದಿಂದ ಒಬ್ಬರಿಂದೊಬ್ಬರಿಗೆ ಕಲಿಸಿ–ಕಲಿತು ಬಂದ ಮಹಾವಿದ್ಯೆ. ನನ್ನ ಹೆಣ್ಣು ಮಕ್ಕಳು ಕಲಿತಿದ್ದಾರೆ. ಸೊಸೆ ಕಲಿಯಲಿಲ್ಲ, ಅಷ್ಟೆ. ಕಲಿತಿದ್ದರೆ ಅವಳಿಗೂ ಬರುತಿತ್ತು. ಈ ಅಮೋಘವಾದ ವಿದ್ಯೆ ನಮ್ಮ ನಮ್ಮ ಕಾಲಕ್ಕೇ ಮುಗಿಯಬಾರದು. ಮುಂದುಮುಂದಕ್ಕೂ ಬೆಳೆಯುತ್ತ ಹೋಗುವುದೇ ಚೆನ್ನು. ನನಗೆ ಅನೇಕವೇಳೆ ಈ ಅಮೋಘವಾದ ಕಲೆ ನನ್ನೊಂದಿಗೇ

ಸಾಯಬಾರದು ಎನಿಸುತ್ತೆ. ಯಾರಾದರೂ ಇಷ್ಟ ಪಟ್ಟು ಕಲಿಯುವವರಿದ್ದರೆ ಹೇಳಿಕೊಡಬಹುದು. ಸಧ್ಯ ಕಲಿಯುವರಿಗೆ ವಿದ್ಯೆ ಕರಗತವಾದರೆ, ನನ್ನ ಕಾಲ ಹರಣಕ್ಕೆ ಒಂದು ದಾರಿಯೂ ಆಗುತ್ತೆ, ನನಗೆ ಜೊತೆಗಾತಿಯರೂ ಆಗುತ್ತಾರೆ. ಆದರೆ, ಯಾರಿಗೂ ಅಂತಹ ಉತ್ಸಾಹವೇ ಇಲ್ಲ ಈ ಕಾಲದಲ್ಲಿ. ಪಟ್ಟಣಗಳ ಹವ್ಯಾಸದಲ್ಲಿ ಕುಡಿತ–ಕುಣಿತಗಳ ಮೋಜಿನಲ್ಲೇ ಗಮನ. ನಾವೇನು ಮಾಡೋಣ ?"

ದಂಪತಿಗಳು ನಕ್ಕು ಬಿಟ್ಟರು.

ಬಾಸ್ ಪ್ರಸನ್ನ ಮುಖದಿಂದ ಅಂದ "ನೀವು ಕಲಿಸುವ ಇಚ್ಛೆ ಹೊಂದಿರುವುದು ತುಂಬಾ ವಿಶೇಷ. ಈ ವಯಸ್ಸಿನಲ್ಲಿ ಇಷ್ಟೊಂದು ಆಸಕ್ತಿ ಇರುವುದನ್ನು ನೋಡಿದರೆ ನನಗೇ ಕಲಿತುಕೊಳ್ಳುವ ಆಸಕ್ತಿ ಮೂಡುತ್ತೆ !"

"ಕಲಿತುಕೊ ಮಗನೇ ಕಲಿತುಕೊ ....!" ನಗುತ್ತ ಸಾನಂದದಿಂದ ಪುನಃ ನುಡಿದಳು ತಾಯಿ– "ನೋಡು ಈಗಿನ ಬಹುತೇಕ ಮಂದಿ ಕಣ್ಣಿದ್ದೂ ಕುರುಡು. ಅವರಿಗೆಲ್ಲಾ ಈ ಬಗೆಯ ಕಲೆಗಳು ಅರ್ಥವೇ ಆಗುವುದಿಲ್ಲ. ಇಷ್ಟವೂ ಇಲ್ಲ. ನಮ್ಮ ಯುವ ಜನಾಂಗ ಹೀಗಿದೆ."

"ನನ್ನ ಪತ್ನಿ ಇಷ್ಟ ಪಡುತ್ತಾಳೆ. ಅವಳನ್ನು ಆಗಾಗ ಕರೆತಂದು ಬಿಟ್ಟು ಹೋಗುವೆ. ನಿಮ್ಮ ಬಳಿ ಕಲಿಯುವ ಇಚ್ಛೆ ಹೊಂದಿದ್ದಾಳೆ. ನೀವು ಕಲಿಸಿ, ನೀನೆಂದಂತೆ ನಿಮಗೊಬ್ಬ ಗೆಳತಿಯೂ ಸಿಗುತ್ತಾಳೆ."

"ಆಯ್ತಾಯ್ತು, ತುಂಬಾ ಸಂತೋಷ ಮಗಳೇ."

"ನಾನು ನನ್ನ ಗೆಳತಿಯನ್ನೂ ಕರೆತರುವೆ. ನಿಮ್ಮ ಕುಶಲಕಲೆಯನ್ನು ನನ್ನ ಪತಿ ಬಹಳ ಮೆಚ್ಚಿದ್ದಾನೆ. ನಾನು ಖಂಡಿತ ಕಲಿತುಕೊಳ್ಳುವೆ."

"ಖಂಡಿತ ಬಾ ಮಗಳೇ. ನೀನು ಕಲಿಯುವುದೆಂದರೆ ಬಹಳ ಸಂತೋಷ. ನೀನು ಶ್ರದ್ಧೆ ವಹಿಸುವೆಯಾದರೆ ..."

"*O my God!* ಅವರು ಬಂದಿರವುದೇ ಅದಕ್ಕಾಗಿ!" ಎಂದ ಜಾಂಗ್–ಜೆಮಿನ್.

ಸಣ್ಣಗೆ ತಲೆಯಾಡಿಸುತ್ತ 'ಹೌದು' ಎಂದು ಸೂಚಿಸಿದಳು ಬಾಸ್ ಮಡದಿ ಲೀ-ಹೆಂಗ್.

ಅವರ ಮಾತುಕತೆಯನ್ನು ಆಲೈಸುತ್ತ ಸುಮ್ಮನೆ ಕುಳಿತಿದ್ದ ಷಿನ್-ಲೀ ನಗುತ್ತ ನುಡಿದಳು "ನಿನ್ನ ಕಲಿಯುವಿಕೆಯಿಂದ ನನಗೊಬ್ಬ ಗೆಳತಿಯ ಸಂದರ್ಶನ ದಿನಾಲೂ ಆಗುತ್ತಿರುತ್ತೆ."

"ದಿನಾಲೂ ಹೇಗಾದೀತು? ಆಗಾಗ ಆಗುತ್ತಿರುತ್ತೆ." ತಿದ್ದಿದಳು ಲೀ-ಹೆಂಗ್.

"ಆಗಲೀ, ಅದೂ ಒಂದು ಸಂತೋಷವೇ." ಚಿನ್ನೀಯಾಂಗ್ ಪ್ರಸನ್ನತೆ ತೋರಿದಳು.

ಎಲ್ಲರ ಮುಖಬಿಂಬಗಳಲ್ಲೂ ಹೂನಗೆ ಅರಳಿತು.

ಚಿನ್ನೀಯಾಂಗ್ ಒಳ ಹೋಗಿ ಬೀರುವಿನಲ್ಲಿದ್ದ ಅನೇಕ ಕಸೂತಿ ವಸ್ತ್ರಗಳನ್ನು ತಂದು ತೋರಿದಳು. ಅಃ, ಅವುಗಳ ಸೌಂದರ್ಯವನ್ನು ವರ್ಣಿಸುವುದೇ ಅಸದಳ ಎನಿಸುವಷ್ಟು ಸುಂದರ ವಸ್ತ್ರಗಳು. ಎಷ್ಟು ನೋಡುತಿದ್ದರೂ ಕಣ್ಣುಗಳೇ ಸೋತು ಹೋಗುವಂಥ ಸೂಕ್ಷ್ಮ ಕಲೆ.

o o o o

ಆ ದಿನ ಬಾಸ್ ಮತ್ತು ಲೀ-ಹೆಂಗ್ ಬಂದಾಗ ಇನ್ನೂ ಮಧ್ಯಾಹ್ನ ನಾಲ್ಕರ ಸಮಯ. ಸುಡು ಬಿಸಿಲುರಿಯುತಿತ್ತು ಧಗಧಗಿಸಿ. ಬೇಸಗೆಯ ಸುಡು ಗಾಳಿ ಮೈಗೆ ಬೆಚ್ಚನೆಯ ಮುದ್ದಿಡುವಷ್ಟು ಬಿಸಿ. ಬಾಸ್ ಒಳಬಂದವನೇ 'ಅಮ್ಮಾ' ಎಂದ ಬಾಯಿತುಂಬ.

ಒಳಗಡೆಯಿದ್ದ ವೃದ್ಧೆಯ ಕಿವಿಗೆ ಆ ಮುದ್ದಿನ ಕರೆ ಅಲೆಅಲೆಯಾಗಿ ಬಂದು ಮುಟ್ಟಿತು. ಗಂಟಾರವ ನಿಂತಮೇಲೂ ಧ್ವನಿಸುವ ಮೃದು ಮಧುರ ದನಿಯಂತೆ.

ಆ ಕರೆಯಿಂದ ಜಾಂಗ್-ಜೆಮಿನ್ ತನ್ನೊಳಗೇ ಹುಗಿದು ಹೋಗುವಷ್ಟು

ಲಜ್ಜಿತನಾದ. ತಾನೆಂದೂ ಅಂತಹ ಮೋಹಕದನಿಯಲ್ಲಿ ಕರೆಯಲಿಲ್ಲ ಎಂಬುದು ಸತ್ಯಸ್ಯಸತ್ಯ. ಆ ತಾಯಿ ವಯೋಧರ್ಮದಿಂದ ಮೆಲ್ಲನೆ ಮೆಲು ಹೆಜ್ಜೆಗಳನ್ನಿಡುತ್ತಾ ಬ್ರೈಕ್ ಫಾಸ್ಟ್ ಖಾನೆಗೆಬಂದಳು. ಅವಳಲ್ಲಿ ಅಂತಹ ಭಕ್ತಿಗೌರವಭಾವನೆಯನ್ನು ಮಗನೆಂದೂ ಇಟ್ಟಿರಲಿಲ್ಲ. ಷಿನ್--ಲೀ ಕೂಡ ಅಷ್ಟೆ. ಹಿಂದೆಯೇ ಅವಳೂ ಬಂದಳು.

ಪರಸ್ಪರ ಕುಶಲ ಪ್ರಶ್ನೆಗಳಾದುವು ಸಾನಂದದಿಂದ. ಬಾಸ್ ಚೆನ್ನೀಯಾಂಗಳ ಬಳಿ ಕುಳಿತುಕೊಂಡ ಲೀ–ಹೆಂಗ್ ಕಸೂತಿ-ಗೆ ಬೇಕು ಬೇಕಾದ ದಾರ ಸೂಜಿ ಬಟ್ಟೆಗಳನ್ನು ತಂದಿದ್ದಾಳೆ. ಎಲ್ಲವನ್ನೂ ಮುಂದಿಡುತ್ತ ನುಡಿದಳಾಕೆ "ನೀವು ಇಂದೇ ಹೇಳಿಕೊಟ್ಟರೂ ಸರಿಯೆ. ಮತ್ತೊಮ್ಮೆ ಬಾ ಎಂದರೂ ಸರಿಯೆ. ನಾನು ಕಲಿಯಲೆಂದೇ ಬಂದಿರುವೆ ಅಮ್ಮಾ."

"ಬಾ, ಮಗಳೇ! ಇನ್ನೊಮ್ಮೆ ಏಕೆ ಇದಕ್ಕಾಗಿ ಬರಬೇಕು? ಈಗಲೇ ಹೇಳಿಕೊಡುವೆ."

ವೃದ್ಧೆ ಹೇಳಿಕೊಡುತ್ತ ನುಡಿದಳು "ಸ್ತ್ರೀಜಾತಿಗೆ ಅಂದಿಂದಿಗೂ ವ್ಯಕ್ತಿಸ್ವಾತಂತ್ರ್ಯವಿಲ್ಲ. ಅದರಲ್ಲೂ ವಿಧವೆಯಾದರಂತೂ ಕೇಳುವವರೇ ಇಲ್ಲ. ಈವರೆಗೆ ನಾವು ದುಡಿದುದೆಲ್ಲ ವ್ಯರ್ಥ ಎನ್ನುವಂತಾಗುತ್ತದೆ. ನಾವು ದುಡಿದ ಸಂಪತ್ತೇ ನಮಗಿಲ್ಲ. ಹೋಗಲಿ, ಅಂದರೆ ವೈಯಕ್ತಿಕ ಸ್ವಾತಂತ್ರ್ಯವೂ ನಮಗಿಲ್ಲ. ಇದಕ್ಕೇನು ಹೇಳುತ್ತೀರಿ?"

ಎಲ್ಲರೂ ನಕ್ಕು ಬಿಟ್ಟರು, ಬಾಯಿತುಂಬ.

ಚೆನ್ನೀಯಾಂಗ್ ಅವರೊಂದಿಗೆ ತನ್ನ ದನಿಯನ್ನು ಹರಿಯಬಿಟ್ಟು ನಗುತ್ತ ಮುಂದುವರಿದಳು. "ನಮ್ಮಲ್ಲಿ ಬಹುತೇಕ ಸಂಸಾರಗಳಲ್ಲಿ ಹಿರಿಯರ ಬಗ್ಗೆ ಗೌರವಾದರಗಳಿಲ್ಲ. ಅಷ್ಟು ಮಾತ್ರವಲ್ಲ ಅವರಿಗೆ ಸುಖ ಸೌಕರ್ಯವೂ ಇಲ್ಲ. ಅತಂತ್ರತೆಯಲ್ಲಿ ನರಳುವವರೇ ಹೆಚ್ಚು. ಅವರ ಸಂಕಷ್ಟವನ್ನು ನೋಡಿದರೆ ಕರುಳು ನುಲಿಯುತ್ತೆ. ಹೀಗಾಗಬಾರದು ನೋಡಿ."

"ನಮ್ಮಲ್ಲಿ ವೃದ್ಧಾಶ್ರಮವಿಲ್ಲ. ಅದರಿಂದಲೇ ಕಷ್ಟ." ಎಂದ ಬಾಸ್.

"ಹಾಗೆಂದು ವೃದ್ಧಾಶ್ರಮಕ್ಕೆ ತಳ್ಳಿ ಕೈ ತೊಳೆದುಕೊಂಡರಾಯಿತೇ? ಮುಂದೆ ಅವರ ಅಗತ್ಯಗಳನ್ನು ನೋಡಿಕೊಳ್ಳಬೇಡವೇ?" ಚೆನ್ನೀಯಾಂಪ್ ಒತ್ತಿ ಹೇಳಿದಳು.

"ಅದು ಸರಿಯೆ. ಆದರೆ ...." ಜಾಂಗ್–ಜೆಮಿನ್ ಒಂದು ಗಳಿಗೆ ತಡೆದು ಮುಂದುವರಿದ "ಎಷ್ಟೋ ಜನ ಹಿರಿಯರನ್ನು ನಿಕೃಷ್ಟವಾಗಿ ಕಾಣುತ್ತಾರೆಂಬುದು ನಿಜ. ಅದನ್ನೇನೂ ನಾವು ಅಲ್ಲಗಳೆಯುವಂತಿಲ್ಲ. ಆದರೂ ಅನೇಕರು ಹಿರಿಯರನ್ನು ಚೆನ್ನಾಗಿಯೇ ಕಾಣುತ್ತಾರೆ. ನಮ್ಮಲ್ಲಿ ಎಲ್ಲರೂ ಅಷ್ಟು ಕೀಳಾಗಿಲ್ಲ."

"ನಾನು ಹೇಳುವುದು ಅದಲ್ಲ. ಅವರವರ ಅಗತ್ಯಗಳ ಪ್ರಶ್ನೆ. ಆಸ್ತಿ ಪಾಸ್ತಿಯೆಲ್ಲ ಅವರ ದುಡಿಮೆಯೇ ಆದರೂ ಅವರ ಆಸೆ–ಆಕಾಂಕ್ಷೆಗಳನ್ನು ಪೂರೈಸುವರಾರು? ಆಸ್ತಿಯ ಕೀಲಿಯು ಕೈ ಮಕ್ಕಳಿಗೆ ಬಂದೊಡನೆಯೇ ಮುಗಿಯಿತು. ಮುದುಕರನ್ನು ಮೂಲೆಗೊತ್ತುವುದು ಸಾಮಾನ್ಯ ರೂಢಿಯಾಗಿ ಬಿಟ್ಟಿದೆ."

"ಉತ್ಪತ್ತಿ ಕಡಿಮೆಯಾದಾಗ ..."

ನಡುವೆ ಬಾಯಿ ಹಾಕಿದಳು ಲೀ-ಹೆಂಗ್ "ಅಮ್ಮ ಹೇಳುವುದರಲ್ಲಿ ಅರ್ಥವಿದೆ. ಅದನ್ನು ಹೀಗಳೆಯುವಂತಿಲ್ಲ. ಏಕೆಂದರೆ? ನಾವೂ ಮುಂದೆ ಮುದುಕರಾಗುವವರೇ!"

ಎಲ್ಲರೂ ಘಕಘಕನೆ ನಕ್ಕರು.

ಚೆನ್ನೀಯಾಂಗ್ ಸಮಾಧಾನದಿಂದ ಮುಂದುವರಿದಳು "ನೋಡಿ, ಅನೇಕರು ವೃದ್ಧಾಪ್ಯದ ರೋಗಗಳಿಂದ ನರಳುತ್ತಿರುತ್ತಾರೆ. ಅವರಿಗೆ ಅಗತ್ಯವಾದ ಚಿಕಿತ್ಸೆಯು ಸಿಗದೆ ಹೋಗಬಹುದು. ಅಥವಾ ಸಿಕ್ಕಿದರೂ ಗುಣವಾಗದೆ ಇರಬಹುದು. ಇಂತಹ ಸಂದರ್ಭದಲ್ಲಿ ಆ ರೋಗಿಗಳು ಇಷ್ಟಪಟ್ಟರೆ ಇಚ್ಛಾನುವಾಸಕ್ಕೆ ಅನುಮತಿ ದೊರೆಯಬೇಕು. ಅಥವಾ ಪರದೇಶದಲ್ಲಿ ಚಿಕಿತ್ಸೆ ಪಡೆಯುವ ಇಚ್ಛೆ ವ್ಯಕ್ತಪಡಿಸಿದರೆ, ಮಕ್ಕಳು ಚಿಕಿತ್ಸೆ ಪೂರೈಸಬೇಕು. ಅಥವಾ ಇಚ್ಛಾಮರಣಕ್ಕೆ ಸಿದ್ಧರಾದರೆ ಅದನ್ನು ಪುರಸ್ಕರಿಸಬೇಕು. ಅಂದರೆ, ಅವರ ಬೇಕು–

ಬೇಡಗಳಿಗೆ ಆದ್ಯ ಗಮನ ಕೊಡಬೇಕು ಎಂದರ್ಥ. ಇದನ್ನೆಲ್ಲಾ ಮಕ್ಕಳು ಗಮನಿಸದಿರುವುದೇ ಕಿರಿಕಿರಿಗೆ ಕಾರಣ. ಅಲ್ಲವೇ ?"

"ನಿಜ, ಅಮ್ಮಾ! ಆದರೆ, ಇಚ್ಛಾಮರಣ ಎಂಬುದು ಸ್ವಲ್ಪ ಕಷ್ಟ ಎನಿಸುತ್ತೆ." ಎಂದ ಬಾಸ್.

"ಹಾಗೆಂದರೆ ಹೇಗಪ್ಪ ? ನರಳುತ್ತ ಕಾಲಾನುಕಾಲ ಉಳಿಯುವಂತಾದರೆ ಆ ಭಾರ ಯಾರಿಗೆ ಬೇಕು ?"

ಚೆನ್ನೀಯಾಂಗ್ ಹುಬ್ಬೇತ್ತಿನೋಡುತ್ತ ನುಡಿದಳು "ನಿಷ್ಪ್ರಯೋಜಕರಾಗಿ ಮತ್ತು ರುಗ್ಣ ಶಯ್ಯೆಯಲ್ಲಿ ನರಳುತ್ತ ಉಳಿದರೆ ಏನುಗತಿ ? ಅಂದಮೇಲೆ ರೋಗಿ ಇಷ್ಟಪಡುವುದಾದರೆ ....?"

"ಅದು ಯೋಚಿಸ ಬೇಕಾದುದೇ."

ಅವಳು ಮತ್ತೊಮ್ಮೆ ದೃಢವಾದ ಸ್ವರದಲ್ಲಿ ಹೇಳಿದಳು "ನನಗೊಂದು ವೇಳೆ ಅಂತಹ ದುರ್ದೆಶೆ ಬಂದರೆ ನಾನು ವಿಷ ತೆಗೆದುಕೊಳ್ಳುವವಳೇ ! ಎಲ್ಲರಿಗೂ ಭಾರವಾಗಿ ಬದುಕಿರುವ ಪ್ರಸಂಗ ಬೇಕಾಗಿಯೇ ಇಲ್ಲ. ಮಕ್ಕಳ ತಾತ್ಸಾರಕ್ಕೆ ಖಂಡಿತ ಒಳಗಾಗಬಾರದು....ಎಂಬುದು ನನ್ನ ದೃಢವಾದ ಸಂಕಲ್ಪ."

ಜಾಂಗ್-ಜೆಮಿನ್ ತಾಯಿಯ ಮುಖ ಭಾವವನ್ನೇ ನಿಟ್ಟಿಸಿದ. ತಮ್ಮ ತಾತ್ಸಾರ ಮೂರ್ತಿಮತ್ತಾಗಿ ಎದುರು ನಿಂತು ಸುತ್ತಮುತ್ತ ಹಲ್ಕಿರಿಯಿತು. ಹೃದಯ ಡವಡವಿಸುವಂತೆ.

ಷಿನ್-ಲೀ ಈಗ ನನ್ನ ಪ್ರತಿಕ್ರಿಯೆ ಏನು ? ನಾನು ಯಾವ ರೀತಿ ಉತ್ತರಿಸಬೇಕು ? ಏನು ಮಾಡಲಿ ?...ಎಂಬ ಯೋಚನೆಯ ಕಗ್ಗಾಡಿನಲ್ಲಿ ಜಾಡು ತಪ್ಪಿದಂತೆ ವಿಚಾರ ತತ್ಪರಳಾಗಿ ನುಡಿದಳು "ಈ ಬಗೆಯ ವಿಚಾರ ಕಾನೂನಾಗಿ ಮಾರ್ಪಟ್ಟಲ್ಲದೆ ನಾವೇ ನಾವಾಗಿ ಏನೂ ಮಾಡಲಾರೆವು. ಅಂದಮೇಲೆ, ಇಂಥ ಚರ್ಚೆ ಅಪ್ರಕೃತ. ಅಲ್ಲದೆಯೇ ಅಂತಹ ದುರಂತ ಬಾರದಿರಲಿ ಎಂದೇ ಆಶಿಸೋಣ."

ಅವಳ ಧ್ವನಿಯಲ್ಲಿ ಸ್ಫುರಿಸಿದ ಅಭಿಮತ ಅಭಿನಂದನಾ ಪೂರ್ಣವಾಗಿದ್ದುದರಿಂದ ಎಲ್ಲರೂ ಸಣ್ಣಗೆ ತಲೆದೂಗಿದರು.

ಜೆನ್ನಿಯಾಂಗ್ ಸಂತುಷ್ಟಳಾದರೂ ದೃಢವಾದ ಧ್ವನಿಯಲ್ಲಿ ನುಡಿದಳು,

"ಯಾರ ಅಭಿಪ್ರಾಯ ಏನೇ ಇರಲಿ, ನನ್ನ ಅಭಿ..."

ಅವಳನ್ನು ಮುಂದೆ ಮಾತಾಡಗೊಡದಂತೆ ಬಾಸ್ ನಡುವೆ ಬಾಯಿಹಾಕಿ ಹೇಳಿದ "ಅಂತಹ ಪ್ರಸಂಗ ಬಂದರೆ ನಿಮ್ಮನ್ನು ನನ್ನ ಮನೆಗೊಯ್ದು ಇಟ್ಟುಕೊಳ್ಳುವೆ!"

ಎಲ್ಲರೂ ಖೊಳ್ಳನೆ ನಕ್ಕು ಬಿಟ್ಟರು.

— o —

ವಿದ್ಯಾರಾಣಿ

೨

ನಕರ್ತಾ ಕಶ್ಯಚಿತ್ಕಶ್ಚನ್ನಿಯೋಗೇ ಚಾಪಿನೇಶ್ವರಃ ।
ಸ್ವಭಾವೇ ವರ್ತತೇ ಲೋಕಃ ತಸ್ಯಕಾಲಾಃ ಪರಾಯಣಂ ।

ಚಂದ್ರಕೀರ್ತಿ ಪ್ರಯೋಗ ಶಾಲೆಯಲ್ಲಿ ಕುರ್ಚಿಯ ಮೇಲೆ ಮಂಡಿಸಿದ್ದ.

ಮೇಜಿನ ಮೇಲೆ ಬರೆಯುವ ಸಾಧನಗಳು, ಅನೇಕ ಫೈಲ್‌ಗಳು, ವೈಜ್ಞಾನಿಕ ಪುಸ್ತಕಗಳು ಜೋಡಿಸಲ್ಪಟ್ಟಿವೆ. ಎಣ್ಣೆಯೊರೆದಂತೆ ಹೊಳೆಯುವ ಹರವಾದ ಮೇಜು. ಅದರ ಮೇಲಿದ್ದ ಕನ್ನಡಿಯ ಅಡಿಯಲ್ಲಿ ತಾಯಿ ಕೌಸಲ್ಯಾ ಬಾಯಿಯು ಮಗು ವಿದ್ಯಾರಾಣಿಯನ್ನು ಎತ್ತಿಕೊಂಡಿದ್ದ ಚಿತ್ರವನ್ನು ಮಧ್ಯರೇಖೆಗೆ ಸಮನಾಗಿ ಹಚ್ಚಿದ್ದ. ಅದು ಆ ಮೇಜಿಗೆ ಶೋಭೆ ನೀಡುವಂತಹ ಚಿತ್ರ ಎಂದರೆ ಅತ್ಯುಕ್ತಿಯಲ್ಲ.

ವಿದ್ಯಾರಾಣಿ ಹದಿನಾಲ್ಕರ ಬಾಲೆ. ಶಾಲೆಗೆ ಹೋಗುವುದರಲ್ಲಿ, ವಿದ್ಯೆ ಕಲಿಯುವುದರಲ್ಲಿ ನಿಜವಾಗಿಯೂ ಆಕೆಗೆ ಎಲ್ಲಿಲ್ಲದ ಆಸೆ. ಆದರೆ, ಅಷ್ಟೇ ಎಲ್ಲಿಲ್ಲದ ಮರೆವು. ನಿನ್ನೆ ಕಲಿತ ಪಾಠ ಇಂದಿಗಿಲ್ಲ. ನಿನ್ನೆ ತಿಳಿದ ವಿಷಯ ನಿನ್ನೆಗೇ ಸರಿ, ಇಂದಿಗಿಲ್ಲ. ಹುಡುಗಿ ಆರೋಗ್ಯವಂತೆ. ಚಟುವಟಿಕೆಯ ಬೀಡು. ಅದರೆ ಇದೇಕೆ ಹೀಗೆ ಎಂಬುದು ಅರಿಯಲಾಗದ ರಹಸ್ಯ ; ನುಂಗಲಾಗದ ತುತ್ತು.

ಚಂದ್ರಕೀರ್ತಿ ತಂಗಿಯ ಸ್ಥಿತಿ ಗತಿಯನ್ನು ಗಮನಿಸುತ್ತಲೇ ಇದ್ದ. ಬಾಹ್ಯ ರೂಪಿನಲ್ಲಿ ಅವಳು ಎಲ್ಲರಂತೆಯೇ ಸಾಮಾನ್ಯ ಸ್ಥಿತಿಯಲ್ಲಿದ್ದು 'ನಾರ್ಮಲ್' ಎನಿಸುತ್ತಾಳೆ. ಆಂತರಂಗಿಕವಾದ ದೋಷವನ್ನು ಕಂಡುಹಿಡಿಯುವ ವಿಚಾರವು ಬೃಹತ್ತಾಗಿ ಮನವನ್ನು ತುಂಬಿತ್ತು. ಚಂದ್ರಕೀರ್ತಿ ಕಾರ್ಯ ನಿರತನಾಗಿದ್ದ.

ಅವನು ಎದ್ದು ಅಲ್ಲಲ್ಲೇ ಪದಚಾರಣ ಮಾಡಿದ. ತಲೆಯಲ್ಲಿ ವಿಚಾರ ವಿಪ್ಲವ ಭುಗಿಲೆದ್ದಿತ್ತು. ಈಗ, ಏನು ಮಾಡಿದರೆ ಪರಿಹಾರ ಇದಕ್ಕೆ? ಆಲೋಚನೆಯ ಸುಳಿಯಲ್ಲಿ ಸಿಕ್ಕಿತು ಮನಸ್ಸು.

ಚಂದ್ರಕೀರ್ತಿ ಎಂ.ಎಸ್.ಸಿ. ಮುಗಿಸಿ ಒಂದು ಸುಪ್ರಸಿದ್ಧವಾದ ಡ್ರಗ್ ಕಂಪನಿಯಲ್ಲಿ ರಿಸರ್ಚ್ ಸೈಂಟಿಸ್ಟ್ ಆಗಿ ಕೆಲಸ ಮಾಡುತಿದ್ದ ಜನರ ಸ್ಮರಣ ಶಕ್ತಿಯ ಮೇಲೆಯೇ ಅವನ ಸಂಶೋಧನೆ. ಬಾಂಬೆ ಯೂನಿವರ್ಸಿಟಿಯ ಕ್ರಿಮಿನಾಲಜಿ ಮತ್ತು ಫಾರೆನ್ಸಿಕ್ ಸೈನ್ಸ್ ವಿಭಾಗದ ಹಿರಿಯ ವಿಜ್ಞಾನಿಗೆ ಚಂದ್ರಕೀರ್ತಿಯ ಸಂಶೋಧನೆಯ ಮೇಲೆ ಕಣ್ಣು. ಅವನಿಗೆ ಅದರಲ್ಲಿ ವಿಶ್ವಾಸವಿದ್ದರೂ ಇತರರಿಗೆ ನಿರ್ಲಕ್ಷ್ಯ. ಏನೋ ಮಾಡುತಿದ್ದಾನೆ ಹುಡುಗ ಎಂದುಕೊಂಡು ಸುಮ್ಮನಾಗುವರು.

ಹಿರಿಯ ವಿಜ್ಞಾನಿ ಪ್ರೊಫೆಸರ್ ರಘು ತುಂಬಾ ಆಸಕ್ತಿಯಿಂದ ಗಮನಿಸುವ ವ್ಯಕ್ತಿ. ದಿನಕ್ಕೊಮ್ಮೆ ಟೆಲಿಫೋನು ಮಾಡಿ ನಿನ್ನ ರಿಸರ್ಚ್ ಎಲ್ಲಿಯವರೆಗೆ ಬಂತು? ಏನು ಮಾಡುತಿದ್ದಿ? ಎಂದೆಲ್ಲಾ ಕೇಳುತ್ತ ಪ್ರಗತಿಯಲ್ಲಿ ನಂಬಿಗೆಯಿಟ್ಟಿದ್ದರು. ಕ್ರಿಮಿನಾಲಜಿಯಲ್ಲಿ ಎಂದಾದರೂ ಹೊಸ ಅಧ್ಯಾಯವನ್ನೇ ತೆರೆಯುತ್ತಾನೆ ಎಂಬುದರಲ್ಲಿ ಸಂದೇಹವಿರಲಿಲ್ಲ ಅವರಿಗೆ.

o o o o

ಕಳೆದ ವರ್ಷಮಾನದಿಂದಲೂ ಅವನ ಸಂಶೋಧನೆಯ ವಿಷಯ ಉತ್ತರೋತ್ತರವೇ.

ಮಿದುಳಿನಲ್ಲಿರುವ ಸ್ಮರಣ ಶಕ್ತಿ ಕೇಂದ್ರವನ್ನು ಪ್ರಚೋದನೆ ಗೊಳಿಸಿ ಮರೆತಿರುವ ಘಟನಾವಳಿಗಳನ್ನು ಚಾಚೂ ತಪ್ಪದೆ ನೆನಪಿಗೆ ಬರುವಂತೆ ಮಾಡುವ ಒಂದು ಅತ್ಯುತ್ತಮ ರಸಾಯನವನ್ನು ಕಂಡು ಹಿಡಿಯುವುದರಲ್ಲಿ ನಿತ್ಯ ನಿರತನಾಗಿದ್ದ. ಸಂಶೋಧನೆ ಯಶಸ್ಸಿನ ಹಾದಿ ಹಿಡಿಯುತಿತ್ತು. ಅವನು ಪುಳಕಿತನಾಗುತ್ತಿದ್ದ.

ಕೆಲವು ವಿಶಿಷ್ಟ ಗಿಡಮೂಲಿಕೆಗಳು ಕಾಫಿ ಬೀಜದಿಂದ ತೆಗೆದ ಕೆಫಿನ್, ಮತ್ತು ಆಲ್ಕೋಹಾಲ್ ಮಿಶ್ರಣವನ್ನು ಕಾಯಿಸಿ ಅದರಲ್ಲಿನ ವಾಯುವನ್ನು ಹೊರಹರಿಸಿ ಉಳಿದ ಮಿಶ್ರಣದ ಮೇಲೆ ನೈಟ್ರಸ್ ಆಕ್ಸೈಡ್ ವಾಯುವಿನ ಪ್ರಕ್ರಿಯೆ ಮಾಡಿ ರಸಾಯನವನ್ನು ಸಿದ್ಧಪಡಿಸಿದ. ಅದರಿಂದ ಅವನಿಗೆ ಪೂರ್ಣ ವಿಶ್ವಾಸ ಮೂಡಿದ್ದರೂ ಅದನ್ನು ಪ್ರಯೋಗಿಸಿ ನೋಡಬೇಕಾಗಿತ್ತು. ಪ್ರಾಣಿಗಳ ಮೇಲೆ ಪ್ರಯೋಗ ನಡೆಸಬೇಕಾದರೆ ಅವುಗಳಿಗೆ ಮರೆವು ಉಂಟುಮಾಡುವ ಒಂದು ಪ್ರಕ್ರಿಯೆಯೂ ಇತ್ತು. ತನ್ನ ರಸಾಯನ ಸಿದ್ಧಿಗೆ "ಸ್ಟಿಮುಲೇಟರ್ ಆಫ್ ಮೆಮರಿ ಪವರ್" ಎಂದು ಹೆಸರಿಸಿದ್ದ ಚಂದ್ರಕೀರ್ತಿ.

ತನ್ನ ಪ್ರಯೋಗ ಪರಿಪೂರ್ಣವಾದರೆ ಅದರಿಂದ ವಿದ್ಯಾರಾಣಿಗೆ ತುಂಬಾ ಪ್ರಯೋಜನವಾಗುತ್ತದೆ ಎಂಬ ಪೂರ್ಣ ನಂಬಿಗೆ ಮನದಲ್ಲಿ. ಅದರಿಂದಾಗಿ ಅವನ ಕಟ್ಟೆಚ್ಚರಕ್ಕೆ ಎಣೆಯೇ ಇರಲಿಲ್ಲ.

ಸರಕಾರಕ್ಕೆ ತನ್ನ ರಸಾಯನದ ಪ್ರಯೋಗಕ್ಕೆ ಅನುಮತಿ ಕೋರಿ ಬರೆದುಕೊಂಡಿದ್ದ. ಪ್ರಯೋಗ ಪ್ರಾಣಿಗಳ ಮೇಲಾದುದರಿಂದ ಸರಕಾರ 'ಅಸ್ತು' ಎಂದು ಶೀಘ್ರವಾಗಿ ಉತ್ತರ ನೀಡಿತು. ಇನ್ನು ಪ್ರಯೋಗಿಸುವುದೊಂದು ಬಾಕಿ.

ವಿದ್ಯಾರಾಣಿಯ 'ಮರೆವು' ತೊಲಗಿ ಹೋಗಿ ಎಲ್ಲಾ ಮಕ್ಕಳಂತೆಯೇ ಆದರೆ ನಿಜವಾಗಿಯೂ ಅವಳ ಜೀವನ ಸುಸುಂದರವಾಗುತ್ತದೆ ಎಂದು ಎದೆಯ ಹಕ್ಕಿ ಕೂಗಿ ಹೇಳಿತು, ಚಂದ್ರಕೀರ್ತಿ ಸಾನಂದದಿಂದ ಭಾವನಾಲೋಕದಲ್ಲಿ ವಿಹರಿಸಿದ.

ಂ ಂ ಂ ಂ

ಚಂದ್ರಕೀರ್ತಿ ಉತ್ಸುಕನಾಗಿದ್ದ. ಬಾಂಬೆ ರಾಣಿ ಬಗೀಚಾ ಪ್ರಾಣಿ ಸಂಗ್ರಹಾಲಯದ ಪ್ರಾಣಿಯೊಂದನ್ನು ಅವನ ಪ್ರಯೋಗಕ್ಕೆ ಆರಿಸಿಕೊಂಡಿದ್ದ. ಅದರ ಹೆಸರು ಮಾರಿಯಾ. ಮ್ಯಾಮಲ್ಸ್ ಕ್ಲಾಸಿನ ಪ್ರಾಯಮೇಟಗಳಲ್ಲಿ ಮನು ಕುಲಕ್ಕೆ ಸೇರುವ ಗಿಬ್ಬನ್ ಜಾತಿಯ ಮಂಗ ಅದು. ಅದಕ್ಕೆ ಕೆಂಪು ಬಣ್ಣದ

ವಿದ್ಯುತ್ ತಂತಿಯನ್ನು ಕಣ್ಣೆದುರಿಗೇ ಹಿಡಿದು ವಿದ್ಯುತ್ ಶಾಕ್ ತಗುಲಿಸಿ ಅದರ ಗುಣ ಪರಿಚಯ ಮಾಡಿಸಿದ. ಒಡನೆ ಮೈಗೆ ಉಂಟಾದ ಕಠಿಣ ಅನುಭವ ಬಂದ ಸಹಜವಾಗಿಯೇ ಅದರ ಅಪಾಯವನ್ನು ಅರಿತುಕೊಂಡಿತು ಅದು. ತಂತಿಯನ್ನು ಕಂಡೊಡನೆಯೇ ಹೆದರಿ ಹಿಂದೆ ಹಿಂದೆ ಸರಿದು ನೆಗೆಯುತ್ತಿತ್ತು. ವಿದ್ಯುತ್‌ರಹಿತ ತಂತಿಗೂ ಕೂಡಾ ಅಷ್ಟೇ ಭಯ. ಚಂದ್ರಕೀರ್ತಿ ಪ್ರಯೋಗಕ್ಕೆ ಸಿದ್ಧನಾದ. ಕೆಲವು ದಿನಗಳ ತರುವಾಯ ಹಿಂದಿನ ಅಧ್ಯಾಯಗಳನ್ನು ಮರೆಯು ವಂತೆ ಮನಕ್ಕೆ ಮತ್ತು ಬರಿಸುವ ತನ್ನ ಔಷಧಿಯನ್ನು ಬಾಳೆಹಣ್ಣಿನ ಮೂಲಕ ತಿನ್ನಿಸಿದ. ಔಷಧಿಯನ್ನು ಕಾಣದೆ ಬಾಳೆಯ ಹಣ್ಣುಗಳನ್ನು ತಿಂದಿತು, ಮಂಗ. ಮರುದಿನ ವಿದ್ಯುತ್ ರಹಿತ ಕೆಂಪು ತಂತಿಯನ್ನು ತೋರಿಸಿ ಮುಟ್ಟಿಸಿದರೂ ಅಲುಗಲಿಲ್ಲ. ಪ್ರಸ್ತುತ, ಹಿಂದಿನ ಘಟನೆಯನ್ನು ಸಂಪೂರ್ಣ ಮರೆತು ಬಿಟ್ಟದ್ದ ರಿಂದ ಅದು ಯಾವ ಪ್ರತಿಕ್ರಿಯೆಯನ್ನೂ ವ್ಯಕ್ತಪಡಿಸಲಿಲ್ಲ. ಸುಮ್ಮನೆ ನೋಡಿತು ಕೆಂಪು ತಂತಿಯನ್ನು.

ಮೂರು ನಾಲ್ಕು ದಿನಗಳ ನಂತರ ತನ್ನ ಸ್ಟಿಮುಲೇಟರ್ ಆಫ್ ಮೆಮರಿ ಪವರ್ ಔಷಧಿಯನ್ನು ಕಿತ್ತಲೆ ತೊಳೆಯ ಒಳಗೆ ಸೇರಿಸಿ ಮಾರಿಯ ಮಂಗಕ್ಕೆ ನೀಡಿದ. ಅದು ಅದರಲ್ಲಿನ ಔಷಧಿಯನ್ನು ಅರಿಯದೆ ಲಗುಬಗನೆ ತಿಂದಿತು. ಅದರ ಪರಿಣಾಮವಾಗಿ ಅದರ ಶರೀರದಲ್ಲಿ ಏನಾದರೂ ಏರು ಪೇರು ಆಗ ಬಹುದೇ ? ಎಂದು ಅದನ್ನು ಗಮನಿಸುತ್ತಲೇ ಇದ್ದ ವಿಜ್ಞಾನಿ. ಅದರಿಂದ ದುಷ್ಪರಿಣಾಮವೇನೂ ಆಗಲಿಲ್ಲ, ಮಂಗ ಲವಲವಿಕೆಯಿಂದಿತ್ತು. ಕೆಲವೇ ದಿನ ಗಳಲ್ಲಿ ಔಷಧಿಯು ಪ್ರಾಣಿಯ ಮೇಲೆ ತನ್ನ ಪ್ರಭಾವ ಬೀರಿತು. ಅದರ ಮಾನ ಸಿಕ ವ್ಯಾಪಾರ ಪ್ರಗತಿ ಪಥ ಹಿಡಿದುದು ಕಂಡು ಬಂತು. ಮಾರಿಯಾ ಅತ್ತಿತ್ತ ತಿರುಗಾಡುತ್ತ ಅಲ್ಲಿಯೇ ಕೆಳಗೆ ಬದ್ದಿದ್ದ ಕೆಂಪು ತಂತಿಯನ್ನು ನೋಡಿ ಹೆದರಿ ಅದರಿಂದ ದೂರ ದೂರವಾಗಿ ತಿರುಗಾಡತೊಡಗಿತು...ಅದು ವಿದ್ಯುತ್‌ರಹಿತವೇ ಆಗಿದ್ದರೂ ಅಂದಿನ ಕಟು ಅನುಭವ ಧೃತಿಗೆಡಿಸಿದುದು ನಿಜ. ಅದರ ಚಲನ ವಲನದಿಂದ ಅದಕ್ಕೆ ಹಿಂದಿನ ನೆನಪು ಉಂಟಾಗಿದೆ ಎಂಬುದು ಅನುಭವ ವೇದ್ಯ. ಚಂದ್ರಕೀರ್ತಿ ಸಂತುಷ್ಟನಾದ.

ಚಂದ್ರಕೀರ್ತಿ ಮರುದಿನವೂ ಕೆಂಪು ತಂತಿಯನ್ನು ವಿದ್ಯುತ್ ರಹಿತ

ಎಂದು ತೋರ್ಪಡಿಸಲು ಕೆಂಪು ವರ್ಣದ ತಂತಿಯನ್ನು ತೋರಿದರೂ ಸಾಕು, ಮಾರಿಯಾ ಬೆಚ್ಚಿ ಹಿಂದೆ ಹಿಂದೆ ಸರಿಯಲಾರಂಭಿಸುತಿತ್ತು. ತನ್ನ ಔಷಧಿಯ ಪ್ರಯೋಗದಿಂದ ನೆನಪು ಮರಳಿದೆಯೇ ಹೊರತು ಮತ್ತಾವ ದುಷ್ಪರಿಣಾಮ ಉಂಟಾಗಿಲ್ಲವೆಂಬುದು ದೃಢವಾಯಿತು, ಚಂದ್ರಕೀರ್ತಿಗೆ. ವಿಜ್ಞಾನಿ ಪ್ರೊ||ರಘು ಆನಂದ ತುಂದಿಲತೆಯಿಂದ ಕೈಕುಲುಕಿ ಹೃತ್ಪೂರ್ವಕವಾಗಿ ಅಭಿನಂದಿಸಿದ.

"God bless you! You have at last succeeded Mr Chandra keerthi." ಬಲೂ ವಿನಯದಿಂದ ಚಂದ್ರಕೀರ್ತಿ ಪ್ರತಿಯಾಗಿ ತಲೆಬಾಗಿ ವಂದಿಸಿದ.

ಂ ಂ ಂ ಂ

ಚಂದ್ರಕೀರ್ತಿಗೆ ತನ್ನ ಔಷಧಿಯಲ್ಲಿ ಪೂರ್ಣ ನಂಬಿಗೆ ಉಂಟಾಗಿದ್ದರೂ ಪುನಃ ಮತ್ತೊಮ್ಮೆ ಪರೀಕ್ಷೆ ಮಾಡಿ ನೋಡುವ ಯೋಚನೆಯಿತ್ತು. ಅದರಿಂದಾಗಿ ಒಂದು ನಾಯಿಯ ಮೇಲೆ ಪ್ರಯೋಗ ನಡೆಸಿ ವಿಜಯಿಯಾದನಂತರ ದೃಢವಾದ ನಂಬಿಗೆ ಮೂಡಿತು. ಆದರೂ, ಮನುಕುಲದ ಮೇಲೆ ಪ್ರಯೋಗಿಸಬೇಕಾದರೆ ಇನ್ನಷ್ಟು ಸಂಸ್ಕರಿಸಬೇಕು ಎಂಬ ಯೋಚನೆಗೆ ಶರಣಾಗಿದ್ದ. ಹಗಲಿರುಳು ಮನ ಮಂಥನಕ್ಕೆ ಅದೇ ವಿಚಾರ ಸಾಮಗ್ರಿ. ಚಂದ್ರಕೀರ್ತಿ ಪ್ರಯೋಗ ಶಾಲೆಯಲ್ಲಿ ಮೇಜಿನ ಮುಂದೆ ಮಂಡಿಸಿ ಮನೋಭಿತ್ತಿಯ ಮೂಸೆಯಲ್ಲಿ ವಿಷಯ ಮಂಥನ ನಡೆಸಿದ... ಮಾನವರ ದೊಡ್ಡ ಮಿದುಳಿನಲ್ಲಿ ಸ್ಮರಣಶಕ್ತಿ ಕೇಂದ್ರ, ದೃಷ್ಟಿ ಶಕ್ತಿ ಕೇಂದ್ರ, ಶ್ರವಣ ಶಕ್ತಿ ಕೇಂದ್ರ, ಬೌದ್ಧಿಕ ಶಕ್ತಿ ಕೇಂದ್ರ ಮೊದಲಾದ ವಿಶಿಷ್ಟ ಭಾಗಗಳಿರುತ್ತವೆ. ಔಷಧಿ ಪ್ರಯೋಗದಿಂದ ಮತ್ತಾವ ಭಾಗಕ್ಕೂ ದುಷ್ಪರಿಣಾಮ ಆಗಬಾರದೆಂಬುದು ಮುಖ್ಯ ಎಂಬ ವಿವೇಚನೆ ತಾಳ್ಮೆಗೆ ದಾರಿ ಮಾಡಿತು. ಅಂತಲೇ, ಅವನು ತನ್ನ ಪ್ರಯೋಗಕ್ಕೆ ಒಳಗಾದ ಪ್ರಾಣಿಗಳೆರಡರ ಮೇಲೂ ಕಣ್ಣಿಟ್ಟು ಪರಿಶೀಲನೆ ನಡೆಸಿದ್ದ. ದಿನಗಳು ಉರುಳಿದುವು. ಆ ಪ್ರಾಣಿಗಳೆರಡೂ ಆರೋಗ್ಯವಾಗಿಯೇ ಇದ್ದು, ಎಂದಿನಂತೆ ಸುಜೀವನ ನಡೆಸಿಕೊಂಡಿದ್ದುವು. ಚಂದ್ರಕೀರ್ತಿ ಮುಂದಿನ ಪ್ರಯೋಗಕ್ಕೆ ಅಣಿಯಾಗುವವನಿದ್ದ.

ಭೂತಕಾಲದ ಘಟನೆಗಳು, ಅದರಿಂದ ಕಲಿತ ಪಾಠಗಳು, ಈಚಿನ ವಿದ್ಯಮಾನಗಳು, ಅದರ ಅನುಭವಗಳು ಮತ್ತು ಇತರ ವಿಷಯಗಳು ಎಲ್ಲವನ್ನೂ ಸಂಗ್ರಹಿಸಿಡುವುದು ಸ್ಮರಣ ಶಕ್ತಿ ಕೇಂದ್ರದಲ್ಲಿಯೇ. ಮೆದುಳಿನ ನರಕೋಶಿಕೆ (ನರ್ವ್‌ಸೆಲ್) ಗಳು ತಮ್ಮಲ್ಲಿಯ ಡಿ.ಎನ್.ಎ. ಮಾಲಿಕ್ಯೂಲಗಳಲ್ಲಿ ರಾಸಾಯನಿಕ ಪ್ರಕ್ರಿಯೆ ಡಿ.ಎನ್.ಎ. ಗಳ ಮೇಲೆ ನೇರವಾಗಿ ಆಗುತ್ತದೆ. ಸ್ಮರಣ ಶಕ್ತಿಯನ್ನು ಉಲ್ಲಸಿತ ಸ್ಥಿತಿಗೆ ತಂದರೆ ಮರೆತು ಬಿಟ್ಟ ವಿಷಯಾನುಭವಗಳನ್ನು ನೆನೆದೊಡನೆ ನೆನಪಿಗೆ ತರಲು ಸಹಾಯಕವಾಗುತ್ತದೆ. ಅಲ್ಲಿಂದ ಘನವಾದ ಮೊಟಾರ್ ನರ್ವ್‌ಗಳ ಸಂಜ್ಞೆಗಳಿಗೆ ಹೋಗಿ ಮಾನಸಿಕ ಕಲ್ಪವನ್ನು ಎಚ್ಚರಿಸುವುದು ಸತ್ಯ....

ಇಂಥಿಥ ವಿಚಾರಗಳು ಸರ್ವೇಸಾಮಾನ್ಯವಾಗಿ ಎಲ್ಲ ವಿಜ್ಞಾನಿಗಳಿಗೂ ತಿಳಿದಂತಹ ವಿಷಯನೇ. ಆದರೆ, ತುಂಬಾ ಸೂಕ್ಷ್ಮಾತಿಸೂಕ್ಷ್ಮ ವಿಚಾರ ಸಂಪುಟಗಳ ಮೇಲೆ ಪ್ರಯೋಗಕ್ಕೆ ಆತುರ ಸಲ್ಲದು...ಎಂಬುದು ಎಲ್ಲರೂ ಏಕೀಭವಿಸಬಹುದಾದ ಅಭಿಪ್ರಾಯ. ಅಷ್ಟಲ್ಲದೇ ನಿಧಾನಿಸುವುದು ಒಳ್ಳಿತು ಎಂಬ ಅಭಿಪ್ರಾಯದಿಂದಾಗಿ ಯಾರ ಮೇಲೂ ಆತುರಾತುರವಾಗಿ ಪ್ರಯೋಗಿಸಲು ಮುಂದಾಗಲಿಲ್ಲ.

ವೈಜ್ಞಾನಿಕವಾಗಿ ಯಾವುದಾದರೂ ಒಂದು ಕಾರ್ಯವನ್ನು ಕೈಕೊಳ್ಳುವುದೆಂದರೆ ಸೃಷ್ಟಿ ಶಕ್ತಿಯ ಸವಾಲನ್ನು ಎದುರಿಸುವ ಕೆಚ್ಚು, ಮುಂಬಲಿರುವ ತೊಡಕುಗಳನ್ನು ನಿವಾರಿಸುವ ಸ್ಥೈರ್ಯ ಇವನ್ನು ಕ್ರೋಢೀಕರಿಸಿಯೇ ಸಾಧನೆ. ಅಂದಮೇಲೆ,ಪ್ರತಿಯೊಂದು ಹಂತಹಂತದಲ್ಲಿಯೂ ಗಮನಿಸಬೇಕಾದ ಸೂಕ್ಷ್ಮಾತಿಸೂಕ್ಷ್ಮ ವೈಜ್ಞಾನಿಕ ಪ್ರಯೋಗ ನಿಗೂಢವಾಗಿ ನಡೆಯುತಿತ್ತು. ಯೋಚನೆಯಾಳದಲ್ಲಿ ಮುಳುಗಿದರೆ ಹೊತ್ತು ಉರುಳಿದುದರ ಪರಿವೆಯೇ ಇರುತ್ತಿರಲಿಲ್ಲ ಚಂದ್ರಕೀರ್ತಿಗೆ.

o o o o

ಹುಚ್ಚರಾಸ್ಪತ್ರೆಯಿಂದ ಒಬ್ಬ ರೋಗಿಯನ್ನು ತನ್ನ ಪ್ರಯೋಗಕ್ಕೆ ತೆಗೆ

ದುಕೊಳ್ಳಲು ಸರಕಾರ ಅನುಮತಿಯ ಮುದ್ರೆಯನ್ನೊತ್ತಿತು. ಚಂದ್ರಕೀರ್ತಿಯ ಉತ್ಸಾಹಕ್ಕೆ ರೆಕ್ಕೆ ಪುಕ್ಕ ಮೂಡಿದುವು. ಅವನು ಕಾರ್ಯನಿಮಗ್ನನಾದ. ತನ್ನ ರಸಾಯನ ಸಿದ್ಧಿಯ ಪರಮೌಷಧಿಗೆ 'ಮೆಮರಾಕ್ಸ್' ಎಂದು ಅಂತಿಮವಾಗಿ ಹೆಸರು ಕೊಟ್ಟಿದ್ದ. ಅದನ್ನು ಹೆಚ್ಚಿನ ಪ್ರಮಾಣದಲ್ಲಿ ಇನ್ನೂ ತಯಾರಿಸಿರಲಿಲ್ಲ. ಪ್ರಯೋಗಾರ್ಥವಾಗಿ ಯಾವ ಆಸ್ಪತ್ರೆಗೂ ನೀಡಿರಲಿಲ್ಲ. ಮೊಟ್ಟಮೊದಲಾಗಿ ತನ್ನ ಪ್ರಯೋಗದಲ್ಲಿ ಯಶಸ್ವಿಯಾದ ನಂತರವೇ ಹೊರ ಜಗತ್ತಿಗೆ ಬಿಡುವ ಇಚ್ಛೆ. ಅದನ್ನಿನ್ನೂ ಮಾತ್ರೆಗಳಾಗಿ ಮಾರ್ಪಡಿಸಿರಲಿಲ್ಲ. ಅಥವಾ ಕ್ಯಾಪ್ಸಲ್ಸ್ ಆಗಿಯೇ ಉಪಯೋಗಿಸಬೇಕೆ? ಎಂಬುದರ ತೀರ್ಮಾನವೂ ಆಗಿರಲಿಲ್ಲ.

ಹುಚ್ಚರಿಗೆ ಪ್ರಯೋಗಿಸಿ ಯಶಸ್ವಿಯಾದರೆ ಜಗತ್ತಿನ ಪ್ರಸಿದ್ಧ ವಿಜ್ಞಾನಿಗಳ ಸಾಲಿಗೆ ಸೇರಿ ವಿಜೃಂಭಿಸುವ ಖಾತ್ರಿ ಇತ್ತು ಮನಸ್ಸಿಗೆ. ಆದರೂ ಔಷಧಿಯನ್ನು ಪ್ರಾಯೋಗಿಕ ಹಂತದಲ್ಲಿಯೇ ಉಳಿಸಿಕೊಂಡಿದ್ದ. ಕಾಲ ಪರಿಪಕ್ವತೆಯಿಂದಲೇ ಸಾಧನೆಯಾಗಬೇಕು ಎಂಬುದು ಆತ್ಮನಿರ್ಣಯ. ಮುಂದೆ ಎಂದಾದರೊಮ್ಮೆ ವಿಷಯ ಪ್ರಕಟವಾಗಿ ಪತ್ರಿಕೆಗಳ ಮುಖಪುಟಗಳಲ್ಲಿ ಭಾವಚಿತ್ರಗಳು ಅಚ್ಚೊತ್ತಿ ಜಗಜ್ಜಾಹೀರಾಗುವುದು ದಿಟ. ನೋಬೆಲ್ ಪ್ರಶಸ್ತಿ ಬಂದರೂ ಆಶ್ಚರ್ಯವಿಲ್ಲ ಎನ್ನುತ್ತದೆ ಅಂತರ್ವಾಣಿ. ದೂರ ಭವಿಷ್ಯದಲ್ಲಿನ ಭವ್ಯ ಭವಿತವ್ಯದ ನಾನಾ ಚಿತ್ತಾರಗಳು ಅಕ್ಷಿಪಟದ ಮುಂದೆ ತೇಲಿ ನಲಿಯುತ್ತವೆ, ಚಲನಚಿತ್ರಗಳಂತೆ. ವಿಜ್ಞಾನ ಲೋಕದಲ್ಲಿ ಕೋಲಾಹಲವನ್ನು ಮೂಡಿಸುವ ಹುಚ್ಚು ಮನ ಮಂಥನದಲ್ಲಿ.

o o o o

ಚಂದ್ರಕೀರ್ತಿ ಹುಚ್ಚರಾಸ್ಪತ್ರೆಯ ಹಾದಿಯಲ್ಲಿ ಕಾರು ನಡೆಸಿದ.

ಸುನೀಲ ವರ್ಣದ ಕಾರು ನಿಧಾನವಾಗಿ ಚಲಿಸುತ್ತಲಿತ್ತು. ನಗರ ವಲಯದಿಂದ ದೂರದ ಪ್ರಶಾಂತ ವಾತಾವರಣದಲ್ಲಿ ಬೃಹದ್ ಮರಗಳ ತೋಪು. ಅಲ್ಲಲ್ಲಿ ಹೆಬ್ಬಂಡೆಗಳ ಹಾಸು. ಹೂಗಿಡಗಳ ಸುಂದರ ಉದ್ಯಾನದ ಹಸಿರಿನಾಚೆ ಬೃಹದ್

ಕಟ್ಟಡ. ದೂರದಿಂದಲೇ ಕಣ್ಸೆಳೆಯುವ ಸುಸುಂದರ ಚಿತ್ರ. ಚಂದ್ರಕೀರ್ತಿ ಕಾರನ್ನು ಹೆಮ್ಮರದಡಿಯಲ್ಲಿ ನಿಲ್ಲಿಸಿ ಬೃಹದ್ ಅಂಗಣವನ್ನು ದಾಟಿ ಆಲಯದ ಮೆಟ್ಟಿಲನ್ನು ಹತ್ತಿದ. ಉದ್ದನೆಯ ಕಾರಿಡಾರಿನ ಬಲಭಾಗದಲ್ಲಿದ್ದ ಕೊಠಡಿ ಸೂಪರಿಂಟೆಂಡೆಂಟರದು. ಒಳಹೋಗಿ ಅವರಿಗೆ ತನ್ನ ಔಷಧದ ಸಿದ್ಧಿಯನ್ನು ಕುರಿತು ವಿವರಣೆಯನ್ನು ನೀಡಿದನಂತರ ಅವರಿಂದ ಔಷಧ ಪ್ರಯೋಗಕ್ಕೆ ಪರ ವಾನಗಿಯನ್ನು ಪಡೆದುಕೊಂಡ.

"Wish you good luck !" ಎಂದು ಅಭಿನಂದಿಸಿ ಬೀಳ್ಕೊಟ್ಟರು ಅವರು.

ಅಟೆಂಡರ್ ಗೋಪಿ ಒಬ್ಬ ಹುಚ್ಚನನ್ನು ಹೊರಕೊಠಡಿಗೆ ಕರೆತಂದ. ಅವನ ಹುಚ್ಚು ಒಮ್ಮೆ ಕೆರಳಿದರೆ ಮತ್ತೊಮ್ಮೆ ಸಪ್ಪೆ. ಹೀಗೆ ವಿಕಾರದ್ವಯ ಗಳನ್ನು ಹೊಂದಿದ್ದ ಆತ ಮುಖಮುಡಿಯಾಗಿ ಕುಳಿತುಕೊಂಡ. ಪಡಿ ಮುಖ ದಲ್ಲಿ ಅಡಿಗಣ್ಣ ನೋಟ. ಕೇವಲ ಮುಖಭಾವದಿಂದಲೇ ಸ್ಥಿತಿಗತಿಯನ್ನು ಅಳೆ ಯಬಹುದಾದಂತಹ ಸತ್ಯಚಿತ್ರ.

ಚಂದ್ರಕೀರ್ತಿ ಸ್ವಲ್ಪಹೊತ್ತು ಅವನನ್ನು ಗಮನಿಸಿದ. ಕುಳಿತ ಭಂಗಿ ಯಲ್ಲಿ ದೈನ್ಯತೆಯುಕ್ಕುತಿತ್ತು.

ಕೆದರಿದ ತಲೆ, ಅಸ್ತವ್ಯಸ್ತವಾದ ಉಡುಪು, ಕಣ್ಣುಗಳ ಕಾಂತಿಹೀನತೆ ಇವುಗಳು ಮಾನಸಿಕ ಅಸಮತೋಲನವನ್ನು ನಿರೂಪಿಸುತಿದ್ದುವು.

ಚಂದ್ರಕೀರ್ತಿ ಮೃದು ದನಿಯಲ್ಲಿ ಕೇಳಿದ,

"ಏನಪ್ಪಾ, ಹೇಗಿದ್ದಿ ಇಂದು ?"

ಅವನು ಮಾತಾಡದೆ ತಲೆಯಾಡಿಸಿದ. ಮುಖಮುದ್ರೆ ಒಗರಾಗಿತ್ತು.

"ನಿನ್ನ ತಂದೆಯ ಹೆಸರೇನು ? ತಾಯಿಯ ಹೆಸರು ಗೊತ್ತೇ ?"

ಅವನು ತಲೆಯೆತ್ತಿ ನೋಡಿ ಹಲ್ಕಿರಿದ. ಕೈಗಳು ಸೆಟೆದುಕೊಂಡಂತೆ ಮುಷ್ಟಿಹಿಡಿದುವು. ಅವನಲ್ಲಿ ಮಾತಾಡುವ ಉತ್ಸಾಹವೇ ಇರಲಿಲ್ಲ. ಏನೋ ಒಂದು ಬಗೆಯಲ್ಲಿ ಬಿರಿಬಿರಿ ನೋಡಿದ. ಕುತ್ತಿಗೆಯ ನರಗಳು ಸೆಟೆದುಕೊಂಡಂತೆ

ಉಬ್ಬಿದುವು. ಏನೋ ಒಂದು ಬಗೆಯ ದೈನ್ಯಭಾವ ಮುಖದಲ್ಲಿ.

ಚಂದ್ರಕೀರ್ತಿ ಅವನಿಗೆ 'ಮೆಮರಾಕ್ಸ್' ಕೊಡಬಹುದು ಎಂದುಕೊಂಡ.

ಅಲ್ಲಿನ ಡಾಕ್ಟರ್ ಗಿರಿಧರನೊಂದಿಗೆ ಮಾತಾಡಿ ಪುಡಿಯನ್ನು ತಿನ್ನಿಸಲು ಪ್ರಯತ್ನಿಸಿದ.

ಆದರೆ ...

ಆತ ಒದ್ದಾಡಿದ. ಎಷ್ಟೆಷ್ಟು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಯಾವುದಾದರೂ ಪಾನೀಯದೊಳಗೆ ಸೇರಿಸಿಕೊಡಬಹುದೇನೋ ಎಂಬ ಯೋಚನೆಯಿಂದ ಸುಮ್ಮನಾದ ಮನದಲ್ಲಿದ್ದ ಹುರುಪು ಇಳಿದು ಹೋಯಿತು. ಮೊಟ್ಟ ಮೊದಲಿಗೇ ಸೋಲು ಎಂದಿತು ಮನಸ್ಸು.

೦ ೦ ೦ ೦

"ವಿದ್ಯಾರಾಣಿ, ಏನಮ್ಮಾ ಮಾಡುತಿದ್ದಿ ?"

ಅಣ್ಣನ ಮುದ್ದಿನ ಕರೆಗೆ ಓಗೊಟ್ಟ ವಿದ್ಯಾರಾಣಿ ಬಳಿಗೆ ಬಂದಳು ಜಿಗಿದು.

"ಈ ದಿನ ಶಾಲೆಗೆ ಹೋಗಲಿಲ್ಲವೇನು ?"

"ಹೋಗಿ ಬಂದೆ."

"ಏನು ಪಾಠ ಮಾಡಿದರು ?"

"ಪಾಠವೇ ....?"

ಅವಳು ನಕ್ಕು ಬಿಟ್ಟಳು.

ಅವಳ ಕೂದಲನ್ನು ನೇವರಿಸಿ ಮುದ್ದುಗೈದು ಅವನೆಂದ "ನೀನು ಯಾವ ಪಾಠ ಓದಿದೆ ಅದನ್ನು ಹೇಳು..."

"ಅದೇ ದಿನಾ ಓದಿದ ಪಾಠ..."

"ಹೇಳು, ನನ್ನ ರಾಣೀ ! ಇಂದು ಹಿಂದಿಯೆ, ಇಂಗ್ಲೀಷೆ ? ಯಾವ ಭಾಷೆಯ ಅಧ್ಯಯನವಿತ್ತು ?ನೀನು ಏನೇನು ಕಲಿತೆ ?"

"ಈವೊತ್ತು ಯಾವುದೂ ಇರಲಿಲ್ಲ..."

"ಸುಮ್ಮನೆ ಕ್ಲಾಸಿನಲ್ಲಿ ಕುಳಿತಿದ್ದೆಯಾ?"

"ಇಲ್ಲ ಏನೇನೋ ಇತ್ತು. ಅನಂತರ ಹೇಳುವೆ. ಅನಂತರ ...."

ಅವನ ಜೇಬಿಗೆ ಕೈಹಾಕಿ ಪೆನ್ನು, ಡೈರಿ, ಕಾಗದ ಪತ್ರಗಳು ಔಷಧಿಯ ಸಣ್ಣ ಶೀಶೆ ಕರವಸ್ತ್ರ ಎಲ್ಲವನ್ನೂ ಖಾಲಿ ಮಾಡಿದಳು. ನಗುವಿನ ಲಹರಿ ಹರಿಸುತ್ತ.

"ನೀನು ತೆಗೆದದ್ದು ಒಳ್ಳೆಯದೇ ಆಯ್ತು. ಅವನ್ನು ನನ್ನ ಮೇಜಿನ ಮೇಲಿಡು. ಈ ಶರಟನ್ನು ಡೋಬಿಗೆ ಕೊಟ್ಟು ಬರುವೆ."

ಚಂದ್ರಕೀರ್ತಿ ಶರಟಿನೊಂದಿಗೆ ಇನ್ನೂ ಕೆಲವು ಬಟ್ಟೆಗಳನ್ನು ಒಂದು ಕೈ ಚೀಲದಲ್ಲಿ ಹಾಕಿಕೊಂಡು "ಇವನ್ನು ಡೋಬಿಗೆ ಕೊಟ್ಟುಬರುವೆ. ಆಯಿತೇ...?" ಎಂದಷ್ಟು ನುಡಿದು ಮೆಟ್ಟಿಲಿಳಿದು, ಅದೇ ಬೀದಿಯ ಕೊನೆಯಲ್ಲಿದ್ದ ಡೋಬಿಯ ಅಂಗಡಿಗೆ ದಾಪುಗಾಲು ಹಾಕಿದ.

ಸಾಯಂ ಸಮೀರನ ಚಾಮರ ಸೇವೆ ಒಂದೇ ಸಮನೆ ನಡೆಯುತಿತ್ತು. ಹಗಲಿನ ಸುಡು ಬಿಸಿಲ ಕಾವಿಗೆ ತಂಪೂಡಿಸುವಂತೆ. ಹೊರ ಹೋಗಿದ್ದ ತಾಯಿ-ಕೌಸಲ್ಯಾ ಬಾಯಿ ಇನ್ನೂ ಮನೆಗೆ ಹಿಂದಿರುಗಿರಲಿಲ್ಲ. ಮನೆಯಲ್ಲಿ ನೀರವ-ನಿಶ್ಶಬ್ದ.

ವಿದ್ಯಾರಾಣಿ ಒಳಗಿನಿಂದ ಹೊರಬರುತ್ತಾ ಕೇಳಿದಳು.

"ಅಣ್ಣಾ, ಇದೇನು ಈ ಡಬ್ಬಿಯಲ್ಲಿರುವುದು ಚಾಕಲೆಟ್ ಪೌಡರೇ? ರುಚಿ ನೋಡಿದರೆ ಹಾಗೇ ಇದೆ...."

"ಯಾವುದಮ್ಮಾ?"

"ಇದು ಬಲೂ ರುಚಿ."

"ಓ, ಅದು ಔಷಧಿ. ನೀನು ತಿಂದು ಬಿಟ್ಟೆಯಾ ಹೇಗೆ?" ಗಾಬರಿಯಿಂದ ಕೇಳಿದ ಚಂದ್ರಕೀರ್ತಿ. ಮೈಯೆಲ್ಲಾ ಮನಸ್ಸಾಗಿ ಅವಳನ್ನೇ ನೋಡಿದ. ಒಮ್ಮೆಗೇ ಹೃದಯ ಡವಡವಿಸಿತು.

"ಸ್ವಲ್ಪ ಮಾತ್ರ ರುಚಿ ನೋಡಿದೆ ಅಷ್ಟೆ."

"ಛೆಃ ! ಎಂಥ ಕೆಲಸ ಮಾಡಿಬಿಟ್ಟೆ. ಔಷಧಿ ಎಂದಮೇಲೆ ಒಳ್ಳೆಯದು ಕೆಟ್ಟದು ಎಲ್ಲಾ ಇರುತ್ತೆ. ಯಾವುದನ್ನೂ ತಿಂದು ನೋಡಬಾರದು."

"ಬಣ್ಣ ನೋಡಿದರೆ ಚಾಕಲೇಟ್ ಪೌಡರ್ ಇದ್ದಹಾಗಿದೆ.. ಅದಕ್ಕೇ..." ಕಿಲಕಿಲ ನಕ್ಕಳು ಅವಳು.

ಚಂದ್ರಕೀರ್ತಿ ಪರಿತಾಪ–ಮುಜುಗರಗಳ ಮಡುವಾದ. ಮುಖಬಿಂಬ ಬಣ್ಣಗೆಟ್ಟಿತು.

ಆದರೆ, ಆ ಹುಡುಗಿ ಯಾವೊಂದು ಚಿಂತೆಯ ಗೋಜಿಲ್ಲದೆ ನಿರಾಳವಾಗಿ ಒಳಹೋದಳು. ಹಿಂದಿನಿಂದ ನಯನದ್ವಯಗಳು ಭೀತಭಾವದಿಂದ ಅವಳನ್ನೆ ನೋಡಿದುವು. ಒಡಲಾಳದಲ್ಲಿ ಎಲ್ಲಿಲ್ಲದ ತಳಮಳ.

೦ ೦ ೦ ೦

ವಿಜ್ಞಾನಿ ಪ್ರೊಫೆಸರ್ ರಘು ಚಂದ್ರಕೀರ್ತಿಯ ಮೆಮೆರಾಕ್ಸ್ ಔಷಧಿಯನ್ನು ಪ್ರಾಯೋಗಿಕವಾಗಿ ಹುಚ್ಚನಿಗೆ ಕೊಟ್ಟು ಪರೀಕ್ಷಿಸಿ ಯಶಸ್ವಿಯಾದರು. ಆಗ ಅವರಿಗಾದ ಸಂತೋಷ ಅಷ್ಟಿಷ್ಟಲ್ಲ. ಆ ಹುಚ್ಚ ಹಿಂದಿನ ಮರೆತು ಹೋಗಿದ್ದ ಕೆಲವು ಪ್ರಕರಣಗಳನ್ನು ಜ್ಞಾಪಿಸಿಕೊಳ್ಳಲು ಸ್ವಲ್ಪ ಸಮರ್ಥನಾದ. ಸಂಪೂರ್ಣವಾಗಿ ಅಲ್ಲದಿದ್ದರೂ ಬಹಳಷ್ಟು ವಿಷಯಗಳು ಅವನ ನೆನಪಿನ ಸುಳಿಯಲ್ಲಿ ನುಸುಳಿ ಬರತೊಡಗಿದ್ದುವು. ಅವನಿಗೆ ಮತ್ತೊಮ್ಮೆ ಪ್ರಯೋಗಿಸಲು ಚಂದ್ರಕೀರ್ತಿಯೇ ಹಿಂಜರಿದಿದ್ದ. ಸ್ವಲ್ಪ ಕಾಲಾನಂತರ ಕೊಡೋಣ ಈಗಲೇ ಬೇಡ, ಎಂಬ ವಿಳಂಬ ಮನೋಭಾವ. ಅಥವಾ ಕಾಯ್ದು ನೋಡುವ ಸಾವಧಾನ ಅವನಲ್ಲಿ.

ಚಂದ್ರಕೀರ್ತಿ ಮನೆಗೆ ಹೋದಾಗ ತಾಯಿ ಮಗಳು ಸೋಫಾದ ಮೇಲೆ ಮೈ ಚೆಲ್ಲಿದ್ದರು.

"ನೋಡಪ್ಪಾ, ಚಂದ್ರೂ! ನಿನ್ನೆಯ ಪಾಠಗಳನ್ನೆಲ್ಲಾ ಹೇಳುತಿದ್ದಾಳೆ ವಿದ್ಯಾ."

"ಹೌದೇ ...?" ಆಶ್ಚರ್ಯವಿಸ್ತೃತ ನಯನಗಳಿಂದ ನಿಟ್ಟಿಸಿದ ಚಂದ್ರಕೀರ್ತಿ.

ಆ ತಕ್ಷಣವೇ ಅವಳು ತನ್ನ ಔಷಧಿಯನ್ನು ರುಚಿ ನೋಡಿದ ನೆನಪು ಮೂಡಿತು. ಒಂದೆರಡು ಕ್ಷಣ ಗಂಭೀರ ಗತಿಯಲ್ಲಿ ಅವಳನ್ನೇ ನೋಡಿ ನುಡಿದ,

"ನೋಡು, ವಿದ್ಯಾ! ಅಂದು ನೀನು ಔಷಧವನ್ನು ರುಚಿನೋಡಿದೆಯಷ್ಟೆ? ಒಂದು ವೇಳೆ ಅದು ಬೇರೆ ಯಾವುದಾದರೂ ಆಗಿದ್ದಿದ್ದರೆ ಯಾವ ದುಷ್ಪರಿಣಾಮವಾಗುತಿತ್ತೋ....ಆದ್ದರಿಂದ ಯಾವುದನ್ನೂ ಸಂಪೂರ್ಣ ತಿಳಿದುಕೊಳ್ಳುವ ಮುನ್ನ ಬಾಯಿಗಿಡಬಾರದು. ಹ್ನೂಂ, ಈಗ ಆಯಿತಲ್ಲ, ಹೇಳು, ನಿನ್ನೆ ಯಾವ ಪಾಠ ಮಾಡಿದರು? ಇಂಗ್ಲೀಷೋ ಕನ್ನಡವೋ ...."

ಅವಳು ಒಂದು ಗಳಿಗೆ ಯೋಚಿಸಿ "ನಿನ್ನೆ ಮಂಗಳವಾರವಲ್ಲವೇ? ಹಿಂದಿ ಭಾಷೆಯಿತ್ತು! ಚರಿತ್ರೆ–ಭೂಗೋಳವಿತ್ತು!"

"ಭೇಷ್!...." ಆನಂದ ತುಂದಿಲತೆಯಿಂದ ನಕ್ಕುಬಿಟ್ಟ ಚಂದ್ರಕೀರ್ತಿ. ಹಣೆಗೊಂದು ಹೂ ಮುತ್ತನೊತ್ತಿ ತಲೆಯನ್ನು ಮುದ್ದಿನಿಂದ ನೇವರಿಸಿ ಗಾಢಾಲಿಂಗನೆ ಮಾಡಿಕೊಂಡ.

o o o o

"ಅಣ್ಣಾ... ಅಣ್ಣಾ!"

ಚಂಗನೆ ಹಾರಿಬಂದ ವಿದ್ಯಾರಾಣಿ ಚಂದ್ರಕೀರ್ತಿಯನ್ನು ಸಮೀಪಿಸುತ್ತಲೂ ಗಕ್ಕನೆ ನಿಂತುಬಿಟ್ಟಳು. ಏನೋ ಹೇಳಬೇಕು, ಹೇಳಲಾರಳು. ವಿಚಿತ್ರ ಭಾವದ ವಿಚಿತ್ರ ಮನಸ್ಸು ಅವಳನ್ನು ತಡೆಹಿಡಿಯಿತು. ಮುಖ ಬಿಂಬದಲ್ಲಿ ತಿಳಿನಗೆಯ ಹಸನಾದ ಹರವು.

"ಏನಮ್ಮಾ ಅದು? ಏನು ವಿಶೇಷ?"

ಮತ್ತೆ...ಮತ್ತೇ..." ಅಷ್ಟಕ್ಕೆ ತುಟಿ ಕಚ್ಚಿದಳು ಅವಳು. ತುಂಟ ಭಾವದಿಂದ ನಲಿಯಿತು ಮನಸ್ಸು.

"ಏನು, ಹೇಳು ಮರೀ...."

"ಮೊನ್ನೆ...ಆವೊತ್ತು ನೆರೆಮನೆ ಪಂಕಜಮ್ಮ ಅವರ ಮಗಳೊಂದಿಗೆ ಏನೇನೋ ಹೇಳುತಿದ್ದರು. ನಾನಲ್ಲೇ ಇದ್ದೆ. ಈವೊತ್ತು ನೆನಪಾಯಿತು."

"ಏನು ಹೇಳು. ಮಗೂ."

"ನೀನು.... ನಮ್ಮಮ್ಮನ ಹೊಟ್ಟೆಯಲ್ಲಿ ಹುಟ್ಟಲಿಲ್ಲವಂತೆ !"

"ಯಾರು ಹೇಳಿದ್ದು ?"

"ಪಂಕಜಮ್ಮನ ಮಗಳಿಗೆ ಮಕ್ಕಳಿಲ್ಲವಲ್ಲಾ, ಅದಕ್ಕೆ ಪಂಕಜಮ್ಮ ಹೇಳಿದ್ದೇನು ಗೊತ್ತೇ? ಕೌಸಲ್ಯಾಬಾಯಿ ಯಾರದೋ ಮಗುವನ್ನು ಸಾಕಿಲ್ಲವೇ? ಈಗ ಏನಾಗಿದೆ? ಹುಡುಗ ವಿಧವೆಗೆ ಹುಟ್ಟಿದವನಾದರೂ ಎಷ್ಟು ಬುದ್ಧಿವಂತನಾಗಿದಾನೆ? ಅವರಿಗೆ ಸ್ವಂತ ಮಗನೇ ಆಗಿಲ್ಲವೇ ಅವನು? ನೀನೂ ಹಾಗೆಯೇ ಅನಾಥಾಶ್ರಮದಿಂದ ಒಂದು ಮಗುವನ್ನು ತಂದು ಸಾಕು. ಚಂದ್ರಕೀರ್ತಿಯ ಭಾಗ್ಯದಿಂದ ಕೌಸಲ್ಯಾಬಾಯಿಗೆ ವಿದ್ಯಾರಾಣಿ ಹುಟ್ಟಿದಳು. ನಿನಗೂ ಹಾಗೆಯೇ ಒಂದು ಮಗು ಎಂದಾದರೂ ಹುಟ್ಟಬಹುದೇನೋ... ಯಾರಿಗೆ ಗೊತ್ತು ?"

"ಅವರೆಂದುದು ಹೀಗೆ...ಅಂದರೆ ನೀನು ನಮ್ಮಮ್ಮನ ಮಗನಲ್ಲ ಗೊತ್ತಾ ?"

ಹುಡುಗಿ ಕಿಲಕಿಲನೆ ನಕ್ಕಳು. ಒಡಲು ತಮಾಷೆಯ ಝುರಿಯಿಂದ ತುಂಬಿ ಉಕ್ಕುಕ್ಕಿ ಕೋಡಿ ಹರಿಯಿತು. ಎಳೆಯ ಮೈ ನಿಗಿ ನಿಗಿ ನಲಿಯುವಂತೆ.

o o o o

ಚಂದ್ರಕೀರ್ತಿ ಯೋಚನಾಪರವಶನಾದ. ಅದರಲ್ಲೂ ವಿಧವೆಗೆ ಹುಟ್ಟಿದ ಕೂಸು. ಇರಲಿ, ವಿಧವೆಯಾದಾಕ್ಷಣ...ಆಕೆಗೆ ಆಸೆ ಆಕಾಂಕ್ಷೆಗಳು... ಜೀವನ ಭಾಗ್ಯ.... ಬದುಕಿನ ಲೋಲುಪ್ತಿ...ಇವು ಯಾವುದೂ ಇರಕೂಡದೇ ? ಪಾಪ, ಈಗಣ ಅವಳ ಸ್ಥಿತಿಗತಿ ಹೇಗಿರಬೇಡ ?

ಎಲ್ಲೋ ಒಂದು ಗಳಿಗೆಯ ಸುಖದ ಆಸೆಯಿಂದ ದುರ್ಗಗಳಿಗೆಯಲ್ಲಿ ಒಪ್ಪಿಯೋ ಒಪ್ಪದೆಯೋ ಸಿಕ್ಕಿ ಮಾತೃಪದದ ಭಾರವನ್ನು ಹೊತ್ತು ಹೊರಲಾರದೆ ಮಗುವನ್ನು ಬಿಟ್ಟುಕೊಟ್ಟಿರಬೇಕಾದರೆ ಎಷ್ಟು ನೊಂದು ನೀರಾಗಿರಬೇಡ ....? ಇದನ್ನು ಅಮ್ಮ ಏಕೆ ನನ್ನಿಂದ ಮುಚ್ಚಿಟ್ಟಿರೋ... ಅದನ್ನೊಮ್ಮೆ ಕೇಳಿ ತಿಳಿದುಕೊಳ್ಳಬೇಕು. ನನಗಿದರ ಸುಳಿವು ಲವಲೇಶವೂ ತಿಳಿದಿರಲಿಲ್ಲ...

ಕೌಸಲ್ಯಾ ಬಾಯಿ ಸ್ನಾನದ ಮನೆಯಿಂದ ಹಿಂದಿರುಗುವವರೆಗೂ ವರ್ತಮಾನ ಪತ್ರಿಕೆಯಲ್ಲಿ ಮನವಿಟ್ಟ. ಅತ್ಯಂತ ಕುತೂಹಲಿತ ಮನಸ್ಸಿಗೆ ವಿಷಯ ಗ್ರಹಣ ಮಾಡುವಷ್ಟು ಸಹನೆಯೇ ಇಲ್ಲ. ಅಲ್ಲಲ್ಲೇ ಪದಚಾರಣ ಮಾಡುತ್ತ ತನ್ನಲ್ಲೇ ವಿಚಾರಶೀಲನಾದ. ಕಣ್ಣನೋಟ ರೋಲೆಕ್ಸ್ ಕೈ ಗಡಿಯಾರದ ಮೇಲೆ ಹರಿಯಿತು. ಮುಳ್ಳು ಒಂಭತ್ತರ ಸಂಖ್ಯೆಯನ್ನು ಸಮೀಪಿಸುತಿತ್ತು. ಇನ್ನು ಹೆಚ್ಚು ತಡಮಾಡುವಂತಿಲ್ಲ; ಎನಿಸಿದಾಗ ಸಂಜೆಯಲ್ಲಿ ಕೇಳಿಕೊಂಡರಾಯಿತು ಎಂದು ಕಾರು ಹತ್ತಿ ಹೊರಟೇ ಬಿಟ್ಟ.

೦ ೦ ೦ ೦

ಸಾಯಂಕಾಲ ಯಾರ್ಯಾರೋ ಇದ್ದರು ಮನೆಯಲ್ಲಿ.

ಮತ್ತೆ ಮುಂದಿನೆರಡು ದಿನಗಳಲ್ಲೂ ಕೇಳಲು ಸಾಧ್ಯವಾಗದಷ್ಟು ಅಡಚಣೆ, ಮನಸ್ಸಿಗೂ ಉತ್ಸುಕತೆಯಿಲ್ಲ. ಒಡಲಾಳದಲ್ಲಿ ಏನೋ ಒಂದು ಬಗೆಯ ವಿಚಾರ ವಿಪ್ಲವ ಅಕಾಂಡತಾಂಡವ ನೃತ್ಯಗೈಯುತಿದ್ದರೆ ಎದೆ ತುಲಾಭಾರದ ತ್ರಾಸು.

ವಿದ್ಯಾರಾಣಿ ತುಂಟನಗೆ ಬೀರಿ ತೋರು ಬೆರಳು ಎತ್ತಿಹಿಡಿದು ತಮಾಷೆಯಿಂದ ನುಡಿದಳು– "ನೋಡಿದೆಯಾ ? ನಾನೊಬ್ಬಳೇ ಅಮ್ಮನಿಗೆ ಮಗಳು... ನೀನಲ್ಲ !"

ಆ ಅರಳುಗಣ್ಣುಗಳಲ್ಲಿ ತುಳುಕುತಿದ್ದ ಮಿಂಚಿನ ಬೆಳಕು ತುಂಟತನವನ್ನು ಸ್ವಚ್ಛಂದವಾಗಿ ಪ್ರದರ್ಶಿಸಿತು.

ಚಂದ್ರಕೀರ್ತಿ ಹಸನ್ಮುಖಿಯಾಗಿ "ಆಗಲಿ ಬಿಡು, ಅದಕ್ಕೇನಂತೆ?" ಎಂದ.

ಅವಳು ಟಾಟಾ ಹೇಳಿ ಶಾಲೆಗೆ ಹೊರಟಳು. ಚಂದ್ರಕೀರ್ತಿ ಭಾರವಾದ ಹೆಜ್ಜೆಗಳನ್ನು ಎಳೆದುಕೊಳ್ಳುತ್ತ ತಾಯಿಯ ಕೊಠಡಿಗೆ ಹೋಗಿ ವಿಷಯವನ್ನು ಮುಂದಿಟ್ಟು "ನಿಜವೇ ಅಮ್ಮಾ..."

ಕೌಸಲ್ಯಾ ಬಾಯಿಗೆ ಆಶ್ಚರ್ಯವೋ ಆಶ್ಚರ್ಯ. ಹೇಗೆ ವಿಷಯ ಬಯಲಾಯಿತು ಎಂದು. ಆಗ ಅವರ ಸಹಾಯಕ್ಕೆ ಚಂದ್ರಕೀರ್ತಿಯೇ ಬರಬೇಕಾಯಿತು.

"ಪಂಕಜಮ್ಮ ಹಾಗೆಲ್ಲಾ ಮಾತಾಡುವವರಲ್ಲ, ಇವಳಿಗೆ ಸ್ಮರಣ ಶಕ್ತಿ ಇಲ್ಲವಾದುದರಿಂದ ಬಾಯಿ ಬಿಟ್ಟಿದ್ದಾರೆ. ಹೋಗಲಿ ಬಿಡು, ಅದರಿಂದ ಅಂತಹ ಪ್ರಮಾದವೇನಿಲ್ಲ. ಇಂತಹ ಪ್ರಕರಣಗಳು ಎಷ್ಟೆಷ್ಟೋ ನಡೆಯುತ್ತವೆ. ಹೆಣ್ಣನ್ನು ವಿಧವಾವೇಶ ತೊಡಿಸಿ ಸೆರೆಯಲ್ಲಿಡುವುದು ತಪ್ಪು. ಅದೇ ಗಂಡಸು ಎಷ್ಟು ಬೇಕಾದರೂ ಮದುವೆಯಾಗುತ್ತಾರೆ, ಎಷ್ಟಾದರೂ ದೊಂಬರಾಟ ಆಡುತ್ತಾರೆ. ಅವರಿಗೆ ಯಾವ ಕಟ್ಟು ಕಟ್ಟಳೆಯೂ ಇಲ್ಲ. ಅವಳನ್ನು ಭೋಗಿಸಿದ ಅವನೆಲ್ಲೋ... ಇದಕ್ಕೇನಾದರೂ ಅರ್ಥವುಂಟೇ? ಬಾಲ್ಯವಿವಾಹ ಮಾಡಿ ಹೆಣ್ಣಿನ ಆಸೆ–ಆಕಾಂಕ್ಷೆಗಳನ್ನು ಕೊಲೆಗೈದು ಅವಳನ್ನು ಸದಾ ಭೋಗವಸ್ತುವಾಗಿ ಭೋಗಿಸುವುದರ ಪರಿಣಾಮವೇ ಇದು. ಪಾಪ, ಹೆಂಗಳೆಯರ ಗೋಳು ಕೇಳುವವರೇ ಇಲ್ಲ. ಆಕೆಯ ಕಡೆಗೆ ಬೊಟ್ಟು ಮಾಡಿ ನಗುವವರೇ ಹೊರತು ಅವರ ಬಾಳಿಗೆ ಬೆಳಕು ನೀಡುವವರು ಇಲ್ಲವೇ ಇಲ್ಲ. ಕಡ್ಡಾಯ–ಒತ್ತಂಕೆಗಳ ಉರುಳು ಸದಾ ಕತ್ತಿನ ಮೇಲೆ ನೇತಾಡುತ್ತಿರುತ್ತದೆ. ಹೆಣ್ಣಿಗೂ ನಿಮಗಿರುವಷ್ಟೇ ಸ್ವತಂತ್ರವಿದ್ದು ತನ್ನ ಸಹಚರನನ್ನು ತಾನೇ ಆರಿಸಿಕೊಳ್ಳುವಷ್ಟು ಆದ್ಯತೆಯಿದ್ದರೆ ಅವಳು ಧೀಮಂತೆಯಾಗುತ್ತಿರಲಿಲ್ಲವೇ? ಇದೆಲ್ಲಾ ಯಾರ ತಪ್ಪು ನೀನೇ ಯೋಚಿಸಿ ನೋಡು. ನಾನು ನಿನ್ನನ್ನು ಒಬ್ಬ ವಿಧವೆಯಿಂದ ಪಡೆದುಕೊಂಡುದುದು ನಿಜ. ಆಕೆ ಜೈನ ವಿಧವೆ. 'ಚಂದ್ರ ಕೀರ್ತಿ' ಎಂದು ಹೆಸರಿಟ್ಟಿದ್ದು ಅವಳೇ. ನೀನಾಗ ತಿಂಗಳ ಮಗು. ನನಗೆ ಮದುವೆಯಾಗಿ ಎಂಟು

ವರ್ಷಗಳಾಗಿದ್ದರೂ ಮಕ್ಕಳ ಭಾಗ್ಯ ಲಭಿಸಿರಲಿಲ್ಲ. ನಿನ್ನ ತಂದೆಯ ಒಪ್ಪಿಗೆಯ ಮೇಲೆಯೇ ಮಗುವನ್ನು ಪಡೆದುಕೊಂಡೆ. ಅನಂತರ ಎಂಟುವರ್ಷಗಳ ಮೇಲೆ ವಿದ್ಯಾರಾಣಿ ಹುಟ್ಟಿದಳು. ನೀನು ಆ ವಿಚಾರವಾಗಿ ಮನಸ್ಸಿಗೆ ತೆಗೆದುಕೊಳ್ಳ ಬೇಕಾದುದೇನೂ ಇಲ್ಲ.

"ನಾನು ನಿನ್ನನ್ನು ಸಾಕಲು ಮುಂದಾದಾಗ ಎಷ್ಟೋ ಮಂದಿ ಛೀಮಾರಿ ಹಾಕಿದರು. ತಿರಸ್ಕರಿಸಿ ವಾಗ್ಜಾಲ ಹರಿಸಿದರು. ನಾನು ಎಲ್ಲಕ್ಕೂ ಕಿವುಡಾಗಿ ನಿನ್ನನ್ನು ಪಡೆದುಕೊಂಡೆ. ಸದ್ವಂಶವಲ್ಲವಾದುದರಿಂದ ಹುಡುಗ ಪೋಲಿಯಾ ಗುತ್ತಾನೆ ಎಂದೆಲ್ಲಾ ಹೆದರಿಕೆ ಹುಟ್ಟಿಸಿದರು. ನೀನು ಸಾಕುವುದು ವ್ಯರ್ಥ ಎಂತಲೂ ಹೇಳಿದರು. ನಾನು ಯಾವುದಕ್ಕೂ ಮಣಿಯಲಿಲ್ಲ. ದೇವರು ದೊಡ್ಡ ವನು. ಸರಿದಾರಿಯಲ್ಲಿ ನಡೆಸಿದ್ದಾನೆ. ಇನ್ನೇನು ಬೇಕು ನಿನಗೆ?"

ಆ ಕೊನೆಯ ಪ್ರಶ್ನೆ ಇನ್ನೇನು ಬೇಕು ನಿನಗೆ? ಎಂದು ಸರ್ರನೆ ಎದೆ ಯಾಳಕ್ಕೆ ಇಳಿಯಿತು. ಚಂದ್ರಕೀರ್ತಿ ಪ್ರಯತ್ನಿಸಿದರೂ ತುಟಿಗಳು ಬಿರಿಯ ಲಿಲ್ಲ. ಮುಖಬಿಂಬದಲ್ಲಿ ಹಸನಾದ ತಿಳಿನಗೆ ಮೂಡಿತು. ತಾಯಿಯನ್ನು ಗಾಢಾಲಿಂಗನ ಮಾಡಿಕೊಂಡ.

— ೦ —

ಮಂಗಳಾನಿ

೩

ಅಸಾರೇ ಸಾರ ಮತಿನೋ ...

"ಮಂಗಳಾ !"

"........"

"ಮಂಗಳಾ...!"

ಧ್ವನಿ ಉಚ್ಚ ಸ್ವರದಲ್ಲಿ ಮೊಳಗಿದಾಗ ಮಿಡುಕಿ ಬಿದ್ದು ಓಗೊಟ್ಟಳು ಮಂಗಳಾ.

ಚಂದು ಹೊರ ಹೋಗಲು ಅಣಿಯಾಗಿದ್ದ. ಬೆರಳ ಮಧ್ಯೆ ಹೊಗೆಯಾಡುವ ಸಿಗರೇಟು. ಮುಖದಲ್ಲಿ ಅಸಮಾಧಾನದ ಮುದ್ರೆ.

ಅವಳು ನೋಡಿದ ನೋಟದಲ್ಲಿ 'ಏನು ?' ಎಂಬ ಪ್ರಶ್ನೆ ಒದಗಿತ್ತು. ಬಾಯಿ ಬಿಟ್ಟು ಕೇಳಲಿಲ್ಲ. ಅವನು ಲೋಕಾಭಿರಾಮ ಭಂಗಿಯಲ್ಲಿ ನುಡಿದ,

"ಮಧ್ಯಾಹ್ನ, ನಾನು ಸಾಹೇಬರೊಂದಿಗೆ ಪ್ರವಾಸ ಹೋಗುವುದಿದೆ. ಸೂಟ್‌ಕೇಸಿಗೆ ನಾಲ್ಕು ಜೋಡಿ ಬಟ್ಟೆಗಳನ್ನು ಹಾಕು. ಟಾಯ್‌ಲೆಟ್ ಕಿಟ್ ಶುಚಿಯಾಗಿರಲಿ. ಒದ್ದೆ ವಸ್ತುಗಳನ್ನು ಇರಿಸಬೇಡ. ಹೋದ ಬಾರಿ ಸರಿ ಇರಲಿಲ್ಲ...."

ಅಲ್ಲಿಗೇ ಮುಗಿಯಲಿಲ್ಲ. ಇನ್ನೂ ಏನೇನೋ ವಿಷಯಗಳು ಹೊರ ಬಿದ್ದುವು ಅಪ್ಪಣೆಯ ಧಾಟಿಯಲ್ಲಿ. ಮಂಗಳಾನಿ ಎಲ್ಲಕ್ಕೂ 'ಹ್ಞೂಂ' ಎಂದಳು. ಮೈಯಲ್ಲಿ ಸಣ್ಣಗೆ ಸವಿದು ನಿಮಿರಿದ್ದುವು.

"ತಿಳಿಯಿತೇ ?"

"ಆಗಲಿ, ಈ ಸಲಿ ಎಲ್ಲವನ್ನೂ ಸರಿಪಡಿಸುವೆ." ಆಶ್ವಾಸನೆ ನೀಡಿದಳು ಅವಳು.

ಅವನು ಹೊರಟ. ಅಪರದ್ದೇಶವನ್ನು ನಿಟ್ಟಿಸಿದುವು ನೆಟ್ಟ ನಿಟ್ಟಾಲಿಗಳು. ಎದೆಯಾಳದಿಂದ ನಿಟ್ಟುಸಿರೊಂದು ಹೊರಹೊಮ್ಮಿತು... ಅವನು ಮನೆಯಲ್ಲಿದ್ದರೂ ಕಷ್ಟ. ಇಲ್ಲದಿದ್ದರೂ ಕಷ್ಟ. ಅಂದು ಅವನ ಮಾತುಗಳಲ್ಲಿ ಸ್ಫುರಿಸುತಿದ್ದುದೇ ಸವಿಜೇನು ! ಇಂದು....?

ಮಂಗಳಾನಿ ಮನವನ್ನು ಗತಕಾಲಕ್ಕೆ ಹರಿಯಬಿಟ್ಟಳು.

○ ○ ○ ○

ಮಂಗಳಾ P.U.C. ಓದುತಿದ್ದಾಗಿನ ಸಮಯ.

ಮನೆಯಲ್ಲಿ ಬಡತನದ ಬೇಗೆಯಲ್ಲಿ ಬೇಯುವ ಸಂಸಾರ. ಮೇಲಾಗಿ, ಅಪ್ಪನ ಕಠಿಣ ಕಟು ಮನೋಜನ್ಯ ದುಸ್ವಭಾವ. ಮೂವರು ತಮ್ಮಂದಿರು. ಕೊನೆಯವಳು ತಂಗಿ. ತಮ್ಮಂದಿರ ವಿದ್ಯಾಭ್ಯಾಸಕ್ಕೆ ಆದ್ಯತೆ. ಮಗಳ ಬಗ್ಗೆ ತಾತ್ಸಾರದ ಧೋರಣೆ. P.U.C. ಆದರೆ ಸಾಕು ಮುಂದೆ ಓದಿಸಲಾರೆ ಎನ್ನುವ ಅಪ್ಪ. ಒಳಗೆ ತಾನೊಬ್ಬಳೇ ಗೆಯ್ಯಲಾರೆ, ಎನ್ನುವ ಅಮ್ಮ. ದೂರದ ನಲ್ಲಿಯಿಂದ ನೀರು ತರುವ ಕಾಯಕದೊಂದಿಗೆ ಅಲ್ಲಿಯ ನುಗ್ಗಾಟ–ಜಗಳ–ದೊಂಬಿ ಅವಾಚ್ಯ ಶಬ್ದಗಳ ರಾಣಾರಂಪದ ಗೋಳು. ಅರೆಹೊಟ್ಟೆ ಅರೆಬಟ್ಟೆಗಳ ಜಂಜಾಟ. ವರದಕ್ಷಿಣೆಯ ಬಿರುಗಾಳಿ. ಇಂಥಿಂಥ ಅತೀ ಕಟು ಅನುಭವಗಳು ಮನಗೆಡಿಸಿದ್ದು ನಿಜ. ನಿತ್ಯ ಒಂದಲ್ಲ, ಒಂದು ದುಃಖ ದುಮ್ಮಾನಗಳು ಕೊರಳಿಗೆ ಉರುಳಾಗುವುವು. ಕಣ್ಣಿನಲ್ಲಿ ಹರಿದ ಕಂಬನಿಯ ಕೋಡಿಗೆ ತಡೆಗಟ್ಟೆಯೇ ಇಲ್ಲ.

ಮಂಗಳಾನಿ ಕಂಗೆಟ್ಟಳು. P.U.C. ಮುಗಿದು ವರ್ಷವೇ ಕಳೆದಿತ್ತು. ಮುಗಿದು ಮುಂದೆ ಅಪ್ಪ ಓದಿಸುವಂತಿಲ್ಲ. ತಾನು ಕಲಿಯುವಂತಿಲ್ಲ. ಜೀವನವೊಂದು ಮುಳ್ಳಿನ ಕಣ. ಅಂಥ ಪರಿಸ್ಥಿತಿಯಲ್ಲಿ ಚಂದು ಪರಿಚಯವಾದುದು ಸ್ವರ್ಗಕ್ಕೆ ಸೋಪಾನವೆನಿಸಿತು ಮಂಗಳಾನಿಗೆ. ಜಾತಿನೀತಿಗಳು ಮನದಿಂದ ಅರುಗಾದುವು. ಶಾಂತಿ–ಸಂತೋಷಗಳಿಗಾಗಿ ಹಾತೊರೆಯಿತು ಹೃದಯ. ಆದರೆ, ಹೆತ್ತ

ವರ ಕಟ್ಟಿ ಕಟ್ಟಳೆ ತೀರಾ ಬಿಗಿದು ಅಡ್ಡಗಟ್ಟಿ ಹಾಕಿತು. ಆದ್ದರಿಂದ, ಆ ಊರನ್ನೇ ಬಿಟ್ಟು ಹೋಗುವುದು ಲೇಸು ಎನಿಸಿತು ಅವಳಿಗೆ. ಅವನ ಪ್ರೇಮ ಮತ್ತು ಸವಿನುಡಿಗಳನ್ನು ತಾನು ಅದುವರೆವಿಗೂ ಜೀವನದಲ್ಲಿ ಕಂಡಿರಲಿಲ್ಲ ಎಂಬುದು ಸತ್ಯ. ಮನಸ್ಸು ಪ್ರೇಮಮಯ ಜೀವನಕ್ಕಾಗಿ ಹಾತೊರೆಯಿತು. ಎದೆಯಲ್ಲಿ ಅವನ ಪ್ರಗಾಢವಾದ ಪ್ರೇಮಾನುರಾಗವನ್ನು ನಿರ್ಲಕ್ಷಿಸುವ ಧೈರ್ಯ ಮೂಡಲಿಲ್ಲ ಅದಕ್ಕೆ ಬದಲಾಗಿ ಪ್ರೇಮರಾಗದ ಹುಚ್ಚು ತರಂಗಿಣಿ ಉತ್ತಾಲ ನರ್ತನ ಗೈಯ್ಯತೊಡಗಿತು ಎದೆಯಲ್ಲಿ. ಚಂದನ ಗೊಂಬೆಯಂತೆ ಕಂಗೊಳಿಸುತಿದ್ದ ಅವಳು ಚಂದುವಿನ ಪ್ರೇಮ ಪಾಶದಲ್ಲಿ ಸಿಕ್ಕಿ ಸುದ್ದಿ ಗದ್ದಲವಿಲ್ಲದೆ ರಿಜಿಸ್ಟರ್ ಪದ್ಧತಿಯರೀತ್ಯ ವಿವಾಹವಾದಳು ಅವನೊಂದಿಗೆ. ಒಂದು ಸಂಜೆಯಲ್ಲಿ ಗುಟ್ಟು ಬಿಡದೆಮನೆಬಿಟ್ಟು ರಾತ್ರಿಯ ಬಸ್ಸು ಹತ್ತಿದಳು ಚಂದು ಕೈ ಹಿಡಿದು. ಅವಳು ವಿಳಾಸವನ್ನು ಕೊಡಲಿಲ್ಲ ; ಪೋಲೀಸರ ತಪಾಸಣೆಗೂ ಸಿಗಲಿಲ್ಲ.

ವರ್ಷಮಾನವೊಂದು ಸದ್ದಿಲ್ಲದೆ ಉರುಳಿ ಹೋಯಿತು.

o o o o

ವರ್ಷದಾದಿಯಲ್ಲಿ ಅವನ ಗುಣ ವಿಶೇಷಗಳೇನೂ ತಿಳಿಯಲಿಲ್ಲ. ಅನಂತರ ಅವನ ರೀತಿ ನೀತಿಗಳಲ್ಲಿ ಸ್ವಾರ್ಥದ ಮಹಾಪೂರವೇ ಹರಿಯತೊಡಗಿ ತನ್ನ ಕಣ್ಮನಗಳನ್ನು ತಾನು ನಂಬಲಾಗದಂತಹ ಬದಲಾವಣೆ ಕಂಡು ಬರ ಹತ್ತಿತು. ದಯಾದಾರಿದ್ರ್ಯ, ಕಾರುಣ್ಯ ದಾರಿದ್ರ್ಯಗಳು ಮೇಳೈಸಿದುವು ಅವನ ಮನದಲ್ಲಿ. ಹೃದಯ ಇಲ್ಲವೇನೋ ಎಂಬ ಭಾವನೆ ಕ್ಷಣ ಕ್ಷಣಕ್ಕೂ ಘನೀಕರಿಸುತ್ತಿದೆ. ಮುಂದೇನು ? ಎಂಬ ಪ್ರಶ್ನೆಯೂ ಏಳುತ್ತದೆ ಆಗಾಗ.

ಅವನ ಪ್ರತಿಯೊಂದು ಅಗತ್ಯವನ್ನು ಮೂಕಮೌನಿಯಾಗಿ ನಿರ್ವಹಿಸು ವುದೇ ಮುಖ್ಯ ದಿನಚರಿ. ಅವಳಿಗಾಗಿ–ಅವಳ ಕ್ಷೇಮಕ್ಕಾಗಿ ಕಿಂಚಿತ್ ಕಾಳಜಿ ವಹಿಸುವವನಲ್ಲ ಚಂದು. ಕಣ್ಣಿದ್ದು ಕುರುಡರಿಗಿಂತ ಕುರುಡು. ತನ್ನ ಅಗತ್ಯ ಕ್ಕಾಗಿಯೇ ಅವಳು ಎಂಬ ಕಠಿಣ–ಕ್ರೂರ ಧೋರಣೆ ಎದೆಯ ಗವಿಯಲ್ಲಿ. ಅಧಿ ಕಾರ ವಾಣಿಯಲ್ಲಿಯೇ ಮಾತುಕತೆ.

ಅಂದು, ಪ್ರೇಮಯಾಚನೆ ಮಾಡುವಾಗ ತೋರಿದ ಪ್ರೇಮಪೂರ್ಣ

ಅಭಯ ಹಸ್ತವೇ ಬೇರೆ. ಅಂದಿನ ಹಾಲ್ಜೇನು ವಸರುವ ನುಡಿಗಳೇ ಬೇರೆ. ಇಂಥ ಮಹೋನ್ನತ ವ್ಯಕ್ತಿ ಇನ್ನೆಲ್ಲಿ ದೊರೆತಾನು ಎಂಬಂತಹ ಮೋಹಕತೆ. ಆ ಕಟ್ಟು ಬಣ್ಣ ಬಯಲಾಗಲು ಬಹಳ ಕಾಲ ಬೇಕಾಗಲಿಲ್ಲ. ಆದರೂ, ಮನೆ ಬಿಟ್ಟ ನಾಲ್ಕಾರು ತಿಂಗಳುಗಳ ನಂತರ ತಾನು ಸುಖವಾಗಿ ದಾಂಪತ್ಯ ಜೀವನ ನಡೆಸುತ್ತಿರುವುದಾಗಿ ತನ್ನ ವಿಳಾಸವನ್ನು ಕೊಡದೆ ಕಾಗದ ಬರೆದು ಹಾಕಿದಳು ತಂದೆ ತಾಯಿಗಳಿಗೆ. ತದನಂತರ ಬರಬರುತ್ತ ಹೆಚ್ಚಿದ ಭಂಗ ಬನ್ನಗಳನ್ನು ತಿಳಿಸುವ ಗೋಜಿಗೆ ಹೋಗಲಿಲ್ಲ ಅವಳು. ತನ್ನ ಮುಖಕ್ಕೆ ತಾನೇ ಮಂಗ ಳಾರತಿ ಮಾಡಿಕೊಳ್ಳಲಾರೆ ಎಂದು ತನ್ನಲ್ಲೇ ಹುಗಿದುಕೊಂಡಿತು ಮನಸ್ಸು. ಎಷ್ಟೋ ವೇಳೆ ತನ್ನ ಹೀನ ಅದೃಷ್ಟವನ್ನು ತಾನೇ ಹಳಿದುಕೊಳ್ಳುವಳು. ತನಗ ರಿಯದಂತೆಯೇ ಕಣ್ಣುಗಳಲ್ಲಿ ನೀರಾಡುವುದು.

o o o o

ನತದೃಷ್ಟ ಹುಡುಗಿ ದಾಂಪತ್ಯ ಗೃಹವನ್ನು ಹೊಕ್ಕ ತರುಣದಲ್ಲೇ ಗರ್ಭಿಣಿ. ದೇಹಾರೋಗ್ಯ ಅಂದೇ ಕ್ಷೀಣಿಸುತ್ತ ಬಂತು. ಔಷಧೋಪಚಾರಕ್ಕೆ ಬದಲಾಗಿ ಅವನು ತೋರಿದ್ದು ನಿರ್ಲಕ್ಷ್ಯ ಮತ್ತು ಉದಾಸೀನ. ಅವಳ ಹೇಳಿಕೆ–ಬೇಡಿಕೆಗಳೆಲ್ಲ ಮಣ್ಣು ಪಾಲಾದುವು. ನಾಲ್ಕನೆಯ ತಿಂಗಳಿನಲ್ಲಿ ಗರ್ಭಪಾತ ವಾಗಿ ದೈಹಿಕ ಶಕ್ತಿ ಸಂಪೂರ್ಣ ಸೋರಿ ಹೋಯಿತು ಸಂಪುಟ ಒಡೆದು ಹೋದಂತೆ. ಚಂದನ ಬೊಂಬೆ ಸುರುಟಿಕೊಂಡಿತು ಕರಗಿ ಸೊರಗಿ. ಕಾರುಣ್ಯ ದಾರಿದ್ರ್ಯದಿಂದ ಉತ್ತಮ ಆರೈಕೆಯೂ ದೊರೆಯಲಿಲ್ಲ. ಅವಳು ಮೈಮುದುಡಿ ಮಲಗಿದ್ದನ್ನು ನೋಡಿದರೆ ಚಂದು ರೇಗಿ ನುಡಿಯುತಿದ್ದ "ನನ್ನ ತಾಯಿ ಹದಿಮೂರು ಹೆತ್ತಿದ್ದಾರೆ. ನೀನು ಹೀಗಿರುವುದು ನಾಚಿಕೆಗೇಡು. ಚೆನ್ನಾಗಿ ಕೆಲಸಮಾಡದೆ ಮೈಕೈ ಗಟ್ಟಿಯಾಗದು. ಶುದ್ಧ ಸೋಮಾರಿ ಏಳು !"

ಒಮ್ಮೆ ವೈದ್ಯರಲ್ಲಿಗೆ ಕರೆದೊಯ್ದುದುಂಟು. ಅವರು ಹೇಳಿದ ಔಷಧ ಗಳಾಗಲೀ ಪಥ್ಯೋಪಚಾರವಾಗಲೀ ಈ ಬಳಿಯಲ್ಲಿ ಸುಳಿಯಲಿಲ್ಲ. ಅತ್ಯಂತ ಜಿಪುಣಾಗ್ರೇಸರನಾದ ಅವನು ಕಾಸು ಬಿಚ್ಚಿದರಷ್ಟೇ ಔಷಧ ಅಥವಾ ಪೌಷ್ಠಿಕ ಆಹಾರ? ಅವನಿಗೆ ಜೊತೆಗಾತಿ ಹೆಣ್ಣೊಂದು ಸುಲಭದಲ್ಲಿ ಬೇಕಾಗಿತ್ತು.

ಅದಕ್ಕನುಗುಣವಾಗಿ ಮತಿಗೆಟ್ಟ–ದಿಕ್ಕೆಟ್ಟ ಹುಡುಗಿ ಸಿಕ್ಕಿದಳು. ಅವನು ಸುಖ ಪುರುಷನಾದ. ಮದಿರೆಯು ದಾಸ್ಯ ಅಂಟಿತು. ಕುಡಿದು ಬಂದನೆಂದರೆ ಒಮ್ಮೊಮ್ಮೆ ಹಾಯಾಗಿ ಮಲಗಿ ಬಿಡುವ. ಕೆಲವೊಮ್ಮೆ ಗದ್ದಲ-ಗಲಾಟೆಯ ರಾಣಾರಂಪ. ಆಗ ನೆರೆ ಮನೆಯ ನಾಗಮ್ಮನೇ ಸಂರಕ್ಷಕಿ. ಅವಳ ಬಳಿ ಕಂಬನಿಯ ಕೋಡಿ ಹರಿಸಿದರೆ ಒಡಲ ಸಂಕಟಕ್ಕೊಂದು ಕಾಲುವೆ ಹೊರಹರಿದು ಹೋಗಲು.

ಮುಂದೇನು ?

ಚಿತ್ತ ಭಿತ್ತಿಯನ್ನು ಕೊರೆಯುವ ಪ್ರಶ್ನೆ. ಇನ್ನು ತಂದೆ ತಾಯಿಯರಲ್ಲಿಗೆ ಹೋಗುವುದಾದರೂ ಹೇಗೆ? ಇವನೊಂದಿಗೆ ಉಳಿಯುವುದೆಂದರೆ ಕೊನೆಯ ತನಕವೂ ಹೀಗೆಯೇ. ಇದೊಂದು ಬಾಳೇ? ಇದಕ್ಕಿಂತ ಕೆರೆ ಬಾವಿ ಲೇಸು. ವಿದ್ಯೆ–ಬುದ್ಧಿಯೂ ಇಲ್ಲ. ಸುಖಾಶ್ರಯವೂ ಇಲ್ಲ. ಅಂದಮೇಲೆ, ಈ ಬದುಕಿಗೊಂದು ಹೊಸರೂಪು ಕೊಡುವುದೆಂದರೆ ಟೀಚರ್ ಟ್ರೈನಿಂಗ್ ಅಥವಾ ಮಾಂಟಿಸೊರಿ ಟ್ರೈನಿಂಗ್ ಪಡೆದುಕೊಂಡೆನಾದರೆ ಮಕ್ಕಳೊಡನಾಟ ಸಲ್ಲುತ್ತದೆ. ಅಷ್ಟಕ್ಕೆ ಚಂದು ಅವಕಾಶ ಕೊಟ್ಟರೆ...?

ತೀರಾ ಸಂಶಯ ಪಿಶಾಚಿಯಾದ ಅವನು ಹೊರ ತಲೆ ಹಾಕಲು ಬಿಟ್ಟರಲ್ಲೇ? ಅದು ಮತ್ತೊಂದು ಗಂಭೀರ ಪ್ರಶ್ನೆ. ಹುಡುಗಿ ಚಿಂತೆಯಾಳದಲ್ಲಿ ಮುಳುಗಿ ಕಂಗಾಲಾದಳು.

o o o o

"ಬಾಂಡಲಿಯಿಂದ ಜಿಗಿದು ಬೆಂಕಿಗೆ ಬಿದ್ದಂತಾಯ್ತು. ಇನ್ನು ಬಿಡುಗಡೆ ಕನಸಿನ ಮಾತು." ಎನ್ನುತ್ತದೆ ಅಂತರ್ವಾಣಿ. ಅದಕ್ಕೆ ಕಂಬನಿಯೇ ಮಾರುತ್ತರ. ಹಿಂದೂಸ್ಥಾನದಲ್ಲಿ ಹೆಣ್ಣು ಕೇವಲ ಸೊತ್ತಾಗಿ–ತೊತ್ತಾಗಿ ನಿರ್ವಹಿಸುವ ಕಾರ್ಯಭಾರವೇ ಭಾರ. ಅದಕ್ಕೆ ಬೆಲೆಯೂ ಇಲ್ಲ; ಪರಿಹಾರವೂ ಇಲ್ಲ. ಶಾಂತಿ–ಸಮಾಧಾನಗಳಂತೂ ಇಲ್ಲವೇ ಇಲ್ಲ. ಕೊಚ್ಚೆಯ ಹುಳುವಾಗಿ ಜೀವಮಾನ ಕಳೆಯುವುದೊಂದೇ ಗುರಿ. ಅದಕ್ಕಿಂತ ಹೆಚ್ಚಿನ ಅಪೇಕ್ಷೆ ಪಟ್ಟರೆ ತ್ರಿಶಂಕು ಸ್ವರ್ಗ.

ಮನೆಯಿಂದ ಬರುವಾಗ ಉಟ್ಟ ಒಂದು ಸೀರೆಯಲ್ಲಿ ಬಂದಿದ್ದುರಿಂದ ಆಗೆರಡು ಸೀರೆಗಳನ್ನು ಕೊಳ್ಳುವುದು ಅನಿವಾರ್ಯವಾಗಿತ್ತು. ಅದನ್ನು ಬಹಳ 'ಉದಾರಿ' ಎಂದೇ ಪರಿಗಣಿಸಿದ್ದಳು ಮಂಗಳಾನಿ. ಆ ಬಳಿಕ ಉದಾರತನ ಹತ್ತಿರವೂ ಸುಳಿಯಲಿಲ್ಲ. ಅದಕ್ಕೆ ಬದಲಾಗಿ ತನ್ನ ವ್ಯಕ್ತಿತ್ವವೇ ಸೂರೆಯಾಯಿತು. ನಾನಾಬಗೆಯ "ಬೇಕು–ಬೇಡ"ಗಳ ಸೂತ್ರ ಸುತ್ತಿಕೊಂಡಿತು, ಜೇಲಿನ ಶೃಂಖಲೆಗಿಂತ ಮಿಗಿಲಾಗಿ. ಅವನಿಗೆ ಮನ ಸೋಲುವಂದು ಈ ಬಗೆಯ ಜೀವನವನ್ನು ಅರ್ಥಾತ್ ನಿರೀಕ್ಷಿಸಲಿಲ್ಲ.

ಆ ವಠಾರದಲ್ಲಿ ಹಳೆಹಳೆಯ ತೀರಾ ಜೀರ್ಣದೀರ್ಣ ರೀತಿಯ ಹತ್ತಿಪ್ಪತ್ತು ಮನೆಗಳು. ಮಧ್ಯೆ ಅಂಗಣದಲ್ಲಿ ನಲ್ಲಿಯ ಕಟ್ಟೆ. ಮುಂದಾಗಿ ನೀರು ತುಂಬಿಕೊಳ್ಳಲು ಬೆಳಗಿನ ಝಾವ ನಾಲ್ಕು ಗಂಟೆಯಿಂದಲೇ ಶುರು. ಪೊಂಪಿನ ಕೊಳವೆ ಕಟ್ಟಿಹೋಗಿ ನೀರು ಬರುವುದು ಸಣ್ಣಗೆ. ಒಂದು ಬಿಂದಿಗೆ ತುಂಬಬೇಕಾದರೆ ಅರ್ಧಗಂಟೆ ಅಲ್ಲಿಗೆ ಮಿಕ್ಕವರ ಸಹನೆ ಮೀರುವುದು ದಿಟ. ಹೊರಗಡೆ ಕೆಲಸಕ್ಕೆ ಹೋಗುವವರಿಗೆ ಆದ್ಯತೆ. ಕೊನೆಯ ಸರದಿಯಲ್ಲಿ ಉಳಿದವರಿಗೆ ನೀರು ನಿಂತು ಹೋಗುವ ಪ್ರಸಂಗ ಬರುವುದು ಹೆಚ್ಚು. ಅಂದಿಂದಿಗೂ ಒಂದೇ ಬಗೆಯ ಜೀವನ ಗತಿ. ಒಂದಿಷ್ಟಾದರೂ ಸುಜೀವನ ಕಾಣಬಹುದೆಂದು ಯೋಚಿಸಿದ್ದ ಮನಸ್ಸು ಒಡೆದ ಕನ್ನಡಿಯ ಚೂರು. ಅವಳು ಒಬ್ಬಳೇ ಕುರಿತು ಯೋಚಿಸುವುದು ಇದನ್ನೆ. ಏನು ಮಾಡಿದರೆ ಈ ಬದುಕು ಸುಂದರವಾದೀತು? ಸುಧಾರಣೆ ಹೇಗೆ? ಹೊಸರೂಪು ಕೊಟ್ಟಲ್ಲದೆ ಹೆತ್ತವರಿಗೆ ಮುಖ ತೋರಿಸಬಾರದು ಎಂಬುದು ವೃಥ ಸಂಕಲ್ಪ. ಆದರೆ, ಚಂದು ಮುಖದ ಮೇಲೆ ಮುದ್ದಿನ ಮಳೆಗರೆಯುವಾಗಲೆಲ್ಲ "ನೀನು ನನ್ನ ಮುದ್ದಿನ ಅರಗಿಣಿ. ಯಾವತ್ತೂ ಅರಗಿಣಿಗಳು ಅಂಗೈಮೇಲೆ ಆಡುತ್ತಿರಬೇಕು" ಎನ್ನುತ್ತಿರುತ್ತಾನೆ. ಅದೇ ಅವನ ಮಂಗಳ ಸೂತ್ರ. ಅದೇ ಅವನ ಸಂಜೀವನ ವಿಧಾನ. ಅದೇ ಅವನ ಪ್ರೇಮ ಪಾಠ.

○ ○ ○ ○

ಮೈಶಕ್ತಿ ಕೂಡಿಕೊಳ್ಳುವುದರೊಳಗಾಗಿ ಮಂಗಳಾನಿ ಎರಡನೆಯ ಗರ್ಭಿಣಿ. ಆರೋಗ್ಯದ ಹುಟ್ಟು ಅಂದಿಗೇ ಅಡಗಿತು. ವಾಂತಿಯ ಪ್ರಕರಣ

ಕಳೆದುದು ಮೂರು ತಿಂಗಳು ತುಂಬಿದ ಮೇಲೆ. ಅಲ್ಲಿಗೆ ಅರೆ ಜೀವವಾಗಿದ್ದಳು ಹುಡುಗಿ. ತಿರುಗಾಡಲೂ ತ್ರಾಣವಿಲ್ಲ.

ಚಂದು ಮನೆಗೆ ಬಂದಾಗ ಮಧ್ಯಾಹ್ನ ಒಂದೂವರೆ ಗಂಟೆ. ಅನಂತರ ಸ್ನಾನ.

“ಇಂದು ಪುನಃ ಟೂರ್ ಹೋಗುವುದಿದೆ ನಾಲ್ಕ ಜೋಡಿ ಬಟ್ಟೆ ಹೊಂದಿಸಿಕೊಡು.”

ನುಡಿ ಅವಸರದಿಂದ ಹೊರಬಿತ್ತು. ಬಟ್ಟೆ ಇಸ್ತ್ರಿ ಮಾಡಿರಲಿಲ್ಲ. ಅವನಿಗೆ ಬಟ್ಟೆಗಳೇನೊ ಬೇಕಾದಷ್ಟಿವೆ. ಒಗೆದು ಇಸ್ತ್ರಿಮಾಡುವುದು ತನ್ನ ಕೆಲಸ. ಹಿಂದಿನ ದಿನವೆಲ್ಲಾ ಅವನ ಬಟ್ಟೆಗಳನ್ನು ಒಗೆಯಲಾರದೆ, ಒಗೆಯಬೇಕಾದರೆ ಸೋತು ಹೋಗಿತ್ತು ಜೀವ. ಅವಿನ್ನೂ ಮಳೆ ಮೋಡವಾದುದರಿಂದ ಸರಿಯಾಗಿ ಒಣಗಲಿಲ್ಲ. ಹೊರಗಡೆ ತಂತಿಯ ಮೇಲೆ ಹಾಕಿದ್ದಳು ಬೆಳಿಗ್ಗೆ. ಅವನ್ನು ತಂದು ಮಂಚದ ಮೇಲೆ ರಾಶಿ ಹಾಕಿ ಇಸ್ತ್ರಿ ಮಾಡತೊಡಗಿದಳು. ಅವನು ಏನೇನೋ ಕಾಗದ ಪತ್ರಗಳನ್ನು ಹೊಂದಿಸಿಕೊಳ್ಳುವುದರಲ್ಲಿ ನಿರತನಾಗಿದ್ದ. ಅವನ ಗಮನವೆಲ್ಲಾ ಪ್ರವಾಸದ ಮೇಲೆ. ಮಡದಿಯ ಅಶಕ್ತ ಶರೀರದ ಕಡೆ ಗಮನವೇ ಇಲ್ಲ. ಅವನಿಗೆ ಮನೆಯ ತಿಂಡಿಯಲ್ಲದೆ ಹೋಟೆಲಿನ ತಿಂಡಿ ಆಫೀಸಿನಲ್ಲಿ. ಅವನಿಗೆ ಊಟ ಎಷ್ಟು ತಡವಾದರೂ ಚಿಂತೆಯಿಲ್ಲ.

“ಮೊದಲು ಊಟ ಮಾಡಿಕೊಳ್ಳಿ.”

“ಈವೊತ್ತು ಮೀಟಿಂಗ್ ಇದ್ದುದರಿಂದ ಗಮ್ಮತ್ ತಿಂಡಿ ಆಫೀಸಿನಲ್ಲಿ. ಸ್ವಲ್ಪ ತಾಳು, ನನಗಿನ್ನೂ ಹಸಿವೆಯಿಲ್ಲ.”

“ಆದರೆ ನನ್ನ ಪಾಡು....?” ಮನದಲ್ಲೇ ಯೋಚಿಸಿದಳು. ಒಡಲು ಹಸಿವೆಯಿಂದ ಘೀಳಿಡುತಿತ್ತು. ತಲೆ ಸುತ್ತಿ ಬೀಳುವಂತಿದೆ ಶರೀರದ ಪರಿಸ್ಥಿತಿ.

ಅವನು ಊಟಕ್ಕೆ ಕುಳಿತಾಗ ಮೂರು ಗಂಟೆ. ಊಟವಾದನಂತರವೂ ಅವನ ತಡುಕಾಟ ಇದ್ದೇ ಇತ್ತು. ಅವನನ್ನು ಕಳುಹಿಸಿ ಕದ ಮುಚ್ಚಿಕೊಳ್ಳುವುದೊಂದಾದರೆ ಅವನ ಅಗತ್ಯವನ್ನು ಪೂರೈಸುವುದು ಇನ್ನೊಂದು. “ಅದು ತಾ, ಇದು ತಾ, ಅದುಕೊಡು, ಇದುಕೊಡು” ಎನ್ನುತ್ತಲೇ ಇದ್ದಾನೆ. ಅವಳಿಗೆ

ಊಟಕ್ಕೆ ಕೂಡಲು ಬಿಡುವು ಸಿಗಲಿಲ್ಲ. ಅವನು ಹೋದ ನಂತರ ಉಸ್ಸಪ್ಪಾ ಎನ್ನುತ್ತ ಊಟಕ್ಕೆ ಕುಳಿತಳು ಮಂಗಳಾನಿ. ಹಸಿವು ಅಡಗಿ ತಣ್ಣಗಾದ ಮೇಲೆ ಊಟ ಮಾಡಿದ್ದು ಸರಿ ಹೋಗಲಿಲ್ಲವೇನೋ. ಹೊಟ್ಟೆ ತೊಳೆಸಿದಂತಾಗಿ ವಾಂತಿಯಾಯಿತು. ಮೊದಲೇ ನಿಶ್ಶಕ್ತಿ ಅನಂತರ ಮತ್ತೂ ತಾಳಿಕೊಳ್ಳಲಾರದೆಯೋ ಹಾಸಿಗೆಯ ಮೇಲೆ ಮುಖ ಮಡಿಯಾಗಿ ಬಿದ್ದುಕೊಂಡಳು. ಕಣ್ಣುಗಳಲ್ಲಿ ಕಂಬನಿಯ ಕೋಡಿ ಹರಿಯಿತು. ದೇಹದಾದ್ಯಂತ ಸಣ್ಣಗೆ ಲಘುವಾದ ಕಂಪನ. ಅತೀವ ನಿತ್ರಾಣ. ಪ್ರಾಣ ಹಿಂಸೆಯ ಗೋಳು.

ಂ ಂ ಂ ಂ

ತಮ್ಮಂದಿರು ಓದಲಿಲ್ಲವೆಂದು ಅಪ್ಪನ ರೇಗಾಟ,

"ನಿಮಗಿಂತ ಮಂಗಳಾನಿಯನ್ನು ಓದಿಸಿದ್ದರೆ ಚೆನ್ನಾಗಿತ್ತು. ಅವಳು ಓದಿದ್ದರೆ ಖಂಡಿತ ಕೆಲಸ ಹಿಡಿಯುತ್ತಿದ್ದಳು. ನಿಮ್ಮನ್ನು ನಂಬಿ ಅವಳನ್ನು ಕಳೆದುಕೊಂಡಿದ್ದಾಯ್ತು. ಮುಂದೆ ಕೂಲಿಯಿಂದ ಜೀವನ ಮಾಡಿ. ಮುಠ್ಠಾಳರು ಶುದ್ಧ ಅವಿವೇಕಿಗಳು!"

ಆಗ ಅಮ್ಮ ಅಂದದ್ದೇನು?

"ಅವಳನ್ನು ಓದಿಸಿದ್ದರೆ ಅವಳು ನಿಜವಾಗಿಯೂ ಕೈಬಿಟ್ಟು ಹೋಗುತ್ತಿರಲಿಲ್ಲ. ನಮ್ಮ ದುರಾದೃಷ್ಟಕ್ಕೆ ಅವಳೂ ಇಲ್ಲ. ಇವರೂ ಓದಲಿಲ್ಲ."

ಕಣ್ಣುಗಳಲ್ಲಿ ಕಂಬನಿ ಮಿಡಿದಳು ತಾಯಿ.

"ಮಂಗಳಾ ....ಮಂಗಳಾ!"

ನಾಗಮ್ಮನ ಧ್ವನಿ. ಬಾಗಿಲು ತಟ್ಟುತ್ತಿದ್ದಾಳೆ ಕಟ.ಕಟ.ಕಟ.ಕಟ.

ತಟ್ಟನೆ ಎಚ್ಚರವಾಗಿ ಕನಸಿನ ಲೋಕ ಅಳಿಯಿತು. ಅಪ್ಪ ಅಮ್ಮ ಒಡಹುಟ್ಟುಗಳನ್ನು ಎಷ್ಟು ದಿನಗಳ ನಂತರ ಕಂಡೆ! ಮಂಗಳಾ ಕಣ್ಣುಗಳನ್ನು ಉಜ್ಜಿಕೊಂಡು ಕನಸಿನ ಲೋಕವನ್ನು ಮತ್ತೆ ಸ್ಮರಿಸಿಕೊಂಡಳು.

"ಮಂಗಳಾ" ಪುನಃ ನಾಗಮ್ಮನ ಧ್ವನಿ.

ಏಳಲಾರದೇ ಎದ್ದು ಕದ ತೆರೆದಳು. ಬಳಲಿಕೆಯಿಂದ ಶರೀರ ತೂರಾಡುತಿತ್ತು.

"ಇದೇನಮ್ಮಾ, ಈವೊತ್ತು ಪೂರಾ ಸುಸ್ತಾಗಿದ್ದೀ?"

ಹಾ, ನಿಟ್ಟುಸಿರು ಬಿಟ್ಟಳು ಮಂಗಳಾ. ಏನೋ ಹೇಳಬೇಕು, ಹೇಳಲಾರಳು, ದುಃಖ ಸಂಕಟ ಕೊರಳೊತ್ತುತ್ತಿದೆ. ಕಣ್ಣಾಲಿಗಳಲ್ಲಿ ತೆಕ್ಕನೆ ಕಂಬನಿಗಳು ಮೂಡಿದುವು. ಅವಳು ಸುಮ್ಮನೆ ಇಳಿದನಿಯಲ್ಲಿ "ಬನ್ನೀ ನಾಗಮ್ಮಾ, ಕುಳಿತುಕೊಳ್ಳಿ" ಎಂದು ಕದ ಮುಚ್ಚಿದಳು. ಒಡಲ ಸಂಕಟನೆಲ್ಲಾ ಒಮ್ಮೆಲೇ ಮುಖಕ್ಕೆ ನುಗ್ಗಿ ಬಂದಂತೆ ರಂಗು ತಳೆಯಿತು ಮುಖಬಿಂಬ.

"ಏನು, ಮಗಳೇ! ಏಕೆ ಹೀಗಾಗಿದ್ದಿ?"

ನಡೆದ ವಿದ್ಯಮಾನವನ್ನು ತಿಳಿಸಿ "ಬಹುಶಃ ಬಹಳ ಹೊತ್ತಾಗಿ ಊಟ ಮಾಡಿದ್ದು ಆಗಲಿಲ್ಲವೆಂದು ತೋರುತ್ತೆ. ಒಂದು ತಿಂಗಳಿಂದ ವಾಂತಿಯಾಗಿರಲಿಲ್ಲ. ಸ್ವಲ್ಪ ಸುಧಾರಿಸಿಕೊಂಡಿದ್ದೆ."

"ನೀನು ಅವನ ಜೊತೆಗೇ ಕುಳಿತು ಊಟ ಮಾಡಲಿಲ್ಲವೇಕೆ?"

"ಆ ಪದ್ಧತಿ ಇದುವರೆಗೆ ಬರಲಿಲ್ಲ. ಅವರಿಗೆ ಊಟ ಬಡಿಸಿದ ಬಳಿಕನೇ ನನ್ನ ಊಟ."

"ಈ ಕಾಲದಲ್ಲಿ ಏಕೆ ಅಷ್ಟು ಸಂಕೋಚ? ಗರ್ಭಿಣಿ ಸ್ತ್ರೀ ಇಷ್ಟು ತಡವಾಗಿ ಊಟಮಾಡಬಾರದಿತ್ತು. ಆಗಲೇ ಒಮ್ಮೆ ಅನುಭವವಾಗಿದೆ. ಈ ಸಲಿ ಎಚ್ಚರಿಕೆ ತೆಗೆದುಕೊಳ್ಳದಿದ್ದರೆ ಹೇಗೆ? ಅವನಿಗಿಂತ ಮುಂಚೆಯೆ ಅಥವಾ ಅವನೊಂದಿಗೇ ಊಟ ಮಾಡು ಹೊತ್ತು ತಪ್ಪಿಸಬೇಡ."

"ಅವರೆಂದೂ ಒಟ್ಟಿಗೆ ಊಟ ಮಾಡೋಣ ಎನ್ನಲಿಲ್ಲ. ನಾನಾಗಿಯೇ ಮುಂದಾಗಲು ಸಂಕೋಚ. ಅಂದಿನಿಂದಲೂ ಹೀಗೆಯೇ ಅವರಾದ ಮೇಲೆಯೇ ನನ್ನ ಊಟ."

"ಚೆನ್ನಾಯ್ತು. ನೀನಾಗಿಯೇ ನಿನ್ನ ವ್ಯಕ್ತಿ ಸ್ವಾತಂತ್ರ್ಯವನ್ನು ಪಡೆದುಕೊಳ್ಳಬೇಕು. ಇದು ಯಾವ ಕಾಲ? ಏಕೆ ಇಷ್ಟೊಂದು ಭಯ? ಅಥವಾ ಸಂಕೋಚ?"

"ಹಾಗೆಂದರೆ ಕೇಳುವರೆ, ಗಂಡುಗಲಿಗಳು ?"

"ಸರಿ, ಸರಿ. ನಿನ್ನನ್ನೇನೂ ಕೊಂಡು ತರಲಿಲ್ಲ, ಅಥವಾ ಇಂದು ಸಂಬಳ ಕೊಡುತ್ತಿಲ್ಲ..."

ತುಟಿ ಕಚ್ಚಿದಳು ನಾಗಮ್ಮ. ಸಿಟ್ಟಿನಿಂದ ಮುಖಬಿಂಬ ಕಪ್ಪು ತಳೆಯಿತು.

"ಸರಿ ಹೋಯ್ತುಬಿಡಿ. ಬಜಾರಿ-ಗಂಡು ಬೀರಿ ಇಂಥಿಂಥ ಮುಳ್ಳಿನ ಕಿರೀಟ ಇಟ್ಟಾರು !"

"ಹಾಗೆಂದು ತಲೆ ಬಾಗಿದುದರಿಂದಲ್ಲವೇ ನಿನಗೀ ದುರ್ಗತಿ ? ? ಮತ್ತೆ ಮತ್ತೆ ಬಸಿರು. ಆಸ್ಪತ್ರೆಯಿಲ್ಲ. ಔಷಧಿಯಿಲ್ಲ. ಬಾಗಿಲು ಮುಚ್ಚಿ ಒಳಗಡೆ ಕುಳಿತಿರುವ ಕರ್ಮ... ನಿನಗೆ ಗಾಳಿ ಬೆಳಕು ಏನೇನೂ ಬೇಡವೇ ಹೇಳು."

"ಈಗ ಹೆಜ್ಜೆ ಮುಂದಿಟ್ಟಾಗಿದೆ. ನನ್ನ ಗತಿ ಮುಗಿಯಿತು, ಅವರಿಗೆ ಬುದ್ಧಿ ಹೇಳಿದರೆ ಒಳ್ಳಿತು. ನಿಮ್ಮಂತಹ ಹಿರಿಯರು ಹೇಳಿದರೆ ಕೇಳಿಯಾರು. ನೀವು ಹೇಳ ಬೇಕಾದವರು ಕೂಡಾ. ನನಗೆ ಸಾಕಾಗಿದೆ ಈ ಜನ್ಮ."

"ಕೇಳು, ಮಗಳೆ....ನಿನ್ನನ್ನು ನೀನು ಸುಧಾರಿಸಿಕೊಳ್ಳಬೇಕು. ಮೂರನೆಯವರ ಪ್ರವೇಶ ಅಷ್ಟು ಹಿತವಲ್ಲ ..."

ಅವಳ ಕಣ್ಣುಗಳಲ್ಲಿ ಉಕ್ಕಿದ ಕಂಬನಿಧಾರೆಯೇ ಉತ್ತರವಾಯ್ತು. ಮನದಲ್ಲಿ ಕನಸಿನ ಚಿತ್ರ ಚಲನ ಚಿತ್ರದಂತೆ ಸುಳಿಸುಳಿದಳಿಯಿತು.

೦ ೦ ೦ ೦

ಚಂದು ಆಗಮಿಸಿದಾಗ ಮಧ್ಯಾಹ್ನ ಎರಡು ಗಂಟೆ. ಮಂಗಳಾನಿಯ ಊಟ ಮುಗಿದಿತ್ತು. ಅವನ ಆಗಮನ ಅನಿರೀಕ್ಷಿತವಾದುದರಿಂದ ಮಾಡಿದ ಅನ್ನ ಇರಲಿಲ್ಲ. ಚಂದೂಗೆ ತನ್ನ ಬಿಟ್ಟು ಊಟ ಮಾಡಿದಾಳೆ ಎಂಬ ಅಸಮಾಧಾನ. ನುಂಗಲಾರ, ನೊಣೆಯುಲಾರ, ಮೇಲಾಗಿ, ಅವಳ ಅತ್ಯಂತ ಕ್ಷೀಣಿತ ಗತಿ ಉತ್ತರ ಹೇಳುತ್ತದೆ. ಅದೇ ವೇಳೆಗೆ ಒಳಬಂದ ನಾಗಮ್ಮ ಮಂಗಳಾನಿ ಒಲೆ ಹಚ್ಚುತಿದ್ದುದನ್ನು ನೋಡಿ ನುಡಿದಳು "ಚಂದೂ, ಒಂದು ಕಾರ್ಡು

ಬರೆದು ಹಾಕಿದ್ದಿದ್ದರೆ ಅವಳಿಗೆ ಈಗ ಹೊಸದಾಗಿ ಒಲೆ ಹಚ್ಚುವ ಭಂಗ ಬರುತ್ತಿರಲಿಲ್ಲ. ಸಂಸಾರ ಅಂದಮೇಲೆ ಸಹಕಾರವಿರಬೇಕು ನೋಡು. ಅವಳಿರುವ ಸ್ಥಿತಿಯಲ್ಲಿ ಹೀಗೆ ಬಳಲಿಸಬಾರದು. ಗಂಡು ಜೀವಗಳಿಗೆ ಹೆಣ್ಣಿನ ಕಷ್ಟ ಅರ್ಥವಾಗುವುದಿಲ್ಲ ಬಿಡು. ಖಂಡಿತ ನೀನು ಹೀಗಿರಲೇಬಾರದು. ಅವಳ ಸ್ಥಿತಿಯನ್ನು ನೋಡಿಯೂ ಇಷ್ಟು ಉದಾಸೀನವಾದರೆ ಹೇಗೆ ಹೇಳು ? ಪಾಪ, ಬೆಳ್ಳಿ ಬೊಂಬೆಯಂತಹ ಹುಡುಗಿ, ಹೇಗಾಗಿದ್ದಾಳೆ? ಅಪ್ಪ ಅಮ್ಮನನ್ನು ಬಿಟ್ಟು ಬಂದ ಮಗಳು. ಅವಳನ್ನು ಸುಖವಾಗಿ ನೋಡಿಕೊಳ್ಳಬೇಕಾದುದು ನಿನ್ನ ಧರ್ಮ. ಸರಿಯಾದ ಔಷಧೋಪಚಾರ ಮತ್ತು ಪೌಷ್ಠಿಕಾಹಾರಗಳಿಲ್ಲದೆ ಹೋದರೆ ಹಿಂದಿನ ಗತಿಯೇ ಈಗಲೂ ಆದೀತು. ನಾಲ್ಕು ಮಕ್ಕಳನ್ನು ಹೆತ್ತುದಕ್ಕಿಂತಲೂ ಕಷ್ಟ ಒಂದು ಗರ್ಭಪಾತ. ನೀನಿನ್ನೂ ಹುಡುಗ ನಿನಗಿದೆಲ್ಲಾ ಹೇಗೆ ಅರ್ಥವಾದೀತು ?...."

ಅವಳ ಹಿತವಚನ ಅದೆಷ್ಟು ಹೊತ್ತು ಹರಿಯಿತೋ, ಅವನು ಕೇಳುತ್ತಲೇ ಇದ್ದ. ಅನ್ನ ಬೆಂದ ನಂತರ ಅವಳು ಊಟ ಇಟ್ಟಳು. ಅವನು ತುತ್ತು ನುಂಗುತ್ತ ಅಂದ,

"ಅಮ್ಮಾ, ಈ ಜೀವನ ಇಷ್ಟು ಕಷ್ಟ ಎಂಬುದರ ಅರಿವಾದುದು ಈಗಲೇ. ಇದುವರೆಗೆ ಆರಾಮವಾಗಿದ್ದೆ. ನಮ್ಮ ಗ್ರಹಚಾರ ಕೆಟ್ಟಿದೆ. ಇಂದೇ ಇವಳನ್ನು ಆಸ್ಪತ್ರೆಗೆ ಕರೆದೊಯ್ಯುವೆ. ಡಾ|| ಪದ್ಮಾವತಿಯವರ ದವಾಖಾನೆ ನಾಲ್ಕು ಗಂಟೆಗೆ ತೆರೆಯುತ್ತೆ ..."

"ಅಷ್ಟು ಮಾಡು. ಅವರು ಹೇಳಿದ ಪ್ರಕಾರ ಚಿಕಿತ್ಸೆ ಮಾಡಿಸು."

"ಆಗಲಿ, ಅಮ್ಮಾ."

ನಾಗಮ್ಮ ಸಮಾಧಾನದಿಂದ ತನ್ನ ಮನೆಗೆ ಹೊರಡುವ ಮುನ್ನ "ಮಂಗಳಾ, ನೀನು ಔಷಧಿ-ಪಥ್ಯಗಳಲ್ಲಿ ಸರಿಯಾದ ಗಮನವಿಡಬೇಕು ತಿಳಿಯಿತೇ ?"

ಆ ಕೊನೆಯ ಪದ 'ತಿಳಿಯಿತೇ ?' ಕರ್ಣ ಪಟಲಗಳ ಮೇಲೆ ಮತ್ತೆ

ಮೊಳಗಿತು. ಮಂಗಳಾನಿ ನುಡಿದಳು "ಆಗಲಿ, ನೀವು ಹೇಗೂ ಬರುತ್ತಿರು ತ್ತೀರಲ್ಲ?"

"ಖಂಡಿತ."

೦ ೦ ೦ ೦

ಚಂದೂ ಅವಳನ್ನು ಡಾ॥ ಪದ್ಮಾವತಿಯ ದವಾಖಾನೆಗೆ ಕರೆದೊಯ್ದ. ಅವರು ಪರೀಕ್ಷಿಸಿದ ಬಳಿಕ ಆರೈಕೆಯ ಬಗ್ಗೆ ಪುಟ್ಟ ಭಾಷಣವನ್ನೇ ಮಾಡಿ ಔಷಧಿ ಮತ್ತು ಪಥ್ಯೋಪಚಾರದ ಉದ್ದುದ್ದ ಪಟ್ಟಿಯನ್ನು ಬರೆದುಕೊಟ್ಟರು. ಅದನ್ನು ನೋಡುತ್ತಲೂ ಎದೆ ಬಿರಿಯಿತು ಅವನಿಗೆ.

ದವಾಖಾನೆಯ ಹಿಂಭಾಗದಲ್ಲಿ ಕಾವೇರಿ ನದಿ ರಭಸದಿಂದ ಜುಳುಜುಳು ಮಂಜುಳಗಾನದೊಡನೆ ಹರಿಯುತ್ತದೆ ಸಮುದ್ರಾಭಿಮುಖವಾಗಿ.

"ಸ್ವಲ್ಪಹೊತ್ತು ನದೀ ತೀರದಲ್ಲಿ ಅಡ್ಡಾಡೋಣವೇ?" ಎಂದ ಚಂದು.

"ಆಗಲಿ, ಹೋಗೋಣ." ದನಿಯಲ್ಲಿ ಆನಂದ ಭಾವ ಸ್ಫುರಿಸಿತು. ಅವಳು ಗಾಳಿ ಸಂಚಾರ ಹೋಗಿರಲಿಲ್ಲ. ಆ ಮಹಾ ಜಲರಾಶಿಯನ್ನು ತುಂಬು ಗಣ್ಣು ಗಳಿಂದ ನಿಟ್ಟಿಸಿದಳು.

ರಸ್ತೆಯಿಂದ ನದಿ ನೀರಿನವರೆಗೂ ಸಾಲು ಮೆಟ್ಟಿಲುಗಳು. ಇಬ್ಬರೂ ತುತ್ತತುದಿಯ ಮೆಟ್ಟಿಲಿನ ಮೇಲೆ ಕುಳಿತರು. ಅವನು ಅವಳ ತಲೆಯನ್ನು ನೇವರಿಸಿ ಮುದ್ದಿನ ಮಳೆಗರೆದು "ನಮಗೆ ಇಂಥ ಕಷ್ಟ ಬರಬಾರದಿತ್ತು ಮಂಗಳಾ" ಎಂದ.

ಅವಳ ರುದ್ರ ಮೌನವೇ ಉತ್ತರವಾಯಿತು.

ಸೂರ್ಯ ತಂಗಿದ. ಮುಸ್ಸಂಜೆ ಕವಿಯಿತು. ಚಂದು ಅವಳನ್ನು ಕೈ ಹಿಡಿದು ಎಬ್ಬಿಸಿ "ಇನ್ನು ಹೋಗೋಣವೇ?" ಎಂದ. ಅವಳು 'ಹ್ಞೂಂ' ಎನ್ನುವುದರೊಳಗಾಗಿ ಬೆನ್ನಿಗೆ ಕೈ ಹಾಕಿ ರಭಸದಿಂದ ನದಿಗೆ ತಳ್ಳಿದ. ಅವಳು ನೀರಿನಲ್ಲಿ ಮುಳುಗಿ ತೇಲಿ ಕೊಚ್ಚಿ ಹೋದಳು. ದುಷ್ಟ ಸಮಾಜದಿಂದ ದೂರ ದೂರವಾಗಿ.

— ೦ —

ತುರಂಗರಂಗ

೪

ಸಂಘೇಶಕ್ತಿಃ ಕಲೌಯುಗೆ

೧೯೬೬ನೇ ಇಸವಿಯ ಮೂರನೇ ತಿಂಗಳ ಒಂದನೇ ತೇದಿ.

ಬಿಹಾರ್ ಪ್ರಾಂತ್ಯದ ಹಜಾರಿಭಾಗ್ ಪಟ್ಟಣದ ಮೇಲೆ ತೆಳ್ಳನೆಯ ಮಂಜಿನ ತೆರೆ ಹರಡಿತ್ತು ನವುರಾದ ಧವಳವಸನವನ್ನು ಹರಡಿದಂತೆ.

ಪಟ್ಟಣದ ಹೊರವಲಯದ ಬಂಧೀಖಾನೆಯಲ್ಲಿ ರಾಜಕೀಯ ಬಂಧಿಯಾಗಿ ಶತಪಥ ತಿರುಗುತ್ತಿದ್ದ ಜಗತ್‌ರಾಂ. ಮನದ ತುಂಬೆಲ್ಲಾ ಪ್ರಸಕ್ತ ಕಲುಷಿತ ರಾಜಕಾರಣದ ಹೀನಾತಿಹೀನ ಬೆಳವಣಿಗೆಯ ರುದ್ರಸ್ವರೂಪ ಚಲನ ಚಿತ್ರದಂತೆ ಸ್ಪಷ್ಟವಾಗಿ ಸುಳಿಸುಳಿದಳಿಯುತ್ತಿದೆ. ಹೇಳಲಾಗದ ಮುಜುಗರ–ಕ್ಲೇಶ–ಕಿನಿಸಿಗೆ–ದುಃಖ–ಸಂಕಟಗಳು ಉಕ್ಕುಕ್ಕಿ ಕೋಡಿ ಹರಿಯುತಿದ್ದುವು ಎದೆಯ ಬನದಲ್ಲಿ. ಭಾರತ ಸ್ವಾತಂತ್ರ್ಯಾನಂತರದ ಬೆಳವಣಿಗೆ ಕೊರಳಿಗೆ ಉರುಳು...ಬದುಕಿಗೆ ಕಂಟಕ, ಮಹಾಸ್ವಾರ್ಥಿಗಳ ಉಪಟಳದಿಂದ.

ಅಲ್ಲಿಂದಲ್ಲೇ ಪದಚಾರಣ ಮಾಡುತ್ತ ಅಂಗಳಕ್ಕಿಳಿದಾಗ ಪಕ್ಕದ ಕೊಠಡಿಯಲ್ಲಿದ್ದ ಸುರೇಶ ಹೊರಬಂದ. ಅವನೂ ಸಹ ರಾಜಕೀಯ ಖೈದಿ. ಎರಡು ಮಂದಿ ಇರುವಂತಹ ಕೊಠಡಿಗಳಲ್ಲಿ ಹತ್ತಾರು ಮಂದಿಯನ್ನು ಕುರಿಗಳಂತೆ ತುಂಬಿರುವುದು ಮಾನವೀಯ ದಾರಿದ್ರ್ಯಕ್ಕೆ ಸಾಕ್ಷಿ. ರಾತ್ರಿ ಕುಳಿತೇ ಕಾಲಹರಣ ಮಾಡುವ ಪ್ರಸಂಗಕ್ಕೆ ಬಲಿಬಿದ್ದವರು ರಾಜಕೀಯ ಖೈದಿಗಳು. ಶೌಚಗೃಹ ಒಂದೇ ಆದುದರಿಂದ ಅನೇಕರು 'ಕ್ಯೂ' ನಿಂತಿದ್ದಾರೆ. ಉಳಿದವರು

ಇದ್ದಲ್ಲೇ ಮೈಮುದುಡಿದ್ದಾರೆ ಕ್ಯೂ ಸಾಲು ಕರಗಲೆಂದು. 'ಪರೋಪಕಾರಾರ್ಥ ಮಿದಂ ಶರೀರಂ' ಎಂಬುದೇ ದೀಕ್ಷೆ.

ಬಹುಶಃ ಜಗತ್‌ರಾಂ ತಂಡದಲ್ಲೆಲ್ಲಾ ಹಿರಿಯವ್ಯಕ್ತಿ. ತಲೆಯಮೇಲೆ ಬೆಳ್ಳಿಯಂತೆ ಬೆಳಗುವ ಬಿಳಿಯ ಕೂದಲು, ಉದ್ದುದ್ದನೆಯ ಬಿಳಿಯ ಹುಬ್ಬು. ಆದರೂ ಆತ ಹೊಂದಿದ್ದು ಸದೃಢವಾದ ಶರೀರ, ಎತ್ತರವಾದ ಮೈಕಟ್ಟು, ಯುವ ಪ್ರಭೃತಿಗಳನ್ನು ನಾಚಿಸುವಂತಹ ವ್ಯಕ್ತಿತ್ವ.

"ನಮಸ್ಕಾರ!" ಎಂದ ಸುರೇಶ ಪುನಃ "ಇಲ್ಲಿ ನಮ್ಮನ್ನೆಲ್ಲಾ ವರ್ಷಾನು ಗಟ್ಟಲೆ ಕೊಳೆಸುವುದು ದಿಟ. ಮಹಾಸ್ವಾರ್ಥಿಗಳ ನೀಚ ಪ್ರವೃತ್ತಿ ಏನು ಮಾಡಲಿಕ್ಕೂ ಹೇಸದು."

"ನಿಜ..." ತಲೆದೂಗಿದ ಜಗತ್‌ರಾಂ, ಮುಖಭಾವ ವ್ಯಗ್ರವಾಗಿತ್ತು.

"ಇದಕ್ಕೇನುಪಾಯ ?"

"ಕೊಳೆತು ನಾರುವುದು !" ಹಾಸ್ಯ ಪ್ರಧಾನವಾಗಿ ನುಡಿ ಹೊರಬಿತ್ತು.

ಇಬ್ಬರೂ ಪಕಪಕನೆ ನಕ್ಕುಬಿಟ್ಟರು. 'ಕೊಳೆತು ನಾರುವುದು' ಎಂಬ ವಾಕ್ಯ ಕರ್ಣಪಟಲದ ಮೇಲೆ ಪುನಃ ಪುನಃ ಪ್ರತಿಧ್ವನಿಸಿತು. ಸುರೇಶ ಯೋಚನೆ ಯಾಳದಲ್ಲಿ ಮುಳುಗಿದ. ಎದೆಯಾಳದಲ್ಲಿ ತಾಪಾನುತಾಪಗಳು ಧುಮುಧುಮಿ ಸುತ್ತಿದ್ದುವು. ಭವ್ಯಭವಿಷ್ಯವನ್ನು ಕುರಿತು ಮನಃಚಿತ್ರಗಳು ಮೆಲುಕು ಹಾಕಿ ದುವು. ಹೃದಯ ಕುಂಡ ಕರಗಿ ದ್ರವಿಸುವಂತಹ ಸನ್ನಿವೇಶದಲ್ಲಿ.

೦ ೦ ೦ ೦

ಜಗತ್‌ರಾಂ ವಿಶಾಲವಾದ ವಕ್ಷಸ್ಥಳದ ಮೇಲೆ ಎರಡೂ ಕೈಗಳನ್ನು ಕಟ್ಟಿದ್ದ. ಬಿಳಿಯ ಕೂದಲು ಹಣೆಯಮೇಲೆ ಎಳೆಎಳೆಯಾಗಿ ಹರಿದಿದ್ದುವು. ಮನೋಭಿತ್ತಿಯಲ್ಲಿ ರಾಷ್ಟ್ರವ್ಯಾಪಿಯಾದ ಬಡತನ ಮತ್ತು ನಾನಾ ಸಮಸ್ಯೆಗಳ ರುದ್ರಭೀಷಣ ಚಿತ್ತಾರಗಳು ತುಂಬಿ ಕಿಕ್ಕಿರಿದಿದ್ದುವು.

'ಮುಂದೇನು ?' ಎಂಬುದು ಬಹುದೊಡ್ಡ ಪ್ರಶ್ನೆ. ಎಷ್ಟು ಯೋಚಿಸಿ

ದರೂ ಬಗೆ ಹರಿಯದು. ಮಹಾನ್ ರಾಷ್ಟ್ರದಲ್ಲಿ. ಎಂಭತ್ತು ಕೋಟಿ ಜನರಾಶಿ. ದೀನದಲಿತರು ವಿದ್ಯೆಬುದ್ಧಿಗಳಿಂದ ದೂರಾಗಿ ದಾರಿದ್ರ್ಯ ದೇವತೆಯ ಉತ್ತಾಲ ನರ್ತನದ ತತ್ತ್ರಳ ತುಳಿತಕ್ಕೆ ಸಿಕ್ಕಿದವರು. ರಾಷ್ಟ್ರೋದ್ಯಮ ಒಂದು ಅದ್ಭುತ ಸಮಸ್ಯೆ...ಆಳವಾದ ಚಿಂತನೆಯಲ್ಲಿ ಮನವನ್ನು ನೆಟ್ಟ ಜಗತ್‌ರಾಂ.

ಇಂದು ಯಾವ ಪಕ್ಷದ ಸರಕಾರವೇ ಬರಲಿ, ನಮ್ಮ ಸ್ಥಿತಿಗತಿಯನ್ನು ಒಮ್ಮೆಗೇ ಸುಧಾರಿಸುವುದಾಗಲೀ ಬಡತನವನ್ನು ನಿವಾರಿಸುವುದಾಗಲಿ ಎಂದೆಂದಿಗೂ ಸಾಧ್ಯವಿಲ್ಲ. ಅದನ್ನು ಎಲ್ಲರೂ ಒಪ್ಪಬೇಕಾದುದೇ. ಆದರೆ...

ಚಿಚ್ಛಕ್ತಿಯ ದಿಕ್ಸೂಚಿಯ ಮೊನೆ ನಿಲ್ಲುತಿದ್ದುದು ಆ ದುರ್ದಾಂತ ಬಿಂದುವಿನಲ್ಲೇ. 'ಆದರೆ' ಒಂದು ಶಬ್ದ ಎಲ್ಲಕ್ಕೂ ತಡೆಗಟ್ಟು. ನಾವು ಯೋಚಿಸಬೇಕಾದುದು ಇಲ್ಲೇ. ಈ ಗಡಿಯನ್ನು ಧೈರ್ಯಜ್ಞಾನ ಬದ್ಧವಾಗಿ ದಾಟುವುದು ಸರ್ವಕ್ಷೇಮ. ಇದನ್ನು ಎಲ್ಲರೂ ಅರಿತು ಮುಂದೆ ಹೆಜ್ಜೆಯಿಡಬೇಕು. ಜೀವನ ಎಂದೂ ಹೂವಿನ ಹಾಸಿಗೆಯಲ್ಲ, ಮುಳ್ಳಿನ ಪಂಕ. ಮುಳ್ಳನ್ನು ಮುಳ್ಳಿನಿಂದಲೇ ತೆಗೆಯುವ ಸಾಹಸಕ್ಕಿಂತ ಸೂಕ್ಷ್ಮವಾಗಿ ಬಿಡಿಸುವ ಜಾಣ್ಮೆ ಇದ್ದರೆ ಒಳ್ಳಿತು....

ಸನಿಹದಲ್ಲಿ ಪಾದಸಪ್ಪಳ ಪಟಪಟನೆ ಕೇಳಿಬಂದಾಗ ಯೋಚನೆ ತುಂಡು ಗಡಿದು ದೃಷ್ಟಿ ಅತ್ತ ಹೊರಳಿತು. ನೋಡಿದರೆ, ಧವಳಾಂಬರಧಾರಿ ಶೇಖರ.

ಶೇಖರ ಅಂದ "ನಾನು ನಿನ್ನೆಯೆಲ್ಲಾ ವಾಲ್ಮೀಕಿ ರಾಮಾಯಣ ಓದಿದೆ. ಅದರಲ್ಲಿ ಹನುಮಂತ ಮೇರುಗಿರಿಯನ್ನು ಹೊತ್ತು ವಾಯು ಮಾರ್ಗದಲ್ಲಿ ಬಂದ ವಿಭಾಗ ನನ್ನ ಮನಸ್ಸಿಗೆ ತುಂಬಾ ಹಿಡಿಸಿತು. ಅಂತಹ ತ್ವರಿತಗತಿ–ಚಾಕಚಕ್ಯತೆ ಇಂದೇಕೆ ಇಲ್ಲ?"

"ಹನುಮಸಾಹಸ ಜನಜನಿತ. ಅದು ದಂತಕತೆಯೋ? ಅಥವಾ ಆ ಕಾಲದಲ್ಲಿ ಅಂತಹ ಸಾಹಸಿಗಳು ಇದ್ದರೊ? ಎಂಬುದು ತರ್ಕಬದ್ಧ...."

ಆ ವೇಳೆಗೆ ಅಲ್ಲಿಗೆ ಬಂದ ಜೈಲಿನ ವಾರ್ಡನ್ ತರ್ಕಕ್ಕೆ ತನ್ನ ದನಿಗೂಡಿಸಿದ

"ಲಕ್ಷ್ಮಣ ಮೂರ್ಛಿತನಾದ ಉದ್ವೇಗಭರಿತ ಸಂದರ್ಭ. ಶ್ರೀರಾಮನ ಅತೀವ ದುಃಖ–ಸಂಕಟ ಮತ್ತು ಜಾಂಬವಂತ ಮುಂತಾದ ಸಹಪಾಟಿಗಳ ಪ್ರೋತ್ಸಾಹ ಆತನನ್ನು ಅತಿಯಾಗಿ ಹುರಿದುಂಬಿಸಿರಬಹುದು."

ರಮೇಶ ನಕ್ಕು ನುಡಿದ "ಮರದಿಂದ ಮರಕ್ಕೆ ಲಂಘಿಸಿದನೇನೋ...."

ವಾರ್ಡನ್ ನಗುತ್ತ ತನ್ನ ಕಾರ್ಯಾರ್ಥವಾಗಿ ಹೊರಟುಹೋದ.

ರಾಜಕೀಯ ಖೈದಿಗಳು ಒಬ್ಬೊಬ್ಬರಾಗಿ ಹೊರಬಿದ್ದರು. ಜಗತ್‌ರಾಂ ಅವರಿಗೆಲ್ಲಾ ನೀತಿಪಾಠ ಹೇಳಿದ. ಹಿಂದಿನ ದಿನ ಇತರ ಖೈದಿಗಳು ಗದ್ದಲ ವೆಬ್ಬಿಸಿದರು ಎಂದು ಲಾಠಿ ಪ್ರಹಾರ ಮಾಡಿದ್ದರು ಜೈಲಿನಲ್ಲಿ. ಅದರ ಪರಿಣಾಮ ವಾಗಿ ಆ ಖೈದಿಗಳಾರೂ ಕೆಲಸ ಮಾಡದೆ ಮುಷ್ಕರ ಹೂಡಿದ್ದರು.

ಇವರಿಗೆ ಹೇಳಿದ ನೀತಿಪಾಠ ಅವರಿಗೂ ಕೇಳಿಸಲಿ ಎಂದು ಮೈಕ್ ತಂದು ಮುಂದೆ ಹಿಡಿದ ದಫೇದಾರ. ರಾಜಕೀಯ ಖೈದಿಗಳು ಕೇಕೆ ಹಾಕಿದರು,

"ಕೇಳಿ, ಕೇಳಿ !"

ಒಡನೆ ಎಲ್ಲರೂ ಜೋರಾಗಿ ನಕ್ಕುಬಿಟ್ಟರು. ಮಾಡು ಮುಟ್ಟಿತು ದನಿಯ ಮೊಳಗು.

○ ○ ○ ○

ಇತರ ಖೈದಿಗಳು ಎಡಗಡೆ ವಿಭಾಗದಲ್ಲಿ ಬೀಕಷ್ಟಿದ್ದಾರೆ. ಅವರ ಮಾತು ಕತೆಯ ಗದ್ದಲ, ಜಬರಿಸುವ ಅಧಿಕಾರಿಗಳ ಸೊಲ್ಲು ಕಿವಿಗಳ ಮೇಲೆ ಲತ್ತೆ ಹೊಡೆದಂತೆ ಬೀಳುತ್ತದೆ.

ಜೈಲಿನ ಅಂಗಿಯನ್ನು ತೊಟ್ಟಿದ್ದ ಖೈದಿಯೊಬ್ಬ ಮೆಟ್ಟಿಲಿನ ಬಳಿ ಇತರ ಖೈದಿಗಳಿಗಾಗಿ ಕಾದಿದ್ದ. ಅಲ್ಲ, ಅಲ್ಲವೇ ಅಲ್ಲ. ತನ್ನನ್ನು ಯಾವ ಕಠಿಣ ಪರಿಶ್ರಮದ ಕೆಲಸಕ್ಕೆಹಚ್ಚಲಿರುವರೋ ಎಂದು ಭಯದಿಂದ ಸೂಪರಿಂಟೆಂಡೆಂಟರ ಆಗಮನಕ್ಕಾಗಿ ಕಾದಿದ್ದ.

ರಾಜಕೀಯ ಖೈದಿಗಳನ್ನು ಕುರಿತು ಜಗತ್‌ರಾಂ ನುಡಿದ "ಬಂಧುಗಳೇ, ಮಹಾತ್ಮಾ ಗಾಂಧೀಜಿಯ ಸತ್ಯ–ಶಾಂತಿ ಶಿಸ್ತುಗಳಿಗೆ ಭಂಗ ಬಾರದಂತೆಯೇ ನಮ್ಮ ಚಳವಳಿ ನಡೆಯಬೇಕು. ನಿರ್ಲಕ್ಷ್ಯ ದೋರಣೆಯ ಮೇಲೆಯೇ ಅಧಿಕಾರ ದಂಡಪ್ರಯೋಗ ಮಾಡುತ್ತಿದೆ. ನಾವು ಅಶಿಸ್ತಿನ ಹಾದಿ ಹಿಡಿದರೆ ನಮ್ಮ ಕಡೆಗೇ ಎಲ್ಲರೂ ಬೊಟ್ಟು ಮಾಡುವುದು ಖಂಡಿತ. ಆದ್ದರಿಂದ, ನಾವು ಸತ್ಯಾಗ್ರಹಿಗಳು ಗಾಂಧೀ ಮಾರ್ಗದಲ್ಲಿಯೇ ನಡೆಯಬೇಕು. ನಮ್ಮಿಂದ ಶಾಂತಿ ಭಂಗವಾಗಬಾರದು."

ಅನಂತರ ಅನೇಕ ಹಿರಿಯರು ಎದ್ದು ನಿಂತು ಮಾತಾಡಿ ಕಿರಿಯರಿಗೆ ಹಿತ ವಾದ ಹೇಳಿದರು. ಸತ್ಯಾಗ್ರಹಿಗಳಲ್ಲಿ ಕೆಲವರು ಸಮಯೋಚಿತವಾಗಿ ಹಿತ ವಾದವನ್ನು ಒಪ್ಪಿಕೊಂಡರೂ ಇನ್ನು ಕೆಲವರು ತುಂಟನಗೆ ಬೀರಿ ತಮ್ಮೊಳಗೇ ಮುಸಿ ಮುಸಿ ನಕ್ಕರು.

ದಫೇದಾರ ಇವರಿಗೆ ಹೇಳಿದ ಹಿತವಾದ ಇತರ ಖೈದಿಗಳಿಗೂ ಕೇಳಿಸಲಿ ಎಂದು ಇಂದೂ ಮೈಕ್ ಅಳವಡಿಸಿದ. ಹಿತವಾದ ಮಾಡು ಧೀಂಕಿಡುವಂತೆ ಮೊಳ ಗಿತು. ಆದರೆ, ಕಿವಿಗೊಟ್ಟವರೆಷ್ಟೋ, ಕಿವಿಗೊಡದವರು ಇನ್ನೆಷ್ಟೋ....

ದಫೇದಾರ ಖೈದಿಗಳನ್ನು ರಾಗಿಬೀಸಲು ನೇಮಿಸಿದ. ಆ ಹಜಾರದ ತುಂಬೆಲ್ಲಾ ದೊಡ್ಡದೊಡ್ಡ ರಾಗಿಕಲ್ಲುಗಳನ್ನು ಸಾಲಾಗಿ ಇಟ್ಟಿದ್ದರು. ಬೀಸಿದ ಹಿಟ್ಟು ಬೀಳುತಿತ್ತು ನೆಲದ ಮೇಲೆ. ಹತ್ತಾರು ಕಲ್ಲುಗಳು ಗರಗರ ತಿರುಗು ತಿದ್ದುವು. ಭಾರಭಾರವಾದ ಅವನ್ನು ಬೀಸಿದವರಿಗೇ ಗೊತ್ತು ಬೀಸುವ ಸಂಕಷ್ಟ.

ಜಗತ್‌ರಾಂ ತನ್ನ ತಂಡದವರೊಂದಿಗೆ ಸ್ನಾನ ಶೌಚಕ್ಕಾಗಿ ಕಾದಿದ್ದ. ಸುತ್ತುಮುತ್ತಲಿನ ಗದ್ದಲ–ಗಲಾಟೆ ಕಿವಿಗಳ ಮೇಲೆ ಬೀಳುತ್ತದೆ ಚಮಟೆ ಹೊಡೆದಂತೆ. ಸ್ವಲ್ಪ ಸಮಯವನ್ನಾದರೂ ಶಾಂತಿಯಿಂದ ಕಳೆಯುವಂತಿಲ್ಲ. ಊಟ–ತಿಂಡಿ–ನೀರು–ನಿದ್ರೆ ಎಲ್ಲಕ್ಕೂ ಕೊರತೆ. ಮೇಲಾಗಿ, ರೋಗ ರುಜಿನ ಗಳಿಗೆ ಆವಾಸಸ್ಥಾನವಾದ ಬಂಧೀಖಾನೆಯು ಅತ್ಯಂತ ಕೊಳಕಿನ ಆಗರ, ಅಂದ ಮೇಲೆ ಕ್ಷಣಕ್ಷಣಗಳನ್ನೂ ಕಳೆಯುವುದು ಕಷ್ಟ ಎಂಬಂಥ ದುರ್ಭರ ಪರಿಸ್ಥಿತಿ.

ಜೈಲರ್ ಮಹಾಶಯನಿಗೆ ಖೈದಿಗಳು ದೂರಿನಮೇಲೆ ದೂರು ಕೊಡುತ್ತಿದ್ದಾರೆ. ಅವನು 'ಹ್ಞೂಂ' ಎನ್ನುವುದು ಅನುದಿನದ ವಿಧಿವಿಧಾನ. ಇಲ್ಲದ ಸೌಕರ್ಯ ವನ್ನು ಅವನಾದರೂ ಹೇಗೆ ಒದಗಿಸಿಯಾನು? ಬಡಪಾಯಿಗೆ 'ಹ್ಞೂಂ' ಎಂಬುದು ಹೊರತು ಅನ್ಯಮಾರ್ಗವಿಲ್ಲ. ಅದಕ್ಕೆ ಅವನು ಬದ್ಧ.

ರಾಜಕೀಯ ಖೈದಿಗಳು ನೀರಿಗಾಗಿ ಪರದಾಡುತ್ತ ಬಟ್ಟೆ ಒಗೆದುಕೊಳ್ಳು ತಿದ್ದರು. ಎಲ್ಲರ ಬಾಯಿಯಲ್ಲೂ ಜೈಲಿನ–ಜೈಲರನ ದೂಷಣೆಯೇ. ಆದರೇನು ಕಾಲೋಚಿತವಾಗಿ ನಡೆಯದೆ ಗತ್ಯಂತರವಿಲ್ಲದಿದ್ದುದರಿಂದ ಎಂದಿನಂತೆಯೇ ಸಾಗುತಿತ್ತು ದಿನಚರಿ.

ಅನೇಕ ಖೈದಿಗಳು ಒಳಕೋಣೆಯಿಂದ ಹೊರಬಿದ್ದರು ಕೆಲಸಕ್ಕಾಗಿ. ಅವರಲ್ಲೊಬ್ಬ ದೀನಾತಿದೀನ ಚರಿತ್ರೆಯವನಂತಿದ್ದ. ಅವನನ್ನು ನೋಡಿ, ಅತ್ತಲೇ ಹೋದ ಜಗತ್‌ರಾಂ. ಮುಖಭಾವವನ್ನು ನೋಡಿದರೆ ತೀರಾ ಸಭ್ಯ ನಂತೆ ಕಾಣುವ ವ್ಯಕ್ತಿ. ಈತನಿಗೇಕೆ ಜೈಲಾಗಿರಬಹುದು? ಎಂಬ ಪ್ರಶ್ನೆ ಮನದಲ್ಲಿ.

"ನಿನಗೇಕೆ ಜೈಲಾಯಿತು ಎಂದು ತಿಳಿಯಬಹುದೆ?" ಅನುನಯದಿಂದ ಕೇಳಿದ ಜಗತ್‌ರಾಂ.

ಅವನು ಹುಬ್ಬೆತ್ತಿ ಖಾದಿಯುಡುಪಿನ ಹಿರಿಯ ವ್ಯಕ್ತಿಯನ್ನು ನೋಡಿ ನಿಟ್ಟುಸಿರು ಬಿಟ್ಟ. ಹೇಳಲೋ ಬೇಡವೋ ಎಂಬ ಸಂಕೋಚ ಮನದಲ್ಲಿ. ಒಂದೆರಡು ಗಳಿಗೆ ಸದ್ದಿಲ್ಲದೆ ಉರುಳಿ ಹೋದುವು. ಅನಂತರ ಬಾಯ್ದೆರೆದ "ನನ್ನ ಆತ್ಮರಕ್ಷಣೆಗೋಸುಗ ಹಾರಿಸಿದ ಗುಂಡು ಕಳ್ಳನ ಸಾವಿಗೆ ಕಾರಣ ವಾಯಿತು. ನಾನು ಬಂದೀಖಾನೆಯ ಅತಿಥಿಯಾದೆ."

"ಆತ್ಮರಕ್ಷಣೆಗೆ ಅಂದರೆ ಕಳ್ಳ ನಿನ್ನ ಮೇಲೆ ಎರಗಿದನೆ?"

"ಹೌದು.... ದರೋಡೆಕಾರರು ಮನೆಗೆ ನುಗ್ಗಿದಾಗ ಪಿಸ್ತೂಲಿನಿಂದ ಗುಂಡು ಹಾರಿಸಬೇಕಾಯಿತು. ಏಟು ತಗಲಿದ ವ್ಯಕ್ತಿ ಸ್ವಲ್ಪ ದೂರ ಓಡಿ ಹೋಗಿ ಬಿದ್ದುಬಿಟ್ಟ. ಉಳಿದವರು ಓಟ ಕಿತ್ತರು. ವಿಷಯ ಪೊಲೀಸಿಗೆ

ಹೋಯಿತು. ನನ್ನನ್ನು ಬಂಧಿಸಿದರು. ಅವನು ದೂರದಲ್ಲಿ ಬಿದ್ದುದು ಸರಿಯಷ್ಟೆ? ಕೋರ್ಟು ಅಷ್ಟು ದೂರದಲ್ಲಿದ್ದ ವ್ಯಕ್ತಿಗೆ ಹೊಡೆಯುವ ಅವಶ್ಯಕತೆಯಿರಲಿಲ್ಲ ಎಂಬ ವಾದವನ್ನು ಎತ್ತಿ ಹಿಡಿಯಿತು. ಗುಂಡು ಬಡಿದ ಮೇಲೆ ಅಷ್ಟು ದೂರ ಓಡಿದ ಎಂದು ಬಾಯಿ ಬಡಿದುಕೊಂಡರೂ ಒಪ್ಪಲಿಲ್ಲ. ಹೋಗಲಿ ಬಿಡಿ. ನನ್ನ ಹಣೆಬರಹ ....ಹೀಗಿದ್ದರೆ ಮಾಡುವುದೇನು? ಅನುಭವಿಸಬೇಕು; ಅನುಭವಿಸುವೆ."

ಅತ್ಯಂತ ವಿಷಾದವಾಣಿಯಲ್ಲಿ ಹೊರಬಿತ್ತು ಕರುಣಕಥೆ.

ಜಗತ್‌ರಾಂ ವಿಷಯವನ್ನು ಮನದಲ್ಲೇ ಮೆಲಕು ಹಾಕಿ ನಿಟ್ಟುಸಿರು ಬಿಟ್ಟ.

"ದುರ್ವಿಧಿ ಯಾವ ರೀತಿಯಲ್ಲಿ ಪಾಶಹಾಕುತ್ತೆ ಎಂಬುದಕ್ಕೆ ಇದೊಂದು ನಿದರ್ಶನ ಸ್ವಾಮಿ!"

ಆತನ ಮುಖದ ಮೇಲೆ ದುಃಖ–ಕ್ಲೇಶಗಳ ವಿಷಾದ ಕಳೆಯು ಕಪ್ಪು ಛಾಯೆ ದಟ್ಟೈಸಿದುದನ್ನು ನಿಟ್ಟಿಸಲಾರದೇ ನಿಟ್ಟಿಸಿತು ಕಾರುಣ್ಯ ಪೂರ್ಣ ದೃಷ್ಟಿ. ಏನು ಹೇಳಲೂ ಮನಸ್ಸು ಬರಲಿಲ್ಲ.

○ ○ ○ ○

ಬಂದೀಖಾನೆಯ ಅಂಗಣದಲ್ಲಿ ಶ್ರೀಹೊನ್ನೆ ಮರದ ಕೆಳಗೆ ರಾಜಕೀಯ ಖೈದಿಗಳ ಸಭೆ ನಡೆದಿತ್ತು. ಮರದ ಬೊಡ್ಡೆಗೆ ಆತುನಿಂತ ವಾಸು ನುಡಿದ,

"ಭಾರತ ಸ್ವಾತಂತ್ರ್ಯಾನಂತರ ನಮ್ಮ ಕನಸಿನ ಗುಡಿಗೋಪುರಗಳೆಲ್ಲಾ ಕಳಚಿಬಿದ್ದುವು. ಅಮೂಲ್ಯವಾದ ಜನಜೀವನ ದುಃಖ–ದುಗುಡಗಳ ಪಾಲಾಗಿದೆ. ಎಲ್ಲಾ ಕ್ಷೇತ್ರಗಳಲ್ಲೂ ನಮ್ಮ ಹಕ್ಕು ಬಾಧ್ಯತೆಗಳಿಗಾಗಿ ಹೊಡೆದಾಡಿದರೆ ಸಾಲದು. ರಾಷ್ಟ್ರಪ್ರಗತಿಗೆ ನಮ್ಮ ಪ್ರತಿಯೊಂದು ರಕ್ತದ ಕಣವೂ ಸಲ್ಲುವುದು ಮುಖ್ಯ. ಇಲ್ಲದಿದ್ದರೆ ನಮ್ಮ ಆತ್ಮವಿಕಾಸ ಮತ್ತು ರಾಷ್ಟ್ರಪ್ರಗತಿ ಎರಡೂ ಆಗುವುದಿಲ್ಲ. ಈಗಣ ದುಷ್ಟ ರಾಜಕಾರಣಿಗಳು ರಾಷ್ಟ್ರವನ್ನು ವಿನಾಶದ ಹಾದಿಗೆ ಹಚ್ಚುತಿದ್ದಾರೆ. ಇದನ್ನು ಪ್ರತಿಯೊಬ್ಬರೂ ಪ್ರತಿಭಟಿಸಬೇಕು....

ಇತ್ಯಾದಿ. ಇತ್ಯಾದಿ. ವಿಚಾರ ವಾಹಿನಿಯ ಪ್ರವಾಹಕ್ಕೆ ಕೊನೆಯೇ ಇಲ್ಲದಷ್ಟು ಕಂಠಶ್ರೀ ಮೊಳಗಿತು. ಶ್ರೋತೃಗಳು ಒಮ್ಮನದಿಂದ ಕೇಳುತ್ತಲಿದ್ದರು. ಸುತ್ತ ಮುತ್ತಲಿದ್ದ ಇತರ ಖೈದಿಗಳೂ ಜೈಲಿನ ಸಿಬ್ಬಂದಿಯೂ ಕೇಳುತ್ತಲಿತ್ತು ಪ್ರಸಂಗೋಚಿತವಾಗಿ ಮತ್ತು ಸಮಯೋಚಿತವಾಗಿ.

ಬಂದಿಗಳು ಒಬ್ಬರಾದ ನಂತರ ಒಬ್ಬರು ತಮ್ಮ ತಮ್ಮ ಗೋಳಿನ ಕಥಾನಕವನ್ನು ತೋಡಿಕೊಂಡರು, ವಿವರ ವಿವರವಾಗಿ. ಎಲ್ಲಾ ಕತೆಗಳ ಅಂತರಾಳದಲ್ಲೂ ಇರುವುದು ಚಿತ್ರವಿಚಿತ್ರವಾದ ರೂಪಕದ ದುಃಖಕಾಂಡ.

ದೇಶ ರಕ್ಷಣೆಯ ಕಾಯಿದೆಯ ಪ್ರಕಾರ ಬಂಧಿತರಾದ ರಾಜಕೀಯ ಬಂದಿಗಳಿಗೆ ಅಂಗಣದಲ್ಲಿ ಅಡ್ಡಾಡುವ ಸ್ವಾತಂತ್ರ್ಯವಿದ್ದುದರಿಂದ ಅಲ್ಲಲ್ಲಿ ಕಲೆತು ಮಾತಾಡಲು ಅವಕಾಶವಿರುತ್ತದೆ. ಜೈಲಿನ ಸಾಮಾನ್ಯ ಅಧಿಕಾರಿಗಳು ಸನಿಹದಲ್ಲಿ ಓಡಾಡುತ್ತ ಅವರ ಮಾತಿನ ವಿಷಯ ಸಂಗ್ರಹಣೆ ಮಾಡುತ್ತಾರೆ. ಅಧಿಕಾರಿಗಳ ಗೂಢಚರ್ಯೆಯನ್ನು ಲೆಕ್ಕಿಸದೆ ತಮ್ಮ ತಮ್ಮ ಧೋರಣೆಯನ್ನು ವ್ಯಕ್ತಪಡಿಸುವುದು ರಾಜಕೀಯ ದುರಂಧರರ ಹಠ. ನಗೆಚಾಟಿಕೆ, ಕೊಂಕು ನುಡಿ, ವ್ಯಂಗ್ಯ ಮಾತುಗಳು ತಿರಸ್ಕಾರಪೂರ್ಣ ನಗೆಯನ್ನು ಹರಿಸುತ್ತವೆ ದಿನ ದಿನ.

"ಈ ಜೇಲಿನಲ್ಲಿ ನಮಗೆ ಲವಲೇಶವೂ ಸೌಕರ್ಯವಿಲ್ಲ. ನೀರಿನ ಸರಬರಾಜು ಏನೇನೂ ಸಾಲದು. ನಮ್ಮ ಉಡುಪುಗಳೆಲ್ಲಾ ಮಣ್ಣೂಡಿಕೊಂಡಿವೆ. ಬೆಳಗಿನ ಝಾವ ಮೂರು ಗಂಟೆಗೆ ನಮ್ಮ ಕೊಠಡಿಗಳ ಬಾಗಿಲನ್ನು ತೆರೆಸಿದರೆ ಸ್ನಾನ ಶೌಚಾದಿಗಳನ್ನು ಮುಗಿಸಿ ಬಟ್ಟೆಗಳ ಶುದ್ಧೀಕರಣ ಮಾಡಿಕೊಳ್ಳಬಹುದು. ಇದು ಯಾರ್ಯಾರಿಗೆ ಹಿಡಿಸುತ್ತದೋ ಅವರೆಲ್ಲಾ ಕೈಯೆತ್ತಿರಿ."

ಒಮ್ಮೆಲೇ ಎಲ್ಲರೂ ಕೈಯೆತ್ತಿ ತಮ್ಮತಮ್ಮ ಒಪ್ಪಿಗೆಯನ್ನು ಸೂಚಿಸಿದರು.

"ಸರಿ; ಈಗಲೇ ಎಲ್ಲರೂ ವಾರ್ಡನ್ನನನ್ನು ಕಂಡು ಮಾತಾಡೋಣ. ಆತ ಒಪ್ಪಿದರೆ ಅನುಕೂಲ."

ಜಗತ್‌ರಾಂ ಎಲ್ಲರೊಡನೆ ಅಂಗಣದ ತುತ್ತ ತುದಿಯಲ್ಲಿದ್ದ ವಾರ್ಡನ್ ಆಫೀಸಿನ ಕಡೆ ನಡೆದ. ಪಾದರಕ್ಷೆಗಳ ಲರಕ್ ಲರಕ್ ಸದ್ದಿಗೆ ದಪುಗೆಲಿ-ಮರಳುಗಳ ಲರಲರ ಸದ್ದು ಶ್ರುತಿ ಮಿಾಟಿತು. ಲರಕ್ ಲರಕ್, ಲರಲರ. ಲರಕ್ ಲರಕ್ ಲರಲರ.

ಂ ಂ ಂ ಂ

ಉದ್ದನೆಯ ಸಾಲುಕಂಬಗಳ ಜಗಲಿಗೆ ಕಡಪ ಕಲ್ಲುಗಳ ಹಾಸು. ಧೂಳಿನ ಲೇಪ ಹೊಂದಿದ ಪುರಾತನ ಕಟ್ಟಡ. ಗೋಡೆಯ ಬದಿಯಲ್ಲಿ ಸಾಲಾಗಿ ಮೂರು ಬೆಂಚುಗಳು ಕೊನೆಯ ಬೆಂಚಿನ ಮೇಲೆ ತಲೆಬಾಗಿ, ಮೈಮುದುಡಿ ಕುಳಿತಿದ್ದಾಳೆ ಒಬ್ಬ ಅಭಾಗಿನಿ. ಜಗಲಿ ಹತ್ತಿದ ಬಹುಜನರ ಪಾದ ಸಪ್ಪಳ ಕೇಳಿ ಆಕೆ ಒಂದು ಕ್ಷಣ ಹುಬ್ಬೆತ್ತಿ ನೋಡಿ ತಟ್ಟನೆ ತಲೆತಗ್ಗಿಸಿದಳು. ಜನ ಸಮಿಾಪಿಸಿದಾಗಲೇ ವಾರ್ಡನ್ನಿನಿಂದ ಕರೆ ಬಂದುದರಿಂದ ಕಾವಲುಗಾರ ಅವಳನ್ನು ಆಫೀಸಿನೊಳಕ್ಕೆ ಎಳೆದೊಯ್ದ. ಅವಳು ಹೋಗಲಾರದೇ ಭಾರವಾದ ಹೆಜ್ಜೆಗಳನ್ನು ಎಳೆದುಕೊಂಡು ಹೋದುದನ್ನು ನೋಡಿದರೆ ಕರುಳು ಕತ್ತರಿಸುವಷ್ಟು ಸಂಕಟ. ಎಲ್ಲರ ದೃಷ್ಟಿಯೂ ನೇರ ಸಲಾಕೆಗಳಂತೆ ಅತ್ತ ನೆಟ್ಟಾಗಲೇ ಅವಳು ಒಳದಾಟಿ ಅದೃಶ್ಯಳಾದಳು.

ಜಗತ್‌ರಾಮನ ತಂಡ ಸಾಲು ಬೆಂಚುಗಳನ್ನು ಆಕ್ರಮಿಸಿತು.

ಒಳಗಡೆ ವಾರ್ಡನ್ ಆ ನತದೃಷ್ಟ ಸ್ತ್ರೀಯನ್ನು ಪ್ರಶ್ನಿಸಿದ್ದು ಇವರ ಕಿವಿಗೂ ಬಿತ್ತು.

"ನಿನಗೇಕೆ ಜೈಲು ಶಿಕ್ಷೆಯಾಯಿತು."

"........."

"ಹೇಳು ?"

ಆಕೆಯ ಮೌನವೇ ಉತ್ತರವಾಯಿತು. ಅಳು--ದುಃಖ-ಗೋಳು-ಬಿಕ್ಕುಗಳು ಕೇಳಿ ಬಂದುವು.

"ಹೇಳು !"

"ನಾನು....ನಾನು ದುಷ್ಟ ಕಾಮುಕನೊಬ್ಬನ ಮೋಸಕ್ಕೆ ಒಳಗಾಗಿ ಗರ್ಭಿಣಿಯಾದೆ....ಆತ ನನ್ನನ್ನು ನಡು ನೀರಿನಲ್ಲಿ ಕೈಬಿಟ್ಟು ಮಾಯವಾದ.... ಸಮಾಜದ ತಿರಸ್ಕಾರಕ್ಕೆ ಒಳಗಾಗುವ ಭಯದಿಂದ ಹೆತ್ತ ಮಗುವನ್ನು ಕತ್ತು ಹಿಸುಕಿ ಕೊಂದದ್ದು ನನ್ನ ತಪ್ಪು....ವಿಚಾರ ಕೋರ್ಟು ಕಛೇರಿ ಹತ್ತಿ ನನ್ನ ಅಪರಾಧ ಸಾಬೀತಾಯಿತು. ನನ್ನನ್ನು ಜೈಲಿಗೆ ದಬ್ಬಿದರು....!" ಮುಸಿ ಮುಸಿ ಅಳುತ್ತಲೇ ತಡೆತಡೆದು ಉಸಿರ್ಗಟ್ಟಿ ಕಲ್ಲಿಗಿಂತ ಕಲ್ಲಾಗಿ ಬಿತ್ತರಿಸುವಾಗ ಒಡಲ ಸಂಕಟವೆಲ್ಲಾ ಶೀಳುದನಿಯಲ್ಲಿ ಹೊರಬಿತ್ತು.

ವಾರ್ಡನ್ ಅವಳನ್ನು ಜೇಲಿನ ಸ್ತ್ರೀವಿಭಾಗಕ್ಕೆ ಸೇರಿಸುವ ಪರವಾನಗಿಗೆ ಸಹಿ ಹಾಕಿ ಜವಾನನೊಂದಿಗೆ ಬಲವಂತದಿಂದ ಕಳುಹಿಸಿದನಂತರ ತನ್ನ ತಂಡ ದೊಡನೆ ಜಗತ್‌ರಾಂ ಒಳಹೋದ.

ಜಗತ್ ಸಿಟ್ಟಿನಿಂದ ಅಂದ "ತಪ್ಪು ಎರಡು ಕಡೆಯಿಂದಲೂ ಆಗಿದೆ. ಶಿಕ್ಷೆ ಮಾತ್ರ ಇವಳೊಬ್ಬಳಿಗೆ ಇದು ಯಾವ ನ್ಯಾಯ ಹೇಳಿ ವಾರ್ಡನ್ ಸಾಹೇಬರೇ ?"

"ಕೋರ್ಟಿನ ಆದೇಶ....ಇದರಲ್ಲಿ ನಮ್ಮ ಹೊಣೆಗಾರಿಕೆ ಏನಿಲ್ಲವಲ್ಲಾ ?"

"ಅವಳಿಂದ ಆತನ ಕುಲಗೋತ್ರಗಳನ್ನು ಅರಿತು ಪೋಲೀಸಿಗೆ ದೂರು ಕೊಡಿ."

"ಆದರೆ, ಕೊಡುವವರು ಯಾರು ? ಯಾರಿಗೆ ಬೇಕು ಕೋರ್ಟಿಗೆ ಅಲೆ ಯುವ ಕೆಲಸ? ಈ ಗೋಜಿಂದಲ್ಲವೇ ಎಲ್ಲರೂ ಕಣ್ಣಿದ್ದೂ ಕುರುಡಾಗುವುದು?"

"ಹೌದು ! ಕೋರ್ಟು-ಕಛೇರಿಗಳ ಮಂದಗತಿ ಉತ್ಸಾಹಕ್ಕೆ ಮಾರಕ. ವರ್ಷಾನುಗಟ್ಟಲೆ ಅಲೆದಾಡುವವರು ಯಾರು ?"

"ನಿಜ....ಕೋರ್ಟು ಬಾಗಿಲು ಕಾಯುವುದು ತುಂಬಾ ಕಷ್ಟದ ಕೆಲಸ."

ಹೊಸ್ತಿಲಾಚೆ ನಿಂತು ಕಂಬನಿ ತೀಡಿಕೊಳ್ಳುತಿದ್ದ ಆಕೆ ಅಳುತ್ತಳುತ್ತಲೇ ಹೆಜ್ಜೆ ತೆಗೆದಳು ; ಎಲ್ಲರ ಪ್ರಶ್ನೋತ್ತರಗಳನ್ನು ಆಲೈಸಿ ಭಾರವಾದ ಹೃದಯ ವನ್ನು ಹೊರಲಾರದೆ ಹೊತ್ತು.

ಅನಂತರ ಜಗತ್‌ರಾಂ ತನ್ನ ವಿಷಯಕ್ಕೆ ಬಂದ "ನಮ್ಮೆಲ್ಲರಿಗೂ ಬೆಳಗಿನ ಝಾವದಲ್ಲೇ ಸ್ನಾನ ಶೌಚಗಳನ್ನು ಮುಗಿಸಲು ಅನುಕೂಲಿಸುವಂತೆ ಕೋಠಡಿಗಳ ಕದ ತೆರೆಸಬೇಕು. ಹೊತ್ತಾದ ನಂತರ ನೀರು ದೊರೆಯುವುದು ತುಂಬಾ ಕಷ್ಟ. ಏನು ಹೇಳುತ್ತೀರಿ?"

"ಒಬ್ಬೊಬ್ಬರಾಗಿ ತಾನೇ ಸ್ನಾನ ಮಾಡುತ್ತೀರಿ? ಅಷ್ಟಕ್ಕೆ ಏಕೆ ಬೆಳಗಿನ ಝಾವ ಬಾಗಿಲು ತೆರೆಯಬೇಕು? ಅಂತಹ ಅಗತ್ಯವಾದರೂ ಏನು? ಇದ್ದುದರಲ್ಲಿ ಅನುಸರಿಸಿಕೊಳ್ಳಿ."

"ಸಾಧ್ಯವೇ ಇಲ್ಲ. ನಮಗೆ ನೀರು ಏನೇನೂ ಸಾಲದು. ಬೆಳಗಿನ ಝಾವ ನೀರು ಥಂಡಿಯಾಗಿ ಬರುತ್ತೆ. ಆಗ ಒಬ್ಬರು ಸ್ನಾನ ಮಾಡಿದರೆ ಒಬ್ಬರು ಬಟ್ಟೆ ಒಗೆದುಕೊಳ್ಳಬಹುದು."

"ನಿಮಗಿನ್ನೇನೂ ಕೆಲಸವಿಲ್ಲವಷ್ಟೆ? ಹಗಲಿಡೀ ಮಾಡಿಕೊಳ್ಳಬಹುದು."

"ಪ್ರಾತಃರ್ವಿಧಿಗಳೆಲ್ಲಾ ಬೆಳಿಗ್ಗೆಯೇ ಮುಗಿಯಬೇಕು."

ಎಲ್ಲರೂ ಒಕ್ಕೊರಲಿಂದ ನುಡಿದಾಗ ದನಿ ಮಾಡುಮುಟ್ಟುವಂತೆ ಮೊಳಗಿತು. ಎಲ್ಲರೂ ಹುರಿಯಾಳುಗಳೇ ಅಂದಮೇಲೆ ಕೇಳಬೇಕೇ? ಮಾತಿಗೆ ಮಾತು ಬೆಳೆಯಿತು. ಖೈದಿಗಳು ಪಟ್ಟು ಬಿಡಲಿಲ್ಲ.

ವಾರ್ಡನ್ ನಿರುಪಾಯನಾಗಿ 'ಅಸ್ತು' ಎಂದ.

o o o o

ಸುಡುಬಿಸಿಲು ರಣರಣಿಸುವ ಮಧ್ಯಾಹ್ನದಲ್ಲಿ ಬಾಲಾಪರಾಧಿಯನ್ನು ಎಳೆದು ತಂದಿತು ಜೇಲಿನ ಸಿಬ್ಬಂದಿ. ಹದಿ ಹರೆಯದವನಂತೆ ಕಾಣಿಸುವ ಆತನಿಗೆ ಇಪ್ಪತ್ತು ವರ್ಷಗಳಾಗಿವೆಯೆಂದು ಜೇಲಿಗೆ ದಬ್ಬಿತ್ತು ನ್ಯಾಯಾಲಯ. ಮಾಸಲು ಉಡುಪಿನ–ಬಾಡಿದ ಮೊಗದ ಹುಡುಗನನ್ನು ನೋಡಿದರೆ ಎಂತಹವರಿಗೂ ಮನಸ್ಸು ಬಿಸಿಲಟ್ಟಿದ ಮಂಜಿನಂತೆ ಕರಗಿ ದ್ರವೀಭೂತವಾಗುವುದು ಸತ್ಯ.

ಜಗತ್‌ರಾಂ ಹುಡುಗನ ಸಮೀಪಕ್ಕೈದು ಕೇಳಿದ "ನಿನ್ನ ಹೆಸರೇನು ಮಗೂ ?"

"ಕೃಷ್ಣ...." ಹೇಳಲಾರದೆ ಹೇಳಿದ ಆ ನತದೃಷ್ಟ ಬಾಲಕ.

"ನೀನೇನು ತಪ್ಪು ಮಾಡಿದೆ? ಏಕೆ ಜೇಲಾಯಿತು ?"

ಹುಡುಗ ಜಗತ್‌ರಾಮನ ನಯುವಂತಿಕೆ ಮತ್ತು ಸ್ವಚ್ಛಕಾಂತಿಯು ಉಡುಪನ್ನು ನೋಡಿ ಅವರು ಖಾದೀಧಾರಿಗಳಾದ ಗಾಂಧೀ ಭಕ್ತರೆಂಬುದನ್ನು ಅರಿತುಕೊಂಡು ಭಾವೋದ್ವೇಗದಿಂದ ನುಡಿದ "ನಾನೊಂದು ದುರ್ದೈವಿ..... ನನ್ನ ಕತೆ ಕಟ್ಟಿಕೊಂಡು ನೀವೇನು ಮಾಡಬಲ್ಲಿರಿ? ಎಲ್ಲಾ ನನ್ನ ಕರ್ಮ. ಬಿಡಿ ಸ್ವಾಮಿ !"

"ಇರಲಿ, ಹೇಳು. ಈಗ ನಾನೇನೂ ಮಾಡಲಾರೆ ನಿಜ. ಮುಂದೇನಾದರೂ ಸಾಧ್ಯವಿದ್ದರೆ ಮಾಡೋಣ..." ಒತ್ತಾಯ ಪೂರ್ಣ ದನಿಯಲ್ಲಿ ಕೇಳಿದ ಜಗತ್‌ರಾಂ.

"ನಮ್ಮಪ್ಪ ಹಳ್ಳಿಯಲ್ಲಿ ಕೂಲಿ ಕೆಲಸ ಮಾಡುತಿದ್ದ. ದಣಿಯರ ತೋಟದಲ್ಲಿ ಮಾವಿನ ಹಣ್ಣು ಕೀಳುವಾಗ ಆಕಸ್ಮಾತ್ ಮರದಿಂದ ಕೆಳಗೆ ಬಿದ್ದು ಮೃತಪಟ್ಟ. ಅಂದಿನಿಂದ ನಮ್ಮ ಅನ್ನಕ್ಕೆ ಕಲ್ಲುಬಿತ್ತು. ತಾಯಿಯ ದುಡಿಮೆಯಲ್ಲಿ ಆರು ಮಕ್ಕಳು ಗಂಜಿ ಕುಡಿಯಬೇಕು. ನಾನು ಬೇಸತ್ತು ಪಟ್ಟಣ ಸೇರಿದೆ. ಎಲ್ಲಾದರೂ ನಾಲ್ಕು ಕಾಸು ಗಳಿಸಿ ಎಲ್ಲರಿಗೂ ಗಂಜಿ ಕಾಣಿಸುವ ತೀವ್ರ ಹಂಬಲ ಮನದಲ್ಲಿತ್ತು. ಆದರೆ ಆ ಮಾತು ಒತ್ತಟ್ಟಿಗಿರಲಿ, ನನ್ನ ಒಡಲಿಗೆ ದುಡಿದುಕೊಳ್ಳುವ ಕೂಲಿಯೂ ಸಿಗಲಿಲ್ಲ. ಅಲ್ಲಿ-ಇಲ್ಲಿ ಕೆಲಸ ಕೇಳಿ ಕೇಳಿ ಬೇಸತ್ತು ಹೋದೆ. ನನಗೆ ದಕ್ಕಿದ್ದು ಛೀಮಾರಿ-ಮುಖಭಂಗ. ಮೂರು ದಿನದಿಂದ ನಲ್ಲಿಯ ನೀರು ವಿನಾ ಮತ್ತೇನೂ ಇಲ್ಲ. ಹಸಿವು. ತಾಳಲಾರದೆ ಬಾವಿಗೆ ಬಿದ್ದು ಸಾಯುವ ಉದ್ದೇಶದಿಂದ ಬಾವಿಗಾಗಿ ಹುಡುಕಾಡಿದೆ. ಇಲ್ಲಿಯ ಮನೆಗಳಲ್ಲಿ ವಿನಾ ಹೊರ ವಲಯುಗಳಲ್ಲಿ ಬಾವಿಗಳಿಲ್ಲ. ಸರಿ....ಕೊನೆಯದಾಗಿ ಕಾರಿನಡಿಗೆ ಬಿದ್ದು ಸಾಯಲು ಪ್ರಯತ್ನಿಸಿದೆ...."

ಹುಡುಗ ಬಿಕ್ಕಿದ. ಕಣ್ಣುಗಳಲ್ಲಿ ಗಂಗೆ–ಯಮುನೆಯರು ಪ್ರವಹಿಸಿದರು. ದುಃಖವುಕ್ಕಿ ಬಂದು ಬೋರಾಡಿ ಅತ್ತ. ಆ ಕರುಣಾಜನಕ ದೃಶ್ಯ ಹೃದಯಾಂತರಾಳದಲ್ಲಿ ಕೈಯಾಡಿಸಿ ಮರುಕ ಮೂಡಿಸಿತು. ಜಗತ್‌ರಾಂ ಮೈದಡವಿ ಪ್ರೀತಿ–ಕರುಣೆ–ಸಂಕಟಗಳ ಒಕ್ಕೂಟವಾಗಿ ಅಂದ. "ಇದು ತುಂಬಾ ಅನ್ಯಾಯ. ಇಂತಹ ದೀನರಿಗೆ ಸರಕಾರ ಉದ್ಯೋಗ ಅಥವಾ ಜೀವನಾಂಶ ಕೊಡಬೇಕಾದುದು ನ್ಯಾಯ. ಅದು ಬಿಟ್ಟು ಈ ತುರಂಗವಾಸಕ್ಕೇನಾದರೂ ಅರ್ಥವಿದೆಯೇ? ಇದು ಯಾವ ನೀತಿ ಸಂಹಿತೆ? ಛೇ! ಛೇ! ಎಂತಹ ದೌರ್ಭಾಗ್ಯ ....!"

ವಾಕ್ಸರಣಿ ಮುಗಿಯುವ ಮುನ್ನ ಹುಡುಗ ಜೇಲಿನ ಒಳಾಂತರವನ್ನು ಸೇರಿದ; ಅವನ ಅರಣ್ಯರೋದನ ಅಸ್ಪಷ್ಟವಾಗುತ್ತಿದ್ದಂತೆಯೇ ದಡ್ ದಡ್ಡನೆ ಕದ ಮುಚ್ಚಿಕೊಂಡಿತು ಘೋರ ತುರಂಗ ರಂಗ.

o o o o

ಬೆಳಗಿನ ಝಾವ ಮೂರು ಗಂಟೆಗೆ ರಾಜಕೀಯ ಖೈದಿಗಳ ಕೊಠಡಿ ಬಾಗಿಲನ್ನು ತೆರೆಯಲು ಜೈಲರ್ ಅನುಮತಿ ನೀಡಿದುದರಿಂದ ಸಾಲಾಗಿನ ಎಲ್ಲ ಬಾಗಿಲುಗಳೂ ತೆರೆದುಕೊಂಡುವು. ಬಂದಿಗಳು ಬುಳು ಬುಳು ಹೊರಬಿದ್ದು ನಲ್ಲಿಕಟ್ಟೆಯನ್ನು ಸುತ್ತುವರಿದರು.

ನೇರ ಸ್ತಂಭದ ಮೇಲೆ ವಿದ್ಯುಚ್ಛಕ್ತಿಯ ದೀಪ ಕತ್ತಲೊಡನೆ ಹೋರಾಡುತ್ತ ಉಜ್ವಲಿಸುತಿತ್ತು. ಕೊಳಾಯಿಯ ಬಳಿಯಿದ್ದ ಸಣ್ಣ ಮರವೊಂದರ ನೆರಳು ಮೈಚಾಚಿದ್ದುದರಿಂದ ಕತ್ತಲು ಬೆಳಕುಗಳ ನೆಲೆಯಾಗಿತ್ತು ನಲ್ಲಿಕಟ್ಟೆಯ ತಾಣ. ಬೆಳಗಿನ ನೀರು ತುಂಬಾ ಜೋರಾಗಿ ಬರುತ್ತಿದ್ದುದರಿಂದ ಎಲ್ಲರಿಗೂ ಹಿತಕರ.

ಮುಂಜಾವಿನ ಶೀತಲ ಶಾಂತ ವಾತಾವರಣ ಮೈಕೊರೆದು ಚಿಲ್ಲನೆ ನಡುಗಿಸುವಂತಹ ಚಳಿ. ಆದರೂ, ತಣ್ಣೀರಿನ ಸುಖ ಮಜ್ಜನ ಎಲ್ಲರಿಗೂ ಹಿತವೇ.

ಮುಂಜಾವಿನ ಶೀತಲ ಶಾಂತ ವಾತಾವರಣ. ಮೈ ಕೊರೆದು ಚಿಲ್ಲನೆ ನಡುಗಿಸುವಂತಹ ಚಳಿ. ಆದರೂ, ತಣ್ಣೀರಿನ ಸುಖ ಮಜ್ಜನ ಎಲ್ಲರಿಗೂ ಲಭ್ಯ. ಕೈಕೊಂಡ ಕಾಯಕದೊಂದಿಗೆ ಮಾತುಕತೆಯ ಗದ್ದಲ ಹೂಡಿ ಶಾಂತಿಯನ್ನು ಕಲಕಿದರು ರಾಜಕೀಯ ಖೈದಿಗಳು.

ರಾತ್ರಿ ಪಾಳಿಯ ಕಾವಲುಗಾರರು ಅಲ್ಲಲ್ಲಿ ಮೈಕುಗ್ಗಿ ಓಡಾಡುತ್ತಲಿದ್ದಾರೆ. ನಿದ್ದೆಯ ಮಂಪರ, ಚಳಿಯ ಒತ್ತಡ, ಜೀವನ ದಂಥೆಯ ಅತೃಪ್ತಿಗಳು ಒತ್ತಟ್ಟಗಿರಲಿ; ಜೇಲಿನ ಬಣವಾಗಿಯೇ ಉಳಿದು ಅಳಿಯುವ ನತದೃಷ್ಟ ಜೀವಿಗಳು. ನರಜನ್ಮವೆತ್ತಿದರೂ ಹುಟ್ಟಿನಿಂದಲೇ ಬಡತನಕ್ಕೆ ಸರ್ವೋತ್ತಮವು ಬಿತ್ತಾಗಿ ಜೀವನಕ್ಕೂ ಭಾರ, ಭೂಮಿಗೂ ಭಾರ.

"ಅವಿದ್ಯೆ-ಅಜ್ಞಾನಗಳ ಬಂಡವಾಳ ಆರ್ಥಿಕ ರಂಗಕ್ಕೆ ಸೊನ್ನೆಯ ಬಿತ್ತನೆ. ಇತರ ಉದ್ಯಮ ಶೀಲತೆಯ ಅರಿವಿಲ್ಲದ ದುರ್ದೈವಿಗಳು ಎಷ್ಟು ದಕ್ಕಿದರೆ ಅಷ್ಟೇ ಸಾಕು ಎಂಬ ಸಣ್ಣ ಸಮಾಧಾನದಿಂದ ಯಾವ ಯಾವ ಜವಾನಗಿರಿಗೋ ಸೇರಿಕೊಳ್ಳುವುದು ಅನಿವಾರ್ಯ. ಅನಂತರ ಅದೇ ಆಧಾರ ಜೀವಮಾನಕ್ಕೆ. ಬಿಟ್ಟರೆ ಬೇರೆ ಗತಿಯಿಲ್ಲ. ಈ ಸಮಸ್ಯೆ ಬಗೆ ಹರಿಯ ಬೇಕಾದರೆ ಮಕ್ಕಳು ಮರಿ ವಿದ್ಯಾವಂತರಾಗಬೇಕು. ಅಂದರೆ ಅದೊಂದು ಕನಸಿನ ಗೋಪುರ."

"ಬಿಡು...ಈಗಿನ ಮಕ್ಕಳು 'ಕೇರ್‌ಫ್ರಿ' ಒಂದು ವೇಳೆ ಕಲಿತರೂ ಹೆತ್ತವರನ್ನು ಗಣಿಸುವುದು ಅಷ್ಟರಲ್ಲೇ ಇದೆ."

"ನಿಜ....ನಿಜ."

"ಪಾಪ, ತಪ್ಪು ಮಾಡದೆ ತುರಂಗವಾಸ ಅನುಭವಿಸುವ ಬಡಪಾಯಿಗಳು."

"ಯಾವ ಪುಣ್ಯಫಲವೋ. ಅಪರಾಧಿಗಳಾಗುವ ಕರ್ಮವನ್ನು ತಪ್ಪಿಸಿ ಅಪರಾಧಿಗಳ ಸೇವೆ ಮಾಡುವ ಅವಕಾಶ ಕಲ್ಪಿಸಿರಬಹುದು, ಅನಿಸುತ್ತೆ ನನಗೆ."

"ಇರಬಹುದು ಯಾವ ಯಾವ ಜನ್ಮ ಫಲಗಳು ಈ ರೀತಿಯಲ್ಲಿ ಉಪಾರೂಢವಾಗಿವೆಯೋ....?"

ಮಾತುಕತೆಗಳು ಪ್ರಸಂಗೋಚಿತವಾಗಿ ನಡದೇ ನಡೆದುವು ಕೊನೆಯಿಲ್ಲದಂತೆ.

o o o o

ಸಾವಿರಾರು ಮಂದಿ ಅಪರಾಧಿಗಳಿಂದ ತುಂಬಿದ ಜೈಲು ಕಿಕ್ಕಿರಿ ತುಂಬಿ ಹಿರಿಕಿರಿಯ ಉಪಟಳ ಯಾವತ್ತೂ ತಪ್ಪಿದ್ದಲ್ಲ. ಒಂದಲ್ಲ ಒಂದು ಕಡೆ ಭುಗಿಲೇಳುತ್ತದೆ ದಂಥೆ.

ಹಿಂದಿನ ದಿನ ಜೈಲಿನಲ್ಲಿ ಅನಿರೀಕ್ಷಿತ ಬಂಡಾಯ ಮಿಂಚಿನಂತೆ ನಡೆದು ಹೋಯಿತು. ಯಾರೋ ಗದ್ದಲ ಎಬ್ಬಿಸಿದರು. ಇನ್ನಾರಿಗೋ ಹೊಡೆತ ಬಿತ್ತು. ಆದ್ದರಿಂದ ಪ್ರತಿಭಟನೆ–ಪ್ರತೀಕಾರಗಳು ಯದ್ವಾ ತದ್ವಾ ನಡೆದುವು. ಜೈಲ್ ಪೊಲೀಸ್ ಸಿಬ್ಬಂದಿಯು ಸಾಲದೆ ಹೊರಗಿನ ಪೊಲೀಸ್ ಪಡೆಯೂ ಬಂದು ನೆರವು ನೀಡಿತು. ಎಲ್ಲರ ಮನಃಚಿತ್ತಗಳೂ ಕೊತಕೊತ ಕುದಿಯುತಿದ್ದುವು. ಯಾರಿಗೂ ನೆಮ್ಮದಿಯಿರಲಿಲ್ಲ. ಅಪರಾಧೀ ಖೈದಿಗಳು ಕೆಲಸ ಮಾಡದೆ ಮುಷ್ಕರ ಹೂಡಿದರು.

ಈ ಪ್ರಸಂಗದಿಂದಾಗಿ ಎಲ್ಲರಿಗೂ ಅಶಾಂತಿ–ಅಸಮಾಧಾನ.

ಜಗತ್‌ರಾಂ ಅಂಗಣದಲ್ಲಿ ಶಾಂತಿ ಸಭೆಯನ್ನು ಕರೆದಿದ್ದ. ಬಿಸಿಲು ಏರುವುದರೊಳಗಾಗಿ ಎಲ್ಲರೂ ಅಂಗಣದಲ್ಲಿ ಹಾಜರು. ಬೆಚ್ಚನೆ ಹೊಂಬಿಸಿಲಿಗೆ ಮೈಯೊಡ್ಡುವುದು ಎಲ್ಲರಿಗೂ ಹಿತಕರ. ಎಂಟ್ಹತ್ತು ಮಂದಿಯೂ ಮೈಗೆ ಮೈ ಹಚ್ಚಿ ನಿಂತಿದ್ದರು.

"ಗೆಳೆಯರೇ, ಏನೇ ಬಂದರೂ ಶಾಂತಿ–ಶಿಸ್ತುಗಳಿಗೆ ಭಂಗ ಬರಬಾರದು. ಗಾಂಧೀ ತತ್ವವಾದಿಗಳಾದ ನಮ್ಮಿಂದ ಶಾಂತಿಗೆ ಭಂಗವಾಗಬಾರದು. ನಾವೆಲ್ಲ ಒಗ್ಗೂಡಿ ಶಾಂತಿಪಾಲನೆಗಾಗಿ ಶ್ರಮಿಸಬೇಕು" ಎಂದ ಜಗತ್‌ರಾಂ.

"ಕೇಳಿ....ಕೇಳಿ !"

"ನೆನ್ನೆ ನಡೆದ ಅಚಾತುರ್ಯದಿಂದ ನಿರಪರಾಧಿಗಳಾದ ನಮಗೂ ಪೆಟ್ಟು ಬಿದ್ದಿವೆ. ಅದನ್ನು ಯಾರೂ ಮನಸ್ಸಿನಲ್ಲಿಟ್ಟುಕೊಳ್ಳಬಾರದು."

"ಕೇಳಿ ಕೇಳಿ !"

"ಜಗತ್ತು ವಿಶಾಲವಾಗಿದೆ. ಸಧ್ಯ, ಎಲ್ಲಿಗೆ ಹೋದರೂ ಹೊಟ್ಟೆ–ಬಟ್ಟೆಗೆ ದುಡಿದುಕೊಳ್ಳಬಹುದು. ಆದರೆ, ನಮ್ಮ ದೇಶ–ನಮ್ಮ ಸಂಸ್ಕೃತಿ ಎಲ್ಲಕ್ಕಿಂತಲೂ ತೀರಾ ವಿಭಿನ್ನ. ನಮ್ಮ ದೇಶದಲ್ಲೇ ಇದ್ದು, ನಮ್ಮ ದೇಶಕ್ಕಾಗಿ ದುಡಿದು ನಮ್ಮ ದೇಶದಲ್ಲೇ ಮಣ್ಣಾಗುವುದು ಎಲ್ಲಕ್ಕು ಹಿರಿದು. ಅಂತಲೇ ನಮ್ಮ ದೇಶಕ್ಕಾಗಿ ದುಡಿಯೋಣ. ದುಡಿದು ಈ ಮಣ್ಣಿನ ಹುಡಿಯಲ್ಲೇ ಬೆರೆತು ಆತ್ಮಶಾಂತಿ ಪಡೆಯೋಣ."

"ಸರಿ–ಸರಿ. ಅದೇ ನಮ್ಮ ಮುಂದಿರುವ ಗುರಿ."

ಅದೇ ವೇಳೆಗೆ ಜೈಲರ್ ಆ ಮಾರ್ಗವಾಗಿ ಬಂದ. ಖಾದೀ ಧಾರಿಗಳ ಕೂಟದ ಮೇಲೆ ದೃಷ್ಟಿ ಹೊರಳಿಸಿ ಅಚ್ಚರಿಯಿಂದ "ಅರೆರೆ! ಇದೇನು ಇಲ್ಲಿ ಕೂಡಿದ್ದೀರಿ? ನೆನ್ನೆಯಿಂದ ಐದು ಮಂದಿ ಒಂದೆಡೆ ಸೇರಬಾರದೆಂಬ ನಿಯಮ ಜಾರಿಯಲ್ಲಿರುವುದು ಗೊತ್ತೆ?"

"ಗೊತ್ತು...ಅದರ ಉಲ್ಲಂಘನೆಗಾಗಿಯೇ ಸೇರಿದೆ ಈ ಶಾಂತಿಕೂಟ."

"ಶಾಂತಿಯ ಹೆಸರಿನಲ್ಲಿ ಅಶಾಂತಿ ಹರಡುತ್ತೀರಿ !"

"ಈಗ ನಮ್ಮ ಕೂಟದಲ್ಲಿ ಕಿಂಚಿತ್ ಅಶಾಂತಿ ಇದೆಯೆ?"

"ನೀವು ಕ್ಷಣ ಕ್ಷಣಕ್ಕೂ ಬಣ್ಣ ಬದಲಿಸುವ ಗೋಸುಂಬೆಗಳು."

"ಇಲ್ಲಿ ಶಾಂತಿಯನ್ನು ಕಲಕುತ್ತಿರುವವರು ನೀವೇ."

ಸರಿ, ಮಾತಿಗೆ ಮಾತು ಬೆಳೆದು ವಾದವಿವಾದ ಹತ್ತಿತು. ಕೊನೆಗೆ ಹಲವಾರು ಮಂದಿ ವಾರ್ಡನ್ನನನ್ನು ತಳ್ಳಿಕೊಂಡೇ ಹೋಗಿ ಶೌಚಗೃಹಕ್ಕೆ ದಬ್ಬಿ ಹೊರಗಡೆಯಿಂದ ಚಿಲಕ ಹಾಕಿ ಬಂದರು! ಆ ಶೌಚಗೃಹ ಒಂದು ಮೂಲೆಯಲ್ಲಿದ್ದುದರಿಂದ ಅಲ್ಲಿಗೆ ಹೋದವರಿಗೆ ವಿನಾ ಕೂಗಿದರೂ ಬಡುಕೊಂಡರೂ ಇತ್ತ ಕೇಳಿಸುವ ಸಂಭವ ತೀರಾ ಕಡಿಮೆ. ದುರ್ನಾತದಿಂದ ಕೂಡಿದ ನರಕ

ಅದು. ಹಾಗೆ ಅವನನ್ನು ಕೂಡಿದುದನ್ನು ಜೇಲಿನ ಸಿಬ್ಬಂದಿ ನೋಡಿರಲಿಲ್ಲ ವಾದ್ದರಿಂದ ವಾರ್ಡನ್ ಬಹಳ ಹೊತ್ತಿನವರೆಗೆ ಅಲ್ಲಿ ಸೆರೆ ಸಿಕ್ಕಿದ.

o o o o

ಇಂದು, ತುರಂಗವಾಸಕ್ಕೆ ಹೊಸದಾಗಿ ಪ್ರವೇಶ ಪಡೆದ ಬಡತಾಯಿ ಯೊಬ್ಬಳು ಪ್ರವೇಶದ್ವಾರದ ಬಲಭಾಗದ ಒಳಾಂಗಣದಲ್ಲಿ ದೃಷ್ಟಿಗೆ ಬಿದ್ದಳು. ಬಾಗಿದ ತಲೆ, ಕೆದರಿದ ಕೂದಲು. ಬಾಡಿ ಬೆಂಡಾದ ಮುಖ, ಗುಳಿಬಿದ್ದ ಕಣ್ಣುಗಳು, ಅಸ್ತವ್ಯಸ್ತವಾದ ಉಡುಪು, ಅತೀವ ದುಃಖಿತ ಪರಿಸ್ಥಿತಿ. ಯಾರಾದರೂ ಅವಳನ್ನು ನೋಡಿದ ಪ್ರಪ್ರಥಮ ನೋಟಕ್ಕೇ ಮನಕರಗು ವಂತಹ ದೃಶ್ಯ. ಸೆರಗಿನಿಂದ ಮುಖಮುಚ್ಚಿಕೊಂಡು ಬೋರಾಡಿ ಅಳುತ್ತಿ ದ್ದಾಳೆ. ಜವಾನರು ಅವಳನ್ನು ದಬ್ಬಿಕೊಂಡು ಒಳ ತರುತ್ತಿದ್ದಾರೆ. ಪಾಪ, ಏನಾಗಿದೆಯೋ...ಆಕೆ ಎಷ್ಟೆಂದರೂ ಹೆಣ್ಣು–ಅಬಲೆ–ದೀನೆ.

ಜಗತ್‌ರಾಂ ಅವಳಿದ್ದಲ್ಲಿಗೆ ಹೋಗಿ ಕಾರುಣ್ಯಪೂರ್ಣ ದನಿಯಿಂದ ಕೇಳಿದ "ಏನಾಯಿತು ತಾಯಿ? ಏಕೆ ಅಳುತಿದ್ದೀ?"

ಪ್ರಶ್ನೆಯಲ್ಲಿ ತುಳುಕಿದ ಪ್ರೇಮದ ಸ್ಫುರಿ ಒಡಲ ಸಂಕಟವನ್ನು ಇನ್ನಷ್ಟು ಹೆಚ್ಚಿಸಿತೇನೋ ಆಕೆ 'ಹೋ' ಎಂದು ಅಳುತ್ತ ನೆಲಕ್ಕೆ ಕುಸಿದು ಕುಳಿತಳು.

ಜೈಲಿನ ಸಿಬ್ಬಂದಿಯನ್ನು ಕೇಳಿದ ಜಗತ್‌ರಾಂ "ಯಾವ ಕಾರಣಕ್ಕಾಗಿ ಶಿಕ್ಷೆ?"

ಆತನ ಉತ್ತರ ಹೊಮ್ಮುವುದರೊಳಗಾಗಿ ಆಕೆ ಉದ್ವೇಗದಿಂದ ಚೀರಿ ದಳು "ನನ್ನ ಸಾಯೋಕೆ ಬಿಡಲ್ಲ ಸ್ವಾಮಿ. ನಾನು ಸಾಯಬೇಕು. ಗಲ್ಲು ಶಿಕ್ಷೆ ಮಾಡಿ ಸಾಯಿಸಿರಿ ಸ್ವಾಮಿ, ಸಾಯಿಸಿರಿ!"

ಜಗತ್‌ರಾಂ ಅಧಿಕಾರಿಗಳ ಕಡೆ ಮಿಕಿಮಿಕಿ ನೋಡಿದ, ವಿಷಯವೇ ನೆಂಬುದು ಸ್ವಲ್ಪವೂ ಅರ್ಥವಾಗಲಿಲ್ಲ. ಮನಃಪ್ರಾಣಗಳು ಸಂಕಟದಿಂದ ನಲುಗಿದವು.

"ಈ ರಂಡೆ ಎರಡು ಮಕ್ಕಳನ್ನು ಬಾವಿಗೆ ತಳ್ಳಿ ತಾನೂ ಬಿದ್ದಿದ್ದಾಳೆ. ಯಾರೋ ಪಥಿಕರು ಓಡಿಬಂದು ಎತ್ತುವುದರೊಳಗಾಗಿ ಎರಡೂ ಮಕ್ಕಳು ಸತ್ತಿದ್ದುವು. ಈಕೆ ಉಳಿದು ಕೊಂಡಿದ್ದಾಳೆ."

ಹಾ! ಎಂತಹ ಹೃದಯ ವಿದ್ರಾವಕ? ತಾಯಿ ಮಕ್ಕಳನ್ನು ಕೊಂದು ಹೇಗೆ ಬದುಕಿಯಾಳು? ದುರ್ವಿಧಿಯ ಆಟಕ್ಕೆ ಏನೆನ್ನೋಣ?

ಜಗತ್‌ರಾಂ ಮೈಮರವಟ್ಟಂತೆ ಸ್ತಂಭೀಭೂತನಾದ. ಹೃದಯಕುಂಡ ಸಿಡಿದೊಡೆಯುವಷ್ಟು ಕಸಿವಿಸಿಗೊಂಡಿತು. ದೀರ್ಘವಾದ ನಿಟ್ಟುಸಿರು ಬಿಟ್ಟ. ಆಕೆಗೆ ಒಂದೆರಡು ಸಮಾಧಾನದ ಮಾತುಗಳನ್ನು ಹೇಳೋಣವೆಂದರೂ ತುಟಿಗಳು ಅಲುಗಲಿಲ್ಲ.

ಸ್ವಲ್ಪ ಹೊತ್ತಿನೊಳಗಾಗಿ ಆಕೆಯನ್ನು ಜೇಲಿನ ಒಳಾಂತರಕ್ಕೆ ಎಳೆದೊಯ್ದರು.

o o o o

ಜೈಲು ಎಂಬ ನರಕ ಕೂಪದಲ್ಲಿ ತಯಾರಾದ ಬಂದಿಗಳು ಮುಂದೆ ರಾಜ್ಯದ ಯಾವ ಕ್ಷೇತ್ರದಲ್ಲಿಯಾದರೂ ನಿಭಾಯಿಸಬಲ್ಲರು. ಲಾ ಮಿನಿಸ್ಟರುಗಳಂತೆ ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿ ಕಲಿಯುವ ನ್ಯಾಯ ಶಾಸ್ತ್ರಕ್ಕಿಂತಲೂ ಮಿಗಿಲಾಗಿ ಕಲಿಯುವ ಸಾಧ್ಯತೆ ಇರುತ್ತೆ. ಜೀವನದಲ್ಲಿ ನಾವು ಸಾಧಿಸಿದ್ದು ಇದು ಎಂದು ಹೇಳಿಕೊಳ್ಳಲು ಸಾಕ್ಷ್ಯಾಧಾರ ಇಲ್ಲಿ ದೊರೆಯುತ್ತೆ...

ಬ್ರಾಹ್ಮೀ ಮುಹೂರ್ತ. ಮೈಕೊರೆಯುವ ಚಳಿ.

ಬೆಳಗಿನ ಝಾವದಲ್ಲಿ ಸ್ನಾನಕ್ಕಾಗಿ ಹೊರಬಂದ ರಾಜಕಾರಣಿಗಳು ನಲ್ಲಿ ಕಟ್ಟೆಯ ಬಳಿ ನೆರೆದು ಬಟ್ಟೆಯನ್ನು ಕಳಚುವ ನೆವದಲ್ಲಿ ಅತ್ತಿತ್ತ ನೋಡುತ್ತ ಸೂಕ್ತ ಸಮಯಕ್ಕಾಗಿ ಹೊಂಚು ಹಾಕುತಿದ್ದಾರೆ. ಜೋರಾಗಿ ಸುರಿಯುವ ನಲ್ಲಿಯ ನೀರು ತೊಟ್ಟಿಗೆ ತುಂಬುತಿತ್ತು ಜೊಳಜೊಳ ಸದ್ದಿನೊಡನೆ. ಚಳಿಯ ಕೊರೆತದಿಂದ ತ್ರಾಸಿತರಾದ ಕಾವಲುಗಾರರು ಅಲ್ಲಲ್ಲೇ ಮೈಮುದುಡಿ ಕುಳಿತು

ತಲೆಯಲ್ಲಿನ ಉಲ್ಲನ್ ಟೋಪಿಯನ್ನು ಕೆನ್ನೆ ಕಿವಿ ಮುಚ್ಚುವಂತೆ ಎಳೆದುಕೊಂಡು ತೂಕಡಿಸ ಹತ್ತಿದರು. ಒಮ್ಮೊಮ್ಮೆ ಎಚ್ಚರವಾದಾಗ ಮಾತಾಡಿದರೂ ಮತ್ತೆ ನಿದ್ದೆಯ ಮಂಪರ.

ಅಲ್ಲಲ್ಲೇ ಅಡ್ಡಾಡಿದ ಎಲ್ಲರಿಗೆ ಇದು ಸರಿಯಾದ ಸಮಯ ಎನಿಸಿತು. ಒಬ್ಬೊಬ್ಬರಾಗಿ ಅಲ್ಲಿಂದ ಜಾರಿ ಎತ್ತರವಾದ ಪ್ರಾಕಾರದ ಕಡೆಗೆ ಹೋದರೆ, ಆ ಎತ್ತರದ ಗೋಡೆಯನ್ನು ಹತ್ತಿ ಹಾರುವುದು ಅಷ್ಟು ಸುಲಭವಲ್ಲ ಎಂಬುದರ ಅರಿವಾದರೂ ಸಾಹಸಪ್ರಿಯತೆ ಹುರಿದುಂಬಿಸಿತು. ಮೂರುನಾಲ್ಕು ಪಂಚೆಗಳನ್ನು ಒಂದಕ್ಕೊಂದು ಗಂಟುಹಾಕಿ, ನೂಲೇಣಿಯನ್ನಾಗಿ ಮಾಡಿ ಗೋಡೆಯ ಕಡೆಗೆ ಉಂಡೆ ಸುತ್ತಿ ಎಸೆದರೆ ಅದು ಅದೃಷ್ಟವಶಾತ್ ಹತ್ತಿರದ ಟೆಲಿಫೋನಿನ ಕಂಬಕ್ಕೆ ಒಂದು ಸುತ್ತು ಹಾಕಿ ಕೆಳಗೆ ಬಿತ್ತು ಸೂಕ್ಷ್ಮಾತಿಸೂಕ್ಷ್ಮವಾಗಿ ಸಹಕರಿಸುವಂತೆ.

ಕೂಡಲೇ ಎರಡೂ ತುದಿಗಳನ್ನು ಜೋಡಿಸಿ ಕಟ್ಟಿ, ಅದರ ಮುಖೇನ ಗೋಡೆಯನ್ನು ಏರಿದರು. ಅನಂತರ ಅಷ್ಟೇ ಸುಲಭವಾಗಿ ನೂಲೇಣಿಯನ್ನು ಎಳೆದುಕೊಂಡು ಅಷ್ಟೇ ಸುಲಭವಾಗಿ ಗೋಡೆಯಿಂದ ಹೊರಮಗ್ಗುಲಿಗೆ ಇಳಿಯುವುದು ಸಾಧ್ಯವಾಯಿತು ಎಲ್ಲರಿಗೂ.

"ಪಂಚೆ ಇಲ್ಲೇ ಉಳಿದರೆ ಸುಳಿವು ಬೇಗ ಸಿಗುತ್ತದೆ. ನಾವಿದನ್ನು ಬಿಚ್ಚಿಕೊಂಡು ಹೋಗಬೇಕು...ಈಗಲೇ ಬಿಚ್ಚಿಕೊಳ್ಳಿ. ಬೇಗನೆ ಬಿಚ್ಚಿ.... ಕಾವಲುಗಾರರ ಮೇಲೆ ಒಂದು ಕಣ್ಣಾದರೆ ಇನ್ನೊಂದು ಕಣ್ಣು ತಮ್ಮವರ ಮೇಲೆ ಇಟ್ಟಿರಬೇಕು ತಿಳಿಯಿತೆ?" ಎಂದ ಜಗತ್‌ರಾಂ.

ಆ ಮಾತಿಗೆ ಎಲ್ಲರೂ ಚರುಕಾದರು. ಕಡುಕತ್ತಲಲ್ಲಿ ಗಂಟುಬಿಚ್ಚುವುದು ಅಷ್ಟು ಸುಲಭವಲ್ಲದಿದ್ದರೂ ಪ್ರಯತ್ನ ಸಾಗಿತು. ಸ್ವಲ್ಪೇ ಹೊತ್ತಿನೊಳಗಾಗಿ ಗಂಟು ಬಿಚ್ಚುವುದರಲ್ಲಿ ಯಶಸ್ವಿಯಾಗಿ ಪಂಚೆಯನ್ನು ಎಳೆದುಕೊಂಡು ಅಲ್ಲಿಂದ ಜಾರಿ ಕತ್ತಲಲ್ಲಿ ಕರಗಿ ಹೋದರು ರಾಜಕೀಯ ಖೈದಿಗಳು.

ಆದರೆ...

ತುರಂಗವಾಸಿಗಳಾದ ಆ ನತದೃಷ್ಟ ಜೀವಿಗಳು ?

"ನನಗೆ ಗಲ್ಲು ಶಿಕ್ಷೆ ಕೊಡಿಸಿ ಸಾಯಿಸಿ ಬಿಡಿ ಸ್ವಾಮಿ! ಸಾಯಿಸಿಬಿಡಿ." ಎಂದು ಚೀರುತ್ತಿದ್ದ ಆ ಮಾನಿನಿ ? ಈಗಲೂ ಅಳು–ಗೋಳು ಕರ್ಣಪಟಲದ ಮೇಲೆ ಮೊರೆಯುತ್ತಲೇ ಇದೆ.

ಆ ಸಂಕಟ–ಕ್ಲೇಶ ಕಾಲುಗಳನ್ನು ಹಿಂದೆಳೆಯುತ್ತವೆ. ಆದರೂ, ಓಡದೆ ವಿಧಿಯಿರಲಿಲ್ಲ. ಎಲ್ಲರೂ ಹೆಜ್ಜೆಗಳ ಸದ್ದು ಮೂಡದಂತೆ ನಡೆದು ಅಲ್ಲಿಂದ ಪಾರಾಗಿ ಹೋದರು.

೦ ೦ ೦ ೦

ನಲ್ಲಿಯ ನೀರು ಒಂದೇ ಸಮನೆ ಸುರಿಯುತ್ತಲೇ ಇದೆ. ಜೊಳ ಜೊಳ ಜೊಳ. ಬಹುಶಃ ಸುರಿಯುವ ನೀರಿನ ಸದ್ದು ಕಾವಲುಗಾರರಿಗೆ ನಂಬಿಕೆ ಮೂಡಿಸಿತೇನೋ.

ವಾರ್ಡನ್ ಬೆಳಗಿನ ಝಾವದ ಸರದಿಯಲ್ಲಿ ಜೈಲನ್ನು ಸುತ್ತು ಹಾಕಿ ಇತ್ತಲೇ ಬಂದ. ಕೈಯಲ್ಲಿ ಉಜ್ವಲ ಬೆಳಕಿನ ವಿದ್ಯುತ್ ದೀಪ. ಕಿಸೆಯಲ್ಲಿ ಪಿಸ್ತೂಲು. ಸದ್ದುಗದ್ದಲವಿಲ್ಲದೆ ಅನೇಕ ವಾರ್ಡುಗಳನ್ನು ದಾಟಿದ. ಎಲ್ಲರೂ ನಿದ್ದೆಯಲ್ಲಿದ್ದುದರಿಂದ ಗೊರಕೆಯ ಸದ್ದು ವಿನಾ ಮತ್ತಾವ ಸದ್ದೂ ಇಲ್ಲ. ಮುಂದೆ ರಾಜಕೀಯ ಖೈದಿಗಳ ಕೊಠಡಿಗಳೆಲ್ಲಾ ತೆರೆದುಕೊಂಡಿವೆ. ಒಳಗಡೆ ಯಾರೂ ಇಲ್ಲ. ಅಲ್ಲಿಂದ ನೇರವಾಗಿ ನಲ್ಲಿ ಕಟ್ಟೆಯ ಕಡೆಗೆ ಬಂದ. ಉಜ್ವಲ ಬೆಳಕು ಸುತ್ತಮುತ್ತಲೂ ಹರಿದಾಡಿ ಕತ್ತಲೆಯ ತೆರೆಯನ್ನು ಹರಿಯಿತು. ದೃಷ್ಟಿಯ ಕಕ್ಷೆಯಲೆಲ್ಲಾ ಮಿಕಿಮಿಕಿ ನೋಡಿದ. ಒಮ್ಮೆಲೇ ಹೃದಯವೇ ಬಾಯಿಗೆ ಬಂದಷ್ಟು ಭಯ ಭೀತಿ ಉದ್ಭವಿಸಿತು ಎದೆಯಾಳದಲ್ಲಿ. ಜೋರಾಗಿ ಸೀಟಿ ಊದಿ ಶಿಳ್ಳೆ ಹಾಕಿದ. ಪುನಃ ಪುನಃ ಹೊರಬಿತ್ತು, ದೀರ್ಘ ದೀರ್ಘಾಯತವಾದ ಕರ್ಕಶ ಶಿಳ್ಳೆ. ಒಡನೆ ಸುತ್ತಮುತ್ತಲಿನ ಕಾವಲುಗಾರರ ಶಿಳ್ಳೆಗಳು ಹೊರಬಿದ್ದುವು. ಅಲ್ಲಿ ತೂಕಡಿಸುತ್ತಿದ್ದವರೆಲ್ಲಾ ಗಡಬಡಿಸಿ ಎದ್ದು ಪ್ರತಿಯಾಗಿ ಶಿಳ್ಳೆ ಊದಿದರು! ಪ್ರತ್ಯುತ್ತರವಾಗಿ ಸೈರನ್ ಉಚ್ಚಸ್ವರದಲ್ಲಿ ಮೊಳಗಿತು.

ಎಲ್ಲರೂ ನಲ್ಲಿ ಕಟ್ಟೆಯ ಬಳಿಗೆ ಧಾವಿಸಿ ಬಂದರು. ನಲ್ಲಿ ನೀರು ಯಥಾ ಪ್ರಕಾರವಾಗಿ ಜೊಳ ಜೊಳ ಸುರಿಯುತಿತ್ತು. ತೊಟ್ಟಿ ತುಂಬಿದ ನೀರು ಕಾಲುವೆಯಲ್ಲಿ ಯಾವ ತಡೆಬಡೆಯೂ ಇಲ್ಲದೆ ಹರಿದೋಡುತ್ತಿದೆ.

ಕಾವಲುಗಾರರು ಖೈದಿಗಳನ್ನು ಹುಡುಕಲು ಮೂಲೆ ಮೂಲೆಗೂ ಟಾರ್ಚಿನ ಬೆಳಕನ್ನು ಚೆಲ್ಲುತ್ತ ಓಡಾಡಿದರು. ಜೈಲಿನ ಮುಖ್ಯಾಧಿಕಾರಿಗೂ ಪೊಲೀಸ್ ಠಾಣೆಗೂ ಸುದ್ದಿ ಮುಟ್ಟಿತು. ಖೈದಿಗಳ ಸುಳಿವು ಯಾರಿಗೂ ಸಿಗಲಿಲ್ಲ.

ನಲ್ಲಿಯ ನೀರು ನಿರಾತಂಕವಾಗಿ ಬೀಳುತಿತ್ತು ತೊಟ್ಟಿಗೆ ಜೊಳ ಜೊಳ.

— ೦ —

ವೀರ ಚಕ್ರ

೫

ಯತ್ ಪೂರ್ವ ವಿಧಿ ಲಲಾಟ ಲಿಖಿತಂ
ತತ್ ಮಾರ್ಜಿತು ಕಃ ಸಮಃ ।

ರಷ್ಯಾ ದೇಶದ ಮಹಾ ವ್ಯಾಪ್ತಿಯಲ್ಲಿ ಮೊರೆಯುತ್ತ ಹರಿಯುವ ವೋಲ್ಗಾ ನದಿಯ ಸುಂದರ ತೀರದ ಮೇಲೆ ಹಸುರುಕ್ಕುವ ಒಂದು ಸಣ್ಣ ಹಳ್ಳಿ.

ಬರೀ ರಷ್ಯನರೇ ವಾಸಿಸುವ ಸಾಲಾಗಿ ಹತ್ತಿಪ್ಪತ್ತು ಮನೆಗಳ ಮನ ಮೋಹಕ ದೃಶ್ಯ.

ಸಣ್ಣಪುಟ್ಟ ದೊಡ್ಡ ಹಿಡುವಳಿಗಳನ್ನು ಹೊಂದಿದ ಅವರು ಕಟ್ಟಾ ಮುಟ್ಟಾ ಸ್ಪರ್ಧಾಳುಗಳು. ಕೆಮ್ಮೊಗದ, ಕೆಂಗೂದಲ ಜನರಾಶಿ. ರಾಷ್ಟ್ರಭಕ್ತಿ ಬಿಸಿ ನೆತ್ತರಿನಲ್ಲಿ ತುಂಬಿ ತುಳುಕುತ್ತದೆ. ಜೀವನ ಸಂಮೃದ್ಧಿಗಾಗಿ, ರಾಷ್ಟ್ರ ಕ್ಷೇಮಕ್ಕಾಗಿ ಕಷ್ಟಪಟ್ಟು ದುಡಿಯುವ ಶ್ರಮಿಕ ಜೀವಿಗಳು. ಒಳಹೊರಗೆ ದುಡಿಯುವುದೊಂದೇ ಗುರಿ. ಸೋಮಾರಿತನ ಅವರ ಬಳಿಯೂ ಸುಳಿಯದು. ಸ್ತ್ರೀಪುರುಷರು ಕೂಡಿಯೇ ಸಂಜೀವನ ಕರ್ಮಯೋಗ.

ಮರುದಿನ ಬೆಳಿಗ್ಗೆ ಮನೆಮನೆಯ ತರುಣರು ಯುದ್ಧ ಭೂಮಿಗೆ ಹೊರ ಡುವವರಿದ್ದರು. ರಾಷ್ಟ್ರದ ಕರೆಗೆ ಓಗೊಟ್ಟ ತರುಣರ ಮೈಯಲ್ಲಿ ನೂರ್ಮಡಿಯ ಹುರುಪು. ಸಲಸಲವೂ ಗೆದ್ದು ವಿಜಯಶ್ರೀಯನ್ನು ಒಲಿಸಿಕೊಂಡು ಬರುವ ಅವರಲ್ಲಿ ಬಿಸಿನೆತ್ತರು ಕೊತಕೊತ ಕುದಿಯುತ್ತದೆ. ಯುದ್ಧ ಒದವಿತೆಂದರೆ ಮಿಲಿಟರಿಯ ಸೇರ್ಪಡೆಗೆ ಮನೆಮನೆಗೂ ತುರ್ತುಕರೆ ಬಂದೇ ಬರುತ್ತದೆ ಸರ

ಕಾರದಿಂದ. ಯುದ್ಧ ಮುಗಿದ ಬಳಿಕ ಹಳ್ಳಿಯ ಯುವ ಜನಾಂಗ ಶಾಂತಿ ವೀರರೇ. ಎಲ್ಲಾ ಮನೆಮನೆಯಲ್ಲೂ ತರುಣರು ಹೊರಡುವ ತಯಾರಿ ನಡೆ ಸಿದ್ದಾರೆ. ಪುಕ್ಕಲು ಮನದ ತಾಯಂದಿರು ಮಡದಿಯರು ಕಹಿಯ ಕಸಿವಿಸಿಯ ನ್ನುಂಡರೂ ತಮಗೆ ತಾವೇ ಅಂಕುಶವಾಗುವ ಧೈರ್ಯಕ್ಕೆ ಕೊರತೆಯಿಲ್ಲ. ಅಂತೂ, ತುಂಬಾ ಗಂಭೀರವಾದ ವಾತಾವರಣ ಹಳ್ಳಿಯಲ್ಲಿ.

ಪರ್ವತ ಪ್ರದೇಶವಾದ ನಿಮ್ನೋನ್ನತ ಭೂಮಿಯ ತಳಭಾಗದಲ್ಲಿ ಹಬ್ಬಿ ಹರಡಿದ ವಿಶಾಲವಾದ ಬಯಲಿಗೆ ಟ್ರಕ್ಕುಗಳು ಬರುತ್ತವೆ. ಅಲ್ಲಿಗೆ ಸುತ್ತು ಮುತ್ತಿನ ಸಣ್ಣಸಣ್ಣ ನಗರಗಳಿಂದ, ಹಳ್ಳಿ ಹಳ್ಳಿಗಳಿಂದ ಯುವ ಪ್ರಭೃತಿಗಳು ಬಂದು ಬಯಲ ತುಂಬಾ ಕೂಡುತ್ತಾರೆ. ಅಲ್ಲಿಂದ ಟ್ರಕ್ಕುಗಳಲ್ಲಿ ಮಿಲಿಟರಿ ಕ್ಯಾಂಪಿಗೆ ಪಯಣ. ಮರುದಿನ ಮುಂಜಾನೆ ಹೊರಡುವ ಸಮಯವಾದ್ದರಿಂದ ಮನೆಮನೆಗಳಲ್ಲೂ ಸಿದ್ಧತೆಯ ಗಡಿಬಿಡಿ. ಹಳ್ಳಿಯಲ್ಲಿ ಸಾಲು ಮನೆಗಳ ಮುಂದೆ ಸಾಲಾದ ಮುಳ್ಳು ತಂತಿಯ ಬೇಲಿ. ಅದರ ಬದಿಯಲ್ಲೇ ಹರಿಯುತ್ತದೆ ಕಾಲು ಹಾದಿ ದೂರದ ತಗ್ಗಿನ ಬಯಲಿಗೆ. ಬೇಲಿಯ ಬಳಿ ನಿಂತು ನೋಡಿದರೆ ಟ್ರಕ್ಕು ಗಳ ಆಗಮನ–ನಿರ್ಗಮನ ಚೆನ್ನಾಗಿ ಕಾಣಿಸುತ್ತದೆ. ಹಿರಿಯರಿಗೆ ಮಕ್ಕಳನ್ನು ರಣರಂಗಕ್ಕೆ ಕಳುಹಿಸುವುದು ಹೊಸದಲ್ಲವಾದರೂ ಕಳವಳ–ತಳಮಳ ಮನಮನ ಗಳಲ್ಲಿ. ಮಿಲಿಟರಿ ಸಮವಸ್ತ್ರಗಳನ್ನು ಸಜ್ಜುಗೊಳಿಸುವಿಕೆ ಮತ್ತು ಔತಣ ಎರಡರಲ್ಲೂ ತೊಡಗಿರುವುದರಿಂದ ಕೈತುಂಬಾ ಕೆಲಸ. ಎಲ್ಲಾ ಮನೆಗಳ ತರುಣರೂ ಸಜ್ಜುಗೊಳ್ಳುತಿದ್ದಾರೆ. ಬಟ್ಟೆ ಬರೆಗಳ ಜೋಡಣೆ, ಉಪಯುಕ್ತ ವಸ್ತುಗಳ ಸಂಗ್ರಹಣೆ ಹಾಗೂ ತಾವಿಲ್ಲದ ಸಮಯದಲ್ಲಿ ಭೂಮಿಕಾಣಿಯ ವ್ಯವಸ್ಥೆ ಹೀಗೆ ಒಂದಲ್ಲ ಒಂದು ರೀತಿಯ ಕಾರ್ಯನಿರ್ವಹಣೆ ಯುವಮಂದಿಗೆ. ಅಂತೂ, ಮನೆಮನೆಯೂ ದೊಡ್ಡ ಕಾರ್ಯಾಗಾರವೇ. ಮನೆಯವರ ಚಟು ವಟಿಕೆ ಒಂದು ಬಗೆಯದಾದರೆ ಯುವ ಜನರ ಚಟುವಟಿಕೆಯು ಇನ್ನೊಂದು ಬಗೆ. ಬುದ್ಧಿ–ಧೈರ್ಯಗಳ ಒಕ್ಕೂಟ.

ಯೆಗೊರೆವಿಚ್ ಯುದ್ಧರಂಗಕ್ಕೆ ಹೊರಡುವವನಿದ್ದ. ಮಗನಿಗಾಗಿ ವಿಶೇಷ ಅಡಿಗೆಯ ತಯಾರಿಯಲ್ಲಿ ನೈಮರೆತಿದ್ದಾಳೆ ತಾಯಿ. ಯೊಗೊರೆವಿಚ್

ಒಬ್ಬನೇ ಮಗ ಹೆತ್ತವರಿಗೆ. ಅವನ ಏಳಿಗೆಯೇ ಎಲ್ಲರ ಏಳಿಗೆ. ಅವನಿಗಾಗಿಯೇ ಬದುಕಿನಲ್ಲಿ ಆಸ್ಥೆ–ಸುವ್ಯವಸ್ಥೆ ಎಲ್ಲಾ.

ಅಡಿಗೆಮನೆಯಿಂದ ಒಗ್ಗರಣೆಯ ಕಂಪು 'ಘಂ' ಎಂದು ಮೂಗಿಗೆ ಮುಟ್ಟುತ್ತಿದೆ. ಕೆಮ್ರೊಗದ ಯೆಗೊರೆವಿಚ್ ಧೀರ ಗಂಭೀರ ಗಂಡಾಳು. ಅವನು ಹಿಂದೆಯೂ ಒಮ್ಮೆ ಯುದ್ಧಕ್ಕೆ ಹೋಗಿ ಬಂದಿದ್ದ. ವರ್ಷದಾದಿಯಲ್ಲಿ ಅವನಿದ್ದುದು ರಣ ಭೂಮಿಯಲ್ಲಿ. ಶತ್ರುಗಳನ್ನು ಗೆದ್ದು ವಿಜಯಶ್ರೀಯನ್ನು ಒಲಿಸಿ ಹಿಮ್ಮರಳಿ ಬಂದಾಗ ಎಂತಹ ಆಮೋದವೋ .... ಅವನಿಗೆ ಇದು ಎರಡನೆಯ ರಣರಂಗದಯಾತ್ರೆ. ಅವನ ಪ್ರೇಯಸಿ ಬೆಳಗಿನಿಂದಲೂ ಅಲ್ಲಿಯೇ ಇದ್ದು ಸಹಾಯಕಳಾಗಿದ್ದಾಳೆ. ಒಳಗಡೆ ತಾಯಿಯೊಂದಿಗೆ ಮಾಡಬೇಕಾದುದೆಲ್ಲವನ್ನೂ ಮಾಡಿದನಂತರ ಅವನ ಬಟ್ಟೆಬರೆಗಳನ್ನು ಇಸ್ತ್ರಿ ಮಾಡಿದಳು ಏಲಿ. ಅವಳು ವಯಸ್ಸಿನಲ್ಲಿ ಚಿಕ್ಕವಳಾದರೂ ಬೌದ್ಧಿಕ ಸ್ತರದಲ್ಲಿ ಹಿರಿಯವಳೇ. ಯೆಗೊರೆವಿಚ್-ನ ಸಂಗಾತಿಯಾಗಿ ವರ್ಷವೇ ಕಳೆದಿತ್ತೇನೋ. ಒಳಗಡೆ ಊಟದ ಮೇಜು ಅಣಿಯಾಗಿತ್ತು. ನಾಲ್ವರೂ ಒಟ್ಟಿಗೆ ಕುಳಿತು ಊಟ ಮುಗಿಸಿದರು. ಹೆಚ್ಚು ಮಾತುಕತೆಗಳೇನೂ ನಡೆಯಲಿಲ್ಲ. ಎದೆಯಾಳದ ಕಸಿವಿಸಿಯಿಂದ ಮೌನ.

ಯೆಗೊರೆವಿಚ್ ಅವಳ ಮುದ್ದು ಮುಖದ ಮೇಲೆ ಮುದ್ದಿನ ಮಳೆಗರೆಯುತ್ತ ಹೇಳಿದ,

"ನಾವು ರಣಭೂಮಿಯಲ್ಲಿ ಕಾಡು ಮೇಡುಗಳಲ್ಲಿ ಅಲೆಯಬೇಕಾಗುತ್ತದೆ. ಯಾವಾಗ ಎಲ್ಲಿರುತ್ತೇವೆ ಎಂದು ಹೇಳುವಂತಿಲ್ಲ. ನಾನು ಕ್ಯಾಂಪಿಗೆ ಬಂದಾಗ ಕೈ ಬಿಡುವು ದೊರೆತರೆ ನಿನಗೆ ಕಾಗದ ಬರೆಯುವೆ. ನೀನು ಬರೆಯುವ ತೊಂದರೆ ತೆಗೆದುಕೊಳ್ಳಬೇಡ. ನೀನು ಬರೆದರೂ ಆ ಕಾಗದ ತಲುಪುವುದು ಮೂರು ತಿಂಗಳಿಗೋ ಆರು ತಿಂಗಳಿಗೋ ಯಾರಿಗೆ ಗೊತ್ತು. ನೀನು ನನಗಾಗಿ ಚಿಂತಿಸಲೇ ಬೇಡ. ನಮ್ಮನ್ನು ಕಾಪಾಡಿಕೊಳ್ಳುವುದು ನಮಗೆ ಗೊತ್ತು. ಈ ಸಲಿಯೂ ನಾವು ಗೆಲ್ಲುವವರೇ, ನಮ್ಮ ದೇಶದ ಇಂಚು ನೆಲವನ್ನೂ ಇತರರಿಗೆ ಬಿಟ್ಟು ಕೊಡುವ ಪ್ರಶ್ನೆಯೇ ಇಲ್ಲ. ದೇಹದಲ್ಲಿ ನೆತ್ತರಿನ ತೊಟ್ಟು ಇರುವವರೆಗೂ

ನಾನು ಹೋರಾಡುವೆ. ಈ ದೇಹ ಸಾಮಾನ್ಯ ಮಾಂಸಖಂಡದಿಂದ ತುಂಬಿಲ್ಲ, ಉಕ್ಕಿನಿಂದ ಮಾಡಿದ ಗಟ್ಟಿದೇಹ. ನನ್ನ ಖಂಡಗಳನ್ನು ನೋಡು! ಇವು ಇರುವುದು ಯೋಧ ಜೀವನಕ್ಕಾಗಿಯೇ. ನನ್ನ ಕಫ್ತಾನ ನನ್ನನ್ನು ನೋಡಿದಾಗಲೆಲ್ಲ "ನಿನ್ನಂಥ ವೀರರು ನಮಗೆ ಬೇಕು. ದೇವರು ನಿನಗೆ ದೀರ್ಘಾಯುಸ್ಸ ಕೊಡಲಿ!" ಎನ್ನುತ್ತಿರುತ್ತಾನೆ. ಇಂಥ ಮೆಚ್ಚಿಗೆ ಇದೆ, ನನ್ನ ಬೆಟಾಲಿಯನ್ನಿನಲ್ಲಿ. ದಂಡಿನಲ್ಲಿ ಮುಂದೆ ನಿಲ್ಲುವವನು ನಾನೇ! ವೀರ ಚಕ್ರ ಪಡೆಯುವವನೂ ನಾನೇ! ಅಂದಮೇಲೆ, ನೀನು ನನ್ನ ಬಗ್ಗೆ ಹೆಮ್ಮೆ ಪಡಬೇಕು. ದುಃಖ ದುಗುಡದ ರಣಗೋಳು ಬಿಟ್ಟು ಬಿಡು. ಈ ಸಲಿ ಬಂದೊಡನೆಯೇ ನಮ್ಮ ಸಂಲಗ್ನ, ಅಷ್ಟರೊಳಗಾಗಿ ನೀನು ನಮಗೊಂದು ಪುಟ್ಟಮನೆಯನ್ನು ಹುಡುಕಿಟ್ಟಿರು. ಅನಂತರ ನಾವು ಹಾರುವ ಹಕ್ಕಿಗಳು! ಜಿಗಿಯುವ ಜಿಂಕೆಗಳು! ವಿಲೀ, ನನ್ನ ಮುದ್ದು ವಿಲೀ! ಮಾತಾಡು. ಏಕೆ ಮೌನಿಯಾಗಿದ್ದಿ?"

"ಯೆಗೊರೆವಿಚ್, ನನಗೆ ದುಃಖವೇನಿಲ್ಲ. ಪಿತ್ತವಾತಗಳಿಂದ ಸಾಯುವುದಕ್ಕಿಂತ ರಣರಂಗದಲ್ಲಿ ಬರುವ ವೀರ ಮರಣ ಸಾವಿರ ಪಾಲು ಲೇಸು. ನಾನದನ್ನು ಇಲ್ಲವೆನ್ನಲಾರೆ. ಸಂಸಾರದಲ್ಲಿ ಶಾಂತಿಯಿಂದ ಬಾಳುವುದು ಮುಖ್ಯ. ನೋಡೋಣ ದೇವರು ನಮ್ಮ ಕಡೆಗಿದ್ದಾನೆ. ನಾನು ನಿನಗಾಗಿ ಸದಾ ಪ್ರಾರ್ಥಿಸುತ್ತಲೇ ಇರುವೆ. ಖಂಡಿತ ಅವನು ನಮ್ಮ ಕಡೆಗೆ ನಿಷ್ಕರುಣಿಯಾಗಲಾರ. ನಿನ್ನನ್ನು ನೀನು ರಕ್ಷಿಸಿಕೊಳ್ಳುವುದರಲ್ಲಿ ನೀನು ಶೂರನಿದ್ದಿ. ಒಟ್ಟಿನಲ್ಲಿ ದೇವರ ಆಶೀರ್ವಾದವಿರಬೇಕು. ನೀನಿಲ್ಲದೆ ಇಲ್ಲಿ ಕಾಲಹರಣ ಬಹಳ ಕಷ್ಟ. ಅತ್ತೆ ನೀನಿಲ್ಲೇ ಇದ್ದುಬಿಡು ಎನ್ನುತ್ತಾಳೆ. ಅಂತೂ, ನಮ್ಮಲ್ಲಿಗೂ ಇಲ್ಲಿಗೂ ಓಡಾಡಿಕೊಂಡಿರುತ್ತೇನೆ. ನಿನ್ನ ಸುಖಾಗಮನವೊಂದೇ ನನ್ನ ಎದೆಯ ಹಾರೈಕೆ. ಮತ್ತೇನೂ ಇಲ್ಲ ಯೆಗೊರೆವಿಚ್." ಕರುಣ ಕಾತರ ಧ್ವನಿ ನಸು ಕಂಪಿಸಿತು. ಕಣ್ಣುಗಳಲ್ಲಿ ತೆಕ್ಕನೆ ಕಂಬನಿಗಳು ಮೊಳೆತುವು. ಅವನ ಎದೆಯಲ್ಲಿ ಮುಖವನ್ನು ಹುಗಿದುಕೊಂಡಳು ಅವಳು.

ಅವನೂ ಎರಡೂ ಕೈಗಳಿಂದ ಅಪ್ಪಿ ಹಿಡಿದು ನೆತ್ತಿಗೆ ಹೊಮುತ್ತನೊತ್ತಿದ. ಎರಡೂ ಹೃದಯಗಳು ವ್ಯಾಪ್ತಿಗೆ ಮೀರಿ ಮಿಡಿದುವು ಡವಡವಿಸಿ. ಪ್ರೇಮದ ಹಕ್ಕಿಗಳು ಅದೆಷ್ಟು ಹೊತ್ತು ಒಂದುಗೂಡಿ ತೆಕ್ಕೆ ಬಿದ್ದಿದ್ದುವೊ...

ಒಳಗಣ ಮುಸುರೆ ಬಳಿದು ತಾಯಿ ತಂದೆಯರು ಹೊರಬಂದರು. ಹೊರಗಡೆ ಪೂರ್ಣ ಚಂದ್ರನ ಬೆಳುದಿಂಗಳ ಧಾರೆ ಹರಿದಿತ್ತು. ನಾಲ್ವರೂ ಹೊರ ಅಂಗಳದ ತಂಪಿಗೆ ಮೈಗೊಟ್ಟು ಮಾತಾಡುತ್ತ ನಿಂತರು.

ಆತ್ಮ ಸಂತೋಷದ ಮಾತುಕತೆಗಳು ಹರಿಯುದಿದ್ದರೂ ಸಂಕಟ ಪೂತ ದನಿಯಲ್ಲಿ ಭವಿಷ್ಯದ ವಿಚಾರವಾಗಿ ಮಾತುಕತೆಗಳಾದುವು. ಅನಂತರ ಯೆಗೊರೆ ವಿಚ್ ಅಂದ,

"ನಾನು ವಿಲಿಯನ್ನು ಅವಳ ಮನೆಗೆ ಬಿಟ್ಟು ಬರುವೆ."

"ಆಗಲಿ" ಎಂದ ತಾಯಿ ವಿಲಿಗೆಂದಳು "ಬೆಳಿಗ್ಗೆ ಹೊತ್ತಿಗೆ ಮುಂಚೆ ಬರುತ್ತೀ ತಾನೆ ?"

"ಹೌದು ಆಂಟೀ. ಮುಂಬೆಳಕು ಮೂಡುವ ಮುಂಚೆಯೇ ಬರುವೆ."

ತಂದೆ ತಾಯಿಯರಿಬ್ಬರೂ 'ಟಾಟಾ' ಹೇಳಿದರು.

ಯೆಗೊರೆವಿಚ್ ಅವಳೊಂದಿಗೆ ಹೊರಟ. ಇಬ್ಬರೂ ಕೈಕೈ ತೆಕ್ಕೆ ಹಾಕಿ ನಡೆದರು. ರಸ್ತೆಯ ಕೊನೆಯಲ್ಲಿ ಅವಳ ಮನೆ. ಅದು ಅಂತಹ ದೂರವೇನಲ್ಲ.

"ವಿಲೀ, ನನ್ನ ಮುದ್ದು ವಿಲೀ ! ನೀನು ಏನೇನೂ ಚಿಂತೆ ಮಾಡಬೇಡ. ಹಿಂದಿನಂತೆಯೇ ಈ ಸಲಿಯೂ ನಾಲ್ಕಾರು ತಿಂಗಳುಗಳು ಕಳೆಯುವುದರೊಳ ಗಾಗಿ ಮುಗಿದೀತು ಯುದ್ಧ. ಅದೇನೂ ಹೆಚ್ಚಲ್ಲ. ದೇವರು ಕರುಣೆದೋರ ಬೇಕು ಅಷ್ಟೆ. ಹೋದ ಸಲಿ ಎಂತೆಂತಹ ಕ್ಲಿಷ್ಟ ಸಮಯದಲ್ಲಿ ಪಾರಾಗಿದ್ದೇನೆ ಗೊತ್ತೇ ? ಎಲ್ಲಾ ವಿಷಗಳಿಗೆಯಿಂದಲೂ ನಾನು ಪಾರಾದುದು ದೇವರದಯು ದಿಂದಲೇ. ಈ ಸಲಿಯೂ ಅವನೇ ಕಾಪಾಡುತ್ತಾನೆ ಬಿಡು. ಚಿಂತಿಸಬೇಡ."

ಅಷ್ಟು ಮಾತುಕತೆಯಾಗುವಷ್ಟರಲ್ಲಿ ಅವಳ ಮನೆಯನ್ನು ಮುಟ್ಟಿಯಾ ಗಿತ್ತು. ಅವಳನ್ನು ಅಲ್ಲಿ ಬಿಟ್ಟು ಎಲ್ಲರಿಗೂ ವಿದಾಯ ಹೇಳಿ ಎಲ್ಲರಿಂದಲೂ ನಲ್ಮೆಯ ಬೀಳ್ಕೊಡಿಗೆಯನ್ನು ಪಡೆದುಕೊಂಡು ಅಲ್ಲಿಂದ ಹೊರಟ ಯೆಗೊರೆ ವಿಚ್. ಮನೋ ರಾಜ್ಯದಲ್ಲಿ ಧೈರ್ಯ-ಕಳವಳ ಎರಡರ ಒತ್ತಡವೂ ಇತ್ತು.

೦ ೦ ೦ ೦

ಹಿಂದಿನ ರಣರಂಗದ ವಿಜಯಶ್ರೀ ಸಲಸಲಕ್ಕೂ ಧೈರ್ಯದ ಹುಚ್ಚು ಹೊಳೆಯನ್ನು ಹರಿಸುವಂತಾದ್ದು. ಆದರೂ ತಾಯಿ–ದಾಲಿ ವಿಚ್‌ಗೆ ಕಣ್ಣುಗಳು ಮತ್ತೆಮತ್ತೆ ತೊಯ್ಯುತ್ತವೆ. ಒಬ್ಬನೇ ಮಗ ಎಂಬ ಕರುಣ ಕಾತರ ಮನದಲ್ಲಿ. ರಾತ್ರಿ ನಿದ್ದೆ ಸರಿಯಾಗಿ ಬಂದಿತ್ತೋ ಇಲ್ಲವೋ...ಬೆಳಿಗ್ಗೆ ಬೆಳಕು ಬಿಡವ ಮುನ್ನವೇ ಎದ್ದಾಯ್ತು. ಮಗನ ಬೀಳ್ಕೊಡಿಗೆಗಾಗಿ ಏನೆಲ್ಲಾ ಬೇಕೋ ಅದರ ತಯಾರಿಯಲ್ಲಿ ನಿಮಗ್ನೆ ದಾಲಿವಿಚ್.

ಕಂಬನಿ ತುಂಬಿದ ಕಣ್ಣುಗಳನ್ನು ನೋಡಿದರೆ ಯೆಗೊರೆವಿಚ್ ಸಹಿಸ ಲಾರ. ಅದಕ್ಕಾಗಿ ತನಗೆ ತಾನೇ ಹಠೋಟಿ. ಮುಂಬೆಳಕು ಪಸರಿಸಿದಾಗಲೇ ವಿಲಿ ಬಂದಿದ್ದಾಳೆ. ಅವನ ಬ್ಯಾಗುಗಳಿಗೆ ಸಕಲ ವಸ್ತುಗಳನ್ನೂ ತುಂಬಿದ ಬಳಿಕ ಬ್ಯಾಗುಗಳನ್ನು ಜೋಡಿಸಿ ಒಂದೆಡೆಯಿಟ್ಟಳು ವಿಲಿ. ಅವನಿನ್ನೂ ಎದ್ದೇಯಿಲ್ಲ. ರಾತ್ರಿ ಮೇಲಂಗಿಯನ್ನು ತೆಗೆದು ಗೋಡೆಗೆ ನೇತು ಹಾಕಿದ್ದ. ಅದರ ಇಸ್ತ್ರಿ ಮಾಸಿರಲಿಲ್ಲವಾದರೂ ತೆಗೆದು ಇಸ್ತ್ರಿ ಮಾಡಿದಳು ಅವಳು. ಮೇಜಿನ ಮೇಲೆ ತಿಂಡಿ ಅಣಿಯಾಗಿತ್ತು. ಬ್ರೆಡ್ಡಿನೊಂದಿಗೆ ಮಾಂಸಾಹಾರ, ಬೇಯಿಸಿದ ಮೊಟ್ಟೆ ಗಳು ಮೇಜಿನ ಮೇಲಿವೆ. ಅನೇಕ ಬೇಯಿಸಿದ ತತ್ತಿಗಳನ್ನು ಬ್ಯಾಗಿಗೆ ತುಂಬಿ ದ್ದಾಳೆ ತಾಯಿ.

ದಾಲಿವಿಚ್ ವಿಲಿಗೆಂದಳು "ಎಲ್ಲಾ ಅಣಿಯಾಗಿದೆ. ಯೆಗೊರೆವಿಚ್– ನನ್ನು ಎಬ್ಬಿಸು."

ಅವಳು ಏಳಿಸಿದೊಡನೆಯೇ ಅವನು ಕೈಗಡಿಯಾರದ ಮೇಲೆ ದೃಷ್ಟಿ ಹೊರಳಿಸಿದ.

"ಓ ! ಹೊತ್ತಾಗಿ ಬಿಟ್ಟಿದೆ ! ಹಾ, ಎಂತಹ ನಿದ್ದೆ ? ನೀನು ಬಂದು ಎಷ್ಟೊತ್ತಾಯಿತು ವಿಲಿ ?" ಅವಳು ನೀಡಿದ ಕೈಯನ್ನು ಹಿಡಿದುಕೊಂಡೇ ಎದ್ದ.

"ಆಗಲೇ ಬಂದೆ."

ಅವನು ಮುಖ ಮಜ್ಜನ ಮಾಡಿ ಮುಖ ಒರಿಸಿದ ಟವಲ್ಲನ್ನು ವಿಲಿಯ ಭುಜದ ಮೇಲೆ ಹಾಕಿ ತಿಂಡಿಗೆ ಕುಳಿತ. ತಂದೆ ತಾಯಿ ವಿಲಿ ಎಲ್ಲರೂ ಕುಳಿ ತರು. ತಂದೆ ಬಾರಿ ಬಾರಿಗೂ ಎಚ್ಚರಿಕೆ ಹೇಳುತಿದ್ದ,

"ತುಂಬಾ ಸೂಕ್ಷ್ಮದರ್ಶಿಯಾಗಿರು. ಶತ್ರುಗಳು ಎಲ್ಲೆಲ್ಲಿ, ಯಾವ ಮಗ್ಗುಲಲ್ಲಿ ನುಗ್ಗುತ್ತಾರೆ ಎಂಬುದನ್ನು ಅರಿತುಕೊಂಡೇ ಮುನ್ನಡೆಯಬೇಕು, ಮಗನೇ!"

ಆ ಮಾತನ್ನು ಅದೆಷ್ಟು ಬಾರಿ ಹೇಳಿಯಾಗಿತ್ತೋ, ಆದರೂ ಅವನಿಗೆ ಹೇಳದೆಯೆ ಗತ್ಯಂತರವಿಲ್ಲ. ತಾಯಿ ಏನೋ ಹೇಳಲು ತೊದಲಿದಳಾದರೂ ತುಟಿಗಳು ಬಿರಿಯಲಿಲ್ಲ. ಸುಮ್ಮನೆ ಚಹವನ್ನು ಗುಟುಕಿಸಿದಳು. ಕಣ್ಣುಗಳಂಚಿನಲ್ಲಿ ನೀರಾಡಿತು.

ತಿಂಡಿ ಮುಗಿಸಿ ತನ್ನ ಬ್ಯಾಗುಗಳನ್ನು ಹೊರಗಿಟ್ಟ ಯೆಗೊರೆವಿಚ್. ಆಗಲೇ ಮನೆಮನೆಗಳಿಂದಲೂ ತರುಣರು ಹೊರಬಿದ್ದರು. ಸಾಲುಗಟ್ಟಿ ಹೊರಟಿತು ಯೋಧರ ದಂಡು. ಎಲ್ಲರೂ ತಮ್ಮತಮ್ಮ ಬ್ಯಾಗುಗಳನ್ನು ಹೊತ್ತು ನಡೆದರು ತಂತಿ ಬೇಲಿಯ ಪಕ್ಕದಲ್ಲಿ. ಲರಕ್ ಲರಕ್ ಬೂಟುಗಳ ಶಬ್ದ ಛಂದೋಲಯಬದ್ಧವಾಗಿ ಕೇಳಿಸುತ್ತಿದೆ. ಸಾಲುದ್ದಕ್ಕೂ ಮನೆಮನೆಯ ಹಿರಿಯರೆಲ್ಲ ತಂತಿ ಬೇಲಿಯ ಬಳಿಗೆ ಧಾವಿಸಿ ಬಂದು ನಿಂತರು. ಭಾರವಾದ ಹೃದಯಗಳನ್ನು ಹೊತ್ತು. ಎಲ್ಲರೂ ಹಸ್ತಲಾಘವ ನೀಡುತ್ತ ನಲ್ಮೆಯ ವಿದಾಯ ಹೇಳುತ್ತಿರುವಾಗ ಗದ್ಗದ ಕಂಠಗಳು ಬಿಕ್ಕುತ್ತಿವೆ. ಇಡೀ ಹಳ್ಳಿಯೇ ನೆರೆದು ಬೀಳ್ಕೊಡುತ್ತಿರುವುದೊಂದು ಅಪೂರ್ವ ದೃಶ್ಯ. ಯೆಗೊರೆವಿಚ್ ತನ್ನ ಆತ್ಮೀಯ ಗೆಳೆಯ–ಗೊಲೊನೆಂಕೊನೊಂದಿಗೆ ಹೆಜ್ಜೆ ಹಾಕುತಿದ್ದ. ಯೋಧರು ತಮ್ಮತಮ್ಮ ಟೋಪಿಯೆತ್ತಿ ವಿದಾಯ ಹೇಳುತ್ತಲೇ ನಡೆದ ದೃಶ್ಯ ಕರುಣಕಾತರದಾಯಕವಾದರೂ ಹೆಮ್ಮೆಯ ದ್ಯೋತಕವೂ ಹೌದು.

ಹನಿಗಣ್ಣಾಗಿ ನಿಂತಿದ್ದ ಜನ "ದೇವರು ನಿಮ್ಮನ್ನು ಕಾಪಾಡಲಿ!" ಎಂಬ ಹಾರೈಕೆಯನ್ನು ಸಾಲುದ್ದಕ್ಕೂ ಮೊಳಗಿಸಿದರು ಸುಖದುಃಖದ ದನಿಯಲ್ಲಿ.

"ವೀರ ಚಕ್ರ ಪಡೆದುಕೊಳ್ಳಿ..." ತಾಯಿ ಶುಭ ಹಾರೈಸಿದಳು.

"ಮಗನೇ! ನೀನು ರಷ್ಯನ್ ಎಂಬುದನ್ನು ಎಂದೂ ಮರೆಯಬಾರದು..." ತಂದೆ ಒತ್ತಿ ಹೇಳಿದ.

"ದೇವರು ನಿಮ್ಮನ್ನು ಆಶೀರ್ವದಿಸಲಿ!" ವಿಲಿ ಹನಿಗಣ್ಣಾಗಿ ನುಡಿದಳು.

"ಸುಖವಾಗಿ ಹಿಂದಿರುಗಿ ಬನ್ನಿ....."

"ನಿಮ್ಮ ಒಳ್ಳಿತಕ್ಕಾಗಿ ಪ್ರಾರ್ಥಿಸುತ್ತೇವೆ...."

ಸಾಲುದ್ದಕ್ಕೂ ಕಂಠಗಳು ಕಹಳೆಯಂತೆ ಮೊಳಗುತ್ತಲೇ ಇವೆ. ಯೋಧರು ಯೋಧ ಗತಿಯಲ್ಲೇ ಹಿಂದಿರುಗಿ ನೋಡುತ್ತ ಎಲ್ಲರಿಗೂ ಕೈಕುಲಕಿ ಪ್ರತಿವಂದನೆಗಳನ್ನು ಸಲ್ಲಿಸುತಿದ್ದರು. ಯೆಗೊರೆವಿಚ್ ಧೈರ್ಯದಿಂದ ಕೈಕುಲುಕುತ್ತ ಮುಂದುವರಿದಿದ್ದು ತನ್ನ ತಂದೆ ತಾಯಿಯರ ಕಡೆ ಕೈ ಚಾಚಿದ. ಬೇಲಿಯಾಚೆಯಿಂದಲೇ ಕೈಕುಲುಕಿದರು ಅವರು. ವಿಲಿಯ ಮುದ್ದು ಕೈಯನ್ನು ಕುಲುಕಿ ಮುದ್ದಿಸಿ 'ಧೈರ್ಯವಾಗಿರಿ' ಎಂದು ಮೂವರಿಗೂ ಬಿನ್ನಯಿಸಿಕೊಂಡ ಯೆಗೊರೆವಿಚ್. ಗೊಲೊವೆಂಕೊ ಸಹ ಹಿರಿಯರ ಕೈಕುಲುಕಿದ ವಿನಯದಿಂದ.

ಸಾಲು ಕರಗುತ್ತಿದೆ. ತಗ್ಗು ಪ್ರದೇಶಕ್ಕೆ ಇಳಿಯುತ್ತಿದ್ದಾರೆ ಯೋಧರು. ಲರಕ್ ಲರಕ್ ಪದಾಘಾತ ಕಿವಿಯನ್ನು ಮುಟ್ಟುತ್ತಿದೆ.

ಕೊನೆಯದಾಗಿ ಎಲ್ಲರೂ ಕೂಗಿ ಹೇಳಿದರು "ದೇವರು ನಿಮ್ಮನ್ನು ಕಾಪಾಡಲಿ."

ಯೋಧರ ಸಾಲು ಮುಂದೆ ಮುಂದೆ ಸಾಗಿ ಹೋಯಿತು. ಬೇಲಿ ಸಾಲಿನಲ್ಲಿ ಇನ್ನೂ ಜನ ಕಾದು ನಿಂತೇ ಇದ್ದಾರೆ. ಖಾಲಿ ಮನೆಗಳು 'ಬಿಕೊ' ಎನ್ನುತ್ತ ಹಿಂಬದಿಯಲ್ಲಿ ನಿಂತಿವೆ. ಬಯಲ ತುಂಬೆಲ್ಲಾ ಯೋಧರ ದಂಡು ಕೂಡಿತು. ಟ್ರಕ್ಕುಗಳೂ ಬಂದು ಸೇರಿದುವು. ಭರ್ತಿಯಾಗುತ್ತಲೇ ಅವು ಒಂದೊಂದಾಗಿ ಮಣ್ಣಿನ ಹಾದಿಯಲ್ಲಿ ಧೂಳೆಬ್ಬಿಸುತ್ತ ಹೊರಟು ಹೋಗುತಿದ್ದುವು.

ಆ ಹಳ್ಳಿಯ ಮನೆ ಮನೆಯೂ ಯೋಧರನ್ನು ತಯಾರಿಸಿಕೊಟ್ಟಿದೆ ರಾಷ್ಟ್ರಕ್ಕೆ. ಹಿಂದಿನ ಯುದ್ಧಕ್ಕೆ ಈ ಎಲ್ಲಾ ಯೋಧರೂ ಹೋಗಿದ್ದವರೇ. ಅವರಲ್ಲಿ ನಾಲ್ಕಾರು ಮಂದಿ ಮಾತ್ರ ಹಿಂದಿರುಗಿರಲಿಲ್ಲವೇನೋ. ಧೀರ ಯೋಧರ ಬಿಸಿರಕ್ತ ಪರಂಪರಾನುಗತಿಯಲ್ಲಿ ಹರಿದು ಬಂದಿದೆ. ಆ ಹಳ್ಳಿಯ ಮನೆ

ಮನೆಯಲ್ಲಿ. ಮಾತೃಭೂಮಿಯ ಇಂಚು ಇಂಚು ನೆಲಕ್ಕಾಗಿ ಹೋರಾಡಿದ ಯೋಧರು ಹಸಿಹಸಿ ನೆತ್ತರನ್ನು ನಿರ್ಭಯದಿಂದ ಚೆಲ್ಲಿದ್ದಾರೆ, ಮತ್ತು ಚೆಲ್ಲುವವರಿದ್ದಾರೆ.

○ ○ ○ ○

ಟ್ರಕ್ಕುಗಳು ಸಾಲಾಗಿ ಹೊರಟುವು. ಮುಂದಿನ ಟ್ರಕ್ಕಿನ ಧೂಳು ಹಿಂದಿನ ಟ್ರಕ್ಕಿನ ಜನರಿಗೆ ಗಂಟಲಗಾಣ. ಕರವಸ್ತ್ರದಿಂದ ಮುಚ್ಚಿಕೊಂಡರೂ ಗಂಟಲು ಮೂಗುಗಳಿಗೆ ನುಗ್ಗುತ್ತದೆ ಧೂಳು-ಕೆಂಧೂಳು.

ಸೈನಿಕರ ಕ್ಯಾಂಪ್ ಮುಟ್ಟಿದನಂತರ ಟ್ರಕ್ಕುಗಳು ನಿಂತುವು. ಅಲ್ಲಿ ಚಹ ತಿಂಡಿ ಸೇವನೆಯ ನಂತರ ಎಲ್ಲರಿಗೂ ಬಗೆಬಗೆಯ ರೈಫಲ್‌ಗಳ ಸಹಿತ ಕೆಲಸ ಕಾರ್ಯಗಳ ವಿತರಣೆ. ಮೇಜರ್ ಜನರಲ್ ಆಜ್ಞೆಯ ಪ್ರಕಾರ ಯೆಗೊರೆವಿಚ್ ಮತ್ತು ಗೊಲೊನೆಂಕೊ ಎಣ್ಣೆಯ ಟ್ಯಾಂಕ್ ಹಿಡಿದು ಹೊರಟರು. ಮುಂದಿನ ಟ್ರಕ್ಕುಗಳು, ಮಿಷಿಗನ್ನುಗಳು ಆಗಲೇ ಹೋಗಿ ಬಿಟ್ಟಿವೆ. ಹಿಂದಿನಿಂದ ಕೆಲವು ಬರುತ್ತಿವೆ. ರಸ್ತೆಯಿಲ್ಲದ ಉಬ್ಬು ತಗ್ಗುಗಳಲ್ಲಿ ಹರಿಯಬೇಕು ಟ್ರಕ್ಕುಗಳು.

"ಈವತ್ತು ಯಾಕೋ ಮನಸ್ಸಿಗೆ ಮುಜುಗರ. ಮೈಯಲ್ಲಿ ಹುರುಪೇ ಇಲ್ಲ. ಯಾವತ್ತೂ ಹೀಗಾಗಿರಲಿಲ್ಲ ನೋಡು!" ಕಳಕಳಿಯಿಂದ ನುಡಿದ ಯೆಗೊರೆವಿಚ್.

"ಏಕೆ? ನಿನ್ನ ಸಂಗಾತಿಯನ್ನು ಬಿಟ್ಟು ಬಂದುದಕ್ಕೋ?

"ಅಲ್ಲ, ಅಲ್ಲ. ಅದಲ್ಲ, ಏನೋ ಒಂದು ರೀತಿ...ಏನೆಂದು ಊಹಿಸಿ ಹೇಳಲಾರೆ."

ಹಾದಿ ಸಾಗುತ್ತಲೇ ಇತ್ತು. ಮುಂದಿನ ಟ್ರಕ್ಕುಗಳು ಹರಿದ ಹಾದಿಯ ಗುರುತಿನಲ್ಲಿಯೇ ಓಡುತ್ತಿದೆ ಟ್ರಕ್ಕು. ದಟ್ಟವಾದ ಹುಲ್ಲುಗಾವಲಿನಲ್ಲಿ ಹರಿಯುವಾಗ ಚಕ್ರಕ್ಕೆ ಕಲ್ಲುಗಳು ಬಡಿಯುತಿದ್ದುವು. ಎಷ್ಟೆಷ್ಟು ಸಾಧ್ಯವೋ ಅಷ್ಟಷ್ಟು ಕಲ್ಲುಗಳನ್ನು ಮುಂದಿನವರು ತೆಗೆದುಹಾಕಿ ಹಾದಿಯನ್ನು ಚೊಕ್ಕಗೊಳಿಸಿರು

ತ್ತಾರೆ. ಆದರೂ, ಒಂದಲ್ಲ ಒಂದು ರೀತಿಯ ಅಡೆತಡೆಗಳು ಇದ್ದೇ ಇರುತ್ತವೆ. ಗಿಡಗೆಂಟೆಗಳು ಅಥವಾ ಉಬ್ಬು ತಗ್ಗುಗಳು ತಪ್ಪಿದ್ದಲ್ಲ. ಹತ್ತಿಪ್ಪತ್ತು ಮೈಲಿ ನಡೆಸಿದ ನಂತರ ಯೆಗೊರೆವಿಚ್ ಗೊಲೊವೆಂಕೋ-ಗೆ ಟ್ರಕ್ ನಡೆಸಲು ಬಿಟ್ಟು ಕೊಟ್ಟ. ಮುಂದಿನ ಹಾದಿ ಏರುಮುಖ. ಬೆಟ್ಟದ ನೆತ್ತಿಯ ಮೇಲಿಂದ ಶತ್ರುಗಳ ಮೇಲೆ ಧಾಳಿಯಿಡಬೇಕು. ಬೆಟ್ಟದ ನೆತ್ತಿಯಲ್ಲಿ ಅಡಗಿ ಕುಳಿತುಕೊಳ್ಳಲು ಗುಂಡಿಗಳನ್ನು ತೋಡಿದ್ದಾರೆ. ಟ್ರಕ್ಕುಗಳು ಅಲ್ಲಿಗೆ ಸರಾಗವಾಗಿ ಏರಿ ಹೋಗುತ್ತವೆ. ಯೋಧರಿಗೂ ಎಲ್ಲ ಅಂದರೆ ಅಲ್ಲಿಗೆ ಗಾಡಿ ಓಡಿಸಿ ಅಭ್ಯಾಸ. ಉಬ್ಬು ತಗ್ಗುಗಳ ಮಾತಿರಲಿ ಗಿರಿನೆತ್ತಿಗೂ ಓಡಿಸುತ್ತಾರೆ.

ಎಣ್ಣೆ ಟ್ಯಾಂಕು ಮುಂದಿನ ಮಿಲಿಟರಿ ಕ್ಯಾಂಪಿಗೆ ಹೋಗುವುದಿತ್ತು. ಬೆಟ್ಟದ ಏರು ಹಾದಿಯನ್ನು ಬಿಟ್ಟು ಕ್ಯಾಂಪಿನ ಹಾದಿ ಹಿಡಿಯಿತು ಟ್ರಕ್ಕು. ದೂರದ ತಿರುವಿನಲ್ಲಿ ಕಡಿದಾದ ದಾರಿ. ಅದರಲ್ಲಿ ತಿರಿವಿಕೊಂಡಾಗ ಆಯ ತಪ್ಪಿತು. ಎಣ್ಣೆ ಟ್ಯಾಂಕ್ ದೊಡ್ಡ ಸದ್ದಿನೊಡನೆ ದಡ್ ದಡ್ಡನೆ ಉರುಳಿಬಿತ್ತು. ಇಬ್ಬರೂ ದೂರ ಎಸೆಯಲ್ಪಟ್ಟರು. ಎಣ್ಣೆ ಟ್ಯಾಂಕ್ ಸಿಡಿದು ಬೆಂಕಿ ಹೊತ್ತಿ ಕಾದ ಎಣ್ಣೆ ಮುಖ ಮೈಗೆ ಸಿಡಿಯಿತು. ಇಬ್ಬರೂ ಮೂರ್ಛಿತರಾದರು. ಸುಟ್ಟಗಾಯಗಳು ಘೋರವಾಗಿದ್ದವು.

ಸ್ವಲ್ಪೇ ಸ್ವಲ್ಪ ಹೊತ್ತಿನೊಳಗಾಗಿ ಹಿಂದಿನಿಂದ ಬಂದ ಟ್ರಕ್ಕಿನವರು ಇಬ್ಬರನ್ನೂ ಹೊತ್ತು ಟ್ರಕ್ಕಿಗೆ ಹಾಕಿಕೊಂಡು ಹೋಗಿ ಮಿಲಿಟರಿ ಆಸ್ಪತ್ರೆಗೆ ಸೇರಿಸಿದರು. ಯೆಗೊರೆವಿಚ್ ಒಂದು ಕಣ್ಣು ಕಳೆದುಕೊಂಡಿದ್ದ. ಗೆಳೆಯ ಗೊಲೊವೆಂಕೊ-ನ ಮುಖ ಮಾತ್ರವಲ್ಲದೆ ಕತ್ತು ಭುಜಗಳು ಸುಟ್ಟಿದ್ದವು. ಮಿಲಿಟರಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೇನೂ ಕೊರತೆಯಿರಲಿಲ್ಲ. ಆದರೂ, ಅದೃಷ್ಟವಿರಬೇಕಲ್ಲ ? ಇಬ್ಬರೂ ಅಕ್ಕಪಕ್ಕದ ಮಂಚಗಳಲ್ಲಿ ಮಲಗಿ ನರಳುತ್ತಲೇ ಉಸಿರಾಡಿದರು. ಸುಟ್ಟಮುಖದ ವಿಕೃತ ರೂಪ. ಭಯಾನಕ ನೋವು-ಸಂಕಟಗಳ ರುದ್ರಹಿಂಸೆ. ಯೋಧ ಹೃದಯಗಳನ್ನು ದಿಕ್ಕೆಡಿಸಿತು ಹೀನ ಅದೃಷ್ಟ. ಅತ್ತ ರಣರಂಗವೂ ಅಲ್ಲ. ಇತ್ತ ಸಂಸಾರವೂ ಇಲ್ಲದ ಪರಿಸ್ಥಿತಿ ಮತಿಗೆಡಿಸಿತು. ಊರಿಗೆ ಕಾಗದ ಬರೆಯುವ ತೊಂದರೆಯನ್ನು ಇಬ್ಬರೂ ತೆಗೆದುಕೊಳ್ಳಲಿಲ್ಲ. ತಮ್ಮ ರೆಜಿಮೆಂಟಿಗೂ ತಿಳಿಸಕೂಡದೆಂದು ಕೇಳಿಕೊಂಡರು.

ವಾರಗಳೂ ಮಾಸಗಳೂ ಉರುಳಿದುವು. ಗಾಯಗಳು ಒಣಗುತ್ತಿದ್ದರೂ ಪ್ಲಾಸ್ಟಿಕ್ ಸರ್ಜರಿಯ ಅವಶ್ಯಕತೆಯಿತ್ತು. ವಾರಕ್ಕೊ ತಿಂಗಳಿಗೋ ಒಂದಿಷ್ಟು ಚಿಕಿತ್ಸೆ ನಡೆಯುತ್ತದೆ. ವರ್ಷಮಾಸವೊಂದು ಕಳೆದರೂ ಚಿಕಿತ್ಸೆ ಪೂರೈಸಲಿಲ್ಲ. ಪೂರ್ತಿ ಗುಣವಾಗುವವರೆಗೆ ಊರಿಗೆ ಹೋಗದಿರುವುದು ಲೇಸೆಂಬ ಆತ್ಮಿಕ ತೀರ್ಮಾನಕ್ಕೆ ಮಣಿದರು ಯೋಧರು. ವ್ಯರ್ಥ ಕಾಲಹರಣ, ವ್ಯರ್ಥ ಜೀವನ ಎಂಬುದೊಂದು ಕೊನೆಗಾಣದ ದುಃಖ, ಸಹಿಸಲಾಗದ ಸಂಕಟ.

ಂ ಂ ಂ ಂ

ಖಾರಾಕೋವ್ ನಗರದ ಹೊರವಲಯದಲ್ಲಿ ವಿಶ್ವ ವಸ್ತು ಪ್ರದರ್ಶನದ ಮಹಾಮೇಳ. ರಾಷ್ಟ್ರ ರಾಷ್ಟ್ರಗಳ ಜನರಾಶಿ ಸಂಘಟಿಸಿದ ವಸ್ತು ಪ್ರದರ್ಶನದ ಸಮಾವೇಶ.

ವಿವಿಧ ಭಾಷೆ, ವಿಭಿನ್ನ ಸಂಸ್ಕೃತಿ, ವಿಧವಿಧ ಉಡುಪುಗಳು ಮೇಳೈಸಿದ ಒಂದು ಮಹೋನ್ನತ ಸಮ್ಮೇಳನ. ಎಗೊರೆವಿಚ್ ಮತ್ತು ಗೊಲೊವೆಂಕೊ ಇಬ್ಬರೂ ಆ ವಿಶ್ವಮೇಳವನ್ನು ನೋಡಿ ಬರಲು ಹೊರಟರು. ಮುಖದ ಕಲೆ ಗಳನ್ನು ಮರೆಮಾಚಲು ಇಬ್ಬರೂ ಕಪ್ಪು ಕನ್ನಡಕ ಮಂಕಿ ಟೋಪಿಗಳನ್ನು ತೊಟ್ಟಿದ್ದರು. ಟ್ರಕ್ಕನ್ನು ದೂರದಲ್ಲಿ ನಿಲ್ಲಿಸಿ ಇಬ್ಬರೂ ಮೇಳವನ್ನು ಸೇರಿ ವಸ್ತು ವಸ್ತುಗಳ ಸಮೀಕ್ಷೆಯಲ್ಲಿ ಮನವಿಟ್ಟರು. ಚಿತ್ರವಿಚಿತ್ರ ಸುಂದರ ವಸ್ತು ಗಳು ಬಲು ಆಕರ್ಷಣೀಯವಾಗಿದ್ದುದು ಮಾತ್ರವಲ್ಲ. ವಿವಿಧ ಸಂಸ್ಕೃತಿಯ ಜನಕೋಟಿಯೂ ಆಕರ್ಷಣೀಯ. ಕೊಳ್ಳುವ ಇಚ್ಛೆಯಿಲ್ಲದಿದ್ದರೂ ನೋಡು ವುದರಲ್ಲಿ ಎಲ್ಲಿಲ್ಲದ ಆಸ್ಥೆ. ಇಬ್ಬರೂ ಎಲ್ಲಾ ಕೋಣೆಗಳನ್ನು ಹೊಕ್ಕು ನೋಡು ನೋಡುತ್ತ ಆನಂದ ಪುಳಕರಾದಾಗಲೇ ಮುಂದಿನ ಮಳಿಗೆಯಲ್ಲಿ ತಾಯಿ– ದಾಲಿವಿಚ್ ವಿಲಿಯೊಂದಿಗೆ ಏನೇನೋ ವ್ಯಾಪಾರ ನಡೆಸುತ್ತಿದ್ದುದು ಕಂಡು ಬಂತು. ಅವರ ದೃಷ್ಟಿ ಇತ್ತ ಹೊರಳುವುದರೊಳಗಾಗಿ ತಾವಲ್ಲಿಂದ ಜಾರು ವುದು ಒಳ್ಳಿತೆಂದು ಗೊಲೊವೆಂಕೊ ಗೆಳೆಯನನ್ನು ಎಳೆದುಕೊಂಡೇ ಅಲ್ಲಿಂದ ಹೊರಡುತ್ತ ಮೆಲುಮೆಲ್ಲನೆ ಹೇಳಿದ "ಈಗ ಕಾಣಿಸಿಕೊಳ್ಳಬೇಡ, ಪೂರ್ತಿ

ಗುಣವಾದ ಮೇಲೆ ಹೋಗೋಣ. ಸಧ್ಯ, ಹಾಳು ಮುಖವನ್ನು ತೋರಿಸು ವುದು ಹೇಗೆ?"

ಒಂದು ಕ್ಷಣ–ಒಂದೇ ಒಂದು ಕ್ಷಣ ಯೆಗೊರೆವಿಚ್ ತಿರುಗಿ ನೋಡಿದ. ತನ್ನ ಮುದ್ದುವಿಲಿ– ಪ್ರಾಣಪದಕ.... ಛೇ! ವಿಧಿ ನಮ್ಮನ್ನು ಹೇಗೆ ಬೇರ್ಪಡಿಸಿತು. ಅದೇ ಗಳಿಗೆಯಲ್ಲಿ ಅವಳ ದೃಷ್ಟಿಯೂ ಇತ್ತ ಹರಿಯಿತು. ಮಂಕಿ ಟೋಪಿ, ಕಪ್ಪು ಕನ್ನಡಕಗಳ ವ್ಯಕ್ತಿ ಕಣ್ಗೋಚರಿಸಿದರೂ ಭಾವ ಗೋಚರವಾಗಲಿಲ್ಲ. ಆ ಜನಗಳ ಮಹಾ ಮೇಳದಲ್ಲಿ ಮಿಂಚಿನಂತೆ ಸುಳಿದ ವ್ಯಕ್ತಿ ಮರುಗಳಿಗೆಯಲ್ಲಿಯೇ ಕಣ್ಮರೆಯಾಯಿತು. ಆದರೂ, ಮನದಾಳದಲ್ಲಿ ಏನೋ ಒಂದು ಬಗೆಯ ಆಶ್ಚರ್ಯ, ಮತ್ತೇನೋ ಒಂದು ಬಗೆಯ ಆಸ್ಥೆ, ಇನ್ನೇನೋ ಒಂದು ರೀತಿಯ ಕುತೂಹಲ ಮೇಳೈಸಿ ಕಲಕಿ ಬಿಟ್ಟವೆ. ಹೌದೋ ಅಲ್ಲವೋ ಎಂಬ ಅನುಮಾನ ಬೇರೆ. ಇನ್ನೊಮ್ಮೆ ನೋಡಿದರೆ ಒಳ್ಳಿತು ಎಂಬ ಯೋಚನೆಯಿಂದ ಅಲ್ಲೆಲ್ಲ ಎಷ್ಟೆಷ್ಟೋ ಹುಡುಕಾಡಿದರೂ ಅವರು ದೃಷ್ಟಿಗೆ ಬೀಳಲಿಲ್ಲ. ತಾಯಿಯ ಭುಜವನ್ನು ಅಲುಗಿಸುತ್ತ ಕುತೂಹಲದಿಂದ ಕೇಳಿದಳು ವಿಲಿ,

"ಆ ಮಳಿಗೆಯಲ್ಲಿ ಮಂಕಿ ಕ್ಯಾಪ್ ಧರಿಸಿದ್ದವರಿಬ್ಬರನ್ನು ನೋಡಿದಿರಿ ಅಲ್ಲವೇ ?"

"ದೂರದಿಂದ ನೋಡಿದೆ."

"ನಿಮಗೇನೆನಿಸಿತು ?"

"ಏನೂ ತಿಳಿಯಲಿಲ್ಲ ಬಿಡು."

"ಅವರಿಬ್ಬರೂ ನಮ್ಮವರಿರಬಹುದೇನೋ ಎನಿಸಿದೆ ನನಗೆ."

"ನಮ್ಮವರಾಗಿದ್ದಿದ್ದರೆ ನಮ್ಮ ಬಳಿಗೆ ಬರದಿರುತಿದ್ದರೆ ?"

"ಅದು ನಿಜವೇ" ನಿರಾಸೆಯ ದನಿ ಹೊರಬಿತ್ತು.

ಹಾಗೆಂದರೂ ಸಂಪೂರ್ಣ ನಂಬಲಾಗಲಿಲ್ಲ ವಿಲಿಗೆ. ತನ್ನೊಳಗೇ ವಿಷಯವನ್ನು ಮೆಲುಕು ಹಾಕುತ್ತ ಮತ್ತೆ ಕೇಳಿದಳು ಅವಳು.

"ಅವರು ನಿಮ್ಮನ್ನು ನೋಡಿದರೇ ಅಮ್ಮಾ?"

"ತಿಳಿಯದು, ನಾನೇನೋ ಸ್ವಲ್ಪ ನೋಡಿದೆ ಅಷ್ಟೆ."

"ಕಾಗದವೂ ಇಲ್ಲ, ಮುಖ ದರ್ಶನವೂ ಇಲ್ಲ. ಇದಂತೂ ನಮಗೆ ತೀರಾ ಒಗಟು."

ಖಿನ್ನ ಮುಖಿಯಾದಳು ವಿಲಿ. ದಾಲಿವಿಚ್ ಕಣ್ಣಾಲಿಗಳನ್ನು ಕರವಸ್ತ್ರದಿಂದ ತೀಡಿಕೊಂಡಳು. ಅವರು ಅದೃಶ್ಯವಾದ ದಿಕ್ಕಿನಲ್ಲೇ ದೃಷ್ಟಿಯನ್ನು ನೆಟ್ಟು ಮೂರ್ತಿ ಮತ್ತಾದರು ಇಬ್ಬರೂ. ಹೃದಯಗಳು ಕಲ್ಲು ಹೊತ್ತಂತೆ ಭಾರತಿಭಾರವಾಗಿ ತೋರಿದುವು. ಮನದಲೆಗಳು ಅಲ್ಲೇ ಸ್ತಬ್ಧವಾದಂತೆ ಆಲೋಚನೆಯ ಕಲ್ಪ ತಟಸ್ಥವಾಯಿತು. ಇಬ್ಬರೂ ಚಿಂತಾಕುಲತೆಯಲ್ಲಿ ಸಿಕ್ಕಿ ಮಿಲಿಮಿಲಿಗೊಂಡರು.

೦ ೦ ೦ ೦

ಯೆಗೊರೆವಿಚ್ ಊಟಕ್ಕೆ ಗೆಳೆಯನೊಂದಿಗೆ ಕುಳಿತಿದ್ದಾನೆ. ಮೈಮನಗಳಲ್ಲಿ ಅಶಾಂತಿಯ ಝರಿ ಹರಿದಾಡುತ್ತಿದೆ. ಅತ್ತ ಗೆಲುವೂ ಅಲ್ಲ; ಇತ್ತ ಸೋತ ಸೋಲೂ ಅಲ್ಲ. ಬದುಕಿಯೂ ಉತ್ಸಾಹವಿಲ್ಲ. ವೀರ ಚಕ್ರದ ಗುರಿಯೂ ಇಲ್ಲ. ಸಪ್ಪೆ—ಬರೀ ಸಪ್ಪೆ. ಬದುಕೇ ಸಪ್ಪೆಯಿಂದ ಕೂಡಿದ ವರ್ತುಲ. ಹಸಿವು ಇಲ್ಲದಿದ್ದರೆ ಉಣ್ಣುವುದೂ ಬೇಕಿರಲಿಲ್ಲವೇನೋ... ಯಾಂತ್ರಿಕಮಯ ಜೀವನ. ಯಾಂತ್ರಿಕಮಯ ಸಂಚಾಲನ.

ಜವಾನನೊಬ್ಬ ಮೇಜಿನ ಮೇಲೆ ಕಾಗದವೊಂದನ್ನು ಇಟ್ಟು ಹೋದ.

ಅಂದಿಂದಿಗೂ ಕಾಗದಗಳ ಸುಳಿವೇ ಇರಲಿಲ್ಲ. ವ್ಯಕ್ತಿಯ ಜಾಡು ತಿಳಿಯದೆಯೇ ಕಾಗದಗಳಾದರೂ ಎಲ್ಲಿಂದ ಬಂದಾವು? ಅಂದಮೇಲೆ...

ಪ್ರಶ್ನೆ ತಲೆಯಲ್ಲಿ ನಿಮಿರಿ ನಿಂತಂತೆಯೇ ಕಾಗದವನ್ನು ಒಡೆದ. ತಾಯಿಯ ಹಸ್ತಾಕ್ಷರ.

.....ಅಂದು ವಿಶ್ವಮೇಳದಲ್ಲಿ ನಾನು ವಿಲಿಯೊಂದಿಗೆ ಇದ್ದಾಗ, ನೀನು ಗೊಲೊವೆಂಕೊ ಜೊತೆ ಇದ್ದುದನ್ನು ದೂರದಿಂದ ಕಂಡೆ. ವಿಲಿಯೂ ನಿನ್ನನ್ನು ನೋಡಿದ್ದಾಳೆ. ನೀವಿಬ್ಬರೂ ಮಂಕಿ ಕ್ಯಾಪ್ ಮತ್ತು ಕಪ್ಪು ಕನ್ನಡಕ ಧರಿಸಿ

ದ್ದುದರಿಂದ ನಮಗೆ ಗುರುತಿಸಲಾಗಲಿಲ್ಲ. ನೀನು ಹೊರಟು ಹೋದನಂತರವೇ ನಮ್ಮ ಊಹೆ ದೃಢವಾಯ್ತು. ಆದರೆ, ನೀನೇಕೆ ನಮಗೆ ಮೋಸ ಮಾಡಿದೆ ? ....ಹಾಗೆ ನುಣುಚಿಕೊಂಡು ಹೋಗುವ ಕಾರಣವಾದರೂ ಏನಿತ್ತು? ನಮ್ಮನ್ನು ಮರೆತು ಬಿಟ್ಟೆಯಾ ಹೇಗೆ? ನಮಗೆ ನಿಮ್ಮ ರೆಜಿಮೆಂಟಿನಿಂದಲೂ ಕಾಗದವಿಲ್ಲ. ಸುದ್ದಿಯೂ ಇಲ್ಲವಲ್ಲಾ ಅದೇಕೆ ? ನಿನಗೆ ನಮ್ಮ ಮೇಲೆ ಹಿಂದೆಲ್ಲಾ ಎಷ್ಟೊಂದು ಪ್ರೀತಿಯಿತ್ತು? ಎಷ್ಟೊಂದು ದಯೆ, ಧರ್ಮವಿತ್ತು? ಈಗೇಕೆ ಹೀಗಾದೆ? ಮೇಳ ದಲ್ಲಿ ನಿಮ್ಮನ್ನು ಕಂಡೂ ಕಾಣದಂತಾದಾಗಿನಿಂದ ನಾನು ನಿದ್ದೆಯೇ ಮಾಡಿಲ್ಲ. ವಿಲಿಯೂ ಸುಮ್ಮನೆ ಕಣ್ಣೀರು ಹಾಕುತ್ತಾಳೆ. ನಮಗೇಕೆ ಈ ತರಹದ ತೊಂದರೆ ಕೊಡುತಿದ್ದಿ? ಈ ವಿಷಯ ನಿನ್ನ ತಂದೆಗೆ ಹೇಳಿದಾಗ ಯದ್ವಾತದ್ವಾ ಮಾತಾಡಿದ. ನಾವಿಬ್ಬರು ಎಷ್ಟು ಹೇಳಿದರೂ ನಂಬಲಿಲ್ಲ ಗೊತ್ತೆ ? ನೀನು ಬದುಕಿರುವ ನಂಬಿಗೆಯನ್ನೇ ಕಳೆದು ಕೊಂಡಿದ್ದಾನೆ ಗೋದ್ರೆವ್. "ನೀನೊಂದು ಮುದಿಗೊಡ್ಡು! ನಿನಗೆ ಹುಚ್ಚು ಹಿಡಿದಿದೆ! ನಿನಗೆ ಭ್ರಮೆ–ಭ್ರಾಂತಿ" ಎಂದೆಲ್ಲಾ ಕೂಗಾಡಿದ. ನಾನವನಿಗೆ ಹೇಳುವುದೇನು ?

ಪ್ರಿಯ ಮಗನೇ, ನನ್ನನ್ನು ನೋಡಿದರೆ ವಿಲಿಗೆ ದುಃಖ. ಅವ ಳನ್ನು ನೋಡಿದರೆ ನನಗೆ ದುಃಖ. ಹೀಗಿದೆ ನಮ್ಮ ಪರಿಸ್ಥಿತಿ. ವಿನಾಕಾರಣ ನಮಗೆ ದುಃಖ ಕೊಡುತಿದ್ದೀಯೆ. ನೀನೇ ಯೋಚಿಸಿ ನೋಡು. ಇದರ ಪರಿ ಣಾಮ ಹೇಗಿರಬಹುದೆಂದು. ಗೊದ್ರೇವ್ ಅಭಿಪ್ರಾಯ ಏನೇ ಇರಲಿ, ನನ್ನ ಹೃದಯಕ್ಕೆ ಅನಿಸುವುದೇ ಬೇರೆ. ಹೃದಯಧಾತ್ರಿ ಸದಾ 'ಅದು ನೀನೆ' ಎಂದು ಚೀರುತ್ತದೆ. ನಿನ್ನ ಕೊಠಡಿಯಲ್ಲಿ ವಸ್ತು ವಸ್ತುಗಳನ್ನು ಮುಟ್ಟಿ ಮುಟ್ಟಿ ಆನಂದಿಸುವೆ. ಅವು ನೀನೇ ಎಂಬ ಭಾವ ಮೂಡಿಸುತ್ತವೆ. ಕೇಳು ಮಗನೇ, ಒಂದು ವೇಳೆ ಯುದ್ಧರಂಗದಲ್ಲಿ ನಿಮಗೆ ಅಂಗವಿಕಲತೆ ಉಂಟಾಗಿದ್ದರೆ ಅದೊಂದು ಕುಂದಲ್ಲ. ಅದಕ್ಕೆ ಹಿಂಜರಿತವೇಕೆ ? ಏನೇ ಇರಲಿ ನೀನೊಮ್ಮೆ ಬಂದು ಮುಖದರ್ಶನ ಮಾಡಿಸು. ಗೊದ್ರೇವ್‌ವಿಚ್ ಈಚೆಗೆ ಅಷ್ಟು ಆರೋಗ್ಯ ವಾಗಿಲ್ಲ. ಒಂದಲ್ಲ, ಒಂದು ರೀತಿಯಲ್ಲಿ ನರಳುತ್ತಲೇ ಇರುತ್ತಾನೆ. ಹೊಲ ಗದ್ದೆಯ ನಿರ್ವಹಣೆ ಕಷ್ಟವೇ. ನಾನು ಫಾರಂ ಮಾತ್ರ ನೋಡಿಕೊಳ್ಳುವುದ ರಿಂದ ಉಳಿದುದೆಲ್ಲ ಹಾಳು ಎಂತಲೇ ಹೇಳಬಹುದು. ನಿನ್ನ ಗೆಳೆಯರು ನೀನು ವೀರ ಚಕ್ರ ಪಡೆದುಕೊಳ್ಳುವೆ ಎಂದು ನಂಬಿದ್ದಾರೆ. ಆದರೆ, ನಿನ್ನ ವರ್ತನೆ

ಅರ್ಥವೇ ಆಗುತ್ತಿಲ್ಲ. ನೀನು ಎಲ್ಲೀ ಇರು, ಹೇಗೇ ಇರು. ಒಮ್ಮೆ ಬಂದು ಹೋಗು. ನಿನ್ನ ನೋಡದೆಯೇ ಜೀವ ತುಡಿಯುತ್ತಿದೆ. ಗೊಲೊನೆಂಕೊ ಮನೆಯಲ್ಲೂ ಇದೇ ಗತಿ. ನಿಮಗೇಕೆ ನಮ್ಮ ಕಷ್ಟ ಅರ್ಥವಾಗುತ್ತಿಲ್ಲ? ನಿನ್ನ ಅತಿವರ್ತನೆ ನ್ಯಾಯವೇ ಹೇಳು? ನೀನು ನಮ್ಮನ್ನು ಏನೆಂದು ಭಾವಿಸಿ ರುವೆ? ನಿರ್ಜೀವಿಗಳು ಎಂದೇ? ಅಥವಾ ನಿನ್ನಂತೆಯೇ ಮರಜೀವಿಗಳು ಎಂದೆ...?

ಯೆಗೊರೆವಿಚ್ ಪತ್ರವನ್ನು ಮತ್ತೆ ಮತ್ತೆ ಓದಿ ನಿಟ್ಟುಸಿರು ಬಿಟ್ಟು ಎದೆಗೊತ್ತಿ ಹಿಡಿದುಕೊಂಡ. ಎದೆಯಾಳದ ತುಮುಲ ಮುಖಬಿಂಬದಲ್ಲಿ ಬಿಂಬಿಸಿತು.

ಂ ಂ ಂ ಂ

ಆಸ್ಪತ್ರೆಯ ಆವರಣದಲ್ಲಿ ಮಿಲಿಟರಿ ಕ್ಯಾಂಪ್. ದಪ್ಪ ದಪ್ಪ ಡೇರೆ ಗಳಿಂದ ಕೂಡಿದ ಸ್ಥಳದಲ್ಲಿ ಸಾಕಷ್ಟು ಸುಸಜ್ಜಿತವಾದ ಆಸ್ಪತ್ರೆ.

ಒಳ ರೋಗಿಗಳಲ್ಲಿ ಅನೇಕರಿಗೆ ಕೈಕಾಲು ಮುರಿತ–ಕಂಡಿಕು. ಗಾಯಾ ಳುಗಳು ನರಳುವ ರೀತಿಯಂತೂ ಕರುಣಾಜನಕ. ಆಸ್ಪತ್ರೆ ಸಿಬ್ಬಂದಿಯೊಂದಿಗೆ ಅಲ್ಪಸ್ವಲ್ಪ ಗುಣವಾದ ಯೋಧರು ಇತರರ ಚಿಕಿತ್ಸೆಗೆ ಸಹಕರಿಸುತ್ತಾರೆ. ಆಸ್ಪತ್ರೆ ತೀರ ಚಿಕ್ಕದೇನೂ ಅಲ್ಲ. ಎಲ್ಲ ಬಗೆಯ ಸುಖೀ ಸೌಕರ್ಯಗಳೂ ಇವೆ. ನುರಿತ ವೈದ್ಯರೂ ಇದ್ದಾರೆ. ಟ್ರಕ್ಕುಗಳು ಮಿಲಿಟರಿ ಕ್ಯಾಂಪಿನ ಆಚೆ ಕಡೆ ನಿಲ್ಲುವುದರಿಂದ ಧೂಳಿನಮಜ್ಜನದಿಂದ ದೂರ. ಟ್ಯಾಂಕುಗಳು ನಿಲ್ಲುವಷ್ಟು ವಿಶಾಲವಾದ ಸ್ಥಳ ಹೊರಗಡೆ. ಬಯಲು ಬಯಲಾದ ತಾಣವಾದ್ದರಿಂದ ಮಟ್ಟಸಗೊಳಿಸುವ ತೊಂದರೆಯೂ ಇರಲಿಲ್ಲ.

ಯೆಗೋರೆವಿಚ್ ಕನ್ನಡಿಯಲ್ಲಿ ಮುಖ ನೋಡಿಕೊಂಡ. ಕಳೆದುಕೊಂಡ ಕಣ್ಣಿನ ಗುಳಿಗೊಂದು ಗಾಜಿನ ಕಣ್ಣು ಇರಿಸಿದ್ದು, ಸಮರ್ಥ ವೈದ್ಯರೇ ಪ್ಲಾಸ್ಟಿಕ್ ಸರ್ಜರಿ ನಡೆಸುತಿದ್ದಾರೆ. ಅದು ಪೂರ್ತಿಯಾಗಲು ಇನ್ನೆಷ್ಟು ಕಾಲಮಾನ ಬೇಕೋ ದೇವರೇ ಬಲ್ಲ. ಮುದುಡಿಕೊಂಡ ವಕ್ರ ಮುಖ, ಬಿಗಿದುಕೊಂಡ ಕತ್ತು ಭಯಾನಕ ಎಂಬುದೊಂದಲ್ಲ, ತೀರಾ ಕರುಣಾಜನಕವೂ ಆಗಿತ್ತು. ವಿರೂಪ ಅಷ್ಟಿಷ್ಟು ಸರಿ ಹೋದಮೇಲೆ ತನ್ನವರ ಭೇಟಿ ಒಳ್ಳಿತೆಂದು

ಭಾವನೆ ಮನದಲ್ಲಿ. ಅಂತರಂಗ ಮುದುಡಿತು. ಪರಿತಾಪದಿಂದ ಮನಸ್ಸು ಅಳುಕಿತು. ದೃಢ ನಿರ್ಧಾರ ಕೈಗೊಳ್ಳಲಾರದಷ್ಟು ಬಲಹೀನತೆ ಎದೆಯಲ್ಲಿ. ದೀರ್ಘವಾದ ನಿಟ್ಟುಸಿರೊಂದು ಹೊರಬಿತ್ತು, ತನ್ನರಿವಿಗೆ ಬಾರದಂತೆ.

ಗೊಲೊವೆಂಕೊ ಪಾದರಕ್ಷೆಗಳ ಪಟಪಟತ್ಕಾರದೊಡನೆ ಕೊಠಡಿಗೆ ಪದಾರ್ಪಣೆ ಮಾಡಿದ. ಮುಖದಲ್ಲಿ ಕಿರುನಗೆ ಅರಳಿತು. ಗೆಳೆಯನ ಭುಜದ ಮೇಲೆ ಕೈಯಿಡುತ್ತ ಅವನೆಂದ.

"ನಮ್ಮ ರೆಜಿಮೆಂಟಿಗೆ ವೀರಚಕ್ರ ಲಭಿಸಿದೆಯಂತೆ!"

"ನಿಜವಾಗಿ...?"

"ಹೌದು. ನಮ್ಮಿಬ್ಬರ ಹೊರತಾಗಿ!"

ಇಬ್ಬರೂ ನಕ್ಕುಬಿಟ್ಟರು. ಮುಖಬಿಂಬ ವಿಷಾದ ಕಳೆಯಿಂದ ಬೆಳಗಿತು.

ಯೆಗೊರೆವಿಚ್ ತನ್ನ ತಾಯಿಯಿಂದ ಬಂದ ಪತ್ರವನ್ನು ಮುಂದಿಟ್ಟು ಅಂದ "ನಾವೊಮ್ಮೆ ಊರಿಗೆ ಹೋಗಿ ಬಂದರೆ ಹೇಗೆ?"

"ನಾನು ವಿಶ್ವಮೇಳದಲ್ಲಿ ಅವರನ್ನು ಕಂಡಾಗಲೇ ಹೀಗಾಗಬಹುದೆಂದು ಪರಿಭಾವಿಸಿದ್ದೆ. ಆಗ ನಾವವರನ್ನು ಕಂಡು ನಮ್ಮ ಸ್ಥಿತಿಗತಿಯ ಅರಿವು ಮಾಡಿಕೊಟ್ಟಿದ್ದಿದ್ದರೆ ಒಳ್ಳೆಯದಿತ್ತು. ಅಂದಿನ ನಮ್ಮ ವರ್ತನೆ ತಪ್ಪು."

"ಈ ಸ್ಥಿತಿಯಲ್ಲಿ ನಮ್ಮನ್ನು ನೋಡುವುದು ಅವರಿಗೆ ಸಂಕಟವಾಗುತ್ತಿರಲಿಲ್ಲವೇ? ಪ್ಲಾಸ್ಟಿಕ್ ಸರ್ಜರಿ ಪೂರೈಸಿದ ನಂತರವಾದರೆ ತುಂಬಾ ಅನುಕೂಲ, ಎನಿಸುತ್ತೆ ನನಗೆ. ನೀನೇನೆನ್ನುತ್ತಿ?"

"ದೈವ ಸಂಕಲ್ಪಕ್ಕೆ ಮಾಡುವುದೇನು? ಹೋಗಿ ಬರುವುದಾದರೆ ಆಗಬಹುದು."

ಯೆಗೊರೆವಿಚ್ ವಿಚಾರ ಪರವಶನಾದ, ಮನಸ್ಸು ದುಗುಡದಿಂದ ತುಂಬಿತು.

o o o o

ಯೆಗೊರೆವಿಚ್ ಆಸ್ಪತ್ರೆಯ ಆವರಣದಲ್ಲಿ ತಂಗಾಳಿಗೆ ಮೈಗೊಟ್ಟು ಗಿಡ ಮರಗಳ ಸಂದೋಹದಲ್ಲಿ ಸುಮ್ಮನೆ ಶತಪಥ ನಡೆಸಿದ್ದ. ತಲೆಯ ತುಂಬೆಲ್ಲ ಮನೆಯ ವಿಚಾರಗಳ ತುಮುಲವೇ. ವಿಲಿಯ ದುಃಖದಾಯಕ ಜೀವನವನ್ನು ನೆನೆದರೆ ಬದುಕೇ ಭಾರ ಎನಿಸುತ್ತೆ. ಭವಿಷ್ಯದ ಕತೆಯೇನು? ಎಂಬ ಪ್ರಶ್ನೆ ಧುತ್ತೆಂದು ಎದುರು ನಿಲ್ಲುತ್ತೆ. ವಿಲಿ ಎಷ್ಟು ಒಳ್ಳೆಯ ಹುಡುಗಿ? ಅಮ್ಮನಿಗೆ ಗೆಳತಿಯೂ ಅವಳೇ. ಮಗಳೂ ಅವಳೇ. ಅವಳು ನನ್ನ ಪರಿಸ್ಥಿತಿಯನ್ನು ಅರಿತುಕೊಂಡರೆ ಏನೆನ್ನುವಳೋ....ಯಾವ ರೀತಿ ಸ್ವೀಕರಿಸುವಳೋ. ಅದೇ ಊಹಿಸಲಾಗದ ವಿಚಾರ...ಆದ್ದರಿಂದ ಪ್ಲಾಸ್ಟಿಕ್ ಸರ್ಜರಿ ಪೂರ್ತಿಯಾದ ಮೇಲೆ ಹೋಗುವುದು ಒಳ್ಳಿತಲ್ಲವೆ? ಎನ್ನುತ್ತದೆ ಅಂತರಂಗ. ವಿಧಿ ನಮ್ಮ ಹಣೆಯಲ್ಲಿ ಏನು ಬರೆದಿದ್ದಾನೋ. ಹೀಗಾದುದು ತೀರಾ ದುರದೃಷ್ಟಕರ... ಮನಸ್ಸು ಹಲುಬುತ್ತಲೇ ಇತ್ತು.

ಗೊಲೊವೆಂಕೊ ಟವಲ್ಲಿನಿಂದ ಮುಖವನ್ನು ಒರಸಿಕೊಳ್ಳುತ್ತ ಬಳಿಗೆ ಬಂದು ಹೇಳಿದ "ನೋಡು, ನಾವು ಮೀನಮೇಷ ಎನ್ನುವುದಕ್ಕಿಂತ ಹೋಗು ವುದಾದರೆ ಹೋಗಿ ನಮ್ಮ ಸ್ಥಿತಿಗತಿಯನ್ನು ಅರುಹಿ ಅವರ ಮನಸ್ಸಿನ ಕಳವಳ ವನ್ನು ಬಗೆಹರಿಸಿ ಬರುವುದು ಲೇಸು. ಹೀಗೆ ಅಡಗಿಕೊಂಡಿರುವುದು ಅವರಿಗೂ ಹಿತವಲ್ಲ. ನಮಗೂ ಹಿತವಲ್ಲ. ಏನಿದ್ದರೂ ದೃಢ ಮನದಿಂದ ಜೀರ್ಣಿಸಿ ಕೊಳ್ಳುವುದು ಲೇಸು."

"ಅದನ್ನು ನಾನೂ ಒಪ್ಪುವೆ ಗೊಲೋ ಆದರೆ, ಇಲ್ಲಿ ಕೇಳು. ನಮ್ಮ ರೆಜಿಮೆಂಟು ಸಧ್ಯಕ್ಕಂತೂ ಹಿಂತಿರುಗುವಂತಿಲ್ಲ, ಎನ್ನೋಣ. ಅದರೊಂದಿಗೆ, ಅದೇ ಕಾಲಾವಧಿಯನ್ನು ನಾವು ಹೀಗೆಯೇ ಚಿಕಿತ್ಸೆಗಾಗಿ ಸಂಪೂರ್ಣ ಉಪ ಯೋಗಿಸಿಕೊಳ್ಳುವ ಅವಕಾಶವಿದೆ. ಅಷ್ಟರಲ್ಲಿ ಪ್ಲಾಸ್ಟಿಕ್ ಸರ್ಜರಿ ಮುಗಿದು ನಮ್ಮ ವಿರೂಪವು ಅಳಿಯಬಹುದು, ಎಂದರೆ ಏನೆನ್ನುತ್ತಿ? ಮುಂದೆ ರೆಜಿ ಮೆಂಟಿನೊಂದಿಗೇ ನಾವು ಹಿಂದಿರುಗುವ ಸಾಧ್ಯತೆ ಇರುತ್ತೆ. ಅದನ್ನು ಯೋಚಿಸ ಬೇಕಾದದ್ದೆ..."

ಗೊಲೊವೆಂಕೊ ಸ್ವಲ್ಪ ಹೊತ್ತು ಮಾತಾಡಲಿಲ್ಲ. ಮುಖ್ಯವಾಗಿ

ತನ್ನ ಯೋಚನೆಯೂ ಅದೇ. ಆದರೆ, ಮನೆಯವರ ಮನಃಸ್ಥಿತಿ ಹೇಗಿರಬೇಡ? ಅದನ್ನೂ ಹೋಚಿಸಬೇಕಷ್ಟೆ?

ನಮ್ಮ ನೇರಕ್ಕೇ ನೋಡಿದರೆ ಹೇಗೆ? ನಾವು ನೊಂದರೂ ತೊಂದರೆಯಿಲ್ಲ ನಮ್ಮವರು ನೋಯಬಾರದು.... ಎಂದು ಕೊಳ್ಳುತಿದ್ದಂತೆಯೇ ಯೊಗೊರೆ ವಿಚ್ ನಿಧಾನವಾಗಿ ಹೇಳಿದ,

"ನಾವು ಬಯಸಿದ್ದೇ ಒಂದು. ಆಗಿದ್ದೇ ಒಂದು." ಸ್ವಲ್ಪ ಹೊತ್ತು ಯೋಚಿಸಿ ಪುನಃ ಅಂದ "ಮನೆಯವರ ವಿಚಾರ ನೆನೆಸಿದಾಗಲೆಲ್ಲ ಅಂದು ನಮ್ಮನ್ನು ಬೀಳ್ಕೊಟ್ಟ ಸುಂದರ ದಿನ ಮತ್ತು ಬೃಹತ್ ಸಂಖ್ಯೆಯ ಜನ ಚಿತ್ತ ಭಿತ್ತಿಯಲ್ಲಿ ತೇಲಿ ನಲಿಯುತ್ತಾರೆ. ಅದೇ ತಂತಿ ಬೇಲಿ! ಅದೇ ಆ ಬಂಧು ಬಳಗ! ಅದೇ ತಾಯಿ ತಂದೆ ಮತ್ತು ವಿಲಿ!"

ಗೊಲೊವೆಂಕೊ ಮಾತಾಡಲಿಲ್ಲ.

— o —

ನಾಗ ಮಣಿ

೬

Love never comes
until there is freedom

ನಾಗಮಣಿ ಬ್ಯಾಂಕಿನ ಹಾದಿ ಹಿಡಿದಳು. ಅವಳು ಕೆಲಸಕ್ಕೆ ಹೋಗುವ ಳೆಂಬ ಸಡಗರ ಮನೆಯಲ್ಲಿ. ತಾಯಿ ದೇವರ ಪೂಜೆಯ ತೀರ್ಥ ಪ್ರಸಾದವನ್ನು ಕೊಟ್ಟು "ಸುಖವಾಗಿ ಹೋಗಿ ಬಾ ಮಗಳೇ." ಎಂದು ಶುಭ ಹಾರೈಸಿದಳು. ತಂದೆ ತಲೆಯನ್ನು ನೇವರಿಸಿ "ಭಗವಂತ ನಿನ್ನನ್ನು ಆಶೀರ್ವದಿಸಲಿ !" ಎಂದ, ಸಂತೋಷ-ಕರುಣೆಗಳ ರಾಗರಸ ಹರಿಸಿ.

ಹೃದಯ ಕುಂಡ ಆನಂದದ ಆಗರವಾಯಿತು. ಆ ಉದ್ಯೋಗ ಹೇಳಿ ಕೊಳ್ಳುವಂತಹ ವಿಶೇಷವೇನಲ್ಲ. ಆದರೂ ತೀರ ಮುಳುಗುವವನಿಗೆ ಹುಲ್ಲು ಕಡ್ಡಿಯು ದೊರೆತಷ್ಟು ಹಿತ.

"ನನಗೀವತ್ತು ಏನು ತರುತ್ತೀ ಅಕ್ಕಾ ?"

ಒಡ ಹುಟ್ಟುಗಳ ತಮಾಷೆಯ ಧಾಟಿ.

"ಅಯ್ಯೋ, ನನಗಿನ್ನೂ ಸಂಬಳವೇ ಬಂದಿಲ್ಲ. ನಾನೇನು ತರಲಿ ?"

ಅಂತೂ, ಎಲ್ಲರ ಆತ್ಮೀಯ ಬೀಳ್ಕೊಡಿಗೆ ಮನವನ್ನು ಅಂಬರಕ್ಕೇರಿಸಿತು. ನಾಗಮಣಿ ಆನಂದದ ಮೂಟೆಯಾದಳು. ಹೃದಯ ಕುಂಡ ಹಗುರವಾಯಿತು. ಸ್ವಲ್ಪ ದೂರ ಸದ್ದಿಲ್ಲದೆ ಸಾಗಿತು ಹಾದಿ. ಮುಂದೆ ಬಸ್ ನಿಲ್ದಾಣ ಮುಟ್ಟು ವುದರಲ್ಲಿ ಕೆಂಪು ಬಸ್ಸು ಬಂದು ನಿಂತಿತು. ಅಲ್ಲಿ ಕಾದಿದ್ದ ಜನರಾಶಿಯು ಕ್ಯೂ ನಾಲ್ಕು ಬಸ್ಸಿಗಾಗುವಷ್ಟು ಹಿರಿದು. ಸರಿ, ಬಸ್ಸಿಗಾಗಿ ಕಾಯುವ ಯೋಚನೆ

ಮುದುಡಿತು. ಕಾಲ್ನಡಿಗೆಯಲ್ಲಿಯೇ ಮುಂದುವರಿದಳು ಅವಳು. ಆ ಬ್ಯಾಂಕು ಅಂತಹ ಹತ್ತಿರವೇನಲ್ಲ. ಮೊದಲನೆಯ ದಿನ ಹೊತ್ತು ಮೀರಿದರೆ ಹೇಗೋ ಎಂಬ ಯೋಚನೆ. ಆಟೋ ಸಿಗದಿದ್ದುದು ಒಂದಾದರೆ ಅದಕ್ಕೆ ತಗಲುವ ವೆಚ್ಚ ಕೈಕಚ್ಚುವುದು ದಿಟ. ಹೆಜ್ಜೆಗಳನ್ನು ಚುರುಕುಗೊಳಿಸಿದಳು ನಾಗಮಣಿ. ಆ ವೇಳೆಗೆ ಯುವಕನೊಬ್ಬ ತನ್ನ ಪಕ್ಕಕ್ಕೇ ನಡೆದು ಬಂದುದನ್ನು ನೋಡಿದರೆ ತನ್ನನ್ನೇ ಅನುಸರಿಸುವಂತಿದೆ ಆತನ ನಡಿಗೆ. ಅವಳು ಬೆಚ್ಚಿ ಬದಿಗೆ ಸರಿಯುತ್ತಲೂ ಅವನು ತೆಕ್ಕನೆ ತಿರುಗಿ ನೋಡಿ "ಓ ನಾಗಮಣಿ ! ಕಂಗ್ರಾಚುಲೇಶನ್ಸ್ !" ಎಂದ ಸಂತಸಪೂರ್ಣ ದನಿಯಲ್ಲಿ.

ತಟ್ಟನೆ ಮಿಡುಕಿದಳು ನಾಗಮಣಿ. ಅಚ್ಚರಿಯ ಕುಂಡವಾಯಿತು ಮನಸ್ಸು. ಹುಬ್ಬೆತ್ತಿ ನೋಡಿದರೆ ಯಾರೆಂಬುದು ಗುರುತು ಹತ್ತದು. ಅವನ ವಿಶಿಷ್ಟ ನಡಿಗೆ ನಿನಗೆ ಗೊತ್ತು ಎಂದೇ ಹೇಳುತ್ತಿದೆ. ಆದರೂ ನೆನಪಿಸಿಕೊಳ್ಳಲಾಗಲಿಲ್ಲ. ಅವನಿಗೆ ಪ್ರತಿ ವಂದನೆ ಸಲ್ಲಿಸುವುದೂ ಮರೆತು ಹೋಯಿತೇನೋ, ತಕ್ಷಣ ನಾಲಿಗೆ ಕಚ್ಚಿ "ವಂದನೆಗಳು !" ಎಂದಳು.

ಅವನನ್ನು ಕಾಲೇಜಿನಲ್ಲಿ ನೋಡಿದ್ದುಂಟು. ಆದರೆ ಗುರುತು ಮೂಡಲಿಲ್ಲ.

"ನೀನು ಹೋಗುತ್ತಿರುವುದೆಲ್ಲಿಗೆ ?"

"ಮೈಸೂರು ಬ್ಯಾಂಕಿಗೆ."

ಇದೆಲ್ಲಾ ಏಕೆ ಬೇಕು ಇವನಿಗೆ ಎನಿಸಿದರೂ ತಿರಸ್ಕಾರ ಭಾವನೆ ಮೂಡಲಿಲ್ಲ. ಯಾರಿರಬಹುದು ಎಂಬ ಯೋಚನೆಯಲ್ಲಿ ಮುಳುಗಿದಳು ಅವಳು.

"ಬ್ಯಾಂಕಿನಲ್ಲಿ ಕೆಲಸ ಸಿಕ್ಕಿದೆಯೇ ?"

"ಹೌದು......"

"ಎಂತಹ ಅನಿರೀಕ್ಷಿತ ? ನನಗೂ ಸಿಕ್ಕಿದೆ. ನಾನೂ ಹೋಗುತ್ತಿರುವುದೂ ಅಲ್ಲಿಗೇ. ಇಂದೇ ಮೊದಲು ಹೋಗುತ್ತಿರುವೆಯಾ ?"

“ಹೌದು” ಎಂಬಂತೆ ತಲೆದೂಗಿ ಸಮ್ಮತಿ ಸೂಚಿಸಿದಳು ಹುಡುಗಿ.

“ನಾನೂ ಇಂದೇ ಹೋಗುತ್ತಿರುವೆ. ಅನಿರ್ವಚನೀಯವಾದ ಅದೃಷ್ಟ ರೇಖೆ ! ತುಂಬ ಧನ್ಯವಾದಗಳು !”

“ಆಗಲೇ ಹೇಳಿದ್ದೀರಲ್ಲ ಮತ್ತೇಕೆ ?”

“ಆಗ ಹೇಳಿದ್ದು, ಪ್ರಥಮ ಶ್ರೇಣಿಯ ಉತ್ತೀರ್ಣತೆಗಾಗಿ. ಈಗ ಬ್ಯಾಂಕಿನ ಕೆಲಸಕ್ಕಾಗಿ.”

“ಥ್ಯಾಂಕ್ಸ್ ! ನಿಮಗೂ ತುಂಬಾ ಅಭಿನಂದನೆಗಳು !”

“ಬಸ್ಸು ಹಿಡಿಯುವುದು ಬೇಡ. ನಾವು ನಡೆದೇ ಹೋಗೋಣ. ಇದೇ ಹಿತಕರ.”

ಇಷ್ಟೊತ್ತಾದರೂ ಅವನ ಗುರುತು ಹಿಡಿಯಲಾಗಲಿಲ್ಲ ಅವಳಿಗೆ. ಬಾಯಿ ಬಿಟ್ಟು ಕೇಳುವುದಕ್ಕೆ ಪೂರಾ ಸಂಕೋಚ. ಸುಮ್ಮನೆ ಮರು ಮಾತಿಲ್ಲದೆ ಹೆಜ್ಜೆ ಹಾಕಿದಳು.

“ಓದು ಮುಗಿದ ತಕ್ಷಣ ಕೆಲಸ ಸಿಕ್ಕಿತು. ಎಂದೋ ಅರ್ಜಿ ಹಾಕಿದ್ದೆ. ಸಮಯಕ್ಕೆ ಸರಿಯಾಗಿ ಸಿಕ್ಕಿತು ಎಂದು ಸೇರಿಕೊಂಡೆ. ಮುಂದೆ ಏನಾದರೂ ಬಿಜಿನೆಸ್ ಮಾಡುವ ಯೋಚನೆ ಇದೆ.”

“ನನಗಿದೆಲ್ಲಾ ಬೇಕಿಲ್ಲವಲ್ಲಾ...ಏಕಾದರೂ ಇದರ ವರದಿ ?” ಚೀರಿತು ಅಂತರಂಗ. ಅವಳು ಏನೂ ಹೇಳಲಿಲ್ಲ. ಆದರೂ ಅವನು ಯಾರೆಂಬುದು ಹೊಳೆಯಲಿಲ್ಲ.

ಇಬ್ಬರೂ ಒಂದೇ ಬಾರಿಗೆ ಬ್ಯಾಂಕನ್ನು ಸಮಿಾಪಿಸಿದರು.

“ನೀನು ಇದೇ ಬ್ರ್ಯಾಂಚಿಗೆ ?”

“ಹೌದು.”

“ನಾನೂ ಇಲ್ಲಿಗೆ....” ಅವನು ನಕ್ಕುಬಿಟ್ಟ, ಹೆಸನಾದ ನಗೆಯಲೆ ಕಿವಿಗಳನ್ನು ತಾಗಿತು.

ಅವಳು ಮಾತಾಡದೆ ಮುಗುಳು ನಕ್ಕಳು. ಇಬ್ಬರೂ ಸಾಲುಮೆಟ್ಟಿಲು ಗಳನ್ನು ಹತ್ತಿ ಒಳಗಡೆ ಹೋದರು. ಅವನು ಮ್ಯಾನೇಜರನ್ನು ಕಂಡು ತನ್ನ ಪರಿಚಯವನ್ನು ಎಂ. ಹರ್ಷ ಎಂದನಂತರ ನಾಗಮಣಿಯನ್ನೂ ತುಂಬಾ ಹೆಮ್ಮೆಯಿಂದಲೇ ರಾಜ್ಯಕ್ಕೆ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾದವಳೆಂದು ಪರಿಚಯಿಸಿದ. ಹಾಗೆಯೇ ಸಹೋದ್ಯೋಗಿಗಳಿಗೂ ತಾನೇ ಪರಿಚಯ ಮಾಡಿ ಸಿದ.

ಅವನು ಎಂ. ಹರ್ಷ ಎಂದು ಹೇಳಿಕೊಂಡ ಬಳಿಕ ಅವನು ಸ್ಟೂಡೆಂಟ್ಸ್ ಯೂನಿಯನ್ನಿನಲ್ಲಿ ತುಂಬಾ ಪ್ರಭಾವೀ ವ್ಯಕ್ತಿಯೆಂಬುದು ತಟ್ಟನೆ ಹೊಳೆ ಯಿತು ಮನಸ್ಸಿಗೆ. ಅವನು ಎಲ್ಲಾ ಬಗೆಯ ಚಟುವಟಿಕೆಗಳಲ್ಲೂ ಅಗ್ರಗಣ್ಯ. ಓದಿನಲ್ಲೂ ಕೂಡ ಎಂಬುದನ್ನು ನೆನಪಿಸಿಕೊಂಡು ತನ್ನ ಮರೆವಿಗೆ ತಾನೇ ನಾಚಿಕೊಂಡಳು. ತಾನು ಮರೆತುದು ತನಗೇ ಆಶ್ಚರ್ಯ ಎನಿಸಿದರೂ ಮರು ನುಡಿಯಲಾಗಲಿಲ್ಲ. ಅವನೇ ಎಲ್ಲರಿಗೂ ಪರಿಚಯಿಸಿದ್ದರಿಂದ ತಾನು ಹೇಳಿ ಕೊಳ್ಳುವ ಪ್ರಸಂಗವೂ ಬರಲಿಲ್ಲ. ಸಹ ಮಹಿಳಾ ಉದ್ಯೋಗಿಗಳು ಮುಗುಳು ನಗೆಯ ಸ್ವಾಗತ ನೀಡಿದರು.

"ಹೀಗೆಯೇ ಬಾ. ಇಲ್ಲಿಯೇ ಕುಳಿತುಕೋ" ಎಂದಳು ಕಮಲ.

"ಥ್ಯಾಂಕ್ಯೂ...."

ಕಮಲೆಯ ಮಗ್ಗುಲಿನ ಕುರ್ಚಿಯಲ್ಲಿಯೇ ಕುಳಿತು ಕೆಲಸ ಆರಂಭಿಸಿ ದಳು. ಅವಳು ಹೇಳಿದಂತೆಯೇ ಟ್ರೈನಿಂಗ್ ಪೀರಿಯಡ್ ಆರಂಭವಾಯಿತು.

"ಮೊದಲ ದಿನ ನಿನಗೆ ಸ್ವಲ್ಪ ತ್ರಾಸವಾಗಬಹುದು. ಅನಂತರ ಹೊಂದಿ ಕೊಳ್ಳುತ್ತಿ."

ಹಾಗೆಂದವಳು ಹಿರಿಯ ಉದ್ಯೋಗಿನಿ ರಾಧಾ ಹರಿದಾಸ್.

"ನೀವೆಲ್ಲಾ ಇದ್ದೀರಷ್ಟೆ...."

ಹರ್ಷ ಹರ್ಷಮಯವಾಗಿಯೇ ಕೆಲಸ ಮಾಡಿದ. ಅವನ ಪಟುತ್ವ, ಸ್ನೇಹ ಸ್ವಭಾವಗಳನ್ನು ಯಾರಾದರೂ ಮೆಚ್ಚುವಂತಾದ್ದು. ಅವನು ಲಂಚ್

ಬಾಕ್ಸ್ ತಂದಿರಲಿಲ್ಲ. ಮಧ್ಯಾಹ್ನ ಪಕ್ಕದ ಕ್ಯಾಂಟೀನಿಗೆ ಹೋಗಿ ಬಂದ. ನಾಗಮಣಿ ತಾನು ತಂದಿದ್ದ ಸ್ಯಾಂಡ್‌ವಿಚ್‌ನಿಂದ ಊಟ ಮುಗಿಸಿದಳು. ವಿಪರೀತ ಜನ ಒತ್ತಡವಿದ್ದುದರಿಂದ ನಿಮಿಷವೂ ಬಿಡುವು ಸಿಗದಷ್ಟು ಕೆಲಸ.

ಹಗಲು ಉರುಳಿತು. ಸಂಜೆ ಅಡರುತ್ತಿದೆ.

o o o o

ಹರ್ಷ ಹೊರಟು ನಿಂತಾಗ 'ನಾಗಮಣಿ ?' ಎಂದ.

ಆ ಕರೆಗೆ ಮುಖವನ್ನೆತ್ತಿ 'ಏನು ?' ಎಂಬಂತೆ ನೋಡಿದಳು ಅವಳು. ಜೊಗಸೆಗಂಗಳ ನೇರ ದೃಷ್ಟಿ ಇತ್ತ ಹೊರಳಿದಾಗ ಗುಳಿ ಬಿದ್ದ ಚೆಂಗೆನ್ನೆಗಳ ಸುಂದರ ಮುಖಬಿಂಬ ಬಲೂ ಆಪ್ಯಾಯಮಾನವಾಗಿ ತೋರಿತು. ದೃಷ್ಟಿಯನ್ನು ವಿಚಲಿಸದೆ ನೋಡಿದ. ಅಂತರ್ವಾಣಿ ಉದ್ಗರಿಸಿತು 'ಕೆಸರಿನಲ್ಲಿ ಕಮಲ.'

"ಹೊರಡೋಣವೇ ?"

ಒಡನೆ ಅವಳ ನೋಟವೊಮ್ಮೆ ಸುತ್ತಲೂ ಹರಿದು ಹಿಂಜರಿಯಿತು. ಸಮಯವಾಗಿದೆ ಎಲ್ಲರೂ ಹೊರಡುವ ಸಿದ್ಧತೆಯಲ್ಲಿದ್ದಾರೆ. ತನಗದರ ಪರಿವೆ ಇಲ್ಲವಲ್ಲಾ ಎನಿಸಿ 'ಆಯಿತು' ಎಂದಷ್ಟು ನುಡಿದು ಕೈಯ್ಯಲ್ಲಿದ್ದ ಲೆಡ್ಜರನ್ನು ಮುಚ್ಚಿ ಗೂಡಿನಲ್ಲಿಟ್ಟಳು. ಮೇಜಿನ ಮೇಲಿದ್ದ ಕಾಗದಗಳು ಟ್ರೇಯನ್ನು ಸೇರಿದುವು. ಕೆಲಸ ಅರುಗಾಯಿತು. ಅವಳು ತನ್ನ ಬ್ಯಾಗಿನ ಸಹಿತ ಎದ್ದು ನಿಂತು ಗೆಳತಿಯರಿಗೆ ಕಣ್ಸನ್ನೆಯಿಂದಲೇ ವಿದಾಯ ಹೇಳಿದಳು. ಬಳಿಕ ಅವನ ಹಿಂದೆ ಹೊರಟಾಗ ಅವನು ಪರಕೀಯ ಎನಿಸಲೇ ಇಲ್ಲ. ಬಹು ದಿನಗಳ ಒಡನಾಟವಿದ್ದರೂ ಅವನಲ್ಲಿ ಆತ್ಮೀಯತೆ ಬೆಳೆದಿರಲಿಲ್ಲ ಕಾಲೇಜಿನಲ್ಲಿದ್ದಾಗ. ಇಂದು ಒಮ್ಮೆಗೇ ಗಗನ ಮುಟ್ಟದಂತೆ ಉದ್ದಂಡವಾಗಿ ಬೆಳೆದಿದೆ ಸ್ನೇಹ ಬಳ್ಳಿ. ಎಂತಹ ಆಶ್ಚರ್ಯ ! ವಿಚಾರ ವಿಪ್ಲವ ಮನಮತಿಗಳನ್ನು ಗಾಣಕ್ಕೆ ಕೊಟ್ಟಿತು. ಅವನು ಕರೆದೊಡನೆಯೇ ಮಂತ್ರಮುಗ್ಧಳಂತೆ ತಾನು ಹೊರಟಿದ್ದಾದರೂ ಏಕೆ ? ಇದೇನು ಹುಚ್ಚೆ ? 'ನನ್ನತನ'ವನ್ನು ಸುಲಭದಲ್ಲಿ ಬಿಟ್ಟುಕೊಟ್ಟ

ದಂತೂ ಆಶ್ಚರ್ಯ, ಪರಮಾಶ್ಚರ್ಯ ! ತನಗೆ ತಾನೇ ಆಶ್ಚರ್ಯ ಚಿನ್ಹೆಯಾದಳು ಹುಡುಗಿ.

ಸ್ವಲ್ಪ ದೂರ ಮಾತಿನ ಗೋಜಿಲ್ಲದೆ ಸಾಗಿತು ಹಾದಿ. ಅನಂತರ ಅವನೇ ಮೌನ ಮುರಿದ "ಬಸ್ಸು ಪಯಣಕ್ಕಿಂತ ಹೀಗೆ ನಡೆದು ಹೋಗುವುದೇ ಲೇಸು. ಅಂದರೆ ನಿನ್ನಂತಹ ಆತ್ಮೀಯರು ಜೊತೆಗಿದ್ದರೆ ಮಾತ್ರ ಎನಿಸುತ್ತೆ ನನಗೆ. ನೀನೇನ್ನೆನುತ್ತಿ ?"

ತಲೆಯಾಡಿಸಿ ಸಮ್ಮತಿ ಸೂಚಿಸಿದಳು ಅವಳು. ತುಟಿಗಳು ಬಿರಿಯಲಿಲ್ಲ. ಅರೆ! ಈಗಾಗಲೇ ನಾನು ಆತ್ಮೀಯಳಾದುದು ಹೇಗೆ ಎಂಬ ಪ್ರಶ್ನೆಯೆದ್ದಿತು ಮನದಲ್ಲಿ.

"ಏಕೆ, ಮೌನಿಯಾಗಿಬಿಟ್ಟೆಯಲ್ಲಾ, ಸಂಕೋಚವೇ ?"

ಸ್ವಲ್ಪ ಹೊತ್ತು ತುಟಿಗಳು ಬಿರಿಯಲಿಲ್ಲ, ಯೋಚನೆಯಲ್ಲಿ ಮುಳುಗಿ ಸುಮ್ಮನಾದಳು.

"ವಿಷಯ ಹೆಚ್ಚಿನದೇನಲ್ಲ ಬಿಡಿ...."

"ಹಾಗಾದರೆ ನೀನು ಗಂಭೀರ ವಿಷಯಗಳಲ್ಲಿ ಮಾತ್ರ ವಿಹರಿಸುವವಳು?"

"ಹಾಗೇನಿಲ್ಲ...." ಮುಗುಳು ನಕ್ಕಳು ನಾಗಮಣಿ.

"ಇಗೋ, ಇಲ್ಲಿಯೆ ರಸ್ತೆ ದಾಟೋಣ. ವಾಹನಗಳಾವುವೂ ಕಾಣುತ್ತಿಲ್ಲ."

ಇಬ್ಬರೂ ರಸ್ತೆಗಿಳಿದರು. ಗಳಿಗೆಯೊಂದರಲ್ಲಿ ರಸ್ತೆ ದಾಟಿ ಮುಂದಿನ ಫುಟ್‌ಪಾತಿಗೆ ಕಾಲಿಡುವ ಮುನ್ನ ಅವಸರಪಟ್ಟ ಅವಳ ಕಾಲು ಬೆರಳಿನ ಉಗುರು ಕಲ್ಲಿನಂಚಿಗೆ ತಾಗಿ ರಕ್ತ ಬಸಿಯಿತು. ಅವಳು ಮೈ ಬಾಗಿ ಬೆರಳನ್ನು ಒತ್ತಿ ಹಿಡಿದಳು.

"ಏನಾಯ್ತು, ಮಣಿ ?"

"ಉಗುರು ಕಿತ್ತು ರಕ್ತ ಬಂದಿದೆ. ಸಣ್ಣ ಗಾಯ, ಪರವಾಯಿಲ್ಲ."

ಆ ಕಾಲುಗಳು ನಿಜವಾಗಿಯೂ ಪದ್ಮ ಸುಂದರ. ಹರ್ಷ ಮೈಯೆಲ್ಲ ಹರ್ಷಮಯವಾಗಿ ನಿಜ ಪ್ರಣಯಾರ್ಥಿಯಾಗಿ ನೋಡಿದ. ಕಣ್ಣುಗಳಲ್ಲಿ ಆಸೆಯ ಛಾಯೆ ಮಿಂಚಿತು.

ಅವಳು ಒಂದೆರಡು ಗಳಿಗೆ ಒತ್ತಿ ಹಿಡಿದು ನೆತ್ತರಿಗೆ ತಡೆ ಹಾಕಿದನಂತರ ಹೊರಡಲು ಅಣಿಯಾದಳು. ನೋಟ ಮತ್ತೆ ಮತ್ತೆ ತುದಿ ಬೆರಳನ್ನು ನಿಟ್ಟಿಸಿತು. ರಕ್ತ ಸ್ರಾವವಿರಲಿಲ್ಲ.

"ನೋಡು, ಮಣಿ ! ಇಬ್ಬರೂ ಒಂದೇ ಬಾರಿಗೆ ಉತ್ತೀರ್ಣರಾದವರು. ಒಂದೇ ಬಾರಿಗೆ ಬ್ಯಾಂಕಿಗೆ ಪದಾರ್ಪಣೆ ಮಾಡಿದವರು. ಮುಂದೆಯೂ ಹಾಗೆಯೇ ಒಂದು ಒಳ್ಳೆಯ ಮುಹೂರ್ತದಲ್ಲಿ ಜೀವನಕ್ಕೂ ಕಾಲಿಡೋಣ. ಪರಸ್ಪರ ಹೃನ್ಮನಗಳು ಬೆಸೆದುಕೊಳ್ಳಲು ತುಳಿದಿರುವ ಹಾದಿ ಅನುಕೂಲಕರ. ನೀನೇನೆನ್ನುತ್ತಿ ?"

ಅವಳು ತಲೆಯೆತ್ತದೆಯೇ ಲಜ್ಜಾಮೂರ್ತಿಯಾಗಿ ಬಿತ್ತರಿಸಿದಳು,

"ಈಗಲೇ ಅವಸರವಿಲ್ಲ."

ಪಕ್ಕದಲ್ಲೇ ಪಾರ್ಕು. ಹಚ್ಚ ಹಸುರಿನ ಸಸ್ಯಕೋಟಿಯ ಒಕ್ಕೂಟ. ಸಾಲಾದ ಬೆಂಚುಗಳು. ಬಾ ಬಾರೆಂದು ಕೈ ಬೀಸಿ ಕರೆಯುವ ಪರಿಸರ.

"ಹತ್ತು ನಿಮಿಷ ಅಲ್ಲಿ ಕುಳಿತು ಮಾತಾಡೋಣ."

"ಈಗಲೇ ಬೇಡಿ. ದಿನಾ ಇಲ್ಲಿ ಓಡಾಡುವುದು ಉಂಟಷ್ಟೆ ? ಎಂದಾದರೂ ಮಾತಾಡಬಹುದು ಏಕಷ್ಟು ಅವಸರ ? ದಯಮಾಡಿ ಕ್ಷಮಿಸಿ."

"ನೀನೇನೂ ಚಿಂತಿಸಬೇಡ, ಅಥವಾ ಭಯ ಪಟ್ಟುಕೊಳ್ಳಬೇಡ. ಕೇವಲ ಹತ್ತು ನಿಮಿಷ."

ಅವನು ಒತ್ತಾಯದಿಂದ ಭುಜದ ಮೇಲೆ ಕೈಯಿಟ್ಟುಕೊಂಡೇ ಪಾರ್ಕಿನ ಒಳಾಂತರಕ್ಕೆ ಕಾಲಿಟ್ಟ. ಇಬ್ಬರೂ ಬೆಂಚಿನ ಮೇಲೆ ಕುಳಿತರು. ಸುಂದರ ಪುಷ್ಪ ರಾಜಿ, ಸುಂದರ ಶಾಂತ ವಾತಾವರಣ.

ಅವಳು ನಸು ಉದ್ವೇಗದಿಂದಲೇ ನುಡಿದಳು "ನಿಮ್ಮಂತೆ ನಾವು ಜಮೀನ್ದಾರರಲ್ಲ. ಅಪ್ಪನ ಗುಮಾಸ್ತಿಕೆಯೇ ನಮಗೆ ಜೀವನಾಧಾರ. ಅವರಿಂದು ನಿವೃತ್ತಿ ಹೊಂದಿದ ಬಲೂ ಗಣ್ಯ ವ್ಯಕ್ತಿ. ಅವರ ಭಾರವನ್ನು ನಾನು ನಿರ್ವಹಿಸುತ್ತೇನೆಂದು ಭರವಸೆ ಕೊಟ್ಟಿರುವೆ. ನನಗೆ ತುಂಬಾ ಜವಾಬ್ದಾರಿಯಿದೆ. ಇನ್ನು ಮೂರು ನಾಲ್ಕು ವರ್ಷ ನನಗೆ ಕೈ ಬಿಡುವು ದೊರೆಯದು. ಅನಂತರ ನೋಡೋಣ. ಅಲ್ಲಿಯತನಕ ನಾನು ಸ್ವತಂತ್ರಳಲ್ಲ...."

"ಕೇಳು, ನಾಗಮಣೀ, ನಾನು ನಿನ್ನ ಸ್ವಾತಂತ್ರ್ಯಹರಣಗೈಯ್ಯುವವನಲ್ಲ. ನೀನು ಕೆಲಸ ಮಾಡುವುದರಲ್ಲಿ, ನಿನ್ನವರ ಕ್ಷೇಮ ಗಮನಿಸುವುದರಲ್ಲಿ ನನ್ನ ಅಡ್ಡಿಯೇನಿರುವುದಿಲ್ಲ....ಮುಂದೆ ನಾನು ಈ ಉದ್ಯಮದಲ್ಲಿಯೇ ಮುಂದುವರಿಯುತ್ತೇನೆ ಎಂದೇನಿಲ್ಲ. ಕೆಲಸ ಸಿಕ್ಕಿದೆ. ಸಧ್ಯಕ್ಕೊಂದು ವೃತ್ತಿ ಅಷ್ಟೆ. ಮುಂದೇನು ಎಂಬುದನ್ನು ನಾನಿನ್ನೂ ನಿರ್ಧರಿಸಿಲ್ಲ. ನಾನು ಜಾತಿ ವರ್ಗಗಳನ್ನು ಗಮನಿಸುವವನಲ್ಲ. ಶ್ರೀಮಂತಿಕೆ ಬಡತನ ಇವುಗಳನ್ನು ಲೆಕ್ಕಿಸುವವನಲ್ಲ. ಬದುಕು ಶಾಂತಿ ಸಂತೋಷಗಳಿಂದ ಕೂಡಿದ್ದರೆ ಸಾಕು. ನೀನೇನು ಹೇಳುತ್ತಿ ?"

"ಇಂದಿನ ಪ್ರಸಂಗ ತುಂಬಾ ಆಶ್ಚರ್ಯಕರ. ನಾನು ನಿಮ್ಮನ್ನು ಕಾಣುವುದನ್ನು ಕನಸಿನಲ್ಲೂ ಎಣಿಸಿರಲಿಲ್ಲ. ಅಷ್ಟೇ ಅಲ್ಲ, ನಿಮ್ಮೊಂದಿಗೆ ಮಾತುಕತೆಯಲ್ಲಿ ಪಾಲ್ಗೊಳ್ಳುತ್ತಿರುವೆ. ಇದು ನಿಜಕ್ಕೂ ಅನಿರೀಕ್ಷಿತ. ಎಷ್ಟು ಬೇಗ ನಿಮ್ಮ ಮಾತಿಗೆ ಒಪ್ಪಿ ನಿಮ್ಮೊಂದಿಗೆ ಬಂದಿರುವೆ. ಇದು ಆಶ್ಚರ್ಯವಲ್ಲವೆ ? ಇದು 'ನನ್ನತನ'ವನ್ನೇ ಕಳೆದುಕೊಂಡಂತಲ್ಲವೇ ?"

"ಹಾಗೆನ್ನುವುದರಲ್ಲಿ ಅರ್ಥವಿಲ್ಲ ಬಿಡು. ಸರ್ವ ಸಮಾನತೆ ಇರುವಾಗ 'ನಿನ್ನತನ' ಕಳೆಯುವುದು ಹೇಗೆ ಮಣೀ ?"

"ಇಷ್ಟು ಸುಲಭವಾಗಿ ಮಾರು ಹೋಗಿದ್ದು..."

"ಇದರಲ್ಲಿ ಅಂತಹ ವಿಶೇಷವೇನಿಲ್ಲ ಬಿಡು. ನಾನು ಹೇಗೆ ನಿನಗೆ ಶರಣಾದೆನೋ ಹಾಗೆಯೇ ನೀನು. ನಿನಗೆ ಆಗಲೇ ಹೇಳಿದೆನಲ್ಲಾ, ನಾನೆಂದೂ ನಿನ್ನ

ಸ್ವಾತಂತ್ರ್ಯಹರಣಗೈಯ್ಯುವುದಿಲ್ಲ. ಎಲ್ಲರೂ ಅವರವರ ಇಚ್ಛಾನುಪ್ರಕಾರ ಸ್ವತಂತ್ರರು. ಅಂದಮೇಲೆ, ನಾನೇಕೆ ನಿನ್ನ ಹಾದಿಗೆ ಮುಳ್ಳಾಗಲಿ?"

"ಹಾಗಿದ್ದರೆ ಸಂತೋಷವೇ....ಈಗಲೂ, ಈ ಇಪ್ಪತ್ತನೇ ಶತಮಾನದ ತುತ್ತ ತುದಿಯಲ್ಲೂ ಸ್ತ್ರೀ ಸ್ವಾತಂತ್ರ್ಯವನ್ನು ಅಲ್ಲಗಳೆಯುವವರೇ ಬಹುತೇಕ ಮಂದಿ. ಅಂತಲೇ, ನಾನು ನಿಮ್ಮನ್ನು ಕೇಳಿಕೊಂಡದ್ದು."

"ಅಧೈರ್ಯ ಬೇಡವೇ ಬೇಡ...."

"ನನ್ನ ಒಡಹುಟ್ಟಿದವರು ಒಳ್ಳೆಯ ಗುಣವಂತರು. ಅದೊಂದು ಸಂತೋಷದ ವಿಷಯ. ತಂದೆ ತಾಯಿಯರೂ ಅಷ್ಟೆ, ಅವರು ನನ್ನ ವಿವಾಹಕ್ಕೆ ಜಾತಿ–ನೀತಿಗಳಿಂದ ತಲೆ ಕೆಡಿಸಿಕೊಳ್ಳುವುದಿಲ್ಲ. ಆ ವಿಚಾರದಲ್ಲಿ ನನಗೆ ಸಂಪೂರ್ಣ ಸ್ವಾತಂತ್ರ್ಯವಿದೆ. ಆದ್ದರಿಂದ ನಾನು ಧನ್ಯೆ."

ಹರ್ಷ ಪ್ರಸನ್ನ ಮುಖದಿಂದ ಅವಳ ಮೃದು ಕೈಗಳನ್ನು ಅದುಮಿ ಹಿಡಿದುಕೊಂಡು ಪ್ರೇಮಾತಿಶಯದಿಂದ ತನ್ನ ತಲೆಯನ್ನು ಅವಳ ತಲೆಗೆ ಗಟ್ಟಿಸಿ ನುಡಿದ,

"ನಾವು ಯೋಚಿಸಿರುವುದೊಂದು ಆಗುವುದೊಂದು. ಎಷ್ಟೋ ಸಂದರ್ಭಗಳಲ್ಲಿ ನಮ್ಮ ಯೋಜನೆಗಳೇ ನಮಗೆ ಉರುಳಾಗುತ್ತವೆ. ಅಂದಮೇಲೆ, ಹೀಗೊಂದು ರೀತಿಯಲ್ಲಿ ನಮ್ಮ ನಮ್ಮ ಆತ್ಮ ಸಂಬಂಧ ಪ್ರೇಮಪೂರ್ವಕವಾಗಿ ಬೆಸೆಯುತ್ತಿರುವುದು ಪೂರ್ವ ಪುಣ್ಯವೇ ಸರಿ. ನಿನ್ನ ಒಪ್ಪಿಗೆಯಿಂದ ನನಗಿಂದು ಸ್ವರ್ಗದ ಬಾಗಿಲು ತೆರೆಯಿತು ಮಣೀ !"

"ಆದರೂ, ಈ ಜೀವನವನ್ನು ನಾವು 'ಹೀಗೆ' ಎಂದು ನಿರ್ಧರಿಸುವುದು ಕಷ್ಟವೇ. ನಮ್ಮ ಜೀವನದ ಹಾದಿ ಉದ್ಯಾನದ ಹಾದಿಯಂತೆ ಸುಸುಂದರವಾಗಿರಲಿ ಎಂದು ಆಶಿಸೋಣ. ಈ ಜೀವನ ಯಾವತ್ತೂ 'ಆದರೆ' ಮಯ. ಈ ಆದರೆಯಿಂದ ಯಾವ ಯಾವ ಕಾರಣಗಳು ಮುಳ್ಳು ಮುಗ್ಗಟ್ಟುಗಳಂತೆ ಹುಟ್ಟಿಕೊಳ್ಳುವವೋ...ಏನಿದ್ದರೂ ದೃಢವಾಗಿ ನಿಭಾಯಿಸಿಕೊಳ್ಳುವ ಮನಸ್ಸಿದ್ದರೆ ಆಯಿತು. ಅದನ್ನು ಮುಂದೆ ನೀನಾಗಲೀ ನಾನಾಗಲೀ ಮರೆಯಬಾರದು."

"ಬಿಡು ಬಿಡು. ಆ ಚಿಂತೆ ನಿನಗೆ ಬೇಡವೇ ಬೇಡ. ನಿನ್ನ ದುಡಿಮೆಯನ್ನು ನಿನ್ನವರಿಗೆ ಕೊಡುವುದರಲ್ಲಿ ನನ್ನ ಆಭ್ಯಂತರವೇನೂ ಇರುವುದಿಲ್ಲ."

ಹರ್ಷ ಆ ಮಾತನ್ನು ಸಂತಸಮಯವಾಗಿಯೇ ನುಡಿದಿದ್ದ. ಆತನ ವಿಶಾಲ ಮನೋಭಾವವನ್ನು ಮೆಚ್ಚಿಕೊಂಡಳು ಹುಡುಗಿ. ಆದರೂ, ನಾನು ಇಷ್ಟು ಬೇಗನೆ ಒಪ್ಪಿಕೊಂಡದ್ದು ಸರಿಯೇ? ಕಾದು ನೋಡಬೇಕಾಗಿತ್ತು. ಈಗಲೇ ಒಪ್ಪಿಗೆ ಕೊಟ್ಟೆನೇಕೆ? ಎಂಬ ಪ್ರಶ್ನೆ ಫಣಿಯಂತೆ ಹೆಡೆಯುತ್ತಿತ್ತು ತಲೆಯಲ್ಲಿ. ನಾಗಮಣಿ ಸ್ವಲ್ಪ ತಬ್ಬಿಬ್ಬಾದಳು. ವಿಚಾರ ಶಕ್ತಿಯಿಂದ ಮನ ದಲೆಗಳು ಧುಮುಧುಮಿಸಿದುವು. ಸ್ವಲ್ಪ ಹೊತ್ತು ಸ್ತಬ್ಧ ಗತಿಯಲ್ಲಿ ಯೋಚಿಸಿ ದಳು ದೂರ ಭವಿಷ್ಯವನ್ನು ಕುರಿತು.

ನಾಗಮಣಿಯ ಗಂಭೀರ ಸ್ಥಿತಿಯನ್ನು ಗಮನಿಸಿ ಅವನೆಂದ "ನೀನು ನನ್ನನ್ನು ಅರಿಯದಿರಬಹುದು. ನಾನು ಬಹು ಕಾಲದಿಂದ ನಿನ್ನ ಸ್ವಭಾವ ವನ್ನು ಅವಲೋಕಿಸಿರುವೆ. ನೀನೇನೂ ಚಿಂತಿಸಬೇಡ. ಮುಂದೆ ನಮ್ಮ ಜೀವನ ತುಂಬಾ ಆದರ್ಶಪ್ರಾಯವಾಗಿರಲಿ. ನಿನ್ನ ಸಂಸಾರವನ್ನಾಗಲೀ, ನನ್ನ ಸಂಸಾರ ವನ್ನಾಗಲೀ ನಾವು ನಿರ್ಲಕ್ಷಿಸಬಾರದು. ಎರಡೂ ಮನೆತನಗಳ ಗೌರವ–ಪ್ರೀತಿ–ವಿಶ್ವಾಸಗಳನ್ನು ನಾವು ಸಾರೋದ್ಧಾರವಾಗಿ ಬೆಳೆಸಿಕೊಳ್ಳೋಣ. ಯಾರಿಗೂ ನಮ್ಮಿಂದ ನೋವಾಗದಿರಲಿ...ಎಂದರೆ ನೀನೇನು ಹೇಳುತ್ತಿ ?"

"ಅಯ್ತಾಯ್ತು. ನಿಮ್ಮ ಇಚ್ಛೆಯೇ ನನ್ನಿಚ್ಛೆ.' ನುಡಿ ಎದೆಯಾಳದಿಂದ ಹೊರಬಂತು.

"ಮುಂದೆ ಯಾವ ಕಾರಣಕ್ಕೂ ಪರಸ್ಪರ ಸಹಕಾರವನ್ನು ಕೈ ಬಿಡ ಬಾರದು."

"ಆಗಲಿ...ನೀವು ಹೇಗೆ ಹೇಳಿದರೆ ಹಾಗೆ."

ಪ್ರತಿಯೊಂದು ಮಾತಿಗೂ ತಾನು ಮಂತ್ರಮುಗ್ಧಳಂತೆ 'ಹ್ಞೂಂ' ಎನ್ನುತ್ತಿದ್ದುದು ತನಗೇನೇ ಆಶ್ಚರ್ಯ. ಹೇಗೆ ಇಷ್ಟೊಂದು ಪರವಶಳಾದೆ ? ಎಂಬ ಯೋಚನೆ ಏಳದಿರಲಿಲ್ಲ.

ಹರ್ಷ ಆನಂದತುಂದಿಲನಾದ. ಅವಳ ತಲೆ–ಬೆನ್ನುಗಳನ್ನು ಪ್ರೇಮಾತಿಶಯದಿಂದ ನೇವರಿಸಿದ. ಕಣ್ಣುಗಳಲ್ಲಿ ಆತ್ಮದ ಮಿಂಚು ಮಿಂಚಿತು. ಹೃದಯದ್ವಯಗಳು ಸಾನಂದದಿಂದ ಮಿಡಿದುವು. ಅವನ ಎದೆಯಲ್ಲಿ ಮುಖವನ್ನು ಹುಗಿದು ಸುರಕ್ಷೆಯನ್ನು ಪಡೆದಳು ಅವಳು. ಆ ಮಧುರ ಕ್ಷಣಗಳು ಉರುಳಿದುದೇ ತಿಳಿಯದಷ್ಟು ಕಮನೀಯವಾಯ್ತು ಹೊತ್ತು.

○ ○ ○ ○

ವರ್ಷಮಾನವೊಂದು ಉರುಳಿ ಹೋಯಿತು. ಅದರೊಂದಿಗೆ ಪ್ರೇಮಾನುರಾಗ ನೀರು ಗೊಬ್ಬರ ಉಣಿಸಿದ ಸಸಿಯಂತೆ ನಳನಳಿಸಿ ಬೆಳೆಯುತ್ತಲೇ ಇತ್ತು. ಅವರಿಬ್ಬರೂ ನವ ಪ್ರೇಮಿಗಳೆಂದು ಪ್ರಥಮ ದಿನವೇ ಪರಿಭಾವಿಸಿದ್ದ ಸಹೋದ್ಯೋಗಿಗಳು ವಿಷಯಕ್ಕೆ ರೆಕ್ಕೆ ಪುಕ್ಕ ಬೆಳೆಸುವ ಗೋಜಿಗೆ ಹೋಗಲಿಲ್ಲ. ಉದ್ಯಾನದ ಹಾದಿಯಂತೆ ಸುಸುಂದರವಾಯಿತು ಅವರ ಹಾದಿ. ಸರ್ವೇಸಾಮಾನ್ಯವಾಗಿ ಇಬ್ಬರೂ ಹೋಗಿ ಬರುವುದು ಏಕ ಕಾಲಕ್ಕೆ. ಅವನ ಮನೆಯ ದಿಕ್ಕು ಬೇರೆಯಾದರೂ ಕೂಡು ರಸ್ತೆಯವರೆಗೆ ಪಯಣ ಹಿಂದುಮುಂದಾಗದು. ಇಬ್ಬರೂ ತಮ್ಮವರಿಗೆ ಪ್ರೇಮ ಪ್ರಕರಣದ ಸುಳಿವು ಕೊಟ್ಟಿರಲ್ಲ. ಈಗಾಗಲೇ ಏಕೆ ಅವಸರ? ಮುಂದೆ ತಿಳಿಸಿದರಾಯಿತು ಎಂಬ ಭಾವ.

ಅಂದು, ಮನೆಯ ಹಾದಿ ಹಿಡಿದ ಹರ್ಷ ನಾಗವೇಣಿಗೆಂದ "ನನಗೆ ತಂದೆಯವರಿಗೆ ತಿಳಿಸಿ ಅವರ ಅಪ್ಪಣೆ ಪಡೆಯುವ ಇಚ್ಛೆ. ಆದರೆ ಅವರು ಮೊದಲಿನಿಂದಲೂ ದರ್ಪಮನೋಭಾವದ ಸ್ಫೂರ್ತಿಯಲ್ಲಿ ಬದುಕಿ ಬಾಳಿದವರು. ಹೇಗೆ ಈ ವಿಚಾರವನ್ನು ಮನಗಾಣುವರೋ ಎಂಬ ಆಶಂಕೆಯಿಂದ ಬಾಯಿ ಬಿಡಲು ಮನವೊಪ್ಪದು. ಅವರಾಗಿ ಮದುವೆಯ ಪ್ರಸ್ತಾಪ ಮಾಡಿದಾಗ ನಮ್ಮ ಸುದ್ದಿ ಎತ್ತಬಹುದು ಎಂದುಕೊಂಡಿರುವೆ."

"ಅದೇ ಒಳ್ಳಿತು ಅವಸರ ಬೇಡ."

"ಆದರೆ, ಇನ್ನೂ ಎಷ್ಟು ಕಾಲ ಹೀಗೆ....? ಅದು ವಿಚಾರಾತ್ಮಕವಲ್ಲವೆ?"

"ಇರಲಿ, ಕಾದು ನೋಡೋಣ...ಅವಸರ ಬೇಡ. ಕೆಲವು ದಿನಗಳಾದರೂ ನಾವು ಹಾರುವ ಹಕ್ಕಿಗಳಾಗಿರುವುದು ಒಳ್ಳೆತಲ್ಲವೆ?"

"ನಿಜ..." ಮುಂದೆ ಮಾತು ಹೊರಡಲಿಲ್ಲ. ಏನೋ ಹೇಳಬೇಕು, ಹೇಳಲಾರ.

ಸುಮ್ಮನೆ ಅವಳತ್ತ ದೃಷ್ಟಿ ಹೊರಳಿಸಿದ. ಅವಳು ಹಸನಾದ ನಗೆಯನ್ನು ಬೀರಿ ನುಡಿದಳು,

"ಒಬ್ಬನೇ ಮಗನೆಂದರೆ ಸಹಜವಾಗಿ ಅವರಿಗೆ ಆಘಾತವಾಗಬಹುದು. ಆದ್ದರಿಂದ ಸ್ವಲ್ಪ ನಿಧಾನಿಸುವುದು ಒಳ್ಳಿತು. ಈ ಕಾಲದಲ್ಲಿ ಜಾತಿ ನೀತಿ ಕುಲಗೌರವ ಇದೆಲ್ಲಾ ಹಚ್ಚಿಕೊಳ್ಳುವುದು ವ್ಯರ್ಥ. ತೀರಾ ಹಳೆಯ ಸರಿಪಾಡನ್ನೇ ಹಚ್ಚಿಕೊಳ್ಳುವುದರಿಂದ ನಮಗೇ ಕಷ್ಟ. ಅದನ್ನು ನಮ್ಮವರು ಅರಿತುಕೊಳ್ಳದಿರುವುದರಿಂದಲೇ ಈ ಬಗೆಯ ಸಂಕಷ್ಟ. ವಿದೇಶಗಳಲ್ಲಿ ಜೀವನ ಮೌಲ್ಯವನ್ನು ಗುಣಾವಗುಣಗಳಿಂದ ಮಾತ್ರ ಅಳೆಯುತ್ತಾರೆ."

"ಅವರಲ್ಲಿ ಹುಡುಗ ಹುಡುಗಿಯರದೇ ಮೇಲುಗೈ. ಹಿರಿಯರನ್ನು ಕೇಳುವ ಪ್ರಶ್ನೆಯೇ ಏಳುವುದಿಲ್ಲ. ನಮ್ಮಲ್ಲೂ ಕೆಲವರು ಅನುಸರಿಸುತಿದ್ದಾರೆ. ಪೂರ್ತಿ ಜನ ಆ ರೀತಿ ಆಗುವುದು ಸಾಧ್ಯವೇ ಇಲ್ಲ ಬಿಡು."

ಇಬ್ಬರೂ ಮುಗುಳು ನಕ್ಕರು. ಮುಂದಿನ ಸಸ್ಕಲ್ಲಿನಲ್ಲಿ ಇಬ್ಬರ ಹಾದಿಯೂ ಕವಲೊಡೆಯಿತು. ಪ್ರೇಮ ಪೂರ್ಣ ದೃಷ್ಟಿಗಳು ಪರಸ್ಪರ ಬೀಳ್ಕೊಟ್ಟುವು.

೦ ೦ ೦ ೦

ಅಂದು ಹರ್ಷನ ತಂದೆ ಹರಿರಾಯ ಮುಖ ಬಿಂಬದಲ್ಲಿ ಉಗಾವು ಸ್ಫುರಿಸುತ್ತಾ ಹೇಳಿದ,

"ಹರ್ಷ ಇಲ್ಲಿ ಕೇಳು, ನಾನಿನ್ನು ಈ ದೊಡ್ಡ ಜವಾಬ್ದಾರಿಯನ್ನು ಹೆಚ್ಚುಕಾಲ ನಿರ್ವಹಿಸಲಾರೆ. ಆಸ್ತಿಮಾರಿ ಹಣವನ್ನು ಇಲ್ಲೊಂದು ಉದ್ಯಮದ ಮೇಲೆ ಹಾಕಿದರೆ ನೀನು ನೋಡಿಕೊಳ್ಳಬಹುದು. ಮುಖ್ಯವಾಗಿ ನೀನು

ಹಿರಿಯ ಉದ್ಯಮಶೀಲರ ಕುವರಿಯನ್ನು ಕೈಹಿಡಿದರೆ ನಿನಗೆ ಒಳ್ಳೆಯ ಸಹಕಾರ ಸಿಗುತ್ತೆ. ಉದ್ಯಮದಲ್ಲಿ ಅನುಭವ ಇಲ್ಲದ ನೀನು ಒಂದೇ ಬಾರಿಗೆ ಹಿರಿಯ ಉದ್ಯಮ ರಂಗಕ್ಕೆ ಕಾಲಿರಿಸಿದರೆ ಮುಗ್ಗರಿಸುವ ಸಂದರ್ಭ ಬರಬಹುದು. ಆದ್ದರಿಂದ, ನೀನು ನಿನ್ನ ಉತ್ತಮ ಭವಿಷ್ಯಕ್ಕಾಗಿ ಉದ್ಯಮಶೀಲರ ಸಂಬಂಧ ಬೆಳೆಸುವುದು ತುಂಬಾ ಒಳ್ಳೆಯದು. ಇನ್ನೊಂದು ವಿಚಾರ....ನಾನು ಅವರಿವರ ಬಾಯಿಯಲ್ಲಿ ಕೇಳಿದ ಪ್ರಕಾರ ಬ್ಯಾಂಕಿನಲ್ಲಿ ಸಹ ಕೆಲಸಗಾತಿಯೊಂದಿಗೆ ದಿನವೂ ಓಡಾಡಿಕೊಂಡಿದ್ದಿ ಎಂದು ತಿಳಿದು ಬಂದಿದೆ. ಇದೆಲ್ಲಾ ಸಾಧ್ಯವೇ ಇಲ್ಲ. ನನಗೆ ಇನ್ನೊಬ್ಬ ಪುತ್ರ ಸಂತಾನವಿದ್ದಿದ್ದರೆ ನಿನ್ನ ದಾರಿಗೆ ಅಡ್ಡಿ ನಿಲ್ಲುತ್ತಿರಲಿಲ್ಲ. ಯಾರು ಯಾರನ್ನೋ ಗಂಟು ಹಾಕಿಕೊಂಡರೆ ಮುಂದೆ ನಮ್ಮ ಭವಿಷ್ಯವೇನು? ಇಲ್ಲಿವರೆಗಿನ ನಮ್ಮ ಪರಿಶ್ರಮಕ್ಕೆ ಬೆಲೆಯಾದರೂ ಏನು ?"

ಪ್ರಶ್ನೆ ಅನಿರೀಕ್ಷಿತವಾದುದರಿಂದ ಸಿದ್ಧ ಉತ್ತರವಿರಲಿಲ್ಲ. ಚಿತ್ರಭಿತ್ತಿಯ ಮೇಲೆ ನಾಗಮಣಿ ಮೂಡಿನಿಂತಳು. ಅವಳ ಸೌಮ್ಯ ಸ್ವಭಾವದ ಸುಂದರ ರೂಪು ನಿಶ್ಚಲಗತಿಯಲ್ಲಿ ನಿಂತಿದೆ. ತಳ್ಳಿಬಿಡುವುದು ಅಷ್ಟೇನೂ ಸುಲಭದ ಮಾತಲ್ಲ. ಹರ್ಷ ತನ್ನೊಳಗೇ ಗಂಭೀರಭಾವದಿಂದ ಯೋಚಿಸಿ ನುಡಿದ

"ಉದ್ಯಮ ಕೈಕೊಳ್ಳುವುದಕ್ಕೂ ಮದುವೆಗೂ ಯಾವ ಸಂಬಂಧವೂ ಇಲ್ಲ. ಸಧ್ಯ...ನಾನು ಏನನ್ನೂ ಹೇಳಲಾರೆ."

"ಯೋಚನೆ ಮಾಡು. ಇದು ಜವಾಬ್ದಾರಿಯುತ ಪ್ರಶ್ನೆ. ವಂಶದ ಮಾನದ ಪ್ರಶ್ನೆಯೂ ಕೂಡ. ನೀನು ಈ ವಿಚಾರದಲ್ಲಿ ನಮ್ಮ ಮಾತು ಕೇಳದಿರುವೆಯಾದರೆ ಪರಿಣಾಮ ಕೆಟ್ಟಿತು ಎಂದೇ ತಿಳಿ!"

"ನಾನು ಯೋಚಿಸುವೆ, ಅದಕ್ಕಾಗಿ ತುಂಬಾ ಕಾಲಾವಕಾಶ ಬೇಕು. ಮುಂದೆ ಏನಾಗುತ್ತೊ ಅದನ್ನು ಈಗಲೇ ಊಹಿಸಿ ಹೇಳಲಾರೆ. ಭವಿಷ್ಯ ನಮ್ಮ ಕೈಲಿಲ್ಲ. ದೈವೇಚ್ಛೆ ಇದ್ದಂತಾಗಲಿ."

"ಅದು ಸರಿಯೆ ದುಡುಕಬೇಡ. ಈ ವಿಚಾರ ಇಲ್ಲಿಗೇ ಕೈಬಿಡು. ಮುಂದಿನ ವಿಚಾರ ನನ್ನೊಡನೆ ಪರ್ಯಾಲೋಚಿಸದೆ ಕೈಕೊಳ್ಳಬಾರದು!"

"ಭವಿಷ್ಯ ನಮ್ಮ ಕೈಲಿಲ್ಲ!"

"ಹಾಗೆನ್ನುವುದು ಹೇಡಿಗಳ ಮಾತು!"

ಆ ಮಾತು ಎದೆಯೊಳಕ್ಕೆ ಇಳಿಯಿತು. ಅವನು ಅಲ್ಲಿಯವರೆಗೆ ಅಂತಹ ವ್ಯಾಘಾತವನ್ನು ತಿಂದಿರಲಿಲ್ಲ. ತಂದೆ ಮಗನ ಮಧ್ಯೆ ವಿರಸವೇನೂ ಮೂಡಿರಲಿಲ್ಲ. ಹರ್ಷ ಭಾರಭಾರವಾದ ಹೃದಯುವನ್ನು ಹೊತ್ತು ಹೊರಬಂದ. ಮುಖಮುದ್ರೆಯಲ್ಲಿ ಅಚ್ಚೊತ್ತಿತು ಕಹಿ ಪ್ರಸಂಗದ ವಿದ್ಯಮಾನ. ಮೆಟ್ಟಿಲಿಳಿಯುವಾಗ ತಾಯಿ ಜಾನಕಮ್ಮ ಎದುರಾದಳು. ಕೈಯಲ್ಲಿ ತರಕಾರಿಯ ಬುಟ್ಟಿ, ಮುಖದಲ್ಲಿ ಆಯಾಸದ ಮುದ್ರೆ. ದೈನ್ಯವೇ ಮೈವೆತ್ತಿ ಬಂದಂತಹ ಮೂರ್ತಿ. ಹರ್ಷ ಏನೋ ಹೇಳಲು ಬಯಸಿದ ತುಟಿಗಳು ಬಿರಿಯಲಿಲ್ಲ. ಮುಖ ಕಣ್ಣುಗಳಲ್ಲಿ ಭಾವಜ್ವಾಲೆ ಜ್ವಲಿಸಿತು. ಅವಳು ಒಂದು ಕ್ಷಣ ಅವನ ಮುಖಭಾವವನ್ನು ಗಮನಿಸಿ ಕೇಳಿದಳು "ಈಗ ನೀನು ಆಫೀಸಿಗೆ ಹೊರಟಿಯೇನು ?"

"ಇಲ್ಲ ಅಮ್ಮಾ, ಈ ದಿನ ರಜ ಹಾಕಿರುವೆ."

"ಏಕೆ ?"

"ನನ್ನ ಸಹಪಾಠಿಯ ಮದುವೆಯಿದೆ ಹೋಗಬೇಕು."

ಜಾನಕಮ್ಮ ಮಗನ ಮುಖದ ಮೇಲಿನ ಭಾವಧಾರೆಯನ್ನು ಗಮನಿಸಿ ಕೇಳಿದಳು,

"ಏನೋ ಒಂದು ಬಗೆಯಾಗಿದ್ದಿ? ತಲೆ ನೋವೆ?"

"ಸಣ್ಣಗೆ ನೋಯುತ್ತಿದೆ ;ಅದರಿಂದೇನೂ ತೊಂದರೆಯಿಲ್ಲ."

"ನಿನ್ನೊಂದಿಗೆ ಸ್ವಲ್ಪ ಮಾತಾಡುವುದಿತ್ತು."

"ಈಪೊತ್ತಲ್ಲ, ಇನ್ನೊಮ್ಮೆ...."

ಹರ್ಷ ನಿಲ್ಲದೆ ಹೊರಟು ಬಿಟ್ಟ. ಚಿತ್ತಭಿತ್ತಿಯಲ್ಲಿ ನಾಗಮಣಿಯಲ್ಲದೆ ಬೇರೊಂದಿಲ್ಲ. ಅವಳೇ ಸಂಜೀವನ ಸರ್ವಸ್ವ. ಅವಳಿಲ್ಲದ ಬದುಕು ಬೇಡವೇ ಬೇಡ. ಮನಸ್ಸಿನ ದೃಢ ನಿರ್ಧಾರದೊಂದಿಗೆ ಹೊರಬಿದ್ದ. ದೇಹದಾದ್ಯಂತ ಜಿಲ್ಲನೆ ಹರಿದಾಡಿತು ಬಿಸಿನೆತ್ತರ ಧಾರೆ.

"ಆದರೆ..."

ಆ ಮೂರಕ್ಷರದ ಪದ ತಲೆಯಲ್ಲಿ ನಿಮಿರಿ ನಿಂತಿತು. ಒಂದು ವೇಳೆ ತಂದೆ ತಾಯಿಯರು ಒಪ್ಪದೇ ಹೋದರೆ....? ಕುಟುಂಬದ ಸಂತೋಷ–ಸಾಮ್ರಸ್ಯಗಳಿಲ್ಲದ ಬಾಳು ಯಾರಿಗೆ ಬೇಕು? ಪ್ರಶ್ನೆಯೆದ್ದುದರಿಂದ ಆಲೋಚನಾ ಲಹರಿ ಅಲ್ಲಿಗೆ ನಿಂತು ಹೋಯಿತು. ಹರ್ಷ ಬೈಕ್ ಹತ್ತಿದ. ಮನೋರಂಗದಲ್ಲಿ ಆನೆಗಳು ಗೊಂದಲವೆಬ್ಬಿಸಿದಷ್ಟು ಗದ್ದಲ. ಹೃದಯ ವ್ಯಾಪ್ತಿಗೆ ಮೀರಿ ಮಿಡಿಯುತ್ತಿದೆ ದಡದಡ ಸದ್ದಿನಿಂದ.

○ ○ ○ ○

ಜಾನಕಮ್ಮ ತಣ್ಣೀರಿನಲ್ಲಿ ಮುಖಮಜ್ಜನ ಮಾಡಿ ಏನೋ ಒಂದು ಬಗೆಯ ಚಿಂತನಾವೇಶದಿಂದ ಒಳಬಂದಾಗ ಹರಿರಾಯ ಶತಪಥ ತಿರುಗುತಿದ್ದ. ಮುಖದ ಮೇಲೆ ಪ್ರಗಾಢವಾದ ಚಿಂತೆ ನೆಲೆಗೊಂಡ ಮುದ್ರೆ. ಗಂಭೀರ ಮುಖಭಾವದಲ್ಲಿ ಕೆಂಗಿಡಿ ಕಾರುವ ಕಣ್ಣುಗಳಿಂದ ನೋಡುತ್ತ ಅಂದ "ನಾನು ಹರ್ಷನನ್ನು ಕೇಳಿದ್ದಾಯ್ತು. ನಾನಿನ್ನೂ ಯಾವ ನಿರ್ಧಾರವನ್ನೂ ಮಾಡಿಲ್ಲ ಎಂದು ಒಂದೇ ಮಾತಿನಲ್ಲಿ ಹೇಳಿ ಹೊರಬಿದ್ದ. ಅವನ ರೀತಿಯನ್ನು ನೋಡಿದರೆ ಅವನು ಹೆಜ್ಜೆ ಕದಲುವಂತೆ ತೋರಲಿಲ್ಲ. ಮುಂದೆ ನಮ್ಮ ಪಾಡೇನು? ನಾವು ಯಾರ ಕಾಲ ಬಳಿ ಬಿದ್ದು ಸಾಯುವುದು?"

ಒಡಲ ಆಕ್ರೋಶವೆಲ್ಲಾ ದನಿಯಲ್ಲಿ ಜಸ್ರನೆ ಹರಿದು ಬಂತು.

ಜಾನಕಮ್ಮನ ತುಟಿಗಳು ಪ್ರಯತ್ನಿಸಿದರೂ ಬಿರಿಯಲಿಲ್ಲ. ಮುಖವರ್ಣ ಕಪ್ಪಿಟ್ಟಿತು. ನರನರಗಳೂ ಮೌನಗತಿಯಲ್ಲಿ ನರಳಿದುವು. ಬಲೂ ಮುದ್ದಿನಿಂದ ಸಾಕಿದ ಮಗ ಹೀಗಾದಾನೆಂದು ಎಂದೂ ನಂಬಿರಲಿಲ್ಲ. ಜಾತಿ ಗೀತಿಯಲ್ಲಿ ಹೆಚ್ಚಿನ ಆಸಕ್ತಿ–ವಿರೋಧಗಳೇನೂ ಇರಲಿಲ್ಲ. ಆದರೆ ತಮ್ಮ ಮನವೊಪ್ಪುವಂತಹ ಸೂಕ್ತ ಹೆಣ್ಣು ಬೇಕೆಂಬುದು ನಿರ್ವಿವಾದ...ಯೋಚನೆಯಾಳಕ್ಕೆ ಮುಳುಗಿ ತನ್ನನ್ನು ತಾನು ಹತೋಟಿಯಲ್ಲಿಟ್ಟುಕೊಳ್ಳುತ್ತ ಅವಳೆಂದಳು "ಅವನಿನ್ನೂ ನಿರ್ಧಾರ ಮಾಡಿಲ್ಲ ಅಂದ ಮೇಲೆ ಪರಿಸ್ಥಿತಿ ಹತೋಟಿಗೆ ಮೀರಿಲ್ಲ ಎಂದುಕೊಳ್ಳಬಹುದಲ್ಲ? ಈಗಲೇ ನಾಲ್ಕು ಬುದ್ಧಿಮಾತು ಹೇಳಿದರಾಯಿತು. ದೇವರು

ಪೂಜಿಸಿದವನ ಕಡೆಗೆ. ನೋಡೋಣ ಹುಡುಗ ದಾರಿಗೆ ಬಂದಾನು. ಈಗಲೇ ಮತಿಕೆಡಿಸಿಕೊಂಡರೆ ಹೇಗೆ...?"

ಆ ಮಾತನ್ನು ಪ್ರಯತ್ನ ಪೂರ್ವಕವಾಗಿ ಹೊರ ಹಾಕಿದಳು ಅವಳು ಮುಪ್ಪಿನ ಹಾದಿ ಹಿಡಿದ ಪತಿಗೆ ಸಮಾಧಾನ ಹೇಳುವ ಸಲುವಾಗಿ. ಈ ಹಗರಣ ದಿಂದ ಪತಿಯ ಆರೋಗ್ಯ ಕೆಟ್ಟರೇನು ಗತಿ ಎಂಬ ಭಯ–ಕಳವಳ ಮನದಲ್ಲಿ. ಯಾವುದೋ ಕಾಣದ ಕೈ ಹೃದಯವನ್ನು ಹಿಸುಕುತ್ತಿದೆ. ಎರಡು ಬಂಡೆಗಳ ಮಧ್ಯೆ ಸಿಲುಕಿ ಅಪ್ಪಚ್ಚಿಯಾಗುವಂತಹ ಪ್ರಸಂಗ. ದೀರ್ಘವಾದ ನಿಟ್ಟುಸಿರೊಂದನ್ನು ಹೊರಹಾಕಿ ಯಾರಿಗೂ ಒಂದೇ ಮಗು ಇರಬಾರದು. ನಮಗೆ ಎರಡು ಮೂರು ಮಕ್ಕಳಿದ್ದಿದ್ದರೆ ಈ ಭಂಗ ಎಲ್ಲಿರುತಿತ್ತು? ಎಂಬ ಪ್ರಶ್ನೆ ಭೈರಿಗೆಯಂತೆ ಮನವನ್ನು ಕೊರೆಯಿತು. ಅಳಿದ ಮಕ್ಕಳೀರ್ವರೂ ಮನೋಭಿತ್ತಿಯ ಮೇಲೆ ಹಾದು ಹೋದರು.

ಹರಿರಾಯ ಗುಡುಗಿದ "ಈಗಿನ ಹುಡುಗರಿಗೆ ಧರ್ಮಕರ್ಮ ಏನೇನೂ ಇಲ್ಲ. ರೆಕ್ಕೆ ಬಲಿತಾಗಲೇ ಅಪ್ಪ–ಅಮ್ಮನನ್ನು ಮರೆತು ಬಿಡುತ್ತಾರೆ. ಧೂರ್ತತನ!"

ಜಾನಕಮ್ಮ ಪತಿಯ ಉಗ್ರಭಾವವನ್ನು ಗಮನಿಸಿ ವಿಚಾರಶೀಲಳಾದಳು. ಅಂದು, ಸೋದರಳಿಯ ಹೇಳಿದ್ದು ಹೀಗೆ "ಹರ್ಷ, ನಾಗಮಣಿ ಎಂಬ ಸಹ ಕೆಲಸಗಾತಿಯಲ್ಲಿ ಅನುರಕ್ತನಾಗಿದ್ದಾನೆಂದು ತೋರುತ್ತೆ. ಅವಳೊಂದಿಗೆ ಓಡಾಡಿಕೊಂಡಿದ್ದಾನೆ."

ಆ ಪ್ರಕರಣವನ್ನು ತನ್ನಲ್ಲೇ ಮೆಲಕು ಹಾಕಿದಳು ಜಾನಕಮ್ಮ. ವಿಷಯ ಗಂಟಲ ಗಾಣವಾಗಿ ತೋರಿತು. ಕಣ್ಣುಗಳಲ್ಲಿ ಸಣ್ಣಗೆ ಬೆಳ್ಳಿಗೆರೆಯಂತೆ ತುಂಬಿತು ಕಣ್ಣೀರು.

o o o o

ಹರ್ಷ ಮಂಚದ ಮೇಲೆ ಎರಡೂ ಕೈಗಳನ್ನು ಎದೆಯ ಮೇಲೆ ಕಟ್ಟಿ ಮಲಗಿದ್ದ. ಅಂತರಂಗದ ಹೊಯ್ದಾಟವೆಲ್ಲ ಮುಖಮುದ್ರೆಯಲ್ಲಿ ಅಚ್ಚೊತ್ತಿದೆ. ಚಿತ್ತಭಿತ್ತಿಯಲ್ಲಿ ನಾಗಮಣಿಯ ಅಕಳಂಕ ಮೂರ್ತಿ ಮೂಡಿ ನಿಂತಿತು. ಅವಳ

ಮೇಲೆ ದೂರು ಹೊತ್ತು ತಂದ ನಾಲ್ಕಾರು ಪತ್ರಗಳೂ ಅವಳ ಸುತ್ತಮುತ್ತ ಸುಳಿಯುತ್ತಲಿವೆ.

ಆದರೆ...

ಅವಳು ಅಂತಹವಳಲ್ಲ. ಪತ್ರಗಳೆಲ್ಲ ಕೃತಕ–ಸುಳ್ಳು–ಮೋಸ ಎಂದೇ ಹೇಳುತ್ತವೆ ತನ್ನ ಮನಃಬುದ್ಧಿಗಳು. ಸ್ವಲ್ಪ ದಿನಗಳಾದರೂ ಈ ಪ್ರಕರಣ ದಿಂದ ದೂರವಿರುವುದು ಲೇಸು ಎನಿಸಿ ಮಲ್ಲೇಶ್ವರಂ ಬ್ರಾಂಚಿಗೆ ವರ್ಗಾವಣೆ ಪಡೆದುದು ಸತ್ಯ. ಅದರ ಪರಿಣಾಮದಿಂದ ಮಾನಸಿಕ ಪರಿವರ್ತನೆ ಆಯಿತು ಎಂದೆನ್ನುವಂತಿಲ್ಲ. ಒಮ್ಮೊಮ್ಮೆ ಈ ಮನಸ್ಸು ಹುಚ್ಚಾಗುವುದೋ ಎಂಬಷ್ಟು ಹದಗೆಡುತ್ತದೆ. ಆದರೂ ಬಹಳಷ್ಟು ಹತೋಟಿಯಲ್ಲಿಟ್ಟುಕೊಂಡು ಉಸಿರಾಡಿದ ಹರ್ಷ.

ಭಾನುವಾರವಾದ್ದರಿಂದ ಆಫೀಸಿಗೆ ಬಿಡುವು. ಗೆಳೆಯ ರಾಜು ಬರುವುದಾಗಿ ಹೇಳಿದ್ದ ಹೊತ್ತು ಮೀರಿ ಎಂದೋ, ಅವನಿನ್ನು ಬರಲಾರನೇನೋ ಎಂಬಷ್ಟು ಅನುಮಾನ ಮನದಲ್ಲಿ. ಪತ್ರಿಕೆ ಪುಸ್ತಕಗಳಲ್ಲೂ ಮನವಿಡಲಾಗ ಲಿಲ್ಲ. ಹೊರಗಡೆಯಾದರೂ ಹೋಗಿ ಬರೋಣ ಎನಿಸಿದಾಗಲೇ ಪ್ರಾಕಾರದ ಬಾಗಿಲು ಕಣಿಲ್ ಎಂದು ಸದ್ದು ಮಾಡಿತು. ಕಣ್ಮನಗಳು ಅತ್ತಲೇ ಹರಿದುವು. ಕದ ಮುಚ್ಚಿ ಒಳಬಂದವನು ಗೆಳೆಯನಲ್ಲ, ಅಪ್ಪ–ಹರಿರಾಯ. ಮುಖಭಾವದಲ್ಲಿ ವ್ಯಗ್ರತೆ ಕಾಣಿಸುತಿತ್ತು. ಕಣ್ಣುಗಳ ಛಾಯೆ ಭೀಕರ. ಹೊಸ್ತಿಲು ದಾಟಿದವನೇ ಎರಡು ಪತ್ರಗಳನ್ನು ಮುಖದ ಮೇಲೆ ಎಸೆದು "ನೋಡಿಕೋ, ನಿನ್ನ ಗೆಳತಿಯ ಪ್ರತಾಪ!"

ಆ ಕ್ಷಣವೇ ಬಿರ್ರನೆ ಬಿರುಗಾಳಿಯಂತೆ ಹೊರಟು ಹೋದ ಹರಿರಾಯ. ಒಂದೇ ಗಳಿಗೆಯಲ್ಲಿ ಆಗಮನ–ನಿರ್ಗಮನಗಳು ಮಿಂಚಿ ಮಾಯವಾದುವು. ಹರ್ಷ ಎದ್ದು ಕುಳಿತು ಆ ಕಾಗದಗಳನ್ನು ಬಿಚ್ಚಿ ಓದಿದ. ನಾಗಮಣಿಯನ್ನು ಕುರಿತು ತಂದೆಗೆ ಬರೆದ ಹೊಲಸು ಪತ್ರಗಳು....ಹಾ! ತೀರಾ ವಿಷಾದಕರ. ಉದ್ಗಾರ ಎದೆಯಾಳದಿಂದ ಹೊರಬಿತ್ತು. ಮರುಕ್ಷಣದಲ್ಲಿಯೇ ಇವೆಲ್ಲ ಕೃತ್ರಿಮ ವಿರಬಾರದೇಕೆ? ನನ್ನ ಮನಸ್ಸು ಕೆಡಿಸಲು ದುರುದ್ದೇಶದಿಂದ ಬರೆದವುಗಳಾಗಿ

ದ್ದರೂ ಇರಬಹುದಲ್ಲವೇ? ಇದರ ಹಿನ್ನೆಲೆಯನ್ನು ಪರಿಶೀಲಿಸಿ ನೋಡುವುದು ಒಳ್ಳೆಯದು ಎಂಬುದು ಆತ್ಮ ನಿರ್ಣಯ.

೦ ೦ ೦ ೦

ಹರ್ಷ ವಿಚಾರಶೀಲನಾದ. ಕ್ರಮವತ್ತಾಗಿ ಅವಳಿಗೆ ಬೈಕ್‌ನಲ್ಲಿ ಲಿಫ್ಟ್ ಕೊಡುವುದನ್ನು ಜಾಣ್ಮೆಯಿಂದ ನಿಲ್ಲಿಸಿದ. ಎಷ್ಟೋ ರೀತಿಯಲ್ಲಿ ಅವಳ ಸಹವಾಸ ವನ್ನು ಕಡಿದುಕೊಳ್ಳತೊಡಗಿದ. ಅವಳಿಗೆ ಯಾವ ಕಾರಣವನ್ನೂ ಕೊಡದೆ ಸಾಧ್ಯವಾದಷ್ಟು ದೂರವಿರುವಿಕೆಯನ್ನು ಸಾಧಿಸಿದ. ಎಷ್ಟೋ ವೇಳೆ ಮುಂದಾ ಗಿಯೋ ಅಥವಾ ಹಿಂದಾಗಿಯೋ ಹೊರಡುವ ಹಂಚಿಕೆಹೂಡಿದುದರಿಂದ ಅವನ ನಡೆನುಡಿಯಲ್ಲಿ ಅರ್ಥವತ್ತಾದ ನಿರಾಕರಣೆ ತೋರುತಿತ್ತು. ಹೃದಯಗಳು ಎಷ್ಟೆಷ್ಟು ಹತ್ತಿರವಾಗಿದ್ದುವೋ ಅಷ್ಟಷ್ಟು ದೂರ ದೂರ ಸರಿದು ಒಡೆದ ಕನ್ನಡಿ ಯಂತಾದುವು. ಕಾರಣವೇನು ಎಂಬುದರ ಅರಿವು ಮೂಡಲೇ ಇಲ್ಲ ನಾಗ ಮಣಿಗೆ. ನಾನು ಹೆಜ್ಜೆ ಮುಂದಿಟ್ಟು ತಪ್ಪು ಮಾಡಿದೆ. ಈ ಗಂಡು ಜಾತಿ ಯನ್ನು ಎಂದೆಂದಿಗೂ ನಂಬಬಾರದು ಎಂಬ ತಿರಸ್ಕಾರ ಭಾವನೆ ಮೂಡಿತು ಎದೆಯ ಬನದಲ್ಲಿ. ಅವಳು ದೇಹದಾದ್ಯಂತ ನಡುಗಿದಳು. ನಾನೇಕೆ ಇಷ್ಟು ಬೇಗನೆ ಮರುಳಾದೆ ಮುಖ್ಯವಾಗಿ ನನ್ನದೇ ತಪ್ಪು ಎಂದು ತನ್ನನ್ನೇ ಹಳಿದು ಕೊಂಡಳು ಬಾರಿಬಾರಿಗೂ.

ಅವನು ಒಂದು ತಿಂಗಳು ರಜೆಹಾಕಿ ಮಲ್ಲೇಶ್ವರಂ ಬ್ರಾಂಚಿಗೆ ವರ್ಗ ಮಾಡಿಸಿಕೊಂಡುದುದಲ್ಲದೆ ತನಗೊಂದು ಮಾತನ್ನೂ ಹೇಳಲಿಲ್ಲವೆಂಬುದು ಈಟಿಯ ಇರಿತಕ್ಕಿಂತಲೂ ಹರಿತ. ವಿನಾಕಾರಣ ಒಮ್ಮಿಂದೊಮ್ಮೆಲೇ ದೂರ ವಾಗಲು ಕಾರಣವೇನು? ಎಂಬುದನ್ನು ಆಳವಾಗಿ ಯೋಚಿಸಿ ಚಿಂತಿಸುತಿತ್ತು ಮನಸ್ಸು. ದುಃಖದುಗುಡಗಳು ಕಾಣದ ಕೈಗಳಿಂದ ಹೃದಯವನ್ನು ಹಿಸುಕು ತಿದ್ದುವು. ತಲೆಯಲ್ಲಿ ಸಿಡಿದು ಹೋಗುವಷ್ಟು ಸಿಡಿತ. ಕೆಲಸ ಮಾಡಲೂ ಮನಸ್ಸಿಲ್ಲ. ಮನೆಯಲ್ಲಿ ಉಳಿಯಲೂ ಮನಸ್ಸಿಲ್ಲ. ಬದುಕು ಗಂಟಲ ಗಾಣವಾಯಿತು.

ನಾಗಮಣಿ ದುಃಖಾರ್ತಳಾದರೂ ಅದರ ಸುಳಿವು ಯಾರಿಗೂ ಸಿಗದಂತೆ ಎಚ್ಚರ ವಹಿಸುವ ಸಲುವಾಗಿ ಸಂತಸದ ಮುಖವಾಡ ತೊಟ್ಟಿದ್ದಳು. ಆದರೇನು? ಜಾಹೀರಾತಿಗೆ ಬೀರುವ ಪ್ರಸನ್ನತೆಯಂತೆ ಮಧುರ ಭಾವ ಕೃತಕವೇ. ಎಷ್ಟೆಷ್ಟು

ಪರಿಸ್ಥಿತಿಯಲ್ಲಿ ತನ್ನನ್ನು ತಾನು ಸುಧಾರಿಸಿಕೊಂಡರೂ ಒಡಲೆಲ್ಲ ಸಂಕಟ. ತಾಳಲಾಗದ ಪರಿತಾಪ ವಿಚಾರ ವಿಪ್ಲವದ ತಾಂಡವ ನೃತ್ಯ.

"ಯಾಕೋ ಒಂದು ಬಗೆಯಾಗಿದ್ದಿ, ಮೈಚೆನ್ನಾಗಿಲ್ಲವೇ?" ಕೇಳಿದಳು ಸಹ ಕೆಲಸಗಾತಿ ಛಾಯಾ.

ಅವಳು ಹಾಗೆಂದುದೇ ಒಳ್ಳೆಯದಾಯ್ತು. ಅದೇ ದಾಟಿಯಲ್ಲಿ ಉತ್ತರಿಸಿದಳು ನಾಗಮಣಿ,

"ಹೌದಮ್ಮಾ, ಕೆಲವು ದಿನಗಳಿಂದ ರಾತ್ರಿ ಜ್ವರ ಬಂದಂತಿರುತ್ತೆ. ಹಗಲು ಮೈಸೋಲು-ನಿಶ್ಶಕ್ತಿ. ಮಾತ್ರೆ ನುಂಗುತ್ತಲೇ ಇರುವೆ."

"ಸರಿಯಾದ ಚಿಕಿತ್ಸೆ ತೆಗೆದುಕೊ... ನಿರ್ಲಕ್ಷ್ಯ ಮಾಡಬೇಡ."

"ಇಲ್ಲಪ್ಪ.... ಎಲ್ಲಿಯಾದರುಂಟೇ? ಅನಂತರ ನನಗೇ ಕಷ್ಟ, ಈಗ ನಿರ್ಲಕ್ಷ್ಯ ಮಾಡಿದರೆ." ಕೃತಕ ನಗೆ ಬೀರಿದಳು ನಾಗಮಣಿ.

o o o o

ರಾಜ ಒಳ ಹೆಜ್ಜೆ ಇಟ್ಟಾಗಲೇ ಹರ್ಷನ ಮನಗುದಿಯನ್ನು ಅರಿತುಕೊಂಡ. ಹೆಜ್ಜೆಯನ್ನು ಮುಂದಿಡುವ ಮೊದಲೇ ಹರ್ಷ ಯಾಂತ್ರಿಕವಾಗಿ ನಿರಾಸೆಯ ದನಿಯಲ್ಲಿ ಸ್ವಾಗತಿಸಿದ, "ಬಾರಯ್ಯಾ ರಾಜ! ನಿನಗಾಗಿ ನಿನ್ನೆಯೆಲ್ಲಾ ಕಾದೆ."

"ನಿನ್ನೆ ಬರಲಾಗಲಿಲ್ಲ, ಇಂದು ಅದಕ್ಕಾಗಿಯೇ ಬಂದೆ."

ಸ್ವಲ್ಪಹೊತ್ತು ಇಬ್ಬರ ತುಟಿಗಳೂ ಬಿರಿಯಲಿಲ್ಲ. ಹೊತ್ತು ಮೌನ ಧಾರಣೆ ಮಾಡಿತು. ಅನಂತರ ರಾಜ ಮೌನಮುರಿದ,

"ಏಕೆ? ಏನೋ ಒಂದು ಬಗೆಯಾಗಿದ್ದೀಯಲ್ಲ?"

"ನೀನು ನನ್ನ ಆತ್ಮೀಯ ಗೆಳೆಯ. ನಿನ್ನಲ್ಲಿ ನನ್ನ ಪ್ರಾಣ ಸಂಕಟವನ್ನು ತೋಡಿಕೊಂಡರೆ ತಪ್ಪಾಗಲಾರದು. ನೀನು ತಿಳಿದಂತೆ ನಾನು ಮತ್ತು ನಾಗಮಣಿ ಪರಸ್ಪರ ಪ್ರೀತಿಸಿದ್ದು ಸತ್ಯ. ಈಗ ಅದೊಂದು ದೊಡ್ಡ ಹಗರಣವಾಗಿದೆ.

ಮನೆಯಲ್ಲಿ ತಂದೆತಾಯಿ ಒಪ್ಪುತ್ತಿಲ್ಲ. ಏತನ್ಮಧ್ಯೆ, ಅವಳ ಮೇಲೆ ಕೆಟ್ಟ ಆರೋಪಣೆ ಮಾಡಿದ ಅನಾಮಧೇಯ ಪತ್ರಗಳು ಬರುತ್ತಿವೆ. ಯಾರೋ ಬೇಕು ಬೇಕಾಗಿ ಹುಟ್ಟಿಸಿದ ಕತೆಗಳು ಎನಿಸುತ್ತೆ ನನಗೆ. ಇದಕ್ಕೆ ನೀನೇನು ಹೇಳುತ್ತಿ?"

"ಛೀ! ಛೀ! ಅದೆಲ್ಲಾ ಸುಳ್ಳು. ಅವಳು ನಿಷ್ಕಳಂಕಿನಿ. ಅವಳಿರುವುದು ನಮ್ಮ ಬಡಾವಣೆಯಲ್ಲೇ. ನನ್ನ ಪತ್ನಿ ಶಾರದೆ ಮತ್ತು ನಾಗಮಣಿ ಸಹ ವಿದ್ಯಾರ್ಥಿನಿಯರು. ಇಬ್ಬರಲ್ಲೂ ಪರಸ್ಪರ ಸ್ನೇಹ ಸಂಪರ್ಕ ತುಂಬಾ ಇದೆ. ನೀನೊಮ್ಮೆ ನಮ್ಮ ಮನೆಗೆ ಬಾ. ಶಾರದೆಯನ್ನು ಕೇಳಿ ತಿಳಿದುಕೊ. "ಬಹುಶಃ ಇದೆಲ್ಲ ನಿನ್ನ ತಂದೆಯ ಕುತಂತ್ರ."

ಆ ಮಾತಿನಿಂದ ಎದೆ ಎಷ್ಟೋ ಹಗುರವಾಯಿತು. ಆದರೆ ತಂದೆತಾಯಿ?

ಪ್ರಶ್ನೆಯೆದ್ದೊಡನೆಯೆ ಯೋಚನೆಯ ತೇಜಿ ತಟ್ಟನೆ ಅಲ್ಲಿಗೆ ನಿಂತು ಹೋಯಿತು. ಮುಂದಿನ ವಿದ್ಯಮಾನವನ್ನು ತರ್ಕಿಸಲು ಸಿದ್ಧವಾಗಲಿಲ್ಲ. ಎದೆಯ ದರ್ಪಣ ಒಡೆದು ನುಚ್ಚುನೂರಾದಂತೆ ಭಾಸವಾಯಿತು. ಗಂಭೀರ ಮೌನ ತಾಳಿದ.

"ಅಷ್ಟೇ ಅಲ್ಲ ಹರ್ಷಾ! ಅವಳು ತುಂಬಾ ಒಳ್ಳೆಯ ಹುಡುಗಿ. ನಿನ್ನಂತೆ ಐಶ್ವರ್ಯವಂತೆ ಅಲ್ಲ, ಅಷ್ಟೇ. ಅವಳು ಶಾರದೆಯನ್ನು ನೋಡಲು ಆಗಾಗ ಮನೆಗೆ ಬರುತ್ತಿರುತ್ತಾಳೆ. ನನಗೆ ಚೆನ್ನಾಗಿ ಗೊತ್ತು. ಪರಿಶುದ್ಧ ಹೃದಯದ ಹುಡುಗಿ ಅಂದರೆ ತಪ್ಪಲ್ಲ."

"ಐಶ್ವರ್ಯದಿಂದ ಆಗಬೇಕಾದುದೇನೂ ಇಲ್ಲ. ಐಶ್ವರ್ಯದ ಪ್ರಶ್ನೆ ಏಳುವುದೇ ಇಲ್ಲ ನನ್ನ ಬಳಿ. ಅಂದಮೇಲೆ, ಪರಿಸ್ಥಿತಿಯನ್ನು ನೀನೇ ಅವಲೋಕಿಸು. ಶುದ್ಧವಾದ ಆದರ್ಶಮಯ ಜೀವನ ಒಂದೇ ನನ್ನ ಮುಂದಿರುವ ಪ್ರಶ್ನೆ. ಯಾರಿಗೂ ಮನಸ್ಸನ್ನು ನೋಯಿಸುವುದು ಇಷ್ಟವಿಲ್ಲ. ಹೀಗಾಗಬಾರದಿತ್ತು. ನನಗೆ ಬೇಕಿರುವುದು ಸಂಜೀವನ ಸಾಮರಸ್ಯ." ಸ್ವಲ್ಪಹೊತ್ತು ಸುಮ್ಮನಿದ್ದು ಹರ್ಷ ತನ್ನ ಅಭಿಲಾಷೆಯನ್ನು ಪುನಃ ಹೊರಹಾಕಿದ. "ಅಪ್ಪ ಅಮ್ಮ ಒಪ್ಪಿದರೆ ಒಳ್ಳೆಯದಿತ್ತು. ಮನೆಯಲ್ಲಿ ಅಶಾಂತಿ ಮೂಡಿಸುವುದು ನನಗಿಷ್ಟವಿಲ್ಲ. ಆದ್ದರಿಂದ

ಒಂದು ವರ್ಷವಾದರೂ ಈ ಪ್ರಸಂಗದಿಂದ ದೂರವಿದ್ದು ನೋಡುವ ಇಚ್ಛೆ ನನಗೆ. ಅದರ ಪರಿಣಾಮವನ್ನು ಕಾಯ್ದು ನೋಡಬಹುದು ಎಂಬ ಯೋಚನೆ ಯಿಂದಲೇ ವರ್ಗ ಮಾಡಿಸಿಕೊಂಡೆ. ಈಗ ಅದೇ ದುಃಖ–ಬೇಸರ. ನನ್ನನ್ನು ನಾನು ಹತೋಟಿಯಲ್ಲಿಟ್ಟುಕೊಳ್ಳಲು ಬಲು ಕಷ್ಟದಿಂದ ಪ್ರಯತ್ನಿಸುತ್ತಿರುವೆ."

"ನೀನು ಮನಗೆಡಬೇಕಾದುದಿಲ್ಲ. ಹಿಂದೆ ಇಂಥ ಪ್ರಕರಣಗಳು ಎಷ್ಟು ಆಗಿಲ್ಲ? ಅವಳು ಒಳ್ಳೆಯ ಹುಡುಗಿ. ತಂದೆ ತಾಯಿಯರನ್ನು ಒಪ್ಪಿಸಿ ನಾವು ರಸ್ತೆ ತರಬಹುದು. ಅದಕ್ಕಾಗಿ ಚಿಂತೆ ಹಚ್ಚಿಕೊಳ್ಳಬೇಡ."

"ಅದು ನನಗೂ....ಇಷ್ಟವೇ...."

"ಹಾಳು ಪತ್ರಗಳಿಗೆ ಕಿವಿ ಕೊಡಬೇಡ. ಇವೆಲ್ಲಾ ಕೃತಕ; ಎಂದರೆ ತಪ್ಪಲ್ಲ."

೦ ೦ ೦ ೦

ಬೆಳಗಿನಿಂದ ಒಂದೇ ಸಮನೆ ಕೆಲಸ ಮಾಡಿದ ತನುಮನಗಳು ಬಳಲಿ ಬೆಂಡಾಗಿದ್ದುವು. ಈಚೀಚೆಗೆ ಮನಸ್ಸಿಗೂ ಶಾಂತಿಯಿಲ್ಲ. ಬೇಸರ–ತಾಳಲಾಗದ ಬೇಸರ....ಹರ್ಷ ಎಷ್ಟೇ ಪ್ರಸನ್ನತೆ ತೋರಿದರೂ ಅವನ ಹೃದಯದಾಳದ ಪ್ರೇಮಮಯ ಮೃದುಭಾವನೆ ಎಂದಿನಂತಿಲ್ಲವೇ ಇಲ್ಲ. ಅವನ ಕೃತ್ರಿಮ ನಗೆ ಯನ್ನು ಅರ್ಥೈಸಲಾರದಷ್ಟು ಸಂಭಾವನಾಹೀನೆಯಲ್ಲ ನಾನು....

ಕೂಗಿ ಹೇಳಿತು ಹೃದಯವಾಣಿ.

ನಾಗಮಣಿಯ ಕಣ್‌ದೃಷ್ಟಿ ಗಡಿಯಾರದ ಕಡೆ ಹರಿಯಿತು.

ಮುಳ್ಳು ಐದರ ಅಂಕಿಯಂಚನ್ನು ಮುಟ್ಟಿತು. ದಿನವೂ ಮನೆಯನ್ನು ಮುಟ್ಟಿಸುತಿದ್ದ ಹರ್ಷ ದೃಷ್ಟಿ ಪಥದಲ್ಲಿ ಸುಳಿದಿಳಿದ. ಅವನ ದೃಷ್ಟಿಕೋನ ಬೇರೆ ಕಡೆ ಹರಿಯಲು ಕಾರಣವೇನೋ ತಿಳಿಯಲಿಲ್ಲ. ಒಂದು ತಿಂಗಳು ರಜೆ ಕಾಲದಲ್ಲಿ ಒಮ್ಮೆಯೂ ಇತ್ತ ಸುಳಿಯದುದನ್ನು ಮನಸ್ಸು ಮತ್ತೆಮತ್ತೆ ಮೆಲಕು ಹಾಕಿತು. ತನಗರಿಯದಂತೆಯೇ ನಿಟ್ಟುಸಿರೊಂದು ಹೊರಬಿತ್ತು. ನಾಗಮಣಿ ವ್ಯಾನಿಟಿ ಬ್ಯಾಗನ್ನು ಕೈಕೊಂಡು ಎದ್ದು ನಿಂತಳು. ಆಗಲೇ ಜೊತೆ

ಗಾರ್ತಿಯರಲ್ಲಿ ಇಬ್ಬರು ಹೋಗಿದ್ದಾರೆ. ಇನ್ನೊಬ್ಬ ಹಿರಿಯಾಕೆಗೆ ಮನೆ ಹತ್ತಿರ ವಾದ್ದರಿಂದ ಬಸ್ ಸ್ಟ್ಯಾಂಡಿಗೆ ಬರುವ ತೊಂದರೆಯಿಲ್ಲ. ಒಬ್ಬಳೇ ಬಸ್ ಸ್ಟಾಪಿಗೆ ನಡೆಯಲು ಮನದಲ್ಲೇ ಬೇಸರಗೊಂಡಳು ನಾಗಮಣಿ.

"ಮಣೀ, ಹೊರಟೆರಾ ?" ಕೇಳಿದನೊಬ್ಬ ಸಹ ಕೆಲಸಗಾರ.

"ಹೌದು..." ಮುಂದೆ ಪ್ರಯತ್ನಿಸಿದರೂ ಮಾತು ಹೊರಡಲಿಲ್ಲ.

ಮ್ಯಾನೇಜರಿಗೆ ವಿನಯಪೂರ್ವಕ ವಂದನೆ ಸಲ್ಲಿಸಿ ಹೊರಟಳು ಹುಡುಗಿ. ಮನದಳಲನ್ನು ಯಾರಿಗೂ ತೋರದಿರುವಷ್ಟು ದಿಟ್ಟತನ. ಆದರೆ....

ಬಸ್ ಸ್ಟಾಪಿಗೆ ಹತ್ತು ನಿಮಿಷಗಳ ನಡಿಗೆ. ಬಸ್ಸಿನಲ್ಲಿ ಕಿಕ್ಕಿರಿ ತುಂಬಿದ ಜನಕೋಟಿಯನ್ನು ನೋಡಿದರೆ ಬಸ್ಸಿನ ಪ್ರಯಾಣ ಮನಸ್ಸಿಗೆ ಜುಗುಪ್ಸೆ ತರುತ್ತದೆ. ಆದರೆ, ವಿಧಿಯಿಲ್ಲ. ಹತ್ತಿರವಾಗಿದ್ದಿದ್ದರೆ ನಡದೇ ಹೋಗಬಹು ದಿತ್ತು ಎಂಬ ಆಲೋಚನೆ ಆಗಾಗ ಬರುತ್ತಲೇ ಇರುತ್ತದೆ ಮನಸ್ಸಿಗೆ. ಅರ್ಧ ಹಾದಿ ಕ್ರಮಿಸಿದ್ದಳೇನೋ ಹರ್ಷ ಮೋಟಾರ್ ಬೈಕ್ ಮೇಲೆ ಸರ್ರನೆ ಸಾಗಿ ಹೋದ. ಹಾಯ್–ಬಾಯ್‌ಗಳ ವಿನಿಯೋಗ ನಡೆಯಲಿಲ್ಲ. ಕಂಡರೂ ಕಾಣ ದಂತೆಯೇ ಅವನು ಕ್ಷಣಾರ್ಧದಲ್ಲಿ ಕಣ್ಮರೆಯಾದ. ಸಹಪಾಟಿಯೊಬ್ಬ ಹಿಂದೆ ಕುಳಿತಿದ್ದುದರಿಂದ ಸಂಕೋಚವೋ ಎನಿಸಿದರೂ ಕ್ಷಮಾರ್ಹವಲ್ಲ ಎಂಬುದೇ ದೃಢ ನಿರ್ಣಯ. ಅತ್ಯಂತ ಖಿನ್ನಮನಸ್ಕಳಾಗಿ ಬಸ್ ನಿಲ್ದಾಣ ಸೇರಿದಳು ನಾಗಮಣಿ.

....ನನ್ನನ್ನು ಜೀವಕ್ಕಿಂತ ಹೆಚ್ಚಾಗಿ ಪ್ರೀತಿಸಿದ ವ್ಯಕ್ತಿ ಹೀಗಾದನೇಕೆ ? ಎಂಬುದು ಬಗೆ ಹರಿಸಲಾರದ ಚಿಂತೆ. ದುಃಖದುಗುಡಗಳು ಕೊರಳೊತ್ತುತ್ತಿವೆ. ಏನಾದರಾಗಲಿ, ಈಗ ನನ್ನನ್ನು ನಾನು ಹತೋಟಿಯಲ್ಲಿಟ್ಟುಕೊಳ್ಳದೆಯೇ ವಿಧಿ ಯಿಲ್ಲ. ನೋಡೋಣ, ದೇವರಿದ್ದಾನೆ ...ಎಂದು ತನಗೆ ತಾನೇ ಸಮಾಧಾನ ಹೇಳಿಕೊಂಡಳು. ಆದರೂ, ಹೃದಯ ತಂತುಗಳಲ್ಲಿ ಕಂಬನಿಗಳು ಮೂಡಿ ಕಣ್ಣು ಗಳಲ್ಲಿ ತಟತಟನೆ ತೊಟ್ಟಿಕ್ಕಿದುವು. ಮುಖ ಒರಸಿಕೊಳ್ಳುವ ನೆವದಲ್ಲಿ ಕಣ್ಣು ಗಳನ್ನು ಒರಸಿಕೊಂಡಳು.

o o o o

ದಿನಗಳ ಗಾಲಿಯುರುಳಿ ತಿಂಗಳುಗಳ ಮಾನಗಳು ಕಳಿದುವು.

ಹರ್ಷ ದಿನದಿನಕ್ಕೂ ಮೌನಿಯಾಗುತ್ತ ಬಂದ. ಮಾತಾಡಿಸಿದರೂ ಹೂ, ಹಾ ಎಂದರಾಯಿತು. ಊಟ ತಿಂಡಿಗಳಲ್ಲಿ, ದಿನಚರಿಯಲ್ಲಿ, ಆಸ್ತಿ ವ್ಯವಹಾರ ದಲ್ಲಿ ಯಾವುದರಲ್ಲೂ ಆಸಕ್ತಿ ಇಲ್ಲವೇ ಇಲ್ಲ. ಬದುಕು ಬರೀ ಸಪ್ಪೆ. ಮನೆಯಲ್ಲಿ ದ್ದರೂ ಇಲ್ಲದಂತೆಯೇ. ತಂದೆ ತಾಯಿಂದಿರು ಮಿತ್ರ ಬಳಗದವರು ಪ್ರಯತ್ನಿಸಿ ದರೂ ಹರ್ಷ ಹರ್ಷಿತನಾಗಲಿಲ್ಲ. ಮೌನಭಾರವೇ ಹಗಲೂ ರಾತ್ರಿ.

ತಂದೆ ತಾಯಿಯರ ಹೃದಯಭಿತ್ತಿ ಬಿರಿಯಿತು. ಕೃತಕ ಪತ್ರಗಳು ಸುತ್ತ ಮುತ್ತ ಹಲ್ಕಿರಿದುವು. ಇದ್ದೊಬ್ಬ ಮಗ ಈ ರೀತಿ ಕಂಗಾಲಾಗುವುದಕ್ಕಿಂತ ಅವನಿಚ್ಛೆಯಂತೆ ನಾಗಮಣಿಯನ್ನೇ ತಂದುಕೊಂಡರಾದೀತೇನೋ ಎಂಬ ಯೋಚನೆಯ ನೊಳಕೆ ಮನಃಕುಂಡದಲ್ಲಿ ಮೊಗ್ಗಾಗಿ ಮೂಡಿದಾಗಲೇ ಭರಿಸ ಲಾಗದ ದುಃಖದ ಆಘಾತಕ್ಕೆ ಸಿಕ್ಕಿ ಹತಗತಿಗೊಳಗಾದರು ದಂಪತಿಗಳು. ಹರ್ಷ ಮೋಟಾರ್ ಬೈಕ್ ಅಪಘಾತಕ್ಕೆ ಸಿಕ್ಕಿ ಆಸ್ಪತ್ರೆಯ ತುರ್ತು ಚಿಕಿತ್ಸೆಯ ವಿಭಾಗಕ್ಕೆ ಸೇರ್ಪಡೆಯಾದ. ತೊಡೆ ಮುರಿದಿತ್ತು. ಮೈ ಕೈ ಗಾಯಗಳಿಂದ ರಕ್ತ ಬಸಿದು ಕ್ಷೀಣಗತಿಗಿಳಿದಿದ್ದ. ದೃಶ್ಯ ಭಯಂಕರ!

ತಂದೆತಾಯಿಯರು ಗೆಳೆಯ ರಾಜ ಸುತ್ತುವರಿದಿದ್ದಾರೆ. ಹೋದ ಪ್ರಜ್ಞೆ ಮರಳಿದಾಗ ಬಿರಿಬಿರಿ ಕಣ್ಣು ಬಿಟ್ಟು ಎಲ್ಲರನ್ನೂ ನೋಡಿದ.

ದುಃಖಾರ್ತರಾಗಿ ನಡುಗುತಿದ್ದಾರೆ ತಂದೆತಾಯಿಗಳು. ಈಗಲೀಗ ಬಿರಿ ಯುವಷ್ಟು ಹೃದಯ ಡವಡವಿಸುತ್ತಿದೆ. ತುಂಗಭದ್ರೆಯರ ಪ್ರವಾಹ ನಯನ ಗಳಲ್ಲಿ.

ಹರ್ಷ ಮತ್ತೊಮ್ಮೆ ಎಲ್ಲರನ್ನೂ ನಿಟ್ಟಿಸಿದ. ಮನಸ್ಸು ಸ್ವಲ್ಪ ತಿಳಿಯಾ ಯಿತು. ಕ್ಷೀಣಿತ ದನಿಯಲ್ಲಿ ನುಡಿದ "ನನಗೇನೂ ಆಗುವುದಿಲ್ಲ. ಗಾಬರಿ ಯಾಗಬೇಡಿ."

ರಾಜ ಕೈ ಹಿಡಿದುಕೊಂಡು ಗದ್ಗದ ಕಂಠದಿಂದ ಕೇಳಿದ "ಹೇಗಿದ್ದೀ ಹರ್ಷ?"

ಅವನು ಮಾತು ನುಡಿಯಲು ಪ್ರಯತ್ನಿಸಿ ಸುಮ್ಮನಾದ.

"ಹೇಗಿದ್ದೀ? ಏನೆನಿಸುತ್ತೆ? ಏನಾಯ್ತು?"

"ಅನ್ಯಮನಸ್ಕನಾಗಿದ್ದೆ, ಹತೋಟಿ ತಪ್ಪಿತು."

ಹಣೆಯ ಮೇಲೆ ಕೈಯಿಟ್ಟು 'ಮಗನೇ!' ಎಂದ ಹರಿರಾಯ. ಕಣ್ಣುಗಳಲ್ಲಿ ನೀರಾಡಿತು. ತಾಯಿ ಹತ್ತಿರಕ್ಕೆ ಸರಿದು ಹಣೆಯಮೇಲೆ ಕೈಯಿಟ್ಟು ಮೆಲ್ಲನೆ ನೇವರಿಸಿ ದುಃಖದಿಂದ ವಿಜಾತೀಯವಾದ ದನಿಯಲ್ಲಿ ಕರೆದಳು.

"ಮಗನೇ...." ಗದ್ಗದಿಸಿತು ಧ್ವನಿ. ಬಿಸು ಸುಯ್ಲಿನಿಂದ ಎದೆ ಏರಿಳಿಯುತಿತ್ತು.

ತಂದೆ ಮೌನಭಾರ ವಹಿಸಿದ್ದ. ಕಣ್ಣುಗಳು ಆರಕ್ತಮಯವಾಗಿದ್ದುವು. ಹೃದಯ ಈಗಲೀಗ ಬಿರಿಯುವಂತೆ ವ್ಯಾಪ್ತಿಗೆ ಮೀರಿ ಮಿಡಿಯುತಿತ್ತು. ಗಂಟಲಾರಿ ಹೋಗಿದೆ. ಪ್ರಯತ್ನಿಸಿದರೂ ನುಡಿಯಲಾರ. ದುಃಖ ಸಂಕಟಗಳು ಕೊರಳೊತ್ತುತ್ತಿವೆ.

ಹರ್ಷ ರಾಜನ ಕಡೆ ನಿಟ್ಟಿಸುತ್ತ 'ನಾಗಮಣಿ'... ಎಂದ ಮುಂದೆ ನುಡಿಯಲಾಗಲಿಲ್ಲ.

"ನಾನವಳನ್ನು ಕರೆತರುವೆ. ಚಿಂತಿಸಬೇಡ."

ಹಣೆಯ ಮೇಲೆ ಕೈಯಿಟ್ಟು ನುಡಿದ ರಾಜ ಆಕ್ಷಣವೇ ಅಲ್ಲಿಂದ ಹೊರಟ. ಸ್ವಲ್ಪ ಹೊತ್ತಿನೊಳಗಾಗಿ ತನ್ನ ಹೆಂಡತಿ ಶಾರದೆಯೊಂದಿಗೆ ನಾಗಮಣಿಯನ್ನೂ ಕರೆತಂದ. ದೃಷ್ಟಿಗೆ ದೃಷ್ಟಿ ಸೇರಿ ದುಃಖದ ಸುಯ್ಲಾಡಿತು. ತುರ್ತು ಚಿಕಿತ್ಸೆಯ ಘಟಕದಲ್ಲಿ ಸೊಲ್ಲು ಹೊರ ಹಾಕುವಂತಿಲ್ಲ. ಸಿಡಿದೊಡೆಯಲಿರುವ ದಡಾಕಿಯಂತೆ ಎಲ್ಲರೂ ಗಂಭೀರ ಮೌನದಲ್ಲಿ ಮುಳುಗಿದ್ದಾರೆ. ಕೊರಳ ನರಗಳು ಉಬ್ಬಿ ನಿಂತಿವೆ. ತೊಯ್ದ ಕಣ್ಣುಗಳು ಥಳಥಳಿಸುತ್ತಿವೆ.

"ನಾಗಮಣೀ....ಹೀಗೆ ಬಾ."

ಹರ್ಷನ ಕರೆ ಮನದಾಳಕ್ಕೆ ಇಳಿಯಿತು.

ಆ ಕೂಡಲೇ ನಾಗಮಣಿ ಎಡದು ಹೆಜ್ಜೆ ಮುಂದುವರಿದಳು. ಭಯದುಃಖ ಕಳವಳಗಳ ಕೋಟಿ ಮನದಲ್ಲಿ. ಒಡಲ ದುಃಖ ಸಂಕಟ ಮುಖಮುದ್ರೆಯಲ್ಲಿ ಹೊಮ್ಮಿತು. ಹತ್ತಿರ ಹೋಗಲೋ ಬೇಡವೋ ಎಂಬ ಆಶಂಕೆ ಹೆಜ್ಜೆ ಹೆಜ್ಜೆಗಳಲ್ಲಿ. ಹೃದಯ ವ್ಯಾಪ್ತಿಗೆ ಮೀರಿ ಮಿಡಿಯುತ್ತಿದೆ ತನ್ನ ಹೃತ್ಕ್ರೋಶನೇ ಬಿರಿಯುವಂತೆ.

ಹರಿರಾಯ ಅವಳ ಭುಜದ ಮೇಲೆ ಕೈಯಿಟ್ಟು "ಹೋಗು, ಅಂಜಬೇಡ" ಎಂದ, ಗದ್ಗದಿತ ದನಿಯಲ್ಲಿ.

ನಾಗಮಣಿ ಬಳಿಯಲ್ಲಿ ನಿಂತು ತಲೆ ಬಾಗಿದಳು. ಕಣ್ಣುಗಳಲ್ಲಿ ಕಂಬನಿಯ ಕೋಡಿ ಹರಿಯಿತು. ತುಟಿಯೊತ್ತಿ ಉಸಿರು ಬಿಗಿ ಹಿಡಿದಳು.

"ಕ್ಷಮಿಸು...ನಾಗಮಣಿ ! ಕ್ಷಮಿಸು. ನಿನಗೆ ನೋವುಂಟು ಮಾಡಿದುದರಿಂದಲೇ ನನಗೆ ಈ ಆಘಾತ ಸಂಭವಿಸಿತು."

"......"

"ಕ್ಷಮಿಸಿಬಿಡು...ಕ್ಷಮಿಸಿಬಿಡು. ನಾನು ಪಾಪಿ....ನಿನ್ನನ್ನು ದುಃಖಕ್ಕೀಡು ಮಾಡಿದೆ..."

"ಛೀ ! ಅಷ್ಟು ದೊಡ್ಡ ಮಾತಾದರೂ ಏಕೆ? ನಿಮ್ಮಿಂದ ತಪ್ಪೇನೂ ಆಗಿಲ್ಲ."

ಬಾಯಿ ಮುಚ್ಚಿ ಹಿಡಿದುಕೊಂಡು ಬಿಕ್ಕಿದಳು ನಾಗಮಣಿ. ಹೃದಯ ಸಿಡಿದೊಡೆಯುವಷ್ಟು ಸಂಕಟ–ದುಃಖ–ಕಳವಳ.

ಹರ್ಷ ನಡುಗುವ ಕೈಯನ್ನು ಚಾಚಿ ನಾಗಮಣಿಯ ಕೈಯನ್ನು ಹಿಡಿದುಕೊಂಡು ನುಡಿದ "ನನಗೇನೂ ಆಗದು. ಗಾಬರಿಯಾಗಬೇಡ. ದೇವರಿದ್ದಾನೆ !"

ಸ್ವಲ್ಪ ಹೊತ್ತು ರುದ್ರಮೌನಗತಿಯಲ್ಲಿ ಉರುಳಿತು.

— ೦ —

ವಿಜ್ಞಾನ ವಶೀಕರಣ

೭

ಸತ್ಪಾತ್ರೇಷು ದಾನಂ ಕುರ್ಯಾತ್

ವಿಜ್ಞಾನ ಕ್ಷೇತ್ರದಲ್ಲಿ ಹೆಸರಾಂತ ವ್ಯಕ್ತಿ ಡಾ|| ತಿಲೋತ್ತಮ್ ಮೇಲಿಂದ ಮೇಲೆ ಹಲವಾರು ಪ್ರಶಸ್ತಿಗಳನ್ನು ಪಡೆದವನು. ಅವನು ವೈಜ್ಞಾನಿಕ ಸಂಶೋಧನೆಯ ವಿಷಯ ಜನಜನಿತ. ಸಮಕಾಲೀನ ವಿಜ್ಞಾನಿಗಳಿಗೂ ಕಿರಿಯ ವಿಜ್ಞಾನಿಗಳಿಗೂ ಅವನೊಂದು ಆಶ್ಚರ್ಯಗಳ ಬೃಹತ್ ಕೋಟೆ. ಅದರ ಒಳಹೊಕ್ಕು ಉದ್ದಗಲವನ್ನು ಅಳೆಯುವುದಾಗಲೀ ಅರ್ಥೈಸುವುದಾಗಲೀ ಕಷ್ಟವಾದ ವಿಷಯ.

ಡಾ|| ತಿಲೋತ್ತಮನಲ್ಲಿ ಎಲ್ಲರಿಗೂ ಶ್ರದ್ಧಾಗೌರವಗಳು ಕ್ರೋಢೀಕರಿಸಿದಂತೆ ಅಮೋಘವಾದ ಗೌರವ ಭಾವನೆ.

ಅಂದಿಂದಿಗೂ ಪ್ರಯೋಗ ಶಾಲೆಯಲ್ಲಿ ಏಕಾಂತ ಸಂಶೋಧನೆ. ಏಕಾಂತ ಚಿಂತನೆ ಏಕಾಂತ ಅಭ್ಯಾಸ. ಇವುಗಳ ಪ್ರತಿ ಫಲವಾಗಿ ಸಂಶೋಧನೆಯ ಮೇಲೆ ಅನೇಕ ಪ್ರಬಂಧಗಳನ್ನು ವಿಜ್ಞಾನಿಗಳ ಸಭೆಯಲ್ಲಿ ಮಂಡಿಸಿದ್ದ. ಪತ್ರಿಕೆಗಳಲ್ಲೂ ಪ್ರಕಟವಾಗಿದ್ದುವು. ಕಾಲಕಾಲಕ್ಕೂ ಪ್ರಕಟಿಸುವವನೇ. ಅವನಿಂದ ಹೊಮ್ಮುವ ವಿಷಯ ನಿರೂಪಣೆಗಾಗಿ ಕಾದಿರುತ್ತಾರೆ, ಬುದ್ಧಿಜೀವಿಗಳು ಮತ್ತು ವಿಜ್ಞಾನಿಗಳು ಮಳೆಗಾಗಿ ಕಾಯುವ ಚಾತಕ ಪಕ್ಷಿಗಳಂತೆ.

ಅದ್ಭುತ ಪ್ರಯೋಗಶಾಲೆ ವಿವಿಧ ಯಂತ್ರ ಸ್ಥಾವರಗಳಿಂದ ಸುಸಜ್ಜಿತ. ವೈಜ್ಞಾನಿಕ ಪ್ರತಿಭೆಗೆ ತಕ್ಕುದಾದ ಅಂತರ್ಗೃಹ. ಕದ ಮುಚ್ಚಿಕೊಂಡರೆ

ಹೊರಜಗತ್ತಿನ ಪರಿವೆ ಇಲ್ಲದ ಸಂಶೋಧನೆ. ಎಷ್ಟೋ ಸಲ ಊಟ–ತಿಂಡಿಗಳು ಹಿಂದೆಯೇ ಉಳಿಯುತ್ತವೆ. ಸಂಶೋಧನೆಯಲ್ಲಿ ಗುರಿ ಮುಟ್ಟುವುದೊಂದೇ ತನ್ನ ಮುಂದಿನ ಗುರಿ. ಅರವತ್ತು ವರ್ಷಗಳ ಸೊಂಪನ್ನುಂಡು ಪಕ್ವಾದ ಶರೀರ. ಮುಂದೆ ಯಾರನ್ನಾದರೂ ಆಂತರಂಗಿಕ ಶಿಷ್ಯನನ್ನಾಗಿ ಸ್ವೀಕರಿಸಿ ತನ್ನ ವೈಜ್ಞಾನಿಕ ಸಂಪತ್ತನ್ನು ಅವನಿಗೆ ಬಿಟ್ಟು ಹೋಗುವ ಯೋಚನೆ ಮನದಲ್ಲಿ. ಪರಿಸರದ ವಿಜ್ಞಾನಿಗಳಲ್ಲಿ ಯಾರನ್ನಾದರೂ ಸ್ವೀಕರಿಸೋಣವೆಂದರೆ ಅಂತರಾತ್ಮ ಒಪ್ಪುತ್ತಲೇ ಇಲ್ಲ. ತನಗೆ ಅಗತ್ಯವಾದ ಅಥವಾ ತನ್ನ ಅಭಿಲಾಷೆಗೆ ಪಕ್ವಾದ ವಿಜ್ಞಾನಿ ಇನ್ನೆಲ್ಲಿ ದೊರೆತಾನು? ಅದು ಬಹುದೊಡ್ಡ ಪ್ರಶ್ನೆ. ಆಂತರಂಗಿಕವಾಗಿ ಅನ್ವೇಷಣೆಯಲ್ಲಿಯೇ ಮುಳುಗಿ ಹೋಗಿದೆ ಚಿತ್ತಪ್ರವೃತ್ತಿ.

ಡಾ|| ತಿಲೋತ್ತಮ್ ಮೇಜಿನ ಮುಂದೆ ಮಂಡಿಸಿದ್ದಾನೆ ಪ್ರಯೋಗಶಾಲೆಯಲ್ಲಿ. ಬರೆಯುತ್ತಿದ್ದ ಪ್ರಬಂಧ ಇನ್ನೂ ಪೂರ್ತಿಯಾಗಿರಲಿಲ್ಲ. ಹಿಂದೆ ಬರೆದ ಪ್ರಬಂಧಗಳ ಬಿಡುಗಡೆಗೆ ಸೂಕ್ತ ಸಮಯ ಒದಗಿರದೆ ಬಿಡುಗಡೆ ಮಾಡಿರಲಿಲ್ಲ. ಮನಸ್ಸು ಯೋಚನೆಯ ಸುಳಿಯಲ್ಲಿ ಸಿಕ್ಕಿದಾಗ ಲೇಖನಿಗೆ ಸ್ವಲ್ಪ ವಿರಾಮ. ನಾನಾ ಯೋಚನೆಗಳು ತುಂಬಿ ಗೊಂದಲ ಹೂಡಿದ್ದುವು ತಲೆಯಲ್ಲಿ. ಅಲ್ಲಲ್ಲೇ ಪದಚಾರಣ ಮಾಡುತ್ತ ಯೋಚನಾಕ್ರಾಂತನಾದ. ಅಲ್ಲೋಲ ಕಲ್ಲೋಲಿತ ಯೋಚನೆಯಲೆಗಳಲ್ಲಿ ವಿಷಯಾನುಕ್ರಮಣಿಕೆ ಅನಿಚ್ಚಳ. ಸಧ್ಯದಲ್ಲೇ ಪ್ರಯೋಗವನ್ನು ಪರಿಪೂರ್ಣಗೊಳಿಸುವ ಇಚ್ಛೆ. ಅಂದಮೇಲೆ, ಪ್ರಯೋಗ–ಪ್ರಯೋಗ ಹಗಲೆಲ್ಲ ಪ್ರಯೋಗವೇ. ಮನಃಚಿತ್ತಗಳಿಗೆ ಬಿಡುವೆಂಬುದೇ ಇಲ್ಲ.

ಪ್ರಾಯೋಗಿಕ ಸಾಧನೆಯ ಕಣಕಣವೂ ಹರಿಯ ತೊಡಗಿತು ಕರಿಯ ಅಕ್ಕರದಲ್ಲಿ. ಡಾ|| ತಿಲೋತ್ತಮ್ ಬರವಣಿಗೆಯಲ್ಲಿ ತೀವ್ರ ಮುಳುಗಿ ಹೋದ.

ಕಿಟಕಿಯಾಚೆ ವಿವಿಧ ಸಸ್ಯ–ವೃಕ್ಷಗಳ ತೋಟ. ಮಧ್ಯಾಹ್ನದ ವಿಶ್ರಾಂತಿಗೆಂದು ಗಿಡಮರಗಳನ್ನಾಶ್ರಯಿಸಿದ ಪಕ್ಷಿ ಸಮಾಜದ ರಾಗಾಲಾಪನೆ ಅಂತರಂಗವನ್ನು ಮುಟ್ಟುತ್ತವೆ ಕಿವಿಗಿಂಪಾಗಿ.

ಸಿಂಗಾಪುರ್ ಚೆರ್ರಿ.

ಆಃ! ಆ ಮರದಲ್ಲಂತೂ ಅದೇನು ಹಣ್ಣುಗಳೋ, ಕುಡಿಗಳೆಲ್ಲಾ ಹಣ್ಣಿನ ಮಯ. ಹಣ್ಣುಗಳ ದೆಶೆಯಿಂದ ಸದಾ ಪಕ್ಷಿಲೋಕದ ಗಜಿಬಿಜಿ ಮರದಲ್ಲಿ. ಒಮ್ಮೆ ನುಂಗಿದ ಹಣ್ಣು ಅರಗಿತೆಂದರೆ ಮತ್ತೆ ಬರುತ್ತವೆ ಅವು. ಹಣ್ಣುಗಳು ಮುಗಿಯುವಂತಿಲ್ಲ. ಹಕ್ಕಿಗಳು ಮರೆಯಾಗುವಂತಿಲ್ಲ. ಎಷ್ಟೋ ಬಾರಿ ಪ್ರಯೋಗಗಳಿಂದ ಹಾಗೂ ಗಂಭೀರ ಬರವಣಿಗೆಗಳಿಂದ ಸೋತು ಹೋದ ಮನಃಬದ್ಧಿಗಳಿಗೆ ಆ ಚಿತ್ರ ನಿಜವಾಗಿಯೂ ಸಾಂತ್ವನ ನೀಡುತ್ತದೆ. ಅವುಗಳನ್ನು ನೋಡು ನೋಡುತ್ತ ಎಷ್ಟೋ ಹೊತ್ತು ವಿಶ್ರಾಂತಿ ಪಡೆಯುತ್ತಾನೆ.ಆಗ ಮಾನಸಿಕ ತುಮುಲವೂ ಸ್ತಬ್ಧ; ಲೇಖನಿಯೂ ಸ್ತಬ್ಧ.

ಬೃಹದ್ ಯಂತ್ರಸ್ಥಾವರ ಒಂದಕ್ಕೆ ಹತ್ತಾಗಿ ನೂರಾಗಿ ಕಣ್ಣಿಗೆ ಕಟ್ಟುತ್ತದೆ. ಎಲ್ಲಿ ಯಾವೆಡೆ ತಿರುಗಿದರೂ ಅಲ್ಲಿ ಅದರ ಆಸ್ಥಾನ. ಸಸ್ಯರಾಜಿಯ ಮೇಲೂ, ಪಕ್ಷಿಲೋಕದ ಮೇಲೂ ಯಂತ್ರ ಅಚ್ಚೊತ್ತಿದರೂ ವಿಶೇಷವಲ್ಲ. ಮನಃಪ್ರಾಣಗಳೆಲ್ಲ ಯಂತ್ರ ಸ್ಥಾವರಮಯ. ವಿಜ್ಞಾನಮಯ. ಪ್ರಯೋಗ ಮಯ.

ಡಾ|| ತಿಲೋತ್ತಮ್ ಯೋಚನೆಯಲೆಗಳ ಎಳೆದಾಟಕ್ಕೆ ತಡೆಹಾಕಿ ಸ್ತಬ್ಧಗೊಳಿಸಿ ಕಾರ್ಯಮಗ್ನನಾದ. ಹಿಂದಿನ ದಿನದ ಪ್ರಯೋಗದ ಫಲಿತಾಂಶವನ್ನು ಪ್ರಬಂಧ ರೂಪಕ್ಕಿಳಿಸುವುದಿತ್ತು. ವಿಷಯ ಗೋಪ್ಯವಾದುದರಿಂದ ತಾನೇ ಅದನ್ನು ಕಾಗದ ಮೇಲೆ ಮಸಿಯೊರತೆಯಲ್ಲಿ ಚಿತ್ರಿಸಬೇಕು. ಅತ್ಯಂತ ಏಕಾಗ್ರತೆಯಿಂದ ಕಾರ್ಯ ಪ್ರವೃತ್ತನಾದ. ಹಲವು ಪುಟಗಳ ತುಂಬ ಸಾಹಿತ್ಯ ರಚಿತವಾಯ್ತು. ಒಮ್ಮೆ ಓದಿ ನೋಡಿ, ಅಲ್ಲಲ್ಲಿ ತಿದ್ದಿ ಪುಟವನ್ನು ಫೈಲಿಗೆ ಅಳವಡಿಸಿದ. ಅನಂತರ ವಿಚಾರ ವೈಖರಿಯಲ್ಲಿ ಮುಳುಗಿತು ಚಿತ್ತ. ಹಿರಿಯ ವಿಜ್ಞಾನಿ ಶಿಷ್ಯ ಡಾ|| ಶಿವರಾಂ ಮನಃಭಿತ್ತಿಯ ಮೇಲೆ ಮೂಡಿ ನಿಂತ. ಅವನೊಂದಿಗೇ ಡಾ|| ಶಂಕರ್...ಉಹೂ ಇಬ್ಬರೂ ಸರಿ ಹೊಂದಲಾರರು. ಅಂತರಂಗಿಕ ಶಿಷ್ಯರೆಂದರೆ ತುಂಬಾ ಶಕ್ತಿ ಸಾಮರ್ಥ್ಯ ಉಳ್ಳ ವ್ಯಕ್ತಿಯಾಗಿರಲೇಬೇಕು ಅಂತಹವರು ಇನ್ನಾರಿದ್ದಾರೆ? ಎಷ್ಟೇ ಯೋಚಿಸಿದರೂ ಪ್ರಶ್ನೆ ಪ್ರಶ್ನೆಯಾಗಿಯೇ ಉಳಿಯಿತು. ವಿಜ್ಞಾನಿ ಎದ್ದು ಅಲ್ಲಲ್ಲೇ ಶತಪಥ ತಿರುಗಿದ. ಮನಸ್ಸು ವಿಚಾರವಾಹಿಯಲ್ಲಿ .ಮುಳುಗಿ ಕೊಚ್ಚಿ ಹೋಯಿತು. ತೆರೆದ ಕಿಟಕಿಗಳನ್ನು ಮುಚ್ಚಿ ಬಿರಟೆಯನ್ನು ಭದ್ರಪಡಿಸಿದ ಬಳಿಕ ಫೈಲುಗಳನ್ನು ಬೀರುವಿನಲ್ಲಿಟ್ಟು

ಬೇಗ ಮುಪ್ರಿ ಜಡಿದ. ಆಗಲೇ ಹೊತ್ತು ಇಳಿ ಮುಖವಾಗಿತ್ತು. ಪ್ರಯೋಗ ಶಾಲೆಯ ಬಾಗಿಲನ್ನು ಮುಚ್ಚಿ ಬೀಗ ಹಾಕಿ ಹೊರಬಂದ. ಬಾಗಿಲ ಬಳಿ ಕಾದಿದ್ದ ರೂಬಿ ನಾಯಿ ಬಾಲ ಆಡಿಸಿ ಪ್ರೀತಿಯನ್ನು ವ್ಯಕ್ತ ಪಡಿಸುತ್ತ ಸುತ್ತ ಮುತ್ತ ಸುತ್ತಾಡಿತು, ಬಾಲ ಆಡಿಸುತ್ತ.

o o o o

ಬೃಹದ್ ಪ್ರಯೋಗ ಶಾಲೆಯ ತುಂಬೆಲ್ಲ ವಿದ್ಯುತ್ ದೀಪಗಳು ಅತ್ಯಂತ ಪ್ರಕಾಶಮಾನವಾಗಿ ಉರಿಯುತಿದ್ದುವು. ವಿಜ್ಞಾನಿ ಒಳ ಹೆಜ್ಜೆಯಿಟ್ಟಾಗ ರಾತ್ರಿ ಹನ್ನೊಂದರ ಸಮಯ. ಹಿಂದೆಯೇ ಬಾಗಿಲನ್ನು ಮುಚ್ಚಿಕೊಂಡ. ಒಳಗಡೆ ಇನ್ನಾರೂ ಇಲ್ಲ. ತನ್ನಿಂದಲೇ ಪರಿಶೋಧಿತವಾದ ನಾನಾ ರಾಸಾಯನಿಕ ವಸ್ತುಗಳಿಗೆ ಲೆಖ್ಖವೇ ಇಲ್ಲ. ಒಮ್ಮೆ ಸುತ್ತೆಲ್ಲಾ ಕಣ್ಣಾಡಿಸಿ ಯಂತ್ರ ಸಾಧನೆಗಳ ಸ್ಥಿತಿಗತಿಯನ್ನು ಅವಲೋಕಿಸಿ ಅಲ್ಲಲ್ಲಿ ಕೈಯಾಡಿ ಸ್ವಿಚ್ಚುಗಳನ್ನು ಒತ್ತಿದ ನಂತರ ಮೇಜಿನ ಮುಂದೆ ಕುಳಿತ. ಲೇಖನ ಸಾಮಗ್ರಿ ಮೇಜಿನ ಮೇಲಿತ್ತು. ವಿಜ್ಞಾನಿ ಲೇಖನ ಕೃಷಿಗೆ ಕೈ ಹಚ್ಚಲಿಲ್ಲ. ಭಾವನಾ ಪ್ರಪಂಚದಲ್ಲಿ ಮುಳುಗಿತು ಮನಸ್ಸು. ಹೊತ್ತು ಮಧ್ಯರಾತ್ರಿಯನ್ನು ದಾಟಿದನಂತರ ಎದ್ದು ರತ್ನಗಂಬಳಿಯ ಮೇಲೆ ಕುಳಿತು ಕಣ್ಮುಚ್ಚಿ ತಲೆಯ ಮೇಲೆ ಕೈ ಹಸ್ತಗಳನ್ನು ತೆಕ್ಕೆಹಾಕಿ ಇಟ್ಟ. ಕೆಲವೇ ಕ್ಷಣಗಳಲ್ಲಿ ದೇಹ ನೆಲವನ್ನು ಬಿಟ್ಟು ಮೇಲೆದ್ದಿತು. ತಲೆಯಿಂದ ಆದೇಶವಿಲ್ಲದಿದ್ದರೂ ಕೈಗಳು ಕೆಳಗಿಳಿದುವು. ವಿಜ್ಞಾನಿ ಕೊಠಡಿಯ ಮಾಡಿನೆತ್ತರಕ್ಕೆ ಏರಿ ಉದ್ದಗಲಕ್ಕೂ ತೇಲಾಡಿದ. ಮುಚ್ಚಿದ ಕಣ್ಣುಗಳು ತೆರೆಯಲಿಲ್ಲ. ಭಾವನಾ ಪ್ರಪಂಚದಲ್ಲಿದ್ದರೂ ಎಲ್ಲಿಯೂ ಯಾವೆಡೆಯೂ ದೇಹ ಡಿಕ್ಕಿ ಹೊಡೆಯಲಿಲ್ಲ. ಎಷ್ಟೋ ಹೊತ್ತಿನ ಬಳಿಕ ಅದೇ ರತ್ನಗಂಬಳಿಯ ಮೇಲೆ ತಾನು ಮೊದಲು ಕುಳಿತಿದ್ದ ತಾವಿಗೇ ಬಂದು ಕುಳಿತುಕೊಂಡ ನಂತರ ಕಣ್ತೆರೆದ. ಮೈ ಹಕ್ಕಿಯ ಗರಿಯಂತೆ ಹಗುರಾಗಿತ್ತು. ಆಲೋಚನಾ ಅಲೆಗಳು ಸ್ತಬ್ಧವಾಗಿದ್ದುವು. ಸ್ವಲ್ಪ ವಿಶ್ರಾಂತಿ ತೆಗೆದುಕೊಂಡ ನಂತರ ಎದ್ದು ಮೇಜಿನ ಮುಂದೆ ಕುಳಿತು ಲೇಖನ ಕೃಷಿಯನ್ನು ಕೈಕೊಂಡ. ಆದರೆ, ಅದು ಬಹಳ ಹೊತ್ತು ನಡೆಯಲಿಲ್ಲ. ವಿಶ್ರಾಂತಿಗಾಗಿ ಶಯನಗಾರಕ್ಕೆ ಹೋದ. ಪಕ್ಕದ ಹೆರವಾದ ಕೊಠಡಿಯೇ ಶಯನಾಗಾರ. ಕಿಟಕಿಯ

ಬಾಗಿಲುಗಳು ವಿಶಾಲವಾಗಿ ತೆರೆದಿದ್ದುವು. ಸವಿಗಾಳಿ ತಣ್ಣಗೆ ಮುದ್ದಿಸುವಂತೆ ಒಳನುಗ್ಗುವಾಗ ಬದಿಯಲ್ಲಿ ಮುದುರಿ ಒಟ್ಟಾಗಿ ನಿಂತ ತೆಳ್ಳನೆಯ ಪರದೆಗಳು ಪಟಪಟನೆ ದೊಡ್ಡ ಬಾವುಟದಂತೆ ಹಾರುತಿದ್ದುವು.

ಡಾ|| ತಿಲೋತ್ತಮ್ ಸೆಜ್ಜೆಯನ್ನು ಸೇರಿ ಹೊದ್ದಿಕೆಯನ್ನು ಮೈಮೇಲೆ ಎಳೆದುಕೊಂಡ. ಧವಳಕಾಂತಿಯನ್ನು ಒಸರುವ ಸೊಳ್ಳೆಪರದೆ ಸುತ್ತುವರಿದಿತ್ತು ಮಂಚವನ್ನು. ಸ್ವಿಚ್ ಒತ್ತಿ ದೀಪವನ್ನು ನಂದಿಸಿದ ಮೇಲೆ ಹೊರಜಗತ್ತಿನಲ್ಲಿ ಹರಿದಿದ್ದ ಕೃಷ್ಣ ಪಕ್ಷದ ಬೆಳಂದಿಗಳ ಮಸುಗಾಂತಿಯಿಂದ ಒಳಗಡೆ ನಸು ಬೆಳಕಿನ ಹರವು. ಡಾ|| ತಿಲೋತ್ತಮ್ ಹಾಯಾಗಿ ಉಸಿರಾಡಿದ. ಕಣ್ಣುಗಳಿಗೆ ನಿದ್ದೆಯ ಮಂಪರ ಆವರಿಸಿ ಬಂತು. ವಿಜ್ಞಾನಿ ಕನಸಿನ ಲೋಕದಲ್ಲಿ ಸಮುದ್ರ ತೀರದಲ್ಲಿದ್ದಾನೆ. ಭೋರ್ಗರೆಯುವ ಸಮುದ್ರದ ವೈಭವೋಪೇತ ನೀಲವರ್ಣ. ಅಲೆಯೋರಿ ಅಲೆಯಿಳಿದು ಮುನ್ನುಗ್ಗುವ ಮಹಾ ಜಲರಾಶಿ. ನೊರೊರೆಯಾದ ಹಾಲ್ಗಡಲೇ ಉಕ್ಕುಕ್ಕಿ ಹರಿದು ಬಂದಂತೆ ಕಣ್ಣುಗಳಿಗೆ ಅತ್ಯಂತ ಆಪ್ಯಾಯಮಾನವಾದ ಮಹಾಪೂರ. ನೋಡಿದಷ್ಟೂ ತಣಿಯದು. ಭಾವಿಸಿದಷ್ಟೂ ಪೂರೈಸದು. ಸಲಸಲಕ್ಕೂ ಹೆಜ್ಜೆಗಳನ್ನು ಸ್ಪರ್ಶಿಸಿ ಹೋಗುವ ಅಲೆಗಳ ಮೃದುಸ್ಪರ್ಶ ಸ್ಪರ್ಶಿಸಿದಷ್ಟೂ ಸಾಲದು. ಬೆಳ್ಳಗೆ ಬಂದು ಬೆಳ್ಳಗೆ ಇಳಿದು ಹೋಗುವ ಬೆಳ್ನೊರೆಯ ಲವಣವಾರಿ. ವಿಜ್ಞಾನಿ ಮಹಾಪೂರದಲ್ಲಿ ಧುಮುಕಿ ನಸುದೂರದಲ್ಲಿದ್ದ ಹೆಬ್ಬಂಡೆಯನ್ನೇರಿದ. ನೀರು, ನೀರು, ನೀರು ಎಲ್ಲೆಡೆಯೂ ನೀರು. ಮೇಲೆ ನೀಲಾಕಾಶ, ಕೆಳಗೆ ನೀಲವಾರಾಶಿ; ಸುತ್ತುಮುತ್ತೂ ದಶದಿಶೆಗಳಲ್ಲಿ ನೀಲ ಭಿತ್ತಿ. ನೀಲ ಜಗತ್ತಿನ ನೀಲಿಯನುಂಡು ನೀಲಿಯಾದ ವಿಜ್ಞಾನಿ ಕಣ್ಮುಚ್ಚಿ ಪದ್ಮಾಸನದಲ್ಲಿ ಕುಳಿತುಕೊಂಡ ಕೃಷ್ಣ ಶಿಲೆಯ ಮೇಲೆ. ಒಂದೆರಡು ಗಳಿಗೆಗಳು ಉರುಳಿದುವೇನೋ, ದೇಹ ಬಂಡೆಗಲ್ಲನ್ನು ಬಿಟ್ಟು ಮೆಲ್ಲನೆ ಮೇಲೇರ ತೊಡಗಿತು. ನೇರವಾಗಿ ನಡುನೆತ್ತಿಯ ನೇರಕ್ಕೆ ಏರಿತು ಗಣೆಯೊಂದು ಮೇಲೇರುವಂತೆ, ಮೇಲೆ....ಮೇಲೆ... ಇನ್ನೂ ಮೇಲೆ.

ಸೂರ್ಯ ರಶ್ಮಿಗಳು ಮೈಯ್ಯನ್ನು ಚುರುಚುರನೆ ಸುಡಲಾರಂಭಿಸಿದಾಗ, ಕಣ್ಣುಗಳನ್ನು ಉಜ್ವಲ ಬೆಳಕು ಕುಕ್ಕ ತೊಡಗಿದಾಗ ವಿಜ್ಞಾನಿ ತಟ್ಟನೆ

ಕಣ್ತೆರೆದ. ಸೆಜ್ಜೆಯನ್ನು ಸುತ್ತುವರಿದ ಸೊಳ್ಳೆಪರದೆ ಮೊದಲು ದೃಷ್ಟಿಗೆ ಬಿತ್ತು.

o o o o

ಆ ಬೃಹದ್ ಮಹಲಿನ ಹೊರಗಡೆ ವಿಶಾಲವಾದ ಭೂವಲಯ. ಸುತ್ತಲೂ ಹಬ್ಬಿದ ಪ್ರಾಕಾರದ ಗೋಡೆಯ ಮೇಲೆ ದಟ್ಟವಾಗಿ ಹಬ್ಬಿದ ನಾನಾ ವರ್ಣಗಳ ಹೂಗಳಿಂದ ತುಂಬಿದ ಬೋಗನ್ ವಿಲ ಬಳ್ಳಿ. ಒಳ ಪ್ರಪಂಚದಲ್ಲಿ ನಡೆಯುವ ಯಾವೊಂದು ವ್ಯಾಪಾರವೂ ಹೊರ ಜಗತ್ತಿಗೆ ತಿಳಿಯದಷ್ಟು ಗಹನ. ನೇರವಾಗಿ ಹಾದಿಯ ಇಕ್ಕೆಲದಲ್ಲೂ ಬೃಹದ್ ವೃಕ್ಷ ಶ್ರೇಣಿಗಳು. ಅವಲ್ಲದೆ ಸುತ್ತ ಮುತ್ತಲೂ ಅಲ್ಲಲ್ಲಿ ಪುರಾತನ ವೃಕ್ಷವಾಟಿಕೆ. ಆ ಮಹಲನ್ನು ಕಟ್ಟಿ ಅದೆಷ್ಟು ದಶಮಾನಗಳು ಸಂದಿವೆಯೋ ಅಷ್ಟೇ ವೃಕ್ಷಗಳ ಆಯುಃಪ್ರಮಾಣವೂ ಸಹ. ಸುತ್ತಲೂ ಸಾಲಾಗಿ ಇಟ್ಟಿಗೆಯಿಂದ ಕಟ್ಟಲ್ಪಟ್ಟ ಹೂವಿನ ಪಾತಿಗಳು, ಅಲ್ಲಲ್ಲಿ ಕಂಡುಬರುವ ಬಗೆಬಗೆಯ ಹೂಗಿಡಗಳು ಉದ್ಯಾನಕ್ಕೆ ಕಳೆಕೊಟ್ಟವೆ. ತಂಗಾಳಿಯಿಂದ ತಲೆದೂಗುವ ವೃಕ್ಷ ಸಮೂಹ ಸುಯ್ಯನೆ ಸುಯ್ಯುತ್ತ ತೋಷರಾಗವನ್ನು ಹಾಡುವುದು ಅತ್ಯಂತ ಆಪ್ಯಾಯಮಾನ.

ಡಾ|| ತಿಲೋತ್ತಮ್ ರಮ್ಯೋದ್ಯಾನದ ಕಾಲು ಹಾದಿಯಲ್ಲಿ ವಿಹರಿಸುತ್ತಿದ್ದ. ಬಾಲರವಿ ಇನ್ನೂ ಮೇಲೇರುವುದರಲ್ಲಿದ್ದಾನೆ. ಹುಲ್ಲೆಸಳ ಮೇಲೆ ಮಣಿ ಮಣಿಯಾಗಿ ನೆಲೆನಿಂತ ಮಂಜಿನ ಹನಿಗಳು ಸೂರ್ಯ ಕಿರಣಗಳ ಪ್ರತಿಫಲನದಿಂದ ಜಗಜಗಿಸುವ–ವೈಭವೋಪೇತವಾದ ನೈಸರ್ಗಿಕ ಸೌಂದರ್ಯ ಅಂತರಂಗವನ್ನು ಅರಳಿಸುತ್ತದೆ. ಮಾಲಿ ಇನ್ನೂ ಬಂದಿಲ್ಲವಾದ್ದರಿಂದ ಎಲ್ಲೆಲ್ಲೂ ನೀರವ, ನಿಶ್ಶಬ್ದ. ವಿಜ್ಞಾನಿಗೆ ಅದು ಇನ್ನೂ ಹಿತವೆನಿಸಿತು. ತಲೆಯಲ್ಲಿ ನಾನಾ ವಿಚಾರಗಳನ್ನು ತುಂಬಿಕೊಂಡು ತನ್ನಲ್ಲೇ ಚರ್ವಿತಚರ್ವಣಗೊಳಿಸಹತ್ತಿದ. ಮನಸ್ಸು ಅರಳೆಯಂತೆ ಹಗುರಾಗಿತ್ತು. ಹಾಗೆ ಅದೆಷ್ಟು ಹೊತ್ತು ಉರುಳಿತೋ ಅದನ್ನು ಅವನು ಅರಿಯ. ಪದಚಾರಣ ಸಾಗುತ್ತಲೇ ಇರುವಾಗ ಅಟೆಂಡರ್ ಬಳಿಗೆ ಬಂದು ಉಪಹಾರ ಅಣಿಯಾಗಿರುವುದನ್ನು ವರದಿ ಮಾಡಿ ಹೋದ.

ಡಾ|| ತಿಲೋತ್ತಮ್ ಉಪಹಾರವನ್ನು ಮುಗಿಸಿ ಪ್ರಯೋಗ ಶಾಲೆಗೆ ಬಂದಾಗ ಇನ್ನೂ ಎಂಟು ಗಂಟೆ. ದೇಹದಲ್ಲಿ ಹೊಸಚೈತನ್ಯ ತುಂಬಿದಷ್ಟು ಹುರುಪು. ಏನು ಮಾಡಲಿ? ಏನು ಸಾಧಿಸಲಿ? ಎಂಬಷ್ಟು ಆಕರ. ಬೌದ್ಧಿಕ ಸ್ತರದಿಂದ ಉಕ್ಕಿಹರಿಯುವ ವಿಚಾರಾತ್ಮಕ ಶ್ರದ್ಧೆಯನ್ನು ಎಲ್ಲಿ, ಯಾವ ರೀತಿಯಲ್ಲಿ ತೊಡಗಿಸಬೇಕು, ಏನೇನು ಸಾಧನೆ ಮಾಡಬೇಕು? ಏನು ಮಾಡಿದರೆ ವಿಜ್ಞಾನಕ್ಕೆ ಬೆಲೆ ಬರುತ್ತದೆ? ಕಾಲೋಚಿತವಾದ ವರ್ತನೆಯಿಂದ ಅಥವಾ ಪರಿಜ್ಞಾನದಿಂದ ದೈವದತ್ತವಾದ ಮಾನವ ಶಕ್ತಿಯನ್ನು ಗೆಲ್ಲುವುದರಲ್ಲಿ ವಿಜಯ ಪತಾಕೆಯನ್ನು ಹಾರಿಸದಿದ್ದರೆ ಸಾಧನೆ ವ್ಯರ್ಥವಲ್ಲವೆ? ಪ್ರಶ್ನೆಗಳು ಮೇಲಿಂದ ಮೇಲೆ ಏಳುತ್ತಲೇ ಇದ್ದುವು. ಕುರ್ಚಿಯ ಮೇಲೆ ಕುಳಿತು ಸ್ವಾಭಾವಿಕವಾದ ವೈಜ್ಞಾನಿಕ ವಿಚಾರಧಾರೆಯಲ್ಲಿ ಮುಳುಗಿದಂತೆ ನಿಶ್ಚೇಷ್ಟನಾದ. ಎರಡೂ ಕೈಗಳು ವಿಶಾಲ ವಕ್ಷಸ್ಥಳದ ಮೇಲೆ ಕಟ್ಟಿದ್ದುವು. ನೋಟ ಹತ್ತಿರದಲ್ಲಿದ್ದರೂ ಯಾವುದನ್ನೂ ನೋಡುತ್ತಿರಲಿಲ್ಲ. ಅಂಗಯಷ್ಟಿ, ಗಾಢವಾದ ಚಿಂತನೆ, ನೇರದೃಷ್ಟಿ ಎಲ್ಲವೂ ಛಂದೋಮಯವಾದಂತೆಯೇ ಕಂಡುಬರುತ್ತವೆ, ಪರಿಭಾವಿಸಿದರೆ.

ಅವನು ಸ್ವಲ್ಪ ಹೊತ್ತಿನ ನಂತರ ಯೋಚನೆಯಿಂದ ವಿಮುಖನಾಗಿ ಎದ್ದು ಸೀಸೆಯಲ್ಲಿದ್ದ ದ್ರಾವಕವೊಂದನ್ನು ಸ್ವಲ್ಪ ಕುಡಿದು ಮತ್ತೆ ಪ್ರಯೋಗಕ್ಕೆ ಸಿದ್ಧನಾದ ಕಿಟಕಿ ಬಾಗಿಲುಗಳು ಮುಚ್ಚಿದ್ದುವು. ಒಳಗಡೆ ಯಾರೂ ಇರಲಿಲ್ಲ. ಬೃಹದ್ ಪ್ರಯೋಗ ಶಾಲೆ ಕಿಂಚಿತ್ ಸದ್ದು–ಗದ್ದಲವಿಲ್ಲದೆ ರುದ್ರ ಗಂಭೀರವಾಗಿತ್ತು. ಡಾ|| ತಿಲೋತ್ತಮ್ ಮೇಜಿನ ಮೇಲೆ ಅಂಗಾತನೆ ಮಲಗಿ ಮನಃಪ್ರಾಣಗಳನ್ನು ಬಿಗಿಹಿಡಿದು ಭಾವ ಕಲ್ಪವನ್ನು ಪ್ರಚೋದಿಸಿದ. ದೇಹ ಮಲಗಿದ ರೀತಿಯಲ್ಲಿ ಮೆಲ್ಲನೆ ಮೇಜನ್ನು ಬಿಟ್ಟಿತು. ಮೇಲೆ ಮೇಲೇರಿ ಇಡೀ ಪ್ರಯೋಗ ಶಾಲೆಯನ್ನು ಹಕ್ಕಿಯಂತೆ ಸುತ್ತಾಡಿತು. ಒಮ್ಮೆ ಗೋಡೆಯನ್ನು ಹಾಯ್ದು, ಇನ್ನೊಮ್ಮೆ ಮಾಡನ್ನು ಗಟ್ಟಿಸಿದ; ಅದರಿಂದ ಮೈಗೆ ಕಿಂಚಿತ್ ನೋವು ಮೂಡಲಿಲ್ಲ. ಮರುಕ್ಷಣದಲ್ಲಿ ದೇಹವನ್ನು ಗಾಳಿಯಂತೆ ಮಾರ್ಪಡಿಸಿ ಪಕ್ಕದ ಕೊಠಡಿಯನ್ನು ಪ್ರವೇಶಿಸಿ ತನಗೆ ಬೇಕಾದ ಫೈಲುಗಳನ್ನು ತೆಗೆದುಕೊಂಡು ಪ್ರಯೋಗ ಶಾಲೆಗೆ ಹಿಂದಿರುಗಿ ಅದೇ ಮೇಜಿನ ಮೇಲೆ ಬಂದಿಳಿದ. ಮನಃಕಲ್ಪವನ್ನು ಸಡಿಲಿಸಿ ಎದ್ದು ಕುಳಿತು ತಾನು ಬಯಸಿದ ಫೈಲುಗಳೇ

ಬಂದಿವೆಯೋ ಅಥವಾ ಬೇರೆಯೋ ಎಂದು ಎಲ್ಲವನ್ನೂ ಪರಿಶೀಲಿಸಿ ನೋಡಿದ. ಅವು ಸರಿಯಾಗಿಯೇ ಇದ್ದುವು. ಹೃದಯ ಕುಂಡಲಿ ಆನಂದದ ಹೆದ್ದೆರೆಗಳಿಂದ ತುಂಬಿ ತುಳುಕಿ ತುಯ್ಯಲಾಡಿತು.

o o o o

ಅನಂತರ ಅಂತಹ ಪ್ರಯೋಗ ಎಷ್ಟೆಷ್ಟು ದಿನಗಳವರೆಗೆ ಎಷ್ಟೆಷ್ಟು ಪರಿಯಲ್ಲಿ ನಡೆಸಿದನೋ, ಕೊನೆಗೂ ಅದರಲ್ಲಿ ಯಶಸ್ವಿಯಾದ. ಬೀಗ ಮುದ್ರೆ ಜಡಿದ ಬೀರುಗಳಿಂದ ಅಥವಾ ಕೊಠಡಿಯಿಂದ ತನಗೆ ಬೇಕಾದುದನ್ನು ತರುವುದೂ, ಹಿಂದಿರುಗಿಸುವುದೂ, ಬೇಕೆಂದೆಡೆಗೆ ಸೂಕ್ಷ್ಮ ಶರೀರದಲ್ಲಿ ಪಯಣಿಸುವುದೂ ಮತ್ತೆ ಹಿಂದಿರುಗುವುದೂ ತನ್ನ ಜಾಗೃತ ಶಕ್ತಿಗೆ ಸುಲಭವಾಗಿ ಅಳವಟ್ಟಿತು. ಆದರೆ, ಅದನ್ನು ಬಹಿರಂಗಗೊಳಿಸಿ ದೇಶದಾದ್ಯಂತ ಮಾನ್ಯತೆ ಪಡೆದು ಜಗತ್ ಪ್ರಸಿದ್ಧಿ ಪಡೆಯುವ ಅಭಿಲಾಷೆ ಇನ್ನೂ ಮೂಡಲಿಲ್ಲ. ಒಮ್ಮೆ ವಿಜ್ಞಾನಿಗಳ ಸಭೆಯಲ್ಲಿ ಮಾತ್ರ ಪ್ರದರ್ಶಿಸಬೇಕೆಂಬ ಇಚ್ಛೆಯೇನೋ ಇತ್ತು. ಆದರೆ, ಅದರಿಂದ ಎಲ್ಲಿಲ್ಲದ ಪ್ರಾಚುರ್ಯಕ್ಕೆ ಈಗಲೇ ಎಡೆಕೊಡುವುದೆಂಬುದು ಮನೋಗತ.

ಅಂತಲೇ ಅವನು ನಿಧಾನಿಸುತಿದ್ದ, ಸೂಕ್ತ ಸಮಯಕ್ಕಾಗಿ.

ಆದರೆ, ಜಾಗ್ರತ ಚೇತನದ ವಿಚಾರ ಧಾರೆಯೇ ಬೇರೆ. ಒಮ್ಮೆ ಇದನ್ನೆಲ್ಲಾ ಬಹಿರಂಗಗೊಳಿಸಿ ತಾನು ವಿಶ್ರಾಂತಿ ಪಡೆಯಬೇಕೆಂಬ ಅತೀವ ಹಂಬಲ. ಜೀವನ ಲಕ್ಷ್ಯಸಿದ್ಧಿಗೆ ಪ್ರಧಾನಾಶ್ರಯವಿತ್ತ ಆತ್ಮ ಚೇತನ ಆಧ್ಯಾತ್ಮಿಕತೆಯ ಕಡೆ ವಾಲಿದ್ದರೆ ಆಶ್ಚರ್ಯವಿಲ್ಲ. ಮತ್ತೇಕೆ ಈ ಜೀವನ ಝಂಜಾಟ ಎನಿಸುವುದು ಸಹಜ. ಆದರೂ ಸಹ, ಸೂಕ್ತ ಸಮಯ ಬರಲಿ ಕಾಲವಿನ್ನೂ ಪಕ್ವವಾಗಲಿಲ್ಲ ಅವಸರಿಸಬಾರದು ಎನ್ನುತ್ತಿದೆ ಬೌದ್ಧಿಕ ದೃಷ್ಟಿ. ಡಾ|| ತಿಲೋತ್ತಮ್ ತಲೆಬಾಗಿ ಮತ್ತೆ ತನ್ನ ದಿನಚರಿಯಲ್ಲಿ ತೊಡಗುವುದು ಸರ್ವೇ ಸಾಮಾನ್ಯ.

ಒಮ್ಮೆ ಸಹ ವಿಜ್ಞಾನಿ ಶ್ರೀಧರ್ ಬೀರುವಿನಲ್ಲಿದ್ದ ಫೈಲು ಕಣ್ಮರೆಯಾದುದನ್ನು ಕಂಡು ಆಶ್ಚರ್ಯ ಚಕಿತನಾಗಿ ಎಷ್ಟೆಷ್ಟು ಹುಡುಕಿದರೂ ದೊರೆಯ

ದಾದಾಗ ಧಿಗ್ಭ್ರಮೆಯಾಗಿ ಪ್ರಯೋಗ ಶಾಲೆಗೆ ಬಂದರೆ ಮೇಜಿನ ಮೇಲಿತ್ತು ಫೈಲು !

"ಅರೆ! ಇದು ಹೇಗೆ ಇಲ್ಲಿಗೆ ಬಂತು ಸರ್ ?"

ಪ್ರಶ್ನೆ ಅತ್ಯಂತ ಆಶ್ಚರ್ಯ ಪೂರ್ವಕವಾಗಿ ಹೊರಬಿತ್ತು, ಶ್ರೀಧರ್ ಅರಳುಗಣ್ಣುಗಳಿಂದ ನಿಟ್ಟಿಸಿದ.

"ವೈಜ್ಞಾನಿಕ ಪ್ರಗತಿಯಿಂದ."

ಅಷ್ಟೇ ಶೀತಲ ಶಾಂತಿಯಿಂದ ಬಿತ್ತರಿಸಿದ ಡಾ|| ತಿಲೋತ್ತಮ್.

"ಅದು ಹೇಗೆ ? ಬೀಗದ ಕೈಗಳು ನನ್ನ ಬಳಿಯೇ ಇವೆ. ವೈಜ್ಞಾನಿಕ ಪ್ರಗತಿ ಈ ದಿಸೆಯನ್ನು ಮುಟ್ಟಿದುದು ನಮಗೆ ತಿಳಿಯದಲ್ಲಾ, ನೀವಿದನ್ನು ಹೊಸ ವಿಜ್ಞಾನಿಗಳಿಗೆ ತಿಳಿಯದಂತೆ ಹುದುಗಿಸಿಡುವುದು ಸರಿಯಲ್ಲ ಎಂದರೆ ಒಪ್ಪಿಕೊಳ್ಳುತ್ತೀರಷ್ಟೆ ?"

ದನಿಯಲ್ಲಿ ಆತುರ–ಕಾತರ–ಆತಂಕಗಳು ಸಮ್ಮಿಳನವಾಗಿದ್ದುವು. ಮಾರುತ್ತರವನ್ನು ನಿರೀಕ್ಷಿಸುತ್ತ ಅಲ್ಲಿಂದ ಕದಲದೆ ನಿಂತ.

"ಯಾವೊಂದು ಪ್ರಯೋಗವೂ ಸಿದ್ಧಿಸದೆ ಬಹಿರಂಗಪಡಿಸುವುದು ಹೇಗೆ? ಎಲ್ಲೋ ಅಲ್ಪ ಸಾಧನೆ ಮಾಡಿ ಹೇಳಿಕೊಳ್ಳುತ್ತ ಹೋದರೆ ಅದರಿಂದೇನು ಲಾಭ ? ಮೊದಲು ಸಾಧನೆ ಸಿದ್ಧಿಸಲಿ, ಅನಂತರ ಪ್ರಚಾರ."

"ಸರ್, ನೀವು ತಪ್ಪಾಗಿ ಭಾವಿಸಿದಿರಿ. ನಾನು ಹೇಳುತ್ತಿರುವುದು ಸಹ ವಿಜ್ಞಾನಿಗಳಿಗೆ ಮಾತ್ರ, ಹೊರ ಜಗತ್ತಿಗಲ್ಲ."

"ಕಾಲವಿನ್ನೂ ಪಕ್ವವಾಗಲಿಲ್ಲ. ಯಾರಿಗೂ ಇಷ್ಟೊಂದು ಅವಸರ ಸಲ್ಲ. ಸಿದ್ಧಿ ಸರಿಯಾಗಿ ಕೈಗೂಡಿದ ಮೇಲೆ ಇದನ್ನು ವಿಜ್ಞಾನಿಗಳ ಸಭೆಯ ಮುಂದಿಟ್ಟು ಬಹಿರಂಗಪಡಿಸಿ ನಾನು ವಿಜ್ಞಾನ ಕ್ಷೇತ್ರದಿಂದ ನಿರ್ಗಮಿಸುವೆ."

"ನೀವು ನಿರ್ಗಮಿಸುವ ಕಾರಣವಿಲ್ಲ. ನಿಮ್ಮಂತಹವರು ವಿಜ್ಞಾನ ಕ್ಷೇತ್ರಕ್ಕೆ ಬೇಕೇ ಬೇಕು. ಆದರೆ, ನಿಮ್ಮಲ್ಲಿ ಇಷ್ಟೊಂದು ಗೋಪ್ಯವಿದೆ ಎಂಬುದನ್ನು ನಾನು ತಿಳಿದುಕೊಂಡುದುದು ಈಗಲೇ."

"ಗೋಪನೀಯವಾದುದು ಗೋಪ್ಯವಾಗಿರಲೇಬೇಕಲ್ಲ."

"ಕ್ಷಮಿಸಿ, ಈ ನೀತಿಯನ್ನು ನಾನು ಒಪ್ಪಿಕೊಳ್ಳಲಾರೆ."

ಡಾ|| ತಿಲೋತ್ತಮಸ್ ನಕ್ಕುಬಿಟ್ಟ.

೦ ೦ ೦ ೦

ಗಗನ ಪ್ರಾಂತ್ಯದಲ್ಲಿ ಮಳೆ ಗಾಳಿಗಳ ಪ್ರಖರವಾದ ಹೋರಾಟ.

ಮಳೆಯೂ ಸೋಲದು ; ಗಾಳಿಯೂ ಬಿಡದು. ಮನೆ ಮರಗಳನ್ನು ಹಾರಿಸುವಂತೆ ಬೀಸುತ್ತಿದೆ ಬಿರುಗಾಳಿ. ಹೊರ ವಲಯದಲ್ಲಿದ್ದ ಮರಗಳ ಕೊಂಬೆಗಳು ತಿರುಚಿ ಲಟಲಟನೆ ಮುರಿದು ಬೀಳುತಿದ್ದುವು. ನೆಲವೆಲ್ಲಾ ಎಲೆ, ಕಡ್ಡಿ, ಕೊಂಬೆಗಳಿಂದ ತುಂಬಿ ಹೋಯಿತು. ಇನ್ನಷ್ಟು ಹೊತ್ತಿನ ಒಳಗಾಗಿ ದಪ್ಪ ದಪ್ಪ ಮಳೆ ಹನಿಗಳು ಬೀಳತೊಡಗಿದವು. ಅನಂತರ ಧಾರಾಕಾರವಾಗಿ ಸುರಿಯ ತೊಡಗಿತು ಮಳೆ.

ಪ್ರಯೋಗ ಶಾಲೆಯಲ್ಲಿ ಒಬ್ಬನೇ ಕುಳಿತು ಪ್ರಯೋಗಶೀಲತೆಯಲ್ಲಿ ನಿಮಗ್ನನಾಗಿದ್ದ ವಿಜ್ಞಾನಿ ಮತ್ತೊಂದು ಪ್ರಯೋಗಕ್ಕೆ ಸಿದ್ಧನಾದ. ಮಾನಸಿಕ ಮತ್ತು ಆತ್ಮಿಕ ಭಾವನೆಗಳ ಮೇಲೆ ಅದ್ಭುತ ವಿಜಯ ಸಾಧಿಸಿದ್ದ ಅವನು ನಿತ್ಯ ನ್ಯೂನತೆಯನ್ನು ಕಂಡುಕೊಳ್ಳುವುದರಲ್ಲಿ ಉತ್ಸುಕನಾದ. ಅತ್ಯಂತ ಸೂಕ್ಷ್ಮ ದೇಹಿಯಾಗಿ ಗೋಡೆಗಳ ಮುಖೇನ ಹಾಯ್ದು ಹೊರ ಜಗತ್ತಿನಲ್ಲಿ ಭಾವಾತ್ಮಕ ಶ್ರದ್ಧೆಯಿಂದ ಸರಾಗವಾಗಿ ಸಂಚರಿಸಿ ಪ್ರಯೋಗ ಶಾಲೆಗೆ ಹಿಂದಿರುಗಿದಾಗ ಮೈ ಮಳೆಯಲ್ಲಿ ಸ್ವಲ್ಪವೂ ನೆಂದಿರಲಿಲ್ಲ. ಗಾಳಿಯ ಹೊಡೆತವೂ ತಾಗಿರಲಿಲ್ಲ. ವಿಜ್ಞಾನಿ ಯಥಾಪ್ರಕಾರವಾಗಿ ಮೇಜಿನ ಮುಂದೆ ಬಂದು ಕುಳಿತಾಗ ಮನಃ ಪ್ರಾಣಗಳು ಲವಲವಿಕೆಯ ಬೀಡಾಗಿದ್ದುವು. ಮತ್ತೊಮ್ಮೆ ಹೋಗಿ ಬರೋಣ ಎಂಬಷ್ಟು ಪ್ರಚಂಡ ಉತ್ಸಾಹ. ಆದರೆ ತನ್ನನ್ನು ತಾನೇ ಹತೋಟಿಯಲ್ಲಿಟ್ಟು ಪುನಃ ಕಾರ್ಯತತ್ಪರನಾದ.

ಸ್ವಲ್ಪ ಹೊತ್ತು ಭಾವೋನ್ಮತ್ತತೆಯಿಂದ ಉರುಳಿತು. ವಿಜ್ಞಾನಿಯ ಚಿತ್ತ ಭವ್ಯ ಭವಿತವ್ಯದ ವೇದಿಕೆಯನ್ನೇರಿ ಅಂಡಲೆಯತೊಡಗಿತು, ಸೂಜಿಗಲ್ಲಿನಿಂದ ಆಕರ್ಷಕವಾದ ಕಬ್ಬಿಣದಂತೆ. ಇಂಥ ವೈಜ್ಞಾನಿಕ ಕ್ರಿಯೆಯನ್ನು ದೂರ

ಭವಿಷ್ಯದಲ್ಲಿ ಯಾವ ರೀತಿ ಉಪಯೋಗಿಸಬೇಕು ? ಇದರ ಚಿದಂಬರ ರಹಸ್ಯ ವನ್ನು ಇತರ ವಿಜ್ಞಾನಿಗಳಿಗೆ ತಿಳಿಯ ಹೇಳದಿದ್ದರೆ ನನ್ನ ಸಾಧನೆ ನನ್ನೊಂದಿಗೆ ಸತ್ತು ವಿಜ್ಞಾನ ಕ್ಷೇತ್ರಕ್ಕೆ ನಷ್ಟ ಉಂಟಾಗುತ್ತದೆ. ಆದ್ದರಿಂದ ಇದಕ್ಕೆ ಯಾವ ರೀತಿಯ ಪ್ರಾಚುರ್ಯ ನೀಡಬೇಕು ? ಅಥವಾ ಗುಟ್ಟಾಗಿ ಅಂತರಂಗದ ಶಿಷ್ಯ ನೊಬ್ಬನಿಗೆ ಮಾತ್ರ ತಿಳಿಪಡಿಸುವುದೇ ? ಯಾವುದು ಸರಿ ? ಏನು ಮಾಡಲಿ ? ಎಂದು ಮುಂತಾಗಿ ಯೋಚಿಸುತ್ತಿರುವಾಗ ಬಾಗಿಲ ಬಳಿ ಕಟಕಟ ಸದ್ದು ಕೇಳಿ ಸಿತು.

'Yes please!'

ಡಾ|| ಶ್ರೀಧರ್ ಒಳಬಂದ. ಹಿರಿಯ ವಿಜ್ಞಾನಿ ಶಾಂತಭಾವದಲ್ಲಿ ಕುಳಿ ತಿದ್ದ. ಕೆಲವು ದ್ರಾವಕ, ಚೂರ್ಣ ಮುಂತಾದ ಪ್ರಾಯೋಗಿಕ ವಸ್ತುಗಳು ಮುಂದಿದ್ದುವು. ವಿಜ್ಞಾನಿ ಒಂದು ಕ್ಷಣ ಅವುಗಳಿಂದ ವಿಮುಖನಾಗಿ ಹಿಂತಿ ರುಗಿ ನೋಡಿ ಮಂದಹಾಸ ಬೀರಿದ.

"ಸರ್, ಯಾವುದೇ ವೈಜ್ಞಾನಿಕ ಕೃತಿಯನ್ನು ಜಾಹೀರು ಮಾಡದಿದ್ದರೆ ಅದು ಜಗತ್ ಪ್ರಸಿದ್ಧಿ ಪಡೆಯಲಾರದು. ಆದ್ದರಿಂದ ಕೃತಿ ಸಿದ್ಧಿ ಪಡೆದಕೂಡಲೆ ಬಹಿರಂಗಪಡಿಸುವುದೇ ನಿಜವಾದ ಕ್ರಮ. ಕ್ರಮಹೀನತೆಯಿಂದ ಯಶಸ್ಸು ಕೆಡುತ್ತದೆ. ನಿಮ್ಮ ಶ್ರಮವೂ ವ್ಯರ್ಥ : ಸಾಧನೆಯೂ ವ್ಯರ್ಥ."

"ಅದು ನಿಜವೇ ಆದರೂ, ತೀರ ಅವಸರ ಪಡುವುದರಿಂದಲೂ ಪ್ರಯೋ ಜನವಿಲ್ಲ."

"ನೀನಿದರಲ್ಲಿ ಆಸಕ್ತಿ ವಹಿಸಿದಂತೆಯೇ ತೋರುವುದಿಲ್ಲ. ಅದಕ್ಕಾಗಿ..."

"ಇಷ್ಟೊಂದು ಆತುರ-ಕಾತರ-ಬೇಸರಗಳಿಂದ ಯಾವ ಸಿದ್ಧಿಯೂ ಆಗುವುದಿಲ್ಲ ಬಿಡು. ನಾವು ನಿಧಾನಿಸಿದಷ್ಟೂ ಒಳ್ಳೆಯದು ; ಯೋಚಿಸಿ ನೋಡು."

ಶ್ರೀಧರ ಮರು ಮಾತಿಲ್ಲದೆ ನಿಟ್ಟುಸಿರಿದ. ಅವನ ಸ್ನೇಹ ಮೃದುಲ ಹೃದ ಯದಲ್ಲಿ ಕಾಪಟ್ಯದ ಸುಳಿವೇ ಇರಲಿಲ್ಲ. ನರ ನಾಡಿಗಳಲ್ಲಿ ಆನಂದೋಲ್ಲಾಸಗಳು ಸದಾ ಹರಿದಾಡುತ್ತವೆ. ವಿಜ್ಞಾನ ಅವನಿಗೆ ಆತ್ಮಜನ್ಯವಾದುದು. ಹೇಗೆಂದರೆ

ಹಾಗೆ ಬಳಸಿಕೊಳ್ಳಬಲ್ಲ ; ಸಾಧಿಸಬಲ್ಲ. ಅಂತಲೇ ಅವನು ತೀರ ನಿರಾಳ ; ತಾಸು ಒತ್ತಾಯಿಸುವುದರಿಂದ ಏನೂ ಫಲವಿಲ್ಲ ಎಂಬುದು ಮನವರಿಕೆಯಾದಾಗ ವಿನಾಕಾರಣ ಒತ್ತಾಯಿಸಿ ನಾನೆಲ್ಲಿ ಬೇಸರ ಉಂಟುಮಾಡಿದೆನೋ ಎಂಬ ಆಶಂಕೆಯುಂಟಾಯಿತು ಮನದಲ್ಲಿ. ಏನು ಹೇಳಬೇಕೋ ತಿಳಿಯಲಿಲ್ಲ. ಆಗ ಡಾ|| ತಿಲೋತ್ತಮನೇ ಕೇಳಿದ "ಈಗ ನಿನಗೇನನಿಸುತ್ತದೆ ? ಇದೊಂದು ಸಾಹಸವೆಂದೇ ?"

"ಇಲ್ಲ...ಇಲ್ಲ. ನಾನು ಸ್ವಲ್ಪ ತೀವ್ರಗಾಮಿಯಾದುದರಿಂದಲೇ ಹಾಗೆಂದದ್ದು. ನನ್ನ ವಕ್ತವ್ಯದಿಂದ ನಿಮಗೆ ಬೇಸರವಾಗಿದ್ದರೆ ಕ್ಷಮಿಸಿ."

ಡಾ|| ತಿಲೋತ್ತಮ್ ತಲೆಯಾಡಿಸುತ್ತ ತಿಳಿಹಾಸ ಬೀರಿದ.

೦ ೦ ೦ ೦

ಪ್ರಯೋಗ ಶಾಲೆಯ ಹೊರವಲಯದಲ್ಲಿ ಡಾ|| ತಿಲೋತ್ತಮ್ ಶತಪಥ ತಿರುಗುತಿದ್ದ. ಸೂರ್ಯಾಸ್ತವಾಗಿ ಅರೆತಾಸು ಕಳೆದಿದ್ದು ಸಾಯಂ ಸೊಂಪು ಎಲ್ಲೆಲ್ಲೂ ಹರಡಿ ಮನಮೋಹಕವಾಗಿತ್ತು ಜಗತ್ತು. ಪಶ್ಚಿಮ ಭಿತ್ತಿಯಲ್ಲಿ ಚಂದನರಾಗದ ಬೃಹದ್ ನೋಡಗಳು ನಯನಾಕರ್ಷಕವಾಗಿವೆ. ಗಿಡಮರಗಳಲ್ಲಿ ಉಲಿಯುವ ಪಕ್ಷಿಗಳ ಸಂಧ್ಯಾರಾಗ ಕರ್ಣಪಟಲಗಳಿಗೊರೆಯುತ್ತದೆ. ಸಂಧ್ಯಾ ವೈಭವಕ್ಕೆ ಮೈಗೊಟ್ಟು ಕಪ್ಪು ಜೂಲು ನಾಯಿ ಬೆಂಚಿನ ಮೇಲೆ ಮೈ ಮುದುಡಿ ಮಲಗಿತ್ತು. ವಿಜ್ಞಾನಿ ಅದನ್ನು ನಲ್ಮೆಯಿಂದ ಸವರಿ, ತಟ್ಟಿ, ಕೈಯೆತ್ತಿ ಅದರ ಮೇಲೆ ಹಸ್ತವನ್ನು ಚಾಚಿ ಹಿಡಿದ. ಅದು ಕೆಲವೇ ಕ್ಷಣಗಳಲ್ಲಿ ಬೆಂಚನ್ನು ಬಿಟ್ಟು ಮೇಲೆದ್ದಿತು. ಅದರ ನಿದ್ದೆಯ ಮೊದಲಿನ ಯಥಾರೀತಿಯಿದೆ. ಮಲಗಿದ್ದ ಗತಿಯೂ ಕೂಡ ಬದಲಾಗಲಿಲ್ಲ. ಹೇಗಿತ್ತೋ ಹಾಗೆಯೇ ತನ್ನ ಎತ್ತರಕ್ಕೆ ಏರಿತು. ಅನಂತರ ವಿಜ್ಞಾನಿ ಕೈಯ್ಯನ್ನು ಹಿಂತೆಗೆದುಕೊಂಡು ಅದನ್ನೇ ನೋಡುತ್ತ ನಿಂತ. ನಾಯಿ ನಿಧಾನ ಗತಿಯಲ್ಲಿ ಇಳಿದು ಬೆಂಚಿನ ಮೇಲೆ ಯಥಾಪ್ರಕಾರ ಮಲಗಿತು. ಅದಕ್ಕೆ ತಾನು ಮೇಲೇರಿದುದಾಗಲೇ ಕೆಳಗಿಳಿದುದಾಗಲೀ ಲವಲೇಶವೂ ತಿಳಿಯಲಿಲ್ಲ.

ವಿಜ್ಞಾನಿ ಮತ್ತೆ ಕೈಯೆತ್ತಿ ಹಿಡಿದ. ಅದು ಒಂದೆರಡು ಅಡಿ ಮೇಲೆದ್ದ ಮೇಲೆ ಪುನಃ ಕೆಳಗಿಳಿಯುವಂತೆ ಮಾಡಿದ. ಆದರೂ, ನಾಯಿ ಎಚ್ಚರಗೊಳ್ಳಲಿಲ್ಲ. ಹತ್ತು ಹದಿನೈದು ನಿಮಿಷಗಳನಂತರ ಅದು ಎಚ್ಚರಗೊಂಡು ಕಣ್ಣು ಬಿಟ್ಟು ಒಡೆಯನನ್ನು ನೋಡಿ ಪ್ರೇಮ ಮುಗ್ಧಭಾವದಿಂದ ಬಾಲ ಆಡಿಸುತ್ತ ಮೈ ಮೇಲೆ ಹಾರಿ ತನ್ನ ಆನಂದೋಲ್ಲಾಸವನ್ನು ತೋರಿತು. ವಿಜ್ಞಾನಿ ಮತ್ತೆ ಅಡ್ಡಾಡಲು ಹೊರಡುತ್ತಲೂ ಅದು ಅವನನ್ನು ಹಿಂಬಾಲಿಸಿತು. ಪ್ರಾಸಾದದ ಎಡಭಾಗದಲ್ಲಿ ಒಂದು ಪುಷ್ಕರಿಣಿ. ಸುನೀಲ ಜಲ ತಂಗಾಳಿಯ ತೀಟಕ್ಕೆ ತರಂಗಾಯಿತವಾಗಿ ಅಲೆಅಲೆಯಾಗಿ ಸಣ್ಣಗೆ ತುಳುಕುವಂತೆ ತೋರುತಿತ್ತು. ವಿಜ್ಞಾನಿ ಅಲ್ಲೆಲ್ಲಾ ಒಂದು ಸುತ್ತು ಹಾಕಿ ಒಳಬಂದಾಗ ಏಳರ ಸಮಯ. ಮೇಜಿನ ಮೇಲೆ ರಾತ್ರಿಯೂಟ ಅಣಿಯಾಗಿತ್ತು. ಲಘು ಆಹಾರ ಸೇವಿಸಿದ ವಿಜ್ಞಾನಿ. ಅಟೆಂಡರ್ ಆಗಲೇ ನಾಯಿಗೂ ಊಟ ಕೊಟ್ಟಿದ್ದ. ಅದು ನಾಲಿಗೆಯಿಂದ ಬಾಯಿ ಒರೆಸಿಕೊಳ್ಳುತ್ತ ಒಡೆಯನನ್ನು ಹಿಂಬಾಲಿಸಿತು. ಡಾ|| ತಿಲೋತ್ತಮ್ ಪ್ರಯೋಗ ಶಾಲೆಯನ್ನು ಪ್ರವೇಶಿಸಿ ಬಾಗಿಲನ್ನು ಮುಚ್ಚಿಕೊಂಡ. ಅದು ಬಾಲ ಆಡಿಸುತ್ತ ಮೇಜಿನ ಬಳಿ ನಿಂತಿತು. ವಿಜ್ಞಾನಿ ಕಿಟಕಿಯ ಬಾಗಿಲುಗಳನ್ನು ಹರವಾಗಿ ತೆರೆದು ಹೊರ ಜಗತ್ತಿನ ಮೇಲೆ ದೃಷ್ಟಿಯನ್ನಟ್ಟಿ ನಿಂತ. ಪೂರ್ವ ಭಿತ್ತಿಯಲ್ಲಿ ಉದಯ ಚಂದ್ರ ಮೂಡಿ ಬಾನೇರುತಿದ್ದ. ನಕ್ಷತ್ರಗಳು ಅಲ್ಲಲ್ಲಿ ವಿರಳವಾಗಿ ಕಂಡುಬರುತಿದ್ದುವು. ವಿಜ್ಞಾನಿ ಕಿಟಕಿಗೆ ಮೊಗಗೊಟ್ಟು ನೋಡುತಿದ್ದಂತೆಯೇ ಅಟೆಂಡರ್ ಹೊರ ಹೊರಟ ತನ್ನ ಪಾಳಿಯನ್ನು ಮುಗಿಸಿ. ಕೈಯಲ್ಲೊಂದು ಚೀಲವಿತ್ತು ; ವಿದ್ಯುತ್ ದೀಪಗಳ ನೆಲೆಯಲ್ಲಿ ಅವನು ಹಾದು ಹೋಗುವ ಚಿತ್ರ ಸ್ಪಷ್ಟವಾಗಿ ಕಾಣಿಸಿತು. ವಿಜ್ಞಾನಿ ತೆಕ್ಕನೆ ಕೈಯೆತ್ತಿದ ಅವನ ನೇರಕ್ಕೆ. ಕೆಲವೇ ಕ್ಷಣಗಳಲ್ಲಿ ಅವನ ಕೈಯಲ್ಲಿದ್ದ ಚೀಲ ನೇರವಾಗಿ ಬಂದು ಕಿಟಕಿಯ ಮೇಲೆ ಕುಳಿತಿತು. ವಿಜ್ಞಾನಿ ಅದರಲ್ಲಿ ಏನೇನಿದೆ ಎಂಬುದನ್ನು ಪರಿಶೀಲಿಸಿ ನೋಡಿದರೆ ಪಾಕಶಾಲೆಯ ಅನೇಕ ವಸ್ತುಗಳು ಅದರಲ್ಲಿದ್ದುದು ಕಂಡುಬಂತು. ವಿಜ್ಞಾನಿ ಮುಗುಳು ನಕ್ಕು ಚೀಲವನ್ನು ಬದಿಯಲ್ಲಿಟ್ಟ.

ಅಟೆಂಡರ್ ಚೀಲ ಕೈತಪ್ಪಿದುದು ಹೇಗೆ ಎಂಬುದನ್ನು ಅರಿಯಲಾರದೆ

ಅಲ್ಲಲ್ಲೇ ಹುಡುಕಾಡಿ ಭ್ರಮಿತನಂತೆ, ಆಶ್ಚರ್ಯಚಕಿತನಂತೆ ಸುತ್ತಮುತ್ತ ತಿರುತಿರುಗಿ ನೋಡಿ ಹುಡುಕುಡುಕಿ ಎಲ್ಲಿಯೂ ದೊರೆಯದಿರಲು ಉದ್ಭ್ರಾಂತ ನಾಗಿ ಅಲ್ಲಿಂದ ಹೊರಟುಹೋದ. ವಿಜ್ಞಾನಿ ಅವನ ತಳಮಳ–ಕಳವಳ–ಸಂಕ ಷ್ಟಗಳನ್ನು ಕಂಡರೂ ಕಾಣದಂತೆ ಸುಮ್ಮನಿದ್ದ.

○ ○ ○ ○

ಮರುದಿನ ಡಾ॥ ಶ್ರೀಧರ್ ಒಳ ಬಂದಾಗಲೇ ದೃಷ್ಟಿ ಬದಿಯಲ್ಲಿದ್ದ ಚೀಲದ ಮೇಲೆ ಹರಿಯಿತು. ಅದು ಅಟೆಂಡರನ ಚೀಲವೆಂಬುದು ಗೊತ್ತಿದ್ದುದ ರಿಂದ ಇನ್ನಷ್ಟು ಆಶ್ಚರ್ಯವಾಯಿತು. ಅತ್ಯಂತ ಆಶ್ಚರ್ಯವಿಸ್ತೃತ ನಯನ ಗಳಿಂದ ನೋಡುತ್ತ 'ಇದು ಅಟೆಂಡರನ ಚೀಲವಲ್ಲವೇ ?' ಎಂದ.

"ಹೌದು...."

"ಇದು....ಇಲ್ಲಿಗೆ ಹೇಗೆ ಬಂತು ?"

ವಿಜ್ಞಾನಿ ಒಂದೆರಡು ಕ್ಷಣ ಯೋಚಿಸಿದ. ಹೇಳಲೋ ಬೇಡವೋ ಎಂಬ ಪ್ರಶ್ನೆ ತಲೆಯಲ್ಲಿ. ಅದನ್ನು ಹಾಗೆಯೇ ಒಳಗಡೆ ಇಟ್ಟಿದ್ದರೆ ಈ ಪ್ರಶ್ನೆ ಏಳು ತ್ತಿರಲಿಲ್ಲ. ತಪ್ಪು ಮಾಡಿಬಿಟ್ಟೆ. ಈಗ ಹೇಳದೆ ವಿಧಿಯಿಲ್ಲ ಏನು ಮಾಡಲಿ ? ಎನಿಸಿದಾಗ ಏನೆನ್ನಬೇಕೋ ಉತ್ತರವೇ ಹೊಳೆಯಲಿಲ್ಲ.

"ಏಕೆ ಸುಮ್ಮನಾದಿರಿ ? ಇದನ್ನೋಡಿದರೆ ಏನೋ ಪ್ರಮಾದವಾಗಿದೆ ಎನಿಸುತ್ತೆ ನನಗೆ."

ಶ್ರೀಧರ ಅವನ ಮುಖಭಾವವನ್ನು ಕೂಲಂಕಶವಾಗಿ ಪರಿಶೀಲಿಸಿದ. ಇದನ್ನು ವೈಜ್ಞಾನಿಕ ವಿಧಾನದಿಂದಲೇ ಇಲ್ಲಿಗೆ ತರಲಾಗಿದೆ ಎಂಬ ಯೋಚನೆ ಮನದಲ್ಲಿತ್ತು. ಹೇಗಾದರೂ ಇದರ ರಹಸ್ಯವನ್ನು ಅರಿಯಲೇಬೇಕೆಂಬ ಕುತೂ ಹಲ ಕುದಿಯತೊಡಗಿತು ಮನಃಪ್ರಾಣಗಳಲ್ಲಿ. ಆಗಲೂ ಡಾ॥ ತಿಲೋತ್ತಮ್ ಸ್ವಲ್ಪ ಹೊತ್ತು ಮಾತಾಡದೆ ಕುಳಿತಿದ್ದು ಅನಂತರ ಮಂಜಿನ ಶೈತ್ಯಕ್ಕಿಂತಲೂ ಶೀತಲವಾಗಿ ಬಿತ್ತರಿಸಿದ,

"ನೀನು ಇಷ್ಟೊಂದು ಕುತೂಹಲಭರಿತನಾಗಿ ಪ್ರಶ್ನೆಯ ಮೇಲೆ ಪ್ರಶ್ನೆಯನ್ನು ಮುಂದಿಡುತಿದ್ದರೆ ಏನೆನ್ನೋಣ ? ಸ್ವಲ್ಪ ಸಾವಧಾನ ಇರಲಿ. ನನಗೂ ಯೋಚಿಸುವುದಕ್ಕೆ ಅವಕಾಶ ಕೊಡು."

"ಸರಿ...ಸರಿ....ವಿಷಯವೇನೆಂಬುದು ತಿಳಿಯದೆ ಹೋದರೆ ಕುತೂಹಲ ಕೆರಳುವುದು ಸಹಜ. ನೀವು ದಯವಿಟ್ಟು ಬೇಸರಿಸಬಾರದು."

"ಬೇಸರವೇನಿಲ್ಲ. ಆದರೆ...."

"ಆದರೆ....ಏನು ಎಂದು ಕೇಳಬಹುದೇ ?"

"ನೀನು ಅತ್ಯಂತ ಕುತೂಹಲಿಯಾಗಿರುವುದರಿಂದ ಸ್ವಲ್ಪ ವಿಚಾರ ಹೇಳೋಣ. ನಿನ್ನೆ ರಾತ್ರಿ ಅಟೆಂಡರ್ ಮನೆಗೆ ಹೋಗುವಾಗ ಈ ಚೀಲವನ್ನೂ ತೆಗೆದುಕೊಂಡು ಹೋಗುತಿದ್ದ. ನಾನು ಸುಮ್ಮನೆ ವಶೀಕರಣ ಬೀರಿದೆ. ಚೀಲ ಅವನ ಕೈ ತಪ್ಪಿಸಿಕೊಂಡು ಈ ಕಿಟಕಿಯ ಮುಖೇನ ಒಳಬಂದಿತು. ಅವನು ಮಧ್ಯಾಹ್ನ ಬಂದಾಗ ಕೊಟ್ಟರಾಯಿತು. ಆದರೆ, ಅದರಲ್ಲಿ ನಮ್ಮ ಪಾಕಶಾಲೆಯ ಸಾಮಗ್ರಿಗಳೂ ಕೆಲವಿವೆ. ಅವನ್ನು ತೋರಿ, ಇದೆಲ್ಲಾ ಸರಿಯಲ್ಲವೆಂದು ತಿಳಿವಳಿಕೆ ಕೊಡುವುದು ಸೂಕ್ತ."

"ಓ....ಹಾಗೋ ? ನಾನದನ್ನು ಮನದಲ್ಲಿ ಊಹಿಸಿಕೊಂಡಿದ್ದುದರಿಂದ ನಿಮ್ಮನ್ನು ಪುನಃ ಪುನಃ ಕೇಳಿದ್ದು."

ಡಾ|| ತಿಲೋತ್ತಮ್ ಮೃದುಹಾಸ ಬೀರಿದ. ಡಾ|| ಶ್ರೀಧರ್ ಅನಿರ್ವಚನೀಯವಾದ ಆನಂದಾತಿಶಯದಲ್ಲಿ ಮುಳುಗಿ ವಿವಶನಾದ. ಅವನ ಮುಖದಲ್ಲಿ ಮೂಡಿದ ಭಾವಾತಿರೇಕ ದರ್ಶನೀಯವಾಗಿತ್ತು.

೦ ೦ ೦ ೦

"ನನ್ನನ್ನು ನಿಮ್ಮ ಅಂತರಂಗದ ಶಿಷ್ಯನನ್ನಾಗಿ ದಯವಿಟ್ಟು ಸ್ವೀಕರಿಸಿರಿ. ನಾನು ನಿಮ್ಮ ಎಲ್ಲಾ ಕೆಲಸ ಕಾರ್ಯಗಳಲ್ಲಿ ಭಾಗವಹಿಸಲು ಅವಕಾಶ ಕೊಡಿ" ಎಂಬುದು ಡಾ|| ಶ್ರೀಧರನ ಬಹು ದಿನಗಳ ಬೇಡಿಕೆ—ಆತುರ ಕಾತರಗಳಿಂದ ಕೂಡಿದ ಬೇಡಿಕೆ.

ಆದರೆ ಅವನು ಆಂತರಂಗಿಕ ಶಿಷ್ಯನಾಗಲು ಯೋಗ್ಯನೇ ಎಂಬುದೇ ಅರ್ಥೈಸಲಾಗದ ವಿಷಯ. ಡಾ|| ತಿಲೋತ್ತಮ್ ಇಂದು–ನಾಳೆ ಎನ್ನುತ್ತಲೇ ಮುಂದೂಡುತಿದ್ದರೂ ಸಹ ಆಂತರಂಗಿಕ ಶಿಷ್ಯನನ್ನಾಗಿ ಯಾರನ್ನಾದರೂ ಅಂಗೀಕರಿಸಿ ಕಲಿತ ವಿದ್ಯೆಯನ್ನಷ್ಟು ಧಾರೆಯೆರೆದು ವಿದ್ಯಾದಾನ ಮಾಡು ವುದು ಸೂಕ್ತವೇ ಎಂಬುದು ಒಪ್ಪತಕ್ಕ ವಿಷಯ. ಆದರೆ, ಕಲಿತ ವಿದ್ಯೆ ಸದ್ವಿನಿ ಯೋಗವಾಗಬೇಕೇ ಹೊರತು ದುರ್ವಿನಿಯೋಗಬಾರದು ಎಂಬುದು ಅಂತಃ ಪ್ರಜ್ಞೆಯ ಆದೇಶ. ಆ ಕಾರಣದ ಮೇಲೆಯೇ ಆಂತರಂಗಿಕ ಶಿಷ್ಯನ ಆಯ್ಕೆ ಇನ್ನೂ ಕೈಗೂಡಿರಲಿಲ್ಲ.

ದಿನೇದಿನೇ ಡಾ|| ಶ್ರೀಧರನ ಬೇಡಿಕೆ ಹೆಚ್ಚುತ್ತಲೇ ಇತ್ತು. ಕೊನೆ ಗೊಂದು ಮುಹೂರ್ತದಲ್ಲಿ ಅವನನ್ನು ಆಂತರಿಕ ಶಿಷ್ಯನನ್ನಾಗಿ ಸ್ವೀಕರಿಸುವು ದೆಂದು ಮನದಲ್ಲಿ ನಿರ್ಧಾರ ಮಾಡಿದಾಗಲೇ ಪ್ರಯೋಗ ಶಾಲೆಗೆ ಡಾ|| ಶ್ರೀಧರ ಪದಾರ್ಪಣೆ ಮಾಡಿದ. ಹಿರಿಯ ವಿಜ್ಞಾನಿ ಸ್ಪೆಕ್ಟ್ರೋಸ್ಕೋಪಿಯಲ್ಲಿ ಕಣ್ಣಿಟ್ಟು ನೋಡುತಿದ್ದ. ಮೇಜಿನ ಮೇಲೆ ಬೇರೆ ಬೇರೆ ಪಿಂಗಾಣಿ ಬಟ್ಟಲುಗಳಲ್ಲಿ ಬಗೆ ಬಗೆಯ ದ್ರಾವಕ ದ್ರವ್ಯಗಳಿದ್ದುವು. ಅವನು ಅದರಲ್ಲೇ ತೀವ್ರ ನಿಮಗ್ನನಾಗಿದ್ದ. ಡಾ|| ಶ್ರೀಧರ್ ಅಲ್ಲಿದ್ದ ಫೈಲೊಂದನ್ನು ತಿರುವಿಹಾಕಿದ. ಮನಸ್ಸು ಹಲವಾರು ವಿಚಾರಗಳಲ್ಲಿ ತೊಡಗಿ ಭಿನ್ನವಿಭಿನ್ನವಾದ ಸ್ರೋತಗಳಂತೆ ಹರಿದಾಡುತಿತ್ತು. ಯಾವ ವಿಚಾರವನ್ನು ತೆಗೆದುಕೊಂಡರೂ ನೆಲೆ ನಿಲ್ಲದು.

ಡಾ|| ತಿಲೋತ್ತಮ್ ತನ್ನ ಪ್ರಯೋಗಾನಂತರ ಸ್ವಲ್ಪಹೊತ್ತು ಸುಮ್ಮನೆ ಆಲೋಚನೆಯಲ್ಲಿ ತೊಡಗಿದ್ದು ಅನಂತರ ಕೇಳಿದ "ಏನಪ್ಪಾ, ಬಂದು ಬಹಳ ಹೊತ್ತಾಯಿತಲ್ಲವೇ?"

"ಹೌದು ಸರ್."

"ನೀನು ಎಲ್ಲಾ ವಿಚಾರದಲ್ಲೂ ಗೌರವ-ನೀತಿ-ನಿಷ್ಠೆಗಳಿಂದ ವಿಜ್ಞಾನ ವನ್ನು ಬಳಸಿಕೊಳ್ಳುವುದಾದರೆ ಮಾತ್ರ ನನ್ನ ಆಂತರಂಗಿಕ ಶಿಷ್ಯನಾಗಬಲ್ಲೆ."

"ನೀವು ಎಳೆದ ಯಾವೊಂದು ಗೆರೆಯನ್ನೂ ನಾನು ದಾಟುವುದಿಲ್ಲ ಎಂದು

ಪ್ರಮಾಣಪೂರ್ವಕವಾಗಿ ವಚನ ನೀಡುವೆ. ನಿಮಗೆ–ನಿಮ್ಮ ನೀತಿಗೆ ಯಾವೊತ್ತೂ ನಾನು ದ್ರೋಹ ಬಗೆಯಲಾರೆ, ದಯವಿಟ್ಟು ನಂಬಿ."

ಸತ್ಯವಾಣಿ ಎದೆಯಾಳದಿಂದ ಹರಿದು ಬಂತು. ನಯ–ವಿನಯಗಳ ವಶೀಭೂತನಾಗಿ ಬಿನ್ನಯಿಸಿಕೊಂಡಿದ್ದ. ಹಿರಿಯ ವಿಜ್ಞಾನಿ ಒಂದೆರಡು ಕ್ಷಣ ಸಿಥಾನಿಸಿ– "ಆಗಬಹುದು, ನಾಳೆಯಿಂದ ಪ್ರಯೋಗಕ್ಕೆ ಸಿದ್ಧನಾಗು. ನಿನಗೆ ವಿಜ್ಞಾನ ಸಿದ್ಧಿಯಾದ ಮೇಲೆ ಇದರ ರಹಸ್ಯವನ್ನು ಬಹಿರಂಗಗೊಳಿಸುವೆ."

ಆಗ ಡಾ|| ಶ್ರೀಧರನಿಗೆ ಇದು ನನಸೋ ಕನಸೋ ಎಂಬಷ್ಟು ಆಶಂಕೆ ಮೂಡಿ ಆ ವಾಕ್ಸರಣಿಯನ್ನು ಮತ್ತೆಮತ್ತೆ ಪುನಃಪುನಃ ನೆನಪಿಸಿಕೊಂಡ. "ನಿನ್ನ ಅದೃಷ್ಟವೇ ಅದೃಷ್ಟ!" ಎಂದು ತಟ್ಟನೆ ಯಾರೋ ಕಿವಿಯ ಸನಿಹದಲ್ಲಿಯೇ ಕೂಗಿ ಹೇಳಿದಂತಾಯಿತು. ಅವನು ಆನಂದ ತುದಿಂಲತೆಯಲ್ಲಿ ಭಾವಾವಿಷ್ಟನಾದ.

o o o o

ಸುಮಾರು ಆರು ತಿಂಗಳು ಸರಾಗವಾಗಿ ಉರುಳಿಹೋದುವು.

ಒಂದು ಸುಂದರವಾದ ಪ್ರಾತಃಸಮಯದಲ್ಲಿ ಡಾ|| ಶ್ರೀಧರನ ಪಾರ್ಥಿವ ಶರೀರ ಪ್ರಯೋಗಶಾಲೆಯ ಆವರಣದಲ್ಲಿ ಬಿದ್ದಿತ್ತು. ಶವಪರೀಕ್ಷೆಯಲ್ಲಿ ವಿದ್ಯುತ್ ಶಕ್ತಿಯಿಂದ ದುರಂತ ಸಂಭವಿಸಿದೆ ಎಂಬುದು ದೃಢಪಟ್ಟಿತು. ಎಲ್ಲರಿಗೂ ಆಶ್ಚರ್ಯವೋ ಆಶ್ಚರ್ಯ ! ಏನಾಗಿರಬಹುದು ? ಅಂಗಣದಲ್ಲಿ ಯಾವ ವಿದ್ಯುತ್ ತಂತಿಯೂ ಹರಿದು ಬಿದ್ದಿಲ್ಲ ; ಪ್ರಾಣಾಪಾಯ ಉಂಟಾಗಲು ಕಾರಣ ? ಒಂದು ವೇಳೆ ಆತ್ಮಹತ್ಯ ಮಾಡಿಕೊಂಡಿರಬಹುದೇ ? ಹಾಗೆ ಮಾಡಿಕೊಂಡಿದ್ದಲ್ಲಿ ಅದಕ್ಕೆ ಕಾರಣವಾದದ್ದೂ ಏನು ? ಇಂತಿಂಥ ಪ್ರಶ್ನೆಗಳೇ ಎಲ್ಲರ ಮನದಲ್ಲೂ. ಈ ಸಮಸ್ಯೆ ಡಾ|| ತಿಲೋತ್ತಮನನ್ನೂ ಕಾಡದಿರಲಿಲ್ಲ. ಅವನು ರಾತ್ರಿ ಶಯನಾಗಾರಕ್ಕೆ ತೆರಳುವಾಗ ಪ್ರಯೋಗ ಶಾಲೆಯ ಕಿಟಕಿಗಳನ್ನು ಮುಚ್ಚಿಹೋಗಿದ್ದ. ಅವನ್ನು ಎಂದೂ ತೆರೆದಿಡುತ್ತಿರಲಿಲ್ಲ ಕೂಡ. ಬೆಳಿಗ್ಗೆ ನೋಡಿದಾಗ ಅವು ತೆರೆ

ದಿಮ್ಮುದು ಕಂಡು ಬಂತು. ಅದರ ನೇರಕ್ಕೆ ವಿದ್ಯುತ್ ತಂತಿಯ ಕಂಬಗಳು ನಿಂತಿನೆ, ಸಾಲುಸಾಲಾದ ವಿದ್ಯುತ್ ತಂತಿಗಳನ್ನು ಹೊತ್ತು.

ವಿಜ್ಞಾನಿ ಕಿಟಕಿಯಲ್ಲಿ ದೃಷ್ಟಿ ಹಾಯಿಸಿದ. ನೋಟ ನೀಲ ಗಗನದಂಚಿನವರೆಗೂ ಹಕ್ಕಿಯಂತೆ ಹರಿಯಿತು. ಮನಸ್ಸು ಸಹ ವಿಜ್ಞಾನಿಯ ದುರಂತದಿಂದ ಘಾಸಿಗೊಂಡು ಚಿಂತಾಕ್ರಾಂತವಾಗಿದ್ದುದರಿಂದ ಮುಖದ ವರ್ಚಸ್ಸೇ ಇಳಿದು ಹೋಗಿತ್ತು.

ಲರಕ್, ಲರಕ್ ಲರಕ್, ಲರಕ್.

ಪದಘಾತ ಕಿವಿಯನ್ನು ತಾಗುತ್ತಲೂ ಹಿಂತಿರುಗಿ ನೋಡಿದ ಡಾ|| ತಿಲೋತ್ತಮ್. ಬಂದವನು ಡಾ|| ಶಿವರಾಂ. ಅವನು ಬರಬರುತ್ತಲೇ ಅಂದ

"ಡಾ|| ಶ್ರೀಧರನ ಮರಣಕ್ಕೆ ಕಾರಣವೇನು ಎಂಬುದನ್ನು ನೀನೇನಾದರೂ ಊಹಿಸಬಲ್ಲೆಯಾ ?"

"ನನಗೂ ಅದೇ ಯೋಚನೆಯಾಗಿದೆ. ಅವನು ಆತುರ ಮಾಡಿಬಿಟ್ಟ ಎನಿಸುತ್ತೆ ನನಗೆ."

"ಅಂದರೆ ....?"

"ಅವನು ನನ್ನ ಶಿಷ್ಯನಾದ ಮೇಲೆ ನನ್ನಿಂದ ಅಮಾನುಷ ಚೈತನ್ಯದ ವಶೀಕರಣ ವಿದ್ಯೆಯನ್ನು ಅಭ್ಯಸಿಸುತಿದ್ದ. ವಿದ್ಯೆ ಇನ್ನೂ ಸಂಪೂರ್ಣ ಕರಗತವಾಗುವ ಮೊದಲೇ ಪ್ರಯೋಗಿಸಿ ಬಲಿಯಾಗಿದ್ದಾನೆ ಎಂಬುದು ನನ್ನ ಯೋಚನೆ."

"ಅದು ಹೇಗೆ ಸಾಧ್ಯ ? ಸ್ವಲ್ಪ ವಿವರಿಸಬಲ್ಲೆಯಾ ?"

"ಅಮಾನುಷ ಚೈತನ್ಯ ಕರಗತವಾಯಿತೆಂದರೆ ನಾವು ಬಲು ಸೂಕ್ಷ್ಮ ಜೀವಿಗಳಾಗುತ್ತೇವೆ. ಆಗ ನಿನಗರಿಯದಂತೆಯೆ ನಿನ್ನ ಜೇಬಿನಲ್ಲಿರುವ ವಸ್ತುವನ್ನು ಆಕರ್ಷಿಸಬಹುದು. ಹಕ್ಕಿಯಂತೆ ಹಾರಿ ಹೋಗಬಹುದು ; ಬೀರುವಿನಲ್ಲಿ ಅಡಕವಾಗಿರುವ ವಸ್ತುಗಳನ್ನು ತರಿಸಬಹುದು. ಆದರೆ ಆತ್ಮ ಚೈತನ್ಯ ಸಂಪೂರ್ಣ ಕರಗತವಾದ ಹೊರತು ಪ್ರಯೋಗಕ್ಕೆ ಮುಂದಾಗುವುದು ಬಹಳ

ತಪ್ಪು. ಅವನು ಸೂಕ್ಷ್ಮದೇಹಿಯಾಗಿ ಹೊರಹೋಗುವ ಪ್ರಯತ್ನದಲ್ಲಿದ್ದಾಗ ಬಹುಶಃ ವಿದ್ಯುತ್ ತಂತಿಯನ್ನು ಮುಟ್ಟಿ ಪ್ರಾಣ ಕಳೆದುಕೊಂಡಿರಬಹುದು."

"ಅದಕ್ಕೆ ದೃಢವಾದ ಪುರಾವೆ ಏನು !"

"ರಾತ್ರಿ ನಾನು ಕಿಟಕಿ ಮುಚ್ಚಿ ಹೋಗಿದ್ದೆ. ಬೆಳಿಗ್ಗೆ ಬಂದು ನೋಡಿದಾಗ ಕಿಟಕಿ ತೆರೆದಿತ್ತು. ಅವನು ಪ್ರಾಯಶಃ ಈ ಕಿಟಕಿಯ ಮೂಲಕವೇ ಹೊರ ಹೋಗಿರಬೇಕು."

ಡಾ|| ಶಿವರಾಂ ಮರು ನುಡಿಯಲಿಲ್ಲ. ಆಲೋಚನಾ ಬದ್ಧನಾದ.

o o o o

ಪ್ರಯೋಗ ಶಾಲೆಯಲ್ಲಿ ವಿಜ್ಞಾನಿಗಳ ಸಭೆ ಕೂಡಿತ್ತು. ಡಾ|| ತಿಲೋತ್ತ್ರಮ್ ಎದ್ದುನಿಂತು ಸಭೆ ಕರೆದ ಉದ್ದೇಶವನ್ನು ಈ ರೀತಿ ವಿವರಿಸಿದ– "ಮಹನೀಯರೇ, ನಿನ್ನೆ ನಡೆದ ಡಾ|| ಶ್ರೀಧರನ ದುರಂತದಿಂದ ತಮ್ಮೆಲ್ಲರ ಮನದಲ್ಲೂ ಬಲವಾದ ಆಶಂಕೆ ಮೂಡಿದೆ. ಅದರ ಸಲುವಾಗಿಯೇ ಅಮಾನುಷ ಚೈತನ್ಯ ಏನು ಎಂಬುದನ್ನು ನಿಮ್ಮಗಳ ಮುಂದೆ ಪ್ರದರ್ಶಿಸುವ ಆಲೋಚನೆಯಿಂದ ತಮ್ಮೆಲ್ಲರನ್ನು ಈ ದಿನ ಬರಮಾಡಿಕೊಂಡಿರುವೆ ಇಲ್ಲಿಗೆ. ಇದು ಸಂಪೂರ್ಣ ಆತ್ಮ ಶಕ್ತಿಯನ್ನು ಕರಗತಮಾಡಿಕೊಂಡಿರುವುದಲ್ಲದೆ ಬೇರೆ ಏನೂ ಅಲ್ಲ. ಇದು ಬ್ರಹ್ಮವಿದ್ಯೆಯೋ, ಮಾಯಾಜಾಲವೋ, ಮಾಂತ್ರಿಕ–ತಾಂತ್ರಿಕ ವಿದ್ಯೆಯೋ, ಕಣ್ಕಟ್ಟೋ ಎಂದು ಮುಂತಾಗಿ ಪರಿಭಾವಿಸಿ ಅನ್ಯಥಾ ಭ್ರಮಿಸುವುದು ಬೇಡ. ನಾನು ಅಂದಿಂದಿಗೂ ವೈಜ್ಞಾನಿಕ ವಿಶ್ಲೇಷಣೆಯೊಂದಿಗೆ ಬಹಳಷ್ಟು ಪರಿಶ್ರಮದಿಂದ Psycho-analysis ಪ್ರಕಾರ ಕೆಲವೊಂದು ಪವಾಡಗಳನ್ನು ಮಾಡಬಲ್ಲೆ. ಈ ವಿದ್ಯೆಯನ್ನು ಸೂಕ್ತಕಾಲದಲ್ಲಿ ಪ್ರದರ್ಶಿಸುವ ಇಚ್ಛೆಯನ್ನು ಹೊಂದಿದ್ದು ನಿಜ. ಇದರಲ್ಲಿ ನನ್ನ ಸ್ವಾರ್ಥತೆ ಏನೂ ಇರಲಿಲ್ಲ. ಯಾರಾದರೊಬ್ಬ ಪ್ರಬುದ್ಧ ಶಿಷ್ಯನಿಗೆ ತಿಳಿಸಿಕೊಡುವ ಯೋಚನೆಯೂ ಇತ್ತು. ಆದರೆ ಅವಸರಿಸಬಾರದೆಂದು ಸುಮ್ಮನೇ ಇದ್ದೆ. ಡಾ|| ಶ್ರೀಧರ್ ಅದರ ಸುಳಿವರಿತು ಕೊಂಡು ನನಗಿದನ್ನು ಕಲಿಸಿಕೊಡಲೇಬೇಕೆಂದು ದುಂಬಾಲ ಬಿದ್ದುದರಿಂದ ಅವನಿಗೆ ನನ್ನ ಪ್ರಯೋಗ ಶಾಲೆಯಲ್ಲಿ Mental control ಬಗ್ಗೆ ನಿರ್ದಿಷ್ಟ

ರೀತಿಯಲ್ಲಿ ತಿಳಿವಳಿಕೆ ನೀಡಿ ದಿನವೂ ತರಬಿಯತ್ತು ನೀಡುತ್ತಿದ್ದೆ. ಅವನು ಅದರಲ್ಲಿ ಸಾಕಷ್ಟು ಸಿದ್ಧಿಯನ್ನು ಪಡೆದಿದ್ದ. ಅನಂತರ ಅಮಾನುಷ ಚೈತನ್ಯವನ್ನು ಕರಗತಮಾಡಿಕೊಳ್ಳುವ ವಿಧಾನ. Mental control ಕೈ ಗೂಡಿದನಂತರ ಆತ್ಮ ಚೈತನ್ಯದ Electronic waves ಗಳ ವಿಶಿಷ್ಟ ಪ್ರಯೋಗದಲ್ಲಿ ಪರಮ ಲಕ್ಷ್ಯವಿಟ್ಟರೆ ಸಿದ್ಧತೆ ಯಾರಿಗೂ ಕಷ್ಟವೇನಲ್ಲ. ಅಲ್ಲದೆ ಅತ್ಯಾಧುನಿಕ ಯಂತ್ರೋಪಕರಣಗಳಿಂದ ಕೂಡಿದ ವರ್ತಮಾನ ಯುಗದಲ್ಲಿ ಮೆದುಳು ಮತ್ತು ನರಗಳ ಮೇಲಿನ ಹತೋಟಿಯನ್ನು ತರಬಲ್ಲ ಅತ್ಯಂತ ಪ್ರಭಾವಶಾಲಿ ಸಾಧನಗಳ ಮೂಲಕ ಸಾಧನೆ ಸುಲಭ. ಅದರ ಸಲುವಾಗಿಯೇ ಡಾ|| ಶ್ರೀಧರ ನನ್ನನ್ನು ಅಷ್ಟೊಂದು ಒತ್ತಾಯಿಸಲು ಕಾರಣ. ಆದರೆ, ಸಿದ್ಧಿಯಾಗುವ ಮೊದಲೇ ಪ್ರಯೋಗ ಕೈಕೊಳ್ಳುವನೆಂದು ನಾನು ಭಾವಿಸಿರಲಿಲ್ಲ. ಅವನು ಅನ್ಯಥಾ ಅವಸರಿಸಿ ಜೀವನೀಶಕ್ತಿಯನ್ನು ವಿನಾಶಗೊಳಿಸಿದ. ಇದು ಬಹಳ ದುರದೃಷ್ಟಕರ. ಹೀಗಾಗಬಾರದಿತ್ತು. ಅವನು ನನ್ನ ಸಲಹೆಯನ್ನು ಪಡೆದಿದ್ದಲ್ಲಿ ಅಥವಾ ವಿದ್ಯೆ ಸಿದ್ಧಿಯಾಗುವವರೆಗೆ ತಾಳ್ಮೆ ವಹಿಸಿದ್ದಲ್ಲಿ ಇಂತಹ ದುರಂತ ಖಂಡಿತ ನಡೆಯುತ್ತಿರಲಿಲ್ಲ. ಅವನ ಬುದ್ಧಿ ಮತ್ತು ವಿದ್ಯೆ ಎರಡೂ ಬಾಲಿಶವಾದುವೇ !

ಆಗ ಆ ಮಾತಿಗೆ ಡಾ|| ಆನಂದ್ ತನ್ನ ಪ್ರಶ್ನೆಯನ್ನು ಮುಂದಿಟ್ಟ,

"ಈಪೊಂದು ಕಾರಣದಿಂದಲೇ ಮೃತ ಪಟ್ಟಿದ್ದಾನೆ ಎಂಬುದಕ್ಕೆ ದೃಢವಾದ ಕಾರಣವನ್ನು ನೀವು ಕೊಡಬಲ್ಲಿರಾ ?"

"ಈಗ ನನ್ನ ಸಿದ್ಧಿಯನ್ನು ನಿಮ್ಮ ಮುಂದೆ ಪ್ರದರ್ಶಿಸುವೆ. ಅನಂತರ ನೀವೇ ಅದನ್ನು ಊಹಿಸಿಕೊಳ್ಳಬಹುದು. ಆಗಬಹುದೇ ?"

"ಆಗಬಹುದು."

ಡಾ|| ತಿಲೋತ್ತಮ್ ಎದ್ದು ಮೇಜಿನ ಮೇಲೆ ಅಂಗಾತ ಮಲಗಿ ಮನಃಪ್ರಾಣಗಳನ್ನು ಬಿಗಿ ಹಿಡಿದು ಬಿಮ್ಮನೆ ಉಸಿರಿಡಿದ. ಕೆಲವು ನಿಮಿಷಗಳ ಒಳಗಾಗಿ ದೇಹ ಮೇಜನ್ನು ಬಿಟ್ಟು ಮೆಲ್ಲನೆ ಮೇಲೆದ್ದಿತು. ಮೇಲೆ...ಮೇಲೆ... ಏರುತ್ತ ಪ್ರಯೋಗ ಶಾಲೆಯಲ್ಲಿ ಒಂದು ಸುತ್ತು ಹಾಕಿದನಂತರ ಕಣ್ಮರೆಯಾಯಿತು. ಕಿಟಕಿ ಬಾಗಿಲುಗಳು ತೆರೆದಿರಲಿಲ್ಲವಾದುದರಿಂದ ಹೇಗೆ, ಯಾವ ರೀತಿ

ಯಲ್ಲಿ ಅದೃಶ್ಯವಾಯಿತು ಎಂಬುದು ಯಾರಿಗೂ ತಿಳಿಯಲಿಲ್ಲ. ಎಲ್ಲರೂ ಅತ್ಯಾಶ್ಚರ್ಯವಿಮೂಕರಾಗಿ ಗಮನಿಸುತಿದ್ದಂತೆಯೇ ನಿಶ್ಶಬ್ದ ಗತಿಯಲ್ಲಿ ಕೆಲವು ನಿಮಿಷಗಳು ಉರುಳಿಹೋದುವು.

ಅನಂತರ ಮೇಲೆ ಸಣ್ಣಗೆ ಸುಯ್ಯನೆ ಶಬ್ದವಾದಾಗ ಎಲ್ಲರೂ ತಲೆಯೆತ್ತಿ ನೋಡಿದರು. ಡಾ|| ತಿಲೋತ್ತಮನ್ ಅಂಗಾತ ಮಲಗಿದ್ದಂತೆಯೇ ಬಂದು ನಿಧಾನ ಗತಿಯಲ್ಲಿ ಮೇಜಿನ ಮೇಲೆ ಪವಡಿಸಿದ. ಕೆಲವು ನಿಮಿಷಗಳುರುಳಿದ ನಂತರ ಎದ್ದು ಕೈಯ್ಯಲ್ಲಿದ್ದ ಒಂದು ಫೈಲನ್ನು ಮೇಜಿನ ಮೇಲಿಟ್ಟು ಕೆಳಗಿಳಿದು ನಿಂತೊಡನೆಯೇ ಎಲ್ಲರೂ ಚಪ್ಪಳೆ ತಟ್ಟಿ ಹರ್ಷೋದ್ಗಾರ ಮಾಡಿದರು.

ಡಾ|| ತಿಲೋತ್ತಮನ್ ನಗುಮುಖದಿಂದ ಬಿತ್ತರಿಸಿದ,

"ಈವೊಂದು ವಿದ್ಯೆ ಸಿದ್ಧಿಯಾಗುವ ಮುನ್ನವೇ ಪ್ರಯತ್ನಿಸಿ ವಿದ್ಯುತ್ ತಂತಿಯನ್ನು ತಾಗಿ ಡಾ|| ಶ್ರೀಧರ್ ಮರಣ ಹೊಂದಿರುವುದರಲ್ಲಿ ಅನುಮಾನ ವಿಲ್ಲ."

"ಇರಬಹುದು" ಎಂದು ಅನೇಕರು ಒಪ್ಪಿಗೆ ಸೂಸಿದರು.

"ಈ ಕಾರಣದಿಂದ ಅಮಾನುಷ ಚೈತನ್ಯವನ್ನು ವಶೀಕರಿಸುವ ವಿಚಾರ ನಾನಿಲ್ಲಿಗೇ ಕೈ ಬಿಡುವ ಯೋಚನೆ ಮಾಡಿರುವೆ."

"ಇಷ್ಟಕ್ಕಾಗಿ ಆತುರಬೇಡ"

ಅನೇಕ ದನಿಗಳು ಹಾಗೇ ಅಂದುವು.

ಡಾ|| ತಿಲೋತ್ತಮನ್ ನಿಧಾನವಾಗಿ ತಲೆಯಾಡಿಸುತ್ತ ತಾನು ಬರೆದಿದ್ದ ಪ್ರಬಂಧಗಳಿಗೆ ಅಗ್ನಿ ಸ್ಪರ್ಶ ಮಾಡಿದ. 'ಹಾ ಹಾ!' ಎನ್ನುವುದರೊಳಗಾಗಿ ಕೃತಿ ನಡೆದು ಹೋಗಿತ್ತು.

ಮೇಜಿನ ಮೇಲಿದ್ದ ಫೈಲನ್ನು ತೆಗೆದು ನೋಡಿದ ಡಾ|| ಶಿವರಾಂ. ಅದು ಪ್ರಯೋಗಶಾಲೆಯ ಬಲಪಾರ್ಶ್ವದ ಕೊಠಡಿಯಲ್ಲಿ ಕಬ್ಬಿಣದ ಬೀರುವಿನಲ್ಲಿದ್ದುದೆಂಬುದನ್ನು ಅರಿತು ಮೂಕ ವಿಸ್ಮಿತನಾದ.

— ೦ —

ಮಾನವೀಯತೆ

೮

"Everything can be
Sacrificed for
Truth, But Truth
Cannot be Sacrificed
for anythnig."

ಸದಾ ಹಸುರುಕ್ಕುವ ಗ್ರಾಮ್ಯ ಜೀವನದ ಸುರಸುಂದರ ಪರಿಸರ.

ಬ್ಲೂಮ್ಸ್‌ಬರಿ ಎಂಬ ಹೆಸರಾಂತ ಆ ಹಳ್ಳಿಯ ತುಂಬೆಲ್ಲಾ ಸಣ್ಣ ಸಣ್ಣ ಹಿಡುವಳಿಗಳನ್ನು ಹೊಂದಿದ ಬೇಸಾಯಗಳನ್ನೊಳಗೊಂಡ ಉದ್ದಿಮೆದಾರರ ಜೀವನ ಅತ್ಯಂತ ರಾಮಣೀಯಕ. ಬಹುತೇಕವಾಗಿ ಹಿರಿಯರೇ ಆದ ಗೃಹಸ್ಥರು ದನ, ಕುರಿ, ಕೋಳಿ, ಹಂದಿಗಳನ್ನು ಸಾಕಿದವರಾಗಿದ್ದು ತಮ್ಮತಮ್ಮ ಕ್ಷೇತ್ರ ದಲ್ಲಿ ನಿಷ್ಣಾತರೆನಿಸಿಕೊಂಡವರು. ಐವತ್ತು ಅರವತ್ತು ಸಂಸಾರಗಳು ಪರಸ್ಪರ ಸ್ನೇಹ ಜೀವನವನ್ನು ಕಂಡುಕೊಂಡವರು. ಊರಾಚೆ ವಿಶಾಲವಾದ ಬಯಲು. ಅದರಿಂದಾಚೆ ಊರಿನ ವಿಸ್ತೀರ್ಣಕ್ಕೆ ಸಮವೆನಿಸುವ ಬೃಹದ್ ಪುಷ್ಕರಣಿ. ಸ್ವಚ್ಛ ನಿರ್ಮಲ ಜಲರಾಶಿ. ದನ ಜನ ಜಾಪತ್ತುಗಳಿಗೆ ಸ್ವರ್ಗೋಪಮ ಆ ನಲ್ದಾಣ. ವಾಯು ವಿಹಾರಕ್ಕಾಗಿ, ಸಾಯಂ ವಿಹಾರಕ್ಕಾಗಿ, ಮೀನು ಹಿಡಿಯುವುದಕ್ಕಾಗಿ, ದೋಣಿ ವಿಹಾರಕ್ಕಾಗಿ ಒಂದಲ್ಲ ಒಂದು ರೀತಿಯ ಮನರಂಜನೆ ಬಯಸಿ ಜನ ಅಲ್ಲಿ ಕೂಡುವುದುಂಟು. ತಂಪಿನ ವಲಯವಾದ್ದರಿಂದ ಹುಲ್ಲು ದಟ್ಟವಾಗಿ ಬೆಳೆ ಯುತ್ತದೆ. ದನ ಕುರಿಗಳು ಮೇಯುವ ಗೋಮಾಳ ಸದಾ ಹಸಿರು. ದನಗಾಹಿ ಹುಡುಗರು ಕೇಕೆ ಹಾಕುತ್ತ ಆಟವಾಡುತ್ತಾರೆ.

ಮಿಂಚುಳ್ಳಿ ಪಕ್ಷಿಗಳು ತರತರದ ಬೆಳ್ಳನೆಯ ಜಲ ಪಕ್ಷಿಗಳು ಮೀನಿನ ಬೇಟೆಗಾಗಿ ಸದಾ ಅಲ್ಲಿಯೇ ಹಾರಾಡುತಿದ್ದರೆ ಕಣ್ದಣಿಯ ನೋಡುವಷ್ಟು ಹಿತ. ಅಲ್ಲಲ್ಲಿ ವಿರಳವಾಗಿ ಬೆಳೆದು ನಿಂತ ಹೆಮ್ಮರಗಳು ಸದಾ ಹಸುರು ಕಕ್ಕುತ್ತವೆ.

ಆ ಹಿಡುವಳಿದಾರರಲ್ಲಿ ಒಬ್ಬಳಾದ ಶ್ರೀಮತಿ ಬೆಟ್ಟಿ ಜರ್ಾ ಮಕ್ಕಳಿಲ್ಲದ ವಿಧವೆ. ಎಡ್ವರ್ಡ್ ಎಂಬ ಹದಿಹರೆಯದ ಬಾಲಕನನ್ನು ದತ್ತುಪುತ್ರನನ್ನಾಗಿ ಸ್ವೀಕರಿಸಿದ್ದು ಅವನಲ್ಲೇ ತನ್ನೆಲ್ಲಾ ಲಕ್ಷ್ಯವನ್ನೂ ಕೇಂದ್ರೀಕರಿಸಿದ್ದಳು. ಅವನೂ ಸಹ ತನ್ನ ಕರ್ತವ್ಯದಲ್ಲಿ ಲೋಪದೋಷಗಳಿಲ್ಲದಂತೆ ನಡೆದುಕೊಳ್ಳುತಿದ್ದ. ಜೀವನರಥ ಎಂದಿನಂತೆಯೇ ಸುಗಮವಾಗಿ ನಡೆಯುತ್ತದೆ. ವೃದ್ಧಾಪ್ಯದಲ್ಲಿಯೂ ಆಕೆ ಸಂತೃಪ್ತೆ. ರೊಪ್ಪದಲ್ಲಿ ಕುರಿಗಳು, ಹಟ್ಟಿಯಲ್ಲಿ ರಾಸುಗಳು, ಗೂಡಿನಲ್ಲಿ ಭಾರಿ ಸಮೂಹದ ಕೋಳಿಗಳು ಮತ್ತು ಹಂದಿಗಳು ಎಲ್ಲವನ್ನೂ ಹೊಂದಿದ ಆಕೆ ನಿತ್ಯ ಶ್ರಮಜೀವಿ. ಎಂಟ್ಹತ್ತು ಎಕರೆಯ ಜಮೀನಿಗೆ ಸುತ್ತಲೂ ಮುಳ್ಳು ತಂತಿಯ ಬೇಲಿ. ಸಾಕಷ್ಟು ವಿಶಾಲವಾದ ಮನೆ. ಒಂದೆರಡು ಒಳ್ಳೆಯ ನಾಯಿ ಗಳು ಮನೆಯ ಕಾವಲಿಗೆ. ಯಾರ ಹಂಗೂ ಇಲ್ಲದ ಅಚ್ಚುಕಟ್ಟಿನ ಸಂಸಾರ. ಶ್ರೀಮತಿ ಬೆಟ್ಟಿ ಜರ್ಾ ಎಂದೂ ಯಾರಿಗೂ ಹಿಂದೆ ಬಿದ್ದವಳಲ್ಲ. ಎಪ್ಪತ್ತರ ಹರೆ ಯದಲ್ಲೂ ಎಂದಿನ ಚಟುವಟಿಕೆಗೆ ಕುಂದಿಲ್ಲ.

ಉತ್ಪನ್ನಕ್ಕೂ ಕೊರತೆಯಿಲ್ಲ. ಹತ್ತಾರು ಮಂದಿ ಗಣ್ಯರ ಮಧ್ಯೆ ಗಣನೀ ಯವಾದ ಕಾರ್ಯ ಚಟುವಟಿಕೆಯನ್ನು ನೋಡಿ ಯಾರಾದರೂ, ಎಂತಹ ಮೂರ್ಖನೂ ಮೆಚ್ಚಿಕೊಳ್ಳಬಹುದಾದ ಗುಣ ವಿಶೇಷ.

ಂ ಂ ಂ ಂ

ದನ ಕುರಿಗಳನ್ನು ಮೇಯಲು ಬಿಟ್ಟ ಎಡ್ವರ್ಡ್ ಏಳು ಗಂಟೆಯಾದರೂ ಮನೆಗೆ ಹಿಂತಿರುಗಿ ಬಾರದುದನ್ನು ನೋಡಿ ಶ್ರೀಮತಿ ಬೆಟ್ಟಿ ಜರ್ಾ ಹೊರ ಬಂದಳು. ಸೂರ್ಯಾಸ್ತಮವಾಗಿ ಅರೆತಾಸು ಸಂದಿರಬಹುದು. ಆಕಾಶದಲ್ಲಿ ಕನಕಕಾಂತಿ ಇನ್ನೂ ಬೆಳಗುತ್ತಿದೆ. ಮನೆಯ ಮುಂದೆ ಕಣ್ಣನೇರಕ್ಕೆ ಹರಿವ ದಾರಿಯಲ್ಲಿ ಯಾರ ಸುಳಿವೂ ಇಲ್ಲ. ಮನೆಮನೆಗಳಲ್ಲೂ ಜನ ಒಳಗಡೆ ಸೇರಿ ಕೊಂಡು ಸಾಯಂ ಸಮಯದ ವಿಶ್ರಾಂತಿಯಲ್ಲಿ ಮೈ ಮರೆತಿದ್ದಾರೆ. ಮುಂಬಾ

ಗಿಲು, ಕಿಟಕಿಗಳಲ್ಲಿ ದೀಪದ ಬೆಳಕು ಜ್ವಲಿಸುತ್ತಿದೆ. ಒಮ್ಮೆ ಯಾರನ್ನಾದರೂ ಕಂಡು ಕೇಳೋಣವೆಂಬ ಮನಸ್ಸು ಮೂಡಿದರೆ, ಇನ್ನೊಮ್ಮೆ ಈಗಲೇ ಏನವಸರ ಸ್ವಲ್ಪ ಕಾದು ನೋಡೋಣ ಎಂಬ ತಾಳ್ಮೆಯೂ ಸಹ.

ಅಂಗಳದ ಬದಿಯಲ್ಲಿ ಮಲಗಿದ್ದ ಜೂಲಿ ಎದ್ದು ಬಂದು ಬಾಲ ಆಡಿಸುತ್ತ ಬೊಗಳಿತು. ಶ್ರೀಮತಿ ಬೆಟ್ಟಿ ಜರ್ಾ ಅದರ ತಲೆಯನ್ನು ನೇವರಿಸಿ ತಟ್ಟಿದಳು, ಮನದಲ್ಲಿ ಕಳವಳ–ಆತಂಕ ತುಂಬಿಕೊಂಡಿದ್ದರೂ. ಸ್ವಲ್ಪಹೊತ್ತು ಉರುಳಿದ ಮೇಲೆ ದೂರದ ಕಾಲುಹಾದಿಯಲ್ಲಿ ಎಡ್ವರ್ಡ್ ಕಾಣಿಸಿಕೊಂಡ. ದನ ಕುರಿಗಳು ಕಂಗಾಲಾಗಿ ಓಡಿ ಬರುತಿದ್ದುದನ್ನು ಕಂಡು ಆಕೆ ಕದಲದೆ ಅಲ್ಲಿಯೇ ನಿಂತಳು.

ಏನಿರಬಹುದು ? ಏತಕ್ಕಾಗಿ ಇಷ್ಟೊಂದು ಗಾಬರಿ ?

ಪ್ರಶ್ನೆ ಮನದಲ್ಲಿ ನಿಮಿರಿ ನಿಂತಿತು. ಆದರೆ ಏನೆಂಬುದೇ ಅರ್ಥವಾಗುತ್ತಿಲ್ಲ.

ಶ್ರೀಮತಿ ಬೆಟ್ಟಿ ಜರ್ಾ ದಿಗ್ಮೂಢಳಾಗಿ ನೋಡುತಿದ್ದಂತೆಯೇ ದನಕರುಗಳು ಓಡಿ ಬಂದುವು ಕೊಟ್ಟಿಗೆಗೆ. ಎಡ್ವರ್ಡ್ ಏದುಸಿರು ಬಿಡುತ್ತ ಮೆಟ್ಟಿಲು ಹತ್ತಿದ.

"ಏನಾಯ್ತು ಮಗೂ, ಇದೇಕೆ ಇಂತಹ ಗಾಬರಿ ?"

"ಏನೂ ಇಲ್ಲ..."

ಮುಂದೆ ಮಾತು ಹೊರಡದೆ ಎಡ್ವರ್ಡ್ ಸುಮ್ಮನಾದ.

"ಏಕೆ ಸಂಕೋಚ ? ಏನಾಯ್ತು ?ದನಗಳೇಕೆ ಓಡಿ ಬಂದುವು ?"

"ಏನೋ ನನಗೂ ಅದು ಅರ್ಥವಾಗಲಿಲ್ಲ. ನನಗೆ ಇದ್ದಕ್ಕಿದ್ದ ಹಾಗೆಯೇ ಮೈ ಉರಿ ಆರಂಭಿಸಿತು ಬೆಂಕಿಯಲ್ಲಿ ಸುಟ್ಟಂತೆ. ಕಣ್ಣುಗಳೂ ಉರಿಯಹತ್ತಿ ನೀರು ಸುರಿಯತೊಡಗಿತು. ನಾಲ್ಕು ಹೆಜ್ಜೆ ನಡೆಯಲಾರೆನೇನೋ ಎಂಬಷ್ಟು ಆಯಾಸ ಮೂಡಿ ನಾನು ಅಲ್ಲಿಯೇ ಮರದ ಕೆಳಗೆ ಕುಳಿತುಕೊಂಡೆ. ಆಗ ದನ ಕರು ಕುರಿಗಳೂ ನೆಮ್ಮದಿಯಿಂದ ಮೇಯಲಿಲ್ಲ. ಅವುಗಳಿಗೂ ಅದಾವ ಪರಿತಾಪ ಮೂಡಿತೋ ದೇವರಿಗೇ ಗೊತ್ತು. ಅತ್ತಿತ್ತ ಉಡಿದಾಡುವುದೂ ಬಿದ್ದು ಹೊರ

ಳಾಡುವುದೂ ಚೀರುವುದೂ ಹೀಗೆ ಯಾವುದೋ ಸಂಕಟಕ್ಕೊಳಗಾದಂತೆ ತೋರಿ ಬಂದುವು. ಆ ಕೂಡಲೇ ಅಟ್ಟಿಕೊಂಡು ಬರಬೇಕೆಂದರೆ ಅವು ಅಲ್ಲಲ್ಲಿ ಚೆಲ್ಲಾ ಪಿಲ್ಲಿಯಾದುವು. ಮನೆಯ ಕಡೆಗೆ ಹೊರಡುವುದೇ ತಿಳಿವಳಿಕೆಗೆ ಬರಲಿಲ್ಲ. ನಾನೊಂದೆಡೆ ಅಟ್ಟಿದರೆ ಅವು ಒಂದೆಡೆ ಹೋಗುತಿದ್ದುವು. ನನಗೂ ಸಂಕಟ-ಹಿಂಸೆ. ಅವುಗಳಿಗೂ ಬಹುಶಃ ಅದೇ. ಅವು ಹೇಳಲಾರವು ಮಾತ್ರ."

ಅನಂತರ, ಅವನ ಮುಖ ಮೈ ಕೆಂಪಾಗಿ ಕಂದಿದುದು ಕಾಣಬಂತು. ಅವನು ಮೈಯೆಲ್ಲಾ ನವೆ-ಉರಿ-ಸಂಕಟ ಎನ್ನುತ್ತಲೇ ಇದ್ದ. ಆಕೆ ತನ್ನ ತಿಳಿವಳಿಕೆಗೆ ಬಂದ ಮದ್ದನ್ನು ಕೊಟ್ಟು ಮೈಗೆ ತಣ್ಣಗೆ ತಂಪನ್ನೀಯುವ ತೈಲವನ್ನು ಉಜ್ಜಿದಳು. ಆದರೂ, ಆ ದಿನವೆಲ್ಲಾ ಕಡು ಹಿಂಸೆ-ಪ್ರಾಣಸಂಕಟದಿಂದಲೇ ಕಳೆಯಿತು. ದನಕರುಗಳೂ ಸುಖವಾಗಿರಲಿಲ್ಲ. ಅವು ಕೊಟ್ಟಿಗೆಯಲ್ಲಿ ಚಡಪಡಿಸುತ್ತ ಒದ್ದಾಡುವ-ಓಡಾಡುವ ದಡಬಡ ಶಬ್ದ ಕೇಳಿಸುತಿತ್ತು. ಬಾಲಕ ಮೈಯುರಿಯಿಂದ ಬಿದ್ದು ಹೊರಳಾಡುತಿದ್ದುದರಿಂದ ರಾತ್ರಿ ಬೆಟ್ಟಿಗೂ ನಿದ್ದೆಯಿಲ್ಲ. ಅವಿಶ್ರಾಂತ ರಾತ್ರಿ ರುದ್ರವಾಗಿ ಘೋರವಾಗಿ ಕಂಡಿತು ಆ ತಾಯಿ ಬೆಟ್ಟಿ ಙೆರ್ಜಾಳಿಗೆ.

o o o o

ಪ್ರಶಾಂತವಾದ ಪ್ರಾತಃಕಾಲದಲ್ಲಿ ಉಜ್ವಲಿಸುತ್ತ ಮೂಡಿಬಂದ ಹಿರಣ್ಮಯನಾದ ಸೂರ್ಯ !

ತಂಗಾಳಿ ತಣ್ಣಗೆ ತೀಡುತಿತ್ತು ದಿಸೆಯಿಂದ ದಿಸೆಗೆ ಸುಯ್ಯನೆ ಸುಳಿದು ಸುತ್ತಿ.

ನೆರೆಮನೆಯ ಬರ್ಟೀವೂಸ್ಟರ್ ಸದ್ದಿಲ್ಲದ್ಕೆ ಒಳಗೆ ಬಂದ. ಜೂಲಿ ಬಾಲ ಆಡಿಸುತ್ತ ಸ್ವಾಗತಿಸಿತು ಅವನನ್ನು. ತಲೆಬಾಗಿಲಿನಲ್ಲಿ ಅವನ ಮುಖ ಕಾಣಿಸುತ್ತಲೇ ಬೆಟ್ಟಿ ಜರ್ಾ ಕಾತರಭಾವದಿಂದ ಎದುರುಗೊಂಡು ಅತ್ಯಂತ ವಿಶಾದವಾಣಿಯಲ್ಲಿ ನುಡಿದಳು ನಮ್ಮ ಮನೆಯಲ್ಲಿ ಆಗಿರುವ ಅನಾಹುತ ತಿಳಿದೆಯಾ ಬರ್ಟೀ? ಇಲ್ಲಿ ಎಡ್ವರ್ಡ್ ಅಸ್ವಸ್ಥ. ಹಟ್ಟಿಯಲ್ಲಿ ನೋಡಿದರೆ ದನಗಳ ಪಾಡು

ಭೀಕರವಾಗಿದೆ. ಏನೆಂಬುದೇ ಅರ್ಥವಾಗುತ್ತಿಲ್ಲ. ಇಂಥ ದುರ್ದಿನವನ್ನು ನಾನು ಕಂಡಿದ್ದೇ ಇಲ್ಲ. ಈಗಂತೂ ದಿಗ್ಮೂಢಳಾಗಿದ್ದೇನೆ. ನನಗೆ ತುಂಬ ಸಹಾಯ ಬೇಕಾಗಿದೆ. ಒಳಗೆ ಬಾ. ಈ ಹುಡುಗನನ್ನು ನೋಡು !"

"ನನಗೆ ರಾತ್ರಿಯೇ ಗೊತ್ತಾಯಿತು ನೀವು ಮಲಗಿಲ್ಲವೆಂದು. ಹಟ್ಟಿಯಲ್ಲಿ ದನಗಳು ದಡಬಡಿಸುತಿದ್ದುದೂ ಗಮನಕ್ಕೆ ಬಂತು. ಅದಕ್ಕೆಂದೇ ಬೆಳಗಾಗುವುದನ್ನೇ ಕಾದಿದ್ದು ತಕ್ಷಣ ಹೊರಟು ಬಂದೆ. ಏನಾಯ್ತು? ಏನು ತೊಂದರೆ? ಹುಡುಗ ಎಲ್ಲಿದ್ದಾನೆ ?"

ಆ ಹೊತ್ತಿಗೆ ಹುಡುಗ ಶೌಚದ ಕೋಣೆಗೆ ಹೋಗಿದ್ದ. ಬೆಟ್ಟೀ ದುಃಖಾರ್ತಳಾಗಿ ಕಣ್ಣುಗಳಲ್ಲಿ ಕಂಬನಿಯನ್ನು ತುಂಬಿಕೊಂಡು ಹೇಳಿದಳು "ಹುಡುಗನ ಮೈ ನೋಡುವಂತಿಲ್ಲ. ಬೆಂಕಿಯಲ್ಲಿ ಸುಟ್ಟಂತೆ ಕಂದಿ ಬಾಡಿಹೋಗಿದೆ. ಉರಿ ಉರಿಯೆಂದು ಒದ್ದಾಡುತ್ತಾನೆ.... ! ಏನಾಯ್ತೊ, ಏನು ಗತಿಯೋ ದೇವರಿಗೇ ಗೊತ್ತು. ಹೇಗೆ ಇದರ ನಿವಾರಣೆ ಹೇಳು ?"

ಬರ್ಟೀವೂಸ್ಟರ್ ಕೊಟ್ಟಿಗೆಯ ಕಡೆ ಹೋದ. ದನ ಕುರಿಗಳ ಮೈ ಗೂದಲು ನಿಮಿರಿ ಕಣ್ಣುಗಳು ಕೆಂಡದಂತೆ ಕೆಂಪಾಗಿ ನೀರು ಸುರಿಸುತ್ತಿವೆ. ಬಾಯಿಯಲ್ಲೂ ನೊರೆ ನೊರೆಯಾದ ಜೊಲ್ಲು. ಯಾರಿಗಾದರೂ ನೋಡಿದೊಡನೆಯೇ ಎದೆಯೊಡೆಯುವಂತಹ ಭೀಕರ ದೃಶ್ಯ. ಬರ್ಟೀವೂಸ್ಟರ್ ಮೈ ಮರವಟ್ಟಂತೆ ಸ್ಥಂಭೀಭೂತನಾದ. ವಿಷಯ ಏನೆಂಬುದೇ ಅರ್ಥವಾಗಲಿಲ್ಲ. ಅಲ್ಲಿಂದ ನೇರವಾಗಿ ಒಳಗೆ ಬಂದು ಅತ್ಯಾಶ್ಚರ್ಯಕರವಾಣಿಯಲ್ಲಿ "ಏನಿದು ? ಏನಾಗಿರಬಹುದು ನನಗಂತೂ ಅರ್ಥವಾಗುತ್ತಲೇ ಇಲ್ಲ. ಬೆಟ್ಟೀ ನಿನ್ನನ್ನು ದೇವರು ಕೈ ಬಿಟ್ಟಿದ್ದಾನೆ ಎನಿಸುತ್ತೆ ನನಗೆ."

"ಹಾ ! ಏನು ಗತಿ ? ಏನು ಮಾಡಲಿ ಹೇಳು ?" ಗೋಗರೆದಳು ಅವಳು. ಒಡಲದುಃಖವುಕ್ಕಿ ಬಂದು ಮುಖಬಿಂಬ ಕೆಂಪು ತಳೆಯಿತು.

"ನೋಡೋಣ. ಏನಾದರೂ ಮಾಡಲೇ ಬೇಕಲ್ಲ ?" ಕರುಣಕಾತರ ಸ್ವರದಿಂದ ನುಡಿದ ಬರ್ಟೀವೂಸ್ಟರ್. ಮನಸ್ಸು ಚಿಂತಾ ಕಾತರತೆಯಿಂದ ತುಂಬಿ ಹೋಯಿತು.

ಆ ವೇಳೆಗೆ ಶೌಚದ ಮನೆಯ ಬಾಗಿಲು ತೆರೆಯಿತು. ಎಡ್ವರ್ಡ್ ಹೊರ ಬಂದರೆ ನೋಡುವುದೇನು ? ಮೈ ಮುಖ ಕಂದಿ ಬಾಡಿ ಹೋಗಿತ್ತು ಬೆಂಕಿಯಲ್ಲಿ ಸುಳಿಬಾಳೆಯನ್ನು ಬಾಡಿಸಿದಂತೆ. ಬರಬರುತ್ತಲೇ ಅವನೆಂದ "ಅಮ್ಮಾ ತಾಳ ಳಾರೆ. ಎಲ್ಲಾದರೂ ನೀರಿನೊಳಗೆ ಮುಳುಗಿ ಬಿಡೋಣ ಎನ್ನಿಸುತ್ತಿದೆ."

ಎದೆಯಾಳದಿಂದ ಹೊರಬಿತ್ತು ಆರ್ತಧ್ವನಿ. ರಕ್ತಾಕ್ತ ಕಣ್ಣುಗಳಲ್ಲಿ ಕಂಬನಿ ಯೊಸರುತ್ತಿದೆ. ಶ್ವಾಸನಿಶ್ವಾಸಗಳು ಏರುಪೇರಾಗಿದ್ದುವು. ನಡೆಯಲಾರದೆ ನಡೆದು ಬಂದ ರೀತಿ ಕರುಣಾಜನಕವಾಗಿತ್ತು.

ಬರ್ಟೀ ವೂಸ್ಟರ್ ಅವನ ತೋಳನ್ನು ಹಿಡಿದು ಕುರ್ಚಿಯ ಮೇಲೆ ಕೂಡಿಸಿ ಕೇಳಿದ,

"ಏನಾಯಿತು, ಹೇಳು ? ಎಂಥ ಅವಾಂತರ ?" ಆಶ್ಚರ್ಯಕುತೂಹಲಿತ ಪ್ರಶ್ನೆಯು ಹೊರಬಿತ್ತು.

"ನನಗೇನೂ ಗೊತ್ತಿಲ್ಲ ಅಂಕಲ್."

"ಯಾರಾದರೂ...ಏನಾದರೂ....ಮಾಡಿದರೆ... ? ಎಸೆದರೆ ?"

"ಇಲ್ಲ. ನಾನು ಯಾರನ್ನೂ ಕಣ್ಣಿಂದ ಕಾಣಲೇ ಇಲ್ಲ."

ತಲೆಯಾಡಿಸುತ್ತ ಏದುಸಿರಿನೊಂದಿಗೇ ಉಸುರಿದ ಎಡ್ವರ್ಡ್.

"ನನಗೂ ಅದೇ ಆಶ್ಚರ್ಯ. ವಿಷಯ ಗುಂಟಲಗಾಣವಾಗಿದೆ" ಎಂದಳು ಬೆಟ್ಟೀ ಜಾರ್.

o o o o

ಬ್ಲೂಮ್ಸ್ ಬರಿಯಲ್ಲಿ ಒಂದು ಪಶುವೈದ್ಯಶಾಲೆಯೂ ಉಂಟು. ಆದರೆ, ವಾರಕ್ಕೆ ಎರಡು ದಿನ ಮಾತ್ರ ನಗರದ ಆಸ್ಪತ್ರೆಯಿಂದ ಸಂಚಾರಿ ಆಸ್ಪತ್ರೆಯಲ್ಲಿ ಬರುತ್ತಾರೆ ವೈದ್ಯರು. ಹೆಚ್ಚಿನ ಕೆಲಸವಿದ್ದಲ್ಲಿ, ತುರ್ತು ಪರಿಸ್ಥಿತಿಯಿದ್ದಲ್ಲಿ ಅವರ ಸೇವೆ ಮುಂದುವರಿಯುತ್ತದೆ ಸಮಯೋಚಿತವಾಗಿ. ಜನಾರೋಗ್ಯ ಕೇಂದ್ರವೂ ಉಂಟು. ಅಲ್ಲಿಯೂ ಸಹ ಅದೇ ಪಾಡು. ವಾರಕ್ಕೆ ಎರಡು ಮೂರು ಬಾರಿ

ಸಂಚಾರಿ ಆಸ್ಪತ್ರೆಯಲ್ಲಿ ಬಂದು ಬೇಕು ಬೇಕಾದ ಔಷಧಿಗಳನ್ನು ತಂದು ಚಿಕಿತ್ಸೆ ನಡೆಸಿ ಹಿಂದಿರುಗುತ್ತಾರೆ, ತಮ್ಮ ಬಿಡದಿಗೆ. ಪ್ರಸಂಗವಶಾತ್ತಾಗಿ ಒಂದೆರಡು ದಿನ ನಿಲ್ಲುವುದೂ ಉಂಟು.

ಆದರೆ, ದುರದೃಷ್ಟವಶಾತ್ ಅಂದು ಯಾವ ವೈದ್ಯರೂ ಬಂದಿರಲಿಲ್ಲ. ಬರ್ಟೀ ವೂಸ್ಟರ್ ನಗರಕ್ಕೆ ಹೋಗಿ ವೈದ್ಯರನ್ನು ಕರೆತರುವುದಾಗಿ ಹೇಳಿದ. ಆದರೆ, ಅದೆಷ್ಟು ದೂರ? ಅಲ್ಲಿಗೆ ವಾಹನ ಸೌಕರ್ಯವೂ ಇರಲಿಲ್ಲ. ದೂರದ ಬಸ್ ನಿಲ್ದಾಣಕ್ಕೆ ನಡೆದುಕೊಂಡೇ ಹೋಗಬೇಕು. ಅನಂತರ ಹಿಂದಿರುಗುವಾಗಲೂ ಅಷ್ಟೆ. ಆ ಇಳಿ ವಯಸ್ಸಿನವನಿಗೆ ಅಷ್ಟೆಲ್ಲಾ ತೊಂದರೆ ಕೊಡುವುದೇ ಎಂಬ ಯೋಚನೆ ಬೇರೆ. ಒಂದು ನೀಳವಾದ ನಿಟ್ಟುಸಿರು ಬಿಟ್ಟು ಕರುಣ ಕಾತರ ಸ್ವರದಿಂದ ನುಡಿದಳು ಬೆಟ್ಟೀ ಜರ್ಾ "ಅಯ್ಯಾ,ಆತ್ಮೀಯನೆ ನೀನು ಈ ವಯಸ್ಸಿನಲ್ಲಿ ಅಷ್ಟು ಶ್ರಮ ವಹಿಸಿದರೆ ಮತ್ತೂ ಮೂರು ದಿನ ಮಲಗಬೇಕಾದೀತು. ಯಾರಾದರೂ ಹುಡುಗರು ಹೋಗ ಬಲ್ಲರಾದರೆ ತುಂಬ ಒಳ್ಳಿತು."

ಆ ಮಾತಿಗೆ ಒಂದು ಘಳಿಗೆ ಯೋಚಿಸಿದ ಬರ್ಟೀ ವೂಸ್ಟರ್. ಹೆಚ್ಚು ತಡಮಾಡುವುದು ಸೂಕ್ತವಲ್ಲ ಎನ್ನುತ್ತದೆ ಚಿತ್ತಪ್ರವೃತ್ತಿ. ಆ ವೇಳೆಗೆ ಹಾಲನ್ನು ನಗರಕ್ಕೆ ಒಯ್ಯುವ ಡೇವಿಡ್ ಬಂದ. ಅವನು ನಗರಕ್ಕೆ ಟ್ರಕ್ ಓಡಿಸುವುದರಿಂದ ಅದರಲ್ಲಿ ನಗರಕ್ಕೆ ಹೋಗಬಹುದು ಎಂಬ ಆಸೆ ಮೂಡಿತು ಮನದಲ್ಲಿ. ಬೆಟ್ಟೀ ಜರ್ಾ ಅವನನ್ನು ನೋಡುತ್ತಲೂ ಆಕುಲತೆಯಿಂದ ನುಡಿದಳು "ನಿನ್ನೆಯಿಂದ ನಮ್ಮ ಜಾನುವಾರುಗಳೆಲ್ಲ ಅಸ್ವಸ್ಥ; ಎಡ್ವರ್ಡನೂ ಅಸ್ವಸ್ಥ. ಇಂದು ಹಾಲು ಕರೆಯಲಿಲ್ಲ. ನೀನು ನಮಗೊಂದಿಷ್ಟು ಉಪಕಾರ ಮಾಡಬಲ್ಲೆಯಾದರೆ.... ?"

"ಏನು ಹೇಳು.... ?" ಹುಬ್ಬೇರಿಸಿ ಕೇಳಿದ ಡೇವಿಡ್.

"ಎಡ್ವರ್ಡನ್ನು ನಗರದ ಆಸ್ಪತ್ರೆಗೆ ಕರೆದೊಯ್ಯುವುದಿದೆ. ನಗರದಿಂದ ಪಶುವೈದ್ಯರನ್ನು ಕರೆತರುವ ಅಗತ್ಯವಿದೆ. ನೀನು ಸ್ವಲ್ಪ ಆಸಕ್ತಿ ವಹಿಸಿದರೂ ನಾನು ತುಂಬ ಉಪಕೃತಳಾಗುವೆ."

ಆಗ ಅವನು ಒಳಹೋಗಿ ಎಡ್ವರ್ಡನನ್ನು ಕಂಡು ಕೇಳಿ ವಿಚಾರಸ್ಮಿತನಾಗಿ ಅಂದ "ಇದಂತೂ ತುಂಬ ಆಶ್ಚರ್ಯ. ಈ ಊರಲ್ಲಿ ಇನ್ನಾರಿಗಾದರೂ ಈ ದುಷ್ಪರಿಣಾಮ ಉಂಟಾಗಿದೆಯೆ ?"

"ಈವರೆಗೆ ಅಂತಹ ಯಾವ ವರದಿಯೂ ಬಂದಿಲ್ಲ. ನಾವೇ ತೀರ ನತದೃಷ್ಟವಂತರು ಎನಿಸುತ್ತೆ ನನಗೆ."

ಬೆಟ್ಟೀಜರ್ಾ ಬಹಳ ದುಃಖದಿಂದ ಉತ್ತರಿಸಿದಳು. ಕೆಂಪು ಕೆನ್ನೆಗಳು ಮತ್ತಷ್ಟು ಕೆಂಪು ತಳೆದುವು.

"ಯಾವುದೋ ರೀತಿಯಲ್ಲಿ ವಿಷಪ್ರಾಶನ ನಡೆದಿರಬಹುದು ಎಂದರೆ ನೀನೇನು ಹೇಳುತ್ತಿ?"

"ಅದು ಇರಬಹುದಾದರೂ ಹೇಗೆ ಸಾಧ್ಯ ಎಂಬುದನ್ನೂ ಯೋಚಿಸತಕ್ಕದ್ದು."

ಡೇವಿಡ್ ಒಂದು ಗಳಿಗೆ ಯೋಚಿಸಿ ಹಸುಗಳನ್ನು ನೋಡಲು ಹಟ್ಟಿಯ ಕಡೆ ಹೋದ. ನೋಡಿದೊಡನೆಯೇ ಮೈ ಜುಂ ಎನ್ನುವಂತಹ ಸನ್ನಿವೇಶ! ಕಣ್ಣುಗಳು ಟೊಮೆಟೊ ಹಣ್ಣುಗಳಂತೆ ಕೆಂಪು ತಳೆದು ರೆಪ್ಪೆಯಿಂದ ಈಚೆಗೆ ಆತುಕೊಂಡಿವೆ. ಮೈಕೂದಲು ನಿಮಿರಿ ನಿಂತು ಅಲ್ಲಲ್ಲಿ ಹೊಪ್ಪಳಿಗಳಂತೆ ಎದ್ದಿದೆ ತೊಗಲು. ಅವು ನಿಂತೆಡೆ ನಿಲ್ಲದೆ ಮಲಗಿದೆಡೆ ಮಲಗದೆ ಅತ್ತಿತ್ತ ಉಡಿದಾಡುವ ರೀತಿ ಘೋರವಾಗಿತ್ತು. ಈ ಹಿಂದೆ ಇಂತಹ ದೃಶ್ಯವನ್ನು ಕಂಡೇ ಇರಲಿಲ್ಲ. ಹೀಗಾಗಬಹುದು ಎಂಬ ಊಹೆಯೂ ಇರಲಿಲ್ಲ. ಆಶ್ಚರ್ಯ–ಆತಂಕಗಳ ಗಣಿಯಾಗಿ ಒಳಬಂದು ಹೇಳಿದ "ನೀನು ಒಂಟಿ ಹೆಣ್ಣಾದರೂ ಈವರೆಗೆ ಸ್ವರ್ಗಲಕ್ಷ್ಮಿಯಂತಿದ್ದೆ! ನಿನ್ನ ಬಗೆಗೆ ಯಾವ ದುಷ್ಟಶಕ್ತಿ ಅಸೂಯೆ ಪಟ್ಟಿತೊ ಏನೊ. ಇಂಥ ಸಂಕಷ್ಟ ಒದಗಿಬಂತು. ಹೋಗಲಿ ಬಿಡು. ದೇವರಿದ್ದಾನೆ. ನಾನಂತೂ ನಿನ್ನ ಎಡ್ವರ್ಡ್‌ನನ್ನು ಶಹರಕ್ಕೆ ಕರೆದೊಯ್ಯಬಲ್ಲೆ. ಅಲ್ಲಿಂದ ಹಿಂತಿರುಗಿ ಕರೆತರಲು ಯಾರಾದರೂ ಇದ್ದಾರೆಯೆ?"

ಆಗ ಬರ್ಟೀವೂಸ್ಟರ್ ಉತ್ತರಿಸಿದ,

"ಆಯ್ತು, ನಾನು ಬರುವೆ. ಅತ್ತಲಿಂದ ಒಂದು ಟ್ಯಾಕ್ಸಿ ಹಿಡಿದರೆ ಪಶುವೈದ್ಯರನ್ನೂ ಕರೆತರಬಹುದು."

ಆ ಮಾತಿಗೆ ಒಪ್ಪಿ ಡೇವಿಡ್ ಅಂದ "ನಾನು ಇನ್ನು ಅರ್ಧ ಗಂಟೆಯೊಳ

ಗಾಗಿ ಎಲ್ಲಿಡೆಯೂ ಹಾಲನ್ನು ಶೇಖರಿಸಿಕೊಂಡು ಬರುವೆ. ಆ ವೇಳೆಗೆ ನೀನು ತಯಾರಿರು."

ಡೇವಿಡ್ ಉತ್ತರಕ್ಕೂ ಕಾಯದೆ ಅಲ್ಲಿಂದ ಆ ಕ್ಷಣವೇ ಹೊರಟ. ಟ್ರಕ್ಕು ಹಳ್ಳಿಯ ಹಾದಿಯಲ್ಲಿ ಧೂಳೆಬ್ಬಿಸುತ್ತ ಹೊರಟಿತು. ಕೆಂಪಗೆ ಮೇಲೆದ್ದ ಧೂಳನ್ನು ಗಮನಿಸಿದ ಬರ್ಟೀ ವೂಸ್ಟರ್ ಎಡ್ವರ್ಡ್‌ನ ಬಳಿಗೆ ಬಂದು "ನೀನು ಹಸುವಿನ ಕಾವಲಿದ್ದಾಗ ಯಾವುದಾದರೂ ವಾಹನ ಬಳಿಯಲ್ಲಿ ಹಾದು ಹೋಯಿತೇ?" ಎಂದು ಕೇಳಿದ.

ಅವನು ನರಳುತ್ತ ಅಗಾಧವಾದ ಸಂಕಟದಿಂದ "ಎರಡು ಮೂರು ಟ್ರಕ್ಕುಗಳು ಓಡಾಡಿದ್ದುಂಟು."

ಆಗ ಅವನು ಆಲೋಚನಾಸಕ್ತನಾಗಿ ಸ್ವಲ್ಪಹೊತ್ತು ಸುಮ್ಮನಿದ್ದು ಬೆಟ್ಟಿಗೆ ಅಂದ,

"ಈ ಪರಿಸ್ಥಿತಿಯನ್ನು ಗಮನಿಸಿದರೆ ಗಾಳಿಯಲ್ಲೋ ಧೂಳಿನಲ್ಲೋ ಸೇರಿದ್ದ ವಿಷ ಇವರನ್ನು ಆವರಿಸಿದೆ. ಅದು ಹೊರತು ಹೀಗೆ ಸಾಮೂಹಿಕವಾಗಿ ಸಂಕಷ್ಟಕ್ಕೊಳಗಾಗುವ ಕಾರಣವಿಲ್ಲ."

ಬೆಟ್ಟಿಯು ಮಂಡಿಗಾಲೂರಿ ಕೈಮುಗಿದುಕೊಂಡು "ನಮ್ಮನ್ನು ಈ ಸಂಕಷ್ಟದಿಂದ ಕಾಪಾಡು!" ಎಂದು ಭಗವಂತನಲ್ಲಿ ಮೊರೆಯಿಟ್ಟುಕೊಂಡಳು. ಕಣ್ಣುಗಳಲ್ಲಿ ಕಂಬನಿಯು ಕಾಲುವೆ ಧಾರಾಕಾರವಾಗಿ ಹರಿಯಿತು.

o o o o

ಬರ್ಟೀ ವೂಸ್ಟರ್ ಹಾಲಿನ ಟ್ರಕ್ಕಿನಲ್ಲಿ ಎಡ್ವರ್ಡ್‌ನನ್ನು ಶಹರಕ್ಕೆ ಕರೆದೊಯ್ದು ಪರಿಣಿತ ಡಾಕ್ಟರಲ್ಲಿ ತೋರಿಸಿದ. ಅವನ ವಿಚಿತ್ರ ರುಜೆಯನ್ನು ಕಂಡಾಗ ಡಾಕ್ಟರಿಗೂ ವಿಷಯ ನುಂಗಲಾರದ ತುತ್ತಿನಂತಾಯಿತು ಪರೀಕ್ಷಿಸುವಷ್ಟು ಪರೀಕ್ಷಿಸಿ "ಹೀಗಾಗಲು ಕಾರಣ?" ಎಂದ ಕಣ್ಣುಗಳನ್ನು ಆಶ್ಚರ್ಯ ವಿಸ್ಫೃತಗೊಳಿಸಿ.

"ನನಗೇನೂ ತಿಳಿಯದು ಡಾಕ್ಟರ್," ಹುಡುಗ ಎಡ್ವರ್ಡ್ ಬಿಕ್ಕಿದ.

"ಯಾರಾದರೂ ನಿಮ್ಮ ಮೇಲೆ ಏನನ್ನಾದರೂ ಎರಚಿದರೇ ?"

"ಆ ಸಂದರ್ಭದಲ್ಲಿ ಅಲ್ಲಿ ಬೇರೆ ಯಾರೂ ಇರಲಿಲ್ಲ. ಇದ್ದಕ್ಕಿದ್ದಂತೆಯೇ ಮೈ ಉರಿಯಲು ಆರಂಭವಾದುದು ಮಾತ್ರ ಗೊತ್ತು. ಅನಂತರ ಅದೇ ಹೆಚ್ಚುತ್ತ ಹೋಯಿತು. ನನಗಾದ ಪರಿಸ್ಥಿತಿಯೇ ಜಾನುವಾರುಗಳಿಗೂ."

ಆ ಡಾಕ್ಟರು ಬಹಳ ಹೊತ್ತು ತಲೆ ಬಿಸಿ ಮಾಡಿಕೊಂಡು ಅವನಿಗೆ ಕೆಲವು ತೀವ್ರತರವಾದ ನಂಜುಹಾರೀ ಔಷಧಿಗಳನ್ನು ಕೊಟ್ಟು ಕಳುಹಿಸಿದರು, ಬರ್ಟೀವೂಸ್ಟರ್ ಅನಂತರ ಪಶು ವೈದ್ಯಶಾಲೆಗೆ ಹೋಗಿ ಪಶು ವೈದ್ಯರನ್ನೂ ಕರೆದುಕೊಂಡು ಬ್ಲೂಮ್ಸ್ ಬರಿಯನ್ನು ತಲುಪಿದಾಗ ಹೊತ್ತು ನೆತ್ತಿಗೆ ಏರಿತ್ತು. ಹುಡುಗ ಬಹಳವಾಗಿ ಬಳಲಿದ್ದ. ಬೆಟ್ಟೀಜಾರ್ಜ್ ಬ್ರೆಡ್ಡು ಹಾಲು ಮುಂದಿಟ್ಟು ಉಪಚರಿಸಿದಳಾದರೂ ಒಂದು ಚೂರನ್ನು ಮಾತ್ರ ತಿನ್ನುವುದು ಸಾಧ್ಯವಾಯಿತು ಅವನಿಂದ. ಅವನ್ನೂ ಹೇಗೆ ಹೇಗೋ ಬಲು ಕಷ್ಟದಿಂದ ನುಂಗಿದ್ದ. ಕಣ್ಣುಗಳಲ್ಲಿ ನೀರು ಧಾರಾಕಾರವಾಗಿ ಹರಿಯಿತು.

ಪಶು ವೈದ್ಯರು ಜಾನುವಾರುಗಳ ಸ್ಥಿತಿಯನ್ನು ಕೂಲಂಕಷವಾಗಿ ಪರಿಶೀಲಿಸಿದರೂ ರೋಗದ ಲಕ್ಷಣವಾಗಲೀ ಅದರ ಮೂಲವಾಗಲೀ ಕಂಡುಬರಲಿಲ್ಲ. ಮೈಯಲ್ಲಿ ಎದ್ದ ಹೊಪ್ಪಳೆಗಳಿಗೆ ಮದ್ದು ಬಳಿದು, ಕಣ್ಣುಗಳಿಗೆ ಮೆತ್ತಿದ್ದ ಜಿಗಟನ್ನು ತೊಳೆದು ಮದ್ದು ಬಳಿದು ಹೊಟ್ಟೆಗೂ ನಂಜು ಹಾರೀ ಔಷಧವನ್ನು ಕುಡಿಸಿದರು. ಅವೂ ಸಹ ಸರಿಯಾಗಿ ಮೇವು ಉಣ್ಣದೆ–ಕುಡಿಯದೆ ತೊಳಲಿ ಬಳಲುತಿದ್ದುವು. ಒಂದೆಡೆ ಮಲಗಿ ವಿಶ್ರಾಂತಿ ಪಡೆಯುವಂತಿಲ್ಲ. ಏಳುತ್ತ ಬೀಳುತ್ತ ಏದುಸಿರು ಬಿಡುವುದನ್ನು ನೋಡಿದರೆ ಕರುಳು ಮಿಡಿಯುವಂತಹ ಸನ್ನಿವೇಶ.

ಎಲ್ಲಾ ಜಾನುವಾರುಗಳಿಗೆ ಚಿಕಿತ್ಸೆ ಮುಗಿಯಬೇಕಾದರೆ ಸಾಯಂ ಸೂರ್ಯ ಪಡುವಣ ಸೀಮಾ ಕ್ಷೇತ್ರಕ್ಕೆ ಇಳಿಯುತಿದ್ದ. ಆ ವೈದ್ಯ ತಂಡದ ಊಟ ಉಪಚಾರಕ್ಕೆಲ್ಲಾ ಬೆಟ್ಟೀ ಜಾರ್ಜ್ ಬಾಧ್ಯಸ್ಥಳಾದಳು. ಅವಳಿಗೆ ಮನಃ ಶಾಂತಿಯೂ ಇಲ್ಲ, ಕೈಗೆ ಬಿಡುವೂ ಇಲ್ಲ. ಓಡಾಡಿ ಬಳಲಿ ಆರಾಮ ಕುರ್ಚಿಯ ಮೇಲೆ ಮೈ ಚೆಲ್ಲಿದಾಗ 'ಸಾಕಪ್ಪಾ' ಎನಿಸಿತ್ತು. ಹಟ್ಟಿಯಲ್ಲಿ ತೊಳಲುವ

ಜಾನುವಾರುಗಳಿಂದ ಮನೆಯಲ್ಲಿ ನರಳುವ ಪುತ್ರನಿಂದ ಅವಳ ಜೀವ ತಲ್ಲಣಿಸಿ ಹೋಗಿ ನಿದ್ದೆಯೂ ಕಣ್ಣಿಂದ ದೂರವಾಯಿತು. ಒಮ್ಮೆ ಎಡ್ವರ್ಡನ ಕಡೆ ಗಮನ ಹರಿಸಿದರೆ ಇನ್ನೊಮ್ಮೆ ಹಟ್ಟಿಯ ಕಡೆ. ರಾತ್ರಿಯೆಲ್ಲಾ ಬಹಳವುಟ್ಟಿಗೆ ಓಡಾಟದಲ್ಲಿ ಕಳೆದುದರಿಂದ ಅವಳ ಕಣ್ಣಾಲಿಗಳೂ ದಾಸವಾಳದ ಎಸಳಿನಂತೆ ಕೆಂಪಗೆ ಕೆಂಪು ತಳೆದುವು ಮುಖದ ರಂಗು ಮಾಸಿ ಬಣ್ಣಗೆಟ್ಟಿತು. ಆಕೆ ಉತ್ತಮ ಪ್ರತಿಫಲವನ್ನು ನಿರೀಕ್ಷಿಸುತ್ತ ಶ್ರಮ ಸಾಧನೆ ಮಾಡುತಿದ್ದಳು.

ಂ ಂ ಂ ಂ

ದಿನಗಳೇನೋ ಉರುಳುತಿದ್ದುವು. ಕುಟುಂಬಕ್ಕೆ ಬಡಿದ ಸಂಕಷ್ಟ ಇನಿತೂ ಹರಿಯಲಿಲ್ಲ. ರೋಗಿಗಳು ನರಳುವುದು ಘೋರಾತಿಘೋರವಾಗಿದ್ದು ಸೇವೆಯೂ ಎಣೆಯಿಲ್ಲದಷ್ಟು ಹೊರೆಯಾಯಿತು. ಒಮ್ಮೊಮ್ಮೆ ಬರ್ಟೀ ವೂಸ್ಟರ್ ಬರುತಿದ್ದ. ಕೆಲವೊಮ್ಮೆ ಇತರೆ ನೆರೆಹೊರೆಯವರು ಬರುತಿದ್ದರು. ಆದರೆ, ಯಾರಿಗೂ ಇದರ ಮರ್ಮ ಹೊಳೆಯದೆ ಮನದಲ್ಲಿ ಆಶ್ಚರ್ಯ ಕಳವಳ ಗಳು ಮೂಡಿದುವು.

ಆರಡಿ ಎತ್ತರದ ಭವ್ಯ ಶರೀರದಲ್ಲಿ ಬಿಸಿ ನೆತ್ತರುಕ್ಕುವ ಪ್ರೌಢ ವಯಸ್ಕ ನೊಬ್ಬ ಹೀಗೆಂದ,

"ಜೆಟ್ಟೀ, ನೀನು ಒಂದು ಮಾತು ಕೇಳುವೆಯಾದರೆ...ಎಲ್ಲರಿಗೂ ಬಹಳ ಒಳ್ಳೆಯದು."

"ಏನು ಹೇಳು ?"

"ನೋಡು, ಈ ವಿಚಿತ್ರ ರೋಗ ಊರಿಗೆಲ್ಲಾ ಹರಡಿಬಿಟ್ಟರೆ ಊರಿಗೆ ಊರೇ ನಾಶ ಹೊಂದುತ್ತದೆ. ಆದ್ದರಿಂದ ನಾವು ರಕ್ಷಣೆಯ ಘಟಕವನ್ನು ಈಗಿ ನಿಂದಲೇ ಆರಂಭಿಸಬೇಕಾಗುತ್ತದೆ."

"ಅಂದರೆ ಏನು ಮಾಡುತ್ತಿ ?"

"ಈ ರೋಗದ ಸೋಂಕು ತಪ್ಪಿಸಬೇಕಾಗುತ್ತದೆ."

"ರೋಗ ಲಕ್ಷಣ ತಿಳಿದಿದ್ದರೆ ಅದನ್ನು ಪಶು ವೈದ್ಯರೇ ಮಾಡುತ್ತಿದ್ದರಷ್ಟೆ ?"

"ಅವರು ಮಾಡದಿರುವುದನ್ನು ನಾವು ಮಾಡಬೇಕಾಗುತ್ತದೆ."

"ಏನು ಮಾಡುತ್ತಿ ? ಹೇಗೆ ಮಾಡಬಹುದು ?"

"ರೋಗಿಯನ್ನೂ ರೋಗಗ್ರಸ್ತ ಪ್ರಾಣಿಗಳನ್ನೂ ಊರಾಚೆಗೆ ಸಾಗಿಸುವುದು."

"ಎಂಥ ಮಾತಾಡುತ್ತಿ ನೀನು ?"

"ಹಾಗೆನ್ನದೆ ವಿಧಿಯಿಲ್ಲ."

"ಸ್ವಲ್ಪ ಸುಮ್ಮನಿರು ನನಗೆ ಮೊದಲೇ ತಲೆಕೆಟ್ಟಿದೆ ಮತ್ತೂ ಕೆಡಿಸಬೇಡ."

ಬೆಟ್ಟೀಜರ್ಾ ಅಲ್ಲಿ ನಿಲ್ಲದೆ ಒಳಗೆ ಹೊರಟು ಹೋದಳು. ಅವಳಿಗೆ ಸಾಕಷ್ಟು ಕೆಲಸಗಳು ಕಾದಿದ್ದುದರಿಂದ ಆ ಮಾತುಕತೆಯಲ್ಲಿ ಹೊತ್ತು ಕಳೆಯುವ ವ್ಯವಧಾನವೂ ಇರಲಿಲ್ಲ. ಒಮ್ಮೆ ತನ್ನವರು ಗುಣವಾದರೆ ಸಾಕು ಎಂಬುದೊಂದೇ ಗೀಳು ಮನದಲ್ಲಿ. ಎಡ್ವರ್ಡನಿಗಾಗಿ ಮಾಡಿದ್ದ ಪಾರಿಡ್ಜ್ ಒಳಗೇ ಉಳಿದಿತ್ತು. ಅದನ್ನು ಒಯ್ದುಕೊಟ್ಟು "ಮಗೂ, ಇದಿಷ್ಟನ್ನು ಕುಡಿದುಬಿಡು ಒಲ್ಲೆ ಎನ್ನಬೇಡ" ಎಂದಳು ಆಸೆ–ಆಗ್ರಹಗಳು ತುಂಬಿದ ವಾಣಿಯಲ್ಲಿ.

ಅವನು ಮಲಗಲಾಗದುದರಿಂದ ಕುಳಿತಿರುವುದೇ ಹೆಚ್ಚು. ಬೆನ್ನು ಮುಖ ಮೈಗಳಲ್ಲಿ ಬೊಬ್ಬೆಗಳೆದ್ದು ಮರದ ತೊಗಟೆಯೆದ್ದಂತೆ ಚರ್ಮ ಸುಲಿದು ನಿಂತಿದ್ದ ದೃಶ್ಯವನ್ನು ಕಣ್ಣಿಟ್ಟು ನೋಡುವುದೂ ಭಯಾನಕವೆ! ಆ ಸ್ಥಿತಿಯಲ್ಲಿ ಆ ತಾಯಿ ಎಷ್ಟು ತೊಂದರೆಗೀಡಾಗಿದ್ದಾಳೆಂಬುದು ದೇವರಿಗೇ ಗೊತ್ತು. ಅವಳನ್ನು ಇನ್ನಿಷ್ಟು ಸಂಕಟ ಪಡಿಸಲು ಮನಸ್ಸು ಬರುವುದಿಲ್ಲ. ಒಂದುಕ್ಷಣ ನಿಟ್ಟಿಸಿ ನೋಡಿ ಬಿಸಿಯುಸಿರು ಬಿಟ್ಟು ಲೋಟಿಯನ್ನು ಕೈಗೆತ್ತಿಕೊಂಡ. ಆದರೆ, ಪ್ರಯತ್ನಪಟ್ಟರೂ ನುಂಗಲಾಗಲಿಲ್ಲ. ಹಾಗೇ ಅದನ್ನು ಮೇಜಿನ ಮೇಲಿಟ್ಟು "ಆಮೇಲೆ ಪ್ರಯತ್ನಿಸುವೆ" ಎಂದ. ಕಣ್ಣುಗಳಂಚಿನಲ್ಲಿ ಫಳಫಳನೆ ಕಂಬನಿಗಳು ತುಂಬಿ ಬಂದುವು.

ಸಂಚಾರೀ ಆಸ್ಪತ್ರೆಯವರು ಬಂದು ನೋಡಿ ಚಿಕಿತ್ಸೆ ನೀಡಿದರೂ ಕ್ಷಿಪ್ರ ಗುಣವೇನೂ ಕಾಣಲಿಲ್ಲ. ಸರ್ವೇ ಸಾಮಾನ್ಯವಾಗಿ ನಿಧಾನಗತಿಯಲ್ಲಿ ಗುಣ ಕಾಣಿಸುತಿದ್ದರೂ ಆ ನೋವು ಆ ಗೋಳು ಪರಮಾತ್ಮನಿಗೇ ಸಂವೇದ್ಯ. ಕರೆಯುವ ಹಸುಗಳಲ್ಲಿ ಒಂದು ತೊಟ್ಟು ಹಾಲೂ ಉಳಿಯಲಿಲ್ಲ. ಮೈಯ್ಯ ಗಾಯಗಳು ಸುಲಿದು ಮಾಂಸ ಖಂಡಗಳು ಕೆಂಪಗೆ ಕಾಣಿಸುತಿದ್ದುವು. ಮೇಲಾಗಿ, ಅವುಗಳಿಗೆ ನೊಣ ಇರುವೆಗಳ ಕಾಟ ಬೇರೆ. ಮತ್ತೆರಡು ದಿನಗಳ ಒಳಗಾಗಿ ಗಾಯಗಳಲ್ಲಿ ಹುಳು ಬಿದ್ದು ಅವುಗಳ ಸಂಕಷ್ಟ ಇನ್ನಷ್ಟು ಹೆಚ್ಚಿತು. ಹತ್ತು ಕೈಗಳಿಂದ ಸೇವೆ ಸಲ್ಲಿಸಿದರೂ ಮುಗಿಯದಂತಹ ಕಠಿಣ ಪ್ರಸಂಗ. ಆದರೆ ಆಕೆ ಒಬ್ಬಳೇ.

"ಬೆಟ್ಟೀಜರ್ಾ, ಇಲ್ಲಿ ಕೇಳು ಇನ್ನಂತೂ ಈ ರೋಗಿಗಳನ್ನು ಇಲ್ಲಿ ಇಟ್ಟು ಕೊಳ್ಳುವುದು ಸೂಕ್ತವಲ್ಲ. ಇದು ಅಂಟುರೋಗವೇ ಇರಲಿ, ಏನೇ ಇರಲಿ, ಈ ವಾಸನೆ ಈ ಗಲೀಜು ನೆರೆಹೊರೆಯವರಿಗೆ ಹಿಂಸೆ! ಇನ್ನು ಇದು ಯಾವ ರಾದ್ಧಾಂತಕ್ಕೆ ದಾರಿ ಮಾಡುವುದೋ ಏನೋ. ತೀರ ಹದಗೆಡುವ ಮೊದಲೇ ತೊಲಗಿಸಿ ಕೊಳ್ಳುವುದು ಬುದ್ಧಿವಂತಿಕೆ!"

"ನೋಡು, ಇದರಿಂದ ನಿನಗೇ ತೊಂದರೆ ಮುಂದೆ ನೀನೇ ಸಂಕಷ್ಟ ಕ್ಕೊಳಗಾಗುತ್ತಿ.

"ಈ ಹಿತವಾದ ನಿನ್ನ ಒಳ್ಳಿತಕ್ಕಾಗಿಯೇ, ಯೋಚಿಸಿ ನೋಡು."

"ಪಶುಗಳಲ್ಲಿ ಯಾವುದಾದರೂ ಬದುಕುವ ನಂಬಿಕೆಯಿಲ್ಲ. ನಿನ್ನ ಎಡ್ವರ್ಡನನ್ನು ಆಸ್ಪತ್ರೆಗೆ ಸೇರಿಸಿದರೆ ಒಂದು ಬಗೆಯಲ್ಲಿ ತಲೆನೋವು ತಪ್ಪು ತ್ತದೆ ಪಶುಗಳ ಆಸೆ ಬಿಟ್ಟುಬಿಡು."

"ನಾವಿಷ್ಟೊಂದು ಮಂದಿ ಹೇಳುತ್ತಿರುವುದು ನಿನ್ನ ಸಲುವಾಗಿಯೆ ಇದನ್ನು ನೀನು ಅನ್ಯಥಾ ಭಾವಿಸಬಾರದು."

"ನೀನು ನಿನ್ನ ನೇರಕ್ಕೆ ನೋಡಿದರೆ ಸಾಲದು. ಎಲ್ಲರ ಹಿತವನ್ನೂ ಗಮನದಲ್ಲಿರಬೇಕು. ಈ ಕೆಟ್ಟ ರೋಗ ಮನೆಮನೆಗೂ ಹರಡಿದರೆ ಏನು ಗತಿ ಊರಿಗೆ ಊರೇ ನಾಶ ಹೊಂದುವುದು ಖಚಿತ."

"ನೀನು ಇಂದೇ ಕಂಟ್ರೀಕೌನ್ಸಿಲರನ್ನು ನೋಡುವುದು ಒಳ್ಳೆಯದು. ಬಹುಶಃ ಈವರೆಗೆ ಯಾರೂ ಅಲ್ಲಿಗೆ ದೂರನ್ನು ಒಯ್ದಿಲ್ಲವೆಂದು ತೋರುತ್ತದೆ. ಅಲ್ಲದಿದ್ದಲ್ಲಿ ನಿನಗೆ ಅವರೇ ನೋಟೀಸು ಕಳುಹಿಸುತಿದ್ದರು. ಯಾರಾದರೂ ಬಂದು ಹೊರಹಾಕುವ ಮೊದಲೇ ನೀನು ವಿಚಾರ ಮಾಡುವುದು ಒಳ್ಳೆಯದು."

ಬಹುತೇಕ ಮಂದಿ ಹೇಳಿದ ಮಾತನ್ನು ಲಕ್ಷಿಸದಿರುವುದು ಬುದ್ಧಿವಂತಿಕೆಯಲ್ಲ."

ಬೆಟ್ಟೀಜರ್ಾ ಬೆರಗಾಗಿ ಒಮ್ಮೆ ಎಲ್ಲರನ್ನೂ ನೆಟ್ಟ ದೃಷ್ಟಿಯಿಂದ ನೋಡಿದಳು. ಸ್ವಲ್ಪವುಟ್ಟಿಗೆ ಊರ ಮಂದಿಯೆಲ್ಲಾ ಅಲ್ಲಿ ನೆರೆದಂತಿತ್ತು. ಹೆಂಗಸರೂ ಗಂಡಸರೂ ಕೂಡಿಯೇ ಬಂದಿದ್ದಾರೆ. ಯಾರ ಮುಖದಲ್ಲೂ ಕಿಂಚಿತ್ ಸಮಾಧಾನದ ಖಳೆಯಿಲ್ಲ. ಅಸಮಾಧಾನ–ಅಶಾಂತಿಗಳು ವ್ಯಾಪಕವಾಗಿ ಹರಡಿದ ಅವರ ಮುಖವನ್ನು ನೋಡಿದ ಮೇಲೆ ಅವಳಿಗೆ ಏನು ಉತ್ತರಿಸಬೇಕೋ ಹೊಳೆಯಲಿಲ್ಲವಾದರೂ ಹೃದಯ ಸಂಪುಟ ರೋಷ–ದುಃಖ–ಸಂಕಟಗಳಿಂದ ತುಂಬಿ ಹೋಗಿ ಸಿಡಿದೊಡೆಯಲಿರುವ ದಡಾಕಿಯಂತಾಯಿತು. ಬುಸುಗುಡುತ್ತಲೇ ಹೇಳ ತೊಡಗಿದಳು,

"ನೀವೆಲ್ಲಾ ಹೀಗೆ ಬಂದು ಒತ್ತಾಯ ಪಡಿಸುವುದರಲ್ಲಿ ತುಂಬಿರುವುದು ಸ್ವಾರ್ಥತೆಯೇ ಹೊರತು ಬೇರೊಂದಿಲ್ಲ. ಸತ್ತವರನ್ನು ಹೊರಗೊಯ್ಯುವುದು ಸಹಜ. ಇದ್ದವರನ್ನು ಹೊರಹಾಕುವುದು ಮಾನವೀಯತೆಯಲ್ಲ. ನೀವೇನಾದರೂ ನನ್ನ ಸಹಾಯಕ್ಕೆ ಹೀಗೆ ಒಟ್ಟುಗೂಡಿ ಬಂದಿದ್ದರೆ ಎಷ್ಟೊಂದು ಬೆಲೆಯಿತ್ತು? ಎಷ್ಟೊಂದು ಗೌರವವಿತ್ತು?....ಎಷ್ಟೊಂದು ಉಪಕಾರ ಸ್ಮರಣೆ ಮಾಡಬಹುದಿತ್ತು? ಈಗ ಇದಕೇನೆನ್ನಬೇಕು? ದಯಾದಾರಿದ್ರ್ಯದಿಂದ ಕೂಡಿದವರು ಮನುಷ್ಯರೆ. ನೀವೀಗ ನಿಮ್ಮ ನಿಮ್ಮ ಕೆಲಸ ಕಾರ್ಯಗಳನ್ನು ನೋಡಿಕೊಂಡು ನೆಮ್ಮದಿಯಿಂದಿರಿ ಎಂಬುದೇ ನನ್ನ ಸಲಹೆ."

ಉಬ್ಬಿದ ಎದೆ ಏರಿಳಿಯುತಿತ್ತು. ಮನೋಮಂಡಲದಲ್ಲಿ ಬಿರುಗಾಳಿ ಬೀಸುತಿತ್ತು. ಇನ್ನೊಂದು ಕ್ಷಣವೂ ಅಲ್ಲಿ ನಿಂತು ಮಾತಾಡುವಷ್ಟು ಸಮಯ ಸಮಾಧಾನ ಎರಡೂ ಉಳಿಯಲಿಲ್ಲ ಅವಳಿಗೆ.

"ನೋಡು, ಇದರ ದುಷ್ಪರಿಣಾಮವನ್ನು ನೀನು ಅನುಭವಿಸಲೇಬೇಕು. ತಿಳಿದಿರು ಇದು ಉತ್ಪ್ರೇಕ್ಷೆಯಲ್ಲ."

ಬಿಸಿ ರಕ್ತದ ತರುಣ ಉಚ್ಚ ದನಿಯಲ್ಲಿ ಎಚ್ಚರಿಸಿದಾಗ ನೀಲಿಗಣ್ಣುಗಳಲ್ಲಿ ಕ್ರೋಧದ ಛಾಯೆ ದಟ್ಟೈಸಿ, ಮುಖಬಿಂಬ ಕೆಂಪಗೆ ಕೆಂಪು ತಳೆದಿತ್ತು. ಆತ ಉಗ್ರನಾಗಿ ಕಾಣಿಸುತಿದ್ದ. ಜೆಟ್ಟೀಜರ್ಾ ಅಷ್ಟೇ ಉಚ್ಛದನಿಯಲ್ಲಿ ಮತ್ತೆ ಬಿತ್ತರಿಸಿದಳು ಎದೆಯ ನೋವನ್ನೆಲ್ಲಾ ಒಮ್ಮೆಗೇ ಹೊರಹಾಕುವಂತೆ.

"ಕೇಳು, ಯಾವುದು ವಿಧಿ ನಿಯಮವೋ ಅದನ್ನು ನಾನೂ ತಪ್ಪಿಸ ಲಾರೆ, ನೀನೂ ತಪ್ಪಿಸಲಾರೆ. ಏನು ಆಗಬೇಕೋ ಅದು ಆಗಿಯೇ ತೀರುತ್ತೆ. ಆಗಲಿ ಬಿಡು. ಅದಕ್ಕಾಗಿ ಕ್ರೋಧವೇಕೆ?"

ಬಂದವರೆಲ್ಲಾ ಕ್ರೋಧತಾಪತಪ್ತರಾಗಿ ಶಪಿಸುತ್ತ ಹಿಂದಿರುಗಿದರೂ ಸೇಡಿನ ಮನೋಭಾವ ಹೆಜ್ಜೆಹೆಜ್ಜೆಯಲ್ಲೂ ವರ್ಧಿಸಿ ವಿಷಯ ಗಂಭೀರ ವಾಗುತಿತ್ತು.

೦ ೦ ೦ ೦

ಜೆಟ್ಟೀಜರ್ಾ ಎಲ್ಲರನ್ನೂ ಒಂದೇ ಮಾತಿನಲ್ಲಿ ವಿರೋಧಿಸಿದಳೇನೋ ಹೌದು. ಆದರೆ, ಹತ್ತೂ ಕಡೆಯಿಂದ ದಿಗ್ಬಂಧನವೇ ಆಯಿತು ಅವಳಿಗೆ. ಯಾರ ಸಹಾಯ ಸಂಪರ್ಕಗಳೂ ಉಳಿಯಲಿಲ್ಲ. ಎಡ್ವರ್ಡನನ್ನು ಶಹರಕ್ಕೆ ಕರೆದೊಯ್ದು ಆಸ್ಪತ್ರೆಗೆ ಸೇರಿಸಿದಳಾದರೂ ಪಶುವರ್ಗದ ಪೋಷಣೆ ನಿರ್ವಹಿಸ ಲಾರದ ಹೊರೆಯಾಯಿತು. ಉಗ್ರಾಣದಲ್ಲಿ ಅವುಗಳಿಗೆ ಅಗತ್ಯವಾದ ಆಹಾರ ಶೇಖರಣೆಯಿದ್ದುದು ಪರಮೋಪಕಾರ. ಆದರೆ, ಸಹಾಯ ಹಸ್ತಗಳ ಕೊರತೆ ಯಿಂದ ಆಕೆ ತಲ್ಲಣಿಸಿದರೂ ಧೃತಿಗೆಡದೆ ತನ್ನಿಂದಾದಷ್ಟು ಸೇವೆಯನ್ನು ನಿಷ್ಠೆ ಯಿಂದ ಸಲ್ಲಿಸುತ್ತಿರುವಾಗಲೇ ಕಂಟ್ರಿ ಕೌನ್ಸಿಲ್ಲಿನ ಪ್ರಭೃತಿಗಳು ಟ್ರಕ್ಕಿನಲ್ಲಿ ಬಂದಿ ಳಿದರು. ಅವರು ಕೂಡಲೇ ಕೊಟ್ಟಿಗೆಗೆ ಹೋಗಿ ನೋಡಿದರೆ ಮುಖ ಮೈ ಗಳಲ್ಲಿ ಜೆವರನ್ನು ಬಸಿಯುತ್ತ ಅವಳು ಪಡುತಿದ್ದ ಎಣೆಯಿಲ್ಲದ ಸಂಕಷ್ಟ ಎಂತಹ ಕಲ್ಲೆದೆಯಾದರೂ ಕರಗಿಸುವಂತಿತ್ತು. ಅವಳು ಆರೈಕೆಯಲ್ಲಿ ತೀವ್ರ

ತನ್ಮಯಳಾಗಿದ್ದುದರಿಂದ ಇವರನ್ನು ಗಮನಿಸಲಿಲ್ಲವಾಗಿ ನಾಲ್ವರೂ ಮೈಮರ ವಟ್ಟಂತೆ ನೋಡುತ್ತಲೇ ಇದ್ದಾರೆ. ಸದ್ದಿಲ್ಲದೆ ಐದು ನಿಮಿಷಗಳು ಉರುಳಿ ಹೋದುವು. ಅನಂತರ ಆಕೆ ಪ್ರಸಂಗವಶಾತ್ ಇತ್ತ ತಿರುಗಿದಾಗ ಅವರನ್ನು ಕಂಡು ಒಂದೆರಡು ಕ್ಷಣ ನಿಂತಲ್ಲೆ ನಿಂತು ನೋಡಿ ಅನಂತರ ನಿಧಾನಗತಿಯಲ್ಲಿ ಮುಂದುವರಿದಳು. ಮನಸ್ಸು ದುಃಖ ದುಗುಡಗಳ ವಶೀಭೂತವಾಗಿದ್ದುದ ರಿಂದ ಮಾತಾಡಲೂ ಅವಳಿಗೆ ಮನಸ್ಸು ಬರಲಿಲ್ಲ.

ಪಶುಗಳ ವ್ರಣದ ವಾಸನೆ ಪರಿಸರವನ್ನೆಲ್ಲಾ ಆವರಿಸಿ, ಅಲ್ಲಿ ಒಂದು ಕ್ಷಣ ನಿಲ್ಲುವುದೂ ಸಹ ಕಷ್ಟವೇ ಎಂಬಂತೆ ಘೋರವಾದ ಸನ್ನಿವೇಶ. ಅವಳು ಮುಂಬ ರಿದುದೇ ಸಾಕೆಂದು ಎಲ್ಲರೂ ಅಲ್ಲಿಂದ ಕಾಲ್ತೆಗೆದರು. ಹಟ್ಟಿಯ ಆವರಣವನ್ನು ದಾಟಿ ಹೊರ ಅಂಗಣಕ್ಕೆ ಕಾಲಿಟ್ಟ ಮೇಲೆ ಬರ್ಟೀ ವೂಸ್ಟರ್ ಅಲ್ಲಿ ಪ್ರತ್ಯಕ್ಷ ನಾದ. ಬೆಟ್ಟೀ ಜಾರ್ಜ್ ನೀಳವಾದ ನಿಟ್ಟುಸಿರು ಬಿಟ್ಟು ನುಡಿದಳು "ದೇವರು ನನ್ನ ಮೇಲೆ ನಿರ್ದಯನಾಗಿದ್ದಾನೆಂಬುದು ನನಗೆ ಗೊತ್ತು. ದಯವಿಟ್ಟು ನೀವೂ ನಿರ್ದಯರಾಗಬೇಡಿ. ಕೈಮುಗಿದು ಕೇಳಿಕೊಳ್ಳುವೆ."

ದನಿ ಗದ್ಗದಿಸಿದರೂ ಕಂಬನಿಯೊಸರದಂತೆ ಎಚ್ಚರ ವಹಿಸಿದಳು, ಆ ಮುಹೂರ್ತದಲ್ಲಿ.

ಕಂಟ್ರಿ ಕೌನ್ಸಿಲರ್ ಸಮಾಧಾನದಿಂದಲೇ ಮಾತು ಆರಂಭಿಸಿದ,

"ನೀನೊಬ್ಬಳೇ ಇಷ್ಟೊಂದು ಕಷ್ಟನಿರ್ವಹಣೆ ವಹಿಸುವುದು ಸಹ ಅಸಾಧ್ಯ. ಹೀಗೇ ಆದರೆ ನೀನೂ ಸಹ ಈ ಕಾಹಿಲೆಗೆ ತುತ್ತಾಗುವವಳೇ."

"ಹೌದು. ಮೇಡಂ ನೀನು ಅದನ್ನೂ ಸಹ ಯೋಚಿಸಬೇಕಾದದ್ದೆ."

"ಒಂದು ವೇಳೆ ನಿನ್ನ ಆರೋಗ್ಯವೂ ಹದಗೆಟ್ಟರೆ ಇಲ್ಲಿನ ವ್ಯವಸ್ಥೆ ಹೇಗೆ? ಇದನ್ನೆಲ್ಲಾ ಯೋಚಿಸುವಷ್ಟು ತಾಳ್ಮೆ ತೆಗೆದುಕೊಂಡರೆ ಮುಂದೇನು ಎಂಬು ದನ್ನು ನಾವು ಯೋಚಿಸೋಣ."

"ನಾವು ಹೇಳುತ್ತಿರುವುದೆಲ್ಲಾ ನಿನ್ನ ಹಿತಕ್ಕೆ ಎಂಬುದನ್ನು ಎಂದೂ ನಿರಾಕರಿಸಬೇಡ."

ಅವರು ಹೇಳಿದ್ದೆಲ್ಲಾ ಕಿವಿಗೆ ಬಿತ್ತು. ಅವಳು ಮರವಟ್ಟಂತೆ ನಿಂತೇ ಇದ್ದಾಳೆ. ಒಂದೆರಡು ಕ್ಷಣ ತನ್ನಲ್ಲೇ ಯೋಚಿಸಿದನಂತರ ಎಲ್ಲರಿಗೂ ಒಂದೇ ಮಾತಿನಲ್ಲಿ ಉತ್ತರಿಸಿದಳು,

"ನಿಮ್ಮೆಲ್ಲರ ಸಲಹೆಗಳಿಗೆ ತುಂಬ ಧನ್ಯವಾದಗಳು!"

ಮರುಕ್ಷಣದಲ್ಲಿ ಚಿತ್ರಭಿತ್ತಿಯ ಮೇಲೆ ಕವಿ ವಚನ ಮೂಡಿ ನಿಂತಿತು,

"Life is mostly froth and bubble,
Two things stand like stone,
Kindness is another's trouble,
Courage in your own."

o o o o

"ನೀನು ದಿಟ್ಟೆ. ನಿನ್ನ ಧೈರ್ಯಕ್ಕೆ ಯಾರಾದರೂ ಮೆಚ್ಚಬಹುದು ನಿನ್ನಂತಹವರು ನೂರಕ್ಕೊಬ್ಬರು ಸಿಗುವುದು ಕಷ್ಟ. ಆದರೂ ಸಹ, ಈ ಹುಚ್ಚು ಸಾಹಸ ಸಂಕಷ್ಟಕ್ಕೆ ನಾಂದಿ!"

"ಈ ನೋವು ಇಂದು ನಾಳೆಗೆ ಮುಗಿಯುವಂತಾದ್ದಲ್ಲ. ಇನ್ನೂ ಎಷ್ಟು ಕಾಲ ಈ ರೀತಿ ಗೋಳಾಡಬೇಕೋ ದೇವರಿಗೇ ಗೊತ್ತು. ಇಂಥ ಕಠಿಣ ಪ್ರಸಂಗದಲ್ಲಿ ತಲೆಯೊಡ್ಡುವುದು ಎಷ್ಟು ಕಷ್ಟ ಎಂಬುದು ನಿನಗಾಗಲೇ ಅರಿವಾಗಿದೆ. ಈಗಲಾದರೂ ಯೋಚಿಸಿ ನೋಡು, ನೋವಿಗೆ ಸಾವೇ ಶಮನ."

"ಅದನ್ನು ಖಂಡಿತ ಇಲ್ಲವೆನ್ನಲಾರೆ. ಆದರೆ, ದೈವದತ್ತವಾಗಿ ಬಂದಿದ್ದರೆ ಮಾತ್ರ."

"ಎಷ್ಟೋ ಸಂದರ್ಭಗಳಲ್ಲಿ ದೈವದತ್ತವಾಗಿ ಬರುತ್ತೆಂದು ನಂಬುವುದು ಸಾಧ್ಯವಿಲ್ಲ; ನಾವೇ ಉಂಟು ಮಾಡ ಬೇಕಾಗುತ್ತೆ, ನಮ್ಮನಮ್ಮ ಅನುಕೂಲಕ್ಕನುಗುಣವಾಗಿ."

"ಹಾ, ಅದು ಮಾನವೀಯತೆಯಲ್ಲ."

"ತಾಳು, ನಾವು ನಿರ್ವಹಿಸುವ ಎಷ್ಟೋ ವಿಚಾರಗಳಲ್ಲಿ ಖಂಡಿತ ಮಾನ ಮೀಯತೆ ಇರುವುದಿಲ್ಲ. ಅದನ್ನು ತಿಳಿದೂ ತಿಳಿಯೂ ಆಚರಿಸುತ್ತಲೇ ಇರುತ್ತೇವೆ. ಇದಕ್ಕೇನೆನ್ನುವೆ ? ಇದನ್ನೂ ಸಹ ಅಂತಹ ಪಾತ್ರಗಳಲ್ಲಿ ಒಂದು ಎಂದೇ ತಿಳಿ."

ವಿಷಯ ಮನಸ್ಸಿನ ಮೌನ ಶಿಲೆಯ ಮೇಲೆ ರಪ್ಪನೆ ಅಪ್ಪಳಿಸಿದಾಗ ಕೆಲವು ಕ್ಷಣ ಮನಃತರಂಗಗಳು ಸ್ತಬ್ಧವಾದುವು. ಹೃದಯ ತಂತುಗಳಲ್ಲಿ ಸುಡುನೆತ್ತರು ಝಿಲ್ಲನೆ ಹರಿದಾಡಿತು. ಸ್ವಲ್ಪ ಹೊತ್ತಿನನಂತರ ಬಿಸಿಯುಸಿರನ್ನು ಹೊರಹಾಕಿ,

"ಏನು ಮಾಡಬೇಕೆನ್ನುವುದು ನಿಮ್ಮ ಉದ್ದೇಶ ?"

"ಒಂದಿಷ್ಟು ವಿಷವೂಡಿಸಿದರಾಯ್ತು. ಅನಂತರ ಹೊಸರಾಸುಗಳನ್ನು ತರಬಹುದು."

"ಈಗೀಗ ಗಾಯಗಳು ಒಣಗುತ್ತಿವೆ ಎಂಬುದು ನಿಮ್ಮ ಗಮನಕ್ಕೆ ಬಂದಿದೆಯೇನು ?"

"ಬಂದಿದೆ. ಆದರೆ, ಅವು ಚೇತರಿಸಿಕೊಂಡು ಆರೋಗ್ಯ ಜೀವನಕ್ಕೆ ಕಾಲಿಡಬೇಕಾದರೆ ಇನ್ನೂ ಎಷ್ಟು ಕಾಲ ಬೇಕು ? ಎಂಬುದರ ಚಿಂತೆ ನಿನಗಿದೆಯೇನು ಮೊದಲು ಹೇಳು ?"

"ಇದೆ ಅದರ ಹೊಣೆ ನನ್ನದು. ಅದಕ್ಕಾಗಿಯೇ ಟೊಂಕ ಕಟ್ಟಿದ್ದೇನೆ. ಒಳ್ಳಿತು ಕೆಡುಕು ಭಗವಂತನಿಗೆ ಸೇರಿದ್ದು."

"ಹಾಗಾದರೆ ನೀನು ನಮ್ಮ ಮಾತಿಗೆ ಒಪ್ಪುವುದಿಲ್ಲವೆಂದಾಯ್ತು. ಇದು ಸಾಂಕ್ರಾಮಿಕವಾಗಿ ಎಲ್ಲೆಡೆ ಹರಡಿದ ಪಕ್ಷದಲ್ಲಿ ಕಂಟ್ರಿ ಕೌನ್ಸಿಲ್ ವಿಧಿಸಿದ ದಂಡವನ್ನು ನೀನು ತೆರಬೇಕಾಗುತ್ತದೆ."

ಅವಳು ನಕ್ಕುಬಿಟ್ಟಳು.

ಬಂದವರೆಲ್ಲಾ ತೀವ್ರತರ ಅಸಮಾಧಾನದಿಂದ ಹೊರಟು ಹೋದರು.

ದಿನಗಳು ಉರುಳಿದಂತೆ ಕುರಿಗಳು ಘೋರತರವಾದ ವ್ರಣಗಳಿಂದ ನರಳಿ ನರಳಿ ಸತ್ತುವು. ಪಶುಗಳಲ್ಲಿ ಕೆಲವು ಕೈಬಿಟ್ಟು ಹೋದರೂ ಮೈಯಲ್ಲಿ ತ್ರಾಣವಿದ್ದ ಕೆಲವು ನಿಧಾನವಾಗಿ ಚೇತರಿಸಿಕೊಂಡುವು. ಬರ್ಟೀ ಮಾಸ್ಟರ್ ಆಗಾಗ

ಒಂದು ಸ್ವಲ್ಪ ನೆರವು ನೀಡುತಿದ್ದ. ಮತ್ತೆ ಯಾರೂ ಅತ್ತ ಸುಳಿಯುಲಿಲ್ಲ. ನಿಧಾನಗತಿಯಲ್ಲಿ ಚೇತರಿಸಿಕೊಳ್ಳುತಿದ್ದ ಎಡ್ವರ್ಡ್, ಶಹರದ ಆಸ್ಪತ್ರೆಯಲ್ಲಿ. ಏನೇ ಆಗಲಿ, ತನ್ನ ಶ್ರಮ ಫಲಕಾರಿಯಾಗಿದೆ ಎಂಬ ಸಮಾಧಾನ ಬೆಟ್ಟೀ ಜಾನ್ನಳಿಗೆ.

o o o o

ಕೊನೆಯ ಹಂತವಾಗಿಯೋ ಏನೋ, ಆಸ್ಪತ್ರೆಯಿಂದ ರೋಗ ಪರೀಕ್ಷೆಯ ಫಲಿತಾಂಶ ಹೊರ ಬಿದ್ದಾಗ ಎಲ್ಲರೂ ಆಶ್ಚರ್ಯಚಕಿತರಾದರು. ಸಮರಾನಿಲ ಚೆಲ್ಲಿ ಈ ಅನಾಹುತ ಸಂಭವಿಸಿದೆ. ಸಮರಾನಿಲವನ್ನು ವಿಮಾನದಲ್ಲಿ ಅಥವಾ ಟ್ರಕ್ಕಿನಲ್ಲಿ ಕೊಂಡೊಯ್ಯುವಾಗ ಅದರಲ್ಲಿ ಕೆಲವಂಶ ಕೈತಪ್ಪಿ ಚೆಲ್ಲಿರಬಹುದು. ಅಥವಾ ಯಾರೋ ಧೂರ್ತರು ಬೇಕೆಂತಲೇ ಚೆಲ್ಲಿದ್ದರೂ ಇರಬಹುದು. ಇದಂತೂ ಯುದ್ಧವಾದಿಗಳ ಕೈವಾಡವೇ ಹೊರತು ಯಾವ ಸಾಂಕ್ರಾಮಿಕ ರೋಗವೂ ಅಲ್ಲ. ಸರಕಾರ ಬೆಟ್ಟೀ ಜಾನ್ಳಿಗೆ ಒಂದು ಬಿಲಿಯನ್ ಡಾಲರ್ ಪರಿಹಾರ ಕೊಡಬೇಕು.

— o —

ಕುಲದೀಪಕರು

೯

ಪಯಃ ಪಾನಂ ಭುಜಂಗಾನಾಂ
ಕೇವಲಂ ವಿಷವರ್ಧನಂ:

...ಎರಡು ಮೂರು ದಿನಗಳಿಂದ ಒಂದೇ ಸಮನೆ ಜಿಟಿ ಜಿಟಿ ಸುರಿಯುವ ಮಳೆಯ ಧಾರಾವರ್ಷ...ಅಶೀ ಶೀತಲ ಶಾಂತಿಯ ವಾತಾವರಣದ ಸ್ವಚ್ಛಂದ ಅವತರಣ.

ಹೊರಜಗತ್ತು ಎಷ್ಟು ತಣ್ಣಗಿತ್ತೋ ಅಷ್ಟೇ ಬೆಂಕಿಯ ಮುದ್ದೆ ಒಳ ಜಗತ್ತು. ನರಕಯಾತನೆಯ ಪ್ರತಿಮಾ ರೂಪ. ದುಃಖ–ಸಂಕಟ–ಸಂಕಷ್ಟ ಗಳ ರಣಗೋಳು. ಈ ಬಾಳು ಬದುಕು ಬೇಡ ಎನಿಸುವಷ್ಟು ಕಿನಿಸಿಗೆ. ಮಕ್ಕಳಿಲ್ಲ ದಿದ್ದರೆ ನಿಜವಾಗಿಯೂ ಬೇಡವೇ ಬೇಡವಾಗಿತ್ತು.

ಆದರೆ....

ಭಗವಂತ ನಿಷ್ಕರುಣಿ. ಆತನಿಗೆ ಎಷ್ಟು ಮೊರೆಯಿಟ್ಟರೂ ವ್ಯರ್ಥವೇ. ಕಣ್ಣು ಕುರುಡು–ಕಿವಿಯೂ ಕಿವುಡು...ಶಾಂತಿಯ ಆಲೋಚನಾ ತೇಜಿ ಅಲ್ಲಿಗೇ ನಿಂತು ಹೋಯಿತು.

ಬೆಳಗಿನಿಂದ ರಾಯರ ಜಮೀನಿನಲ್ಲಿ ದುಡಿದು ಮಳೆಗಾಳಿಯಲ್ಲಿ ಮೈ ಸೋತು ಮುದುಡಿ ಚಳಿಯಿಂದ ನಡುಗುತ್ತ ಮನೆಯ ಹಾದಿ ಹಿಡಿದಿದ್ದಾಳೆ ಶಾಂತಿ. ಮಳೆಗಾಗಿ ಹೊದ್ದ ಗೋಣಿಯ ತಾಟು ನೆನೆದು ಮಣಭಾರವಾಗಿತ್ತು. ಕಾಲೆಳೆದುಕೊಳ್ಳುತ್ತ ಕೆಸರಿನ ಹಾದಿ ಕಳೆದು ಮನೆಯ ಹತ್ತಿರ ಹತ್ತಿರ ಬಂದಾಗ

ನೋಟ ಸಹಜವಾಗಿ ಬಯಲಿನ ಕಡೆ ಹರಿಯಿತು. ದಿನವೂ ಗೆಳೆಯರ ತಂಡದಲ್ಲಿ ಕಂಡು ಬರುತಿದ್ದ ಶ್ಯಾಮು ಇಂದಿಲ್ಲ. ಇಂದು, ಮಳೆಯಾದ್ದರಿಂದ ಹುಡುಗರ ತಂಡವೂ ಕಂಡು ಬರಲಿಲ್ಲವೇನೋ. ಸುತ್ತಮುತ್ತಲಿನ ಮನೆಗಳ ಜಗಲಿಯ ಕಡೆಗೂ ಹರಿಯಿತು ಕುತೂಹಲಿತ ದೃಷ್ಟಿ. ಉಹೂ, ಎಲ್ಲಿಯೂ ಕಾಣಿಸುತ್ತಲೇ ಇಲ್ಲ. ಅಂಗಣವನ್ನು ದಾಟಿದರೆ ಮನೆ. ಆ ಮನೆಯೆಂದರೆ ಮನಸ್ಸಿಗೆ ಜಿಗುಪ್ಸೆ....ಅದನ್ನು ಬಿಟ್ಟು ಇರುವಂತೆಯೂ ಇಲ್ಲ. ನೆಚ್ಚಿ ಬಾಳುವಂತೆಯೂ ಇಲ್ಲ. ಇಂಥ ಜಂಜಡಕ್ಕಿಂತ ಜೀವನವನ್ನೇ ಕೊನೆಗಾಣಿಸುವುದು ಲೇಸು ಎನ್ನುತ್ತದೆ ಅಂತರಾತ್ಮ. ಎಂಟನೇ ಇಯತ್ತೆಯವರೆಗೆ ಕಲಿತ ಹೆಣ್ಣು ಮುಂದೆಯೂ ಓದುವ ಆಸೆ ಬೆಟ್ಟದಷ್ಟಿತ್ತು. ಆದರೆ, ಅಪ್ಪ ಓದು ವಿದ್ಯೆಗೆ ಎಳ್ಳು ನೀರು ಬಿಡಿಸಿ, ಆಸೆಯ ಕುಡಿಯನ್ನು ಮೊಳಕೆಯಲ್ಲೇ ಚಿವುಟಿ ಸಂಸಾರ ಸಾಗರಕ್ಕೆ ತಳ್ಳಿಬಿಟ್ಟ. ತಾನೊಬ್ಬಳೇ ಆಗಿದ್ದಿದ್ದರೆ ಜೀವದಾಸೆ ಇರುತ್ತಿರಲಿಲ್ಲ. ಹೆತ್ತ ಎರಡು ಮಕ್ಕಳಿಗಾಗಿ ಈ ಬದುಕು....ದುಃಖ ದುಗುಡಗಳ ಬೆಂಕಿಯಲ್ಲಿ ಬೇಯುತ್ತಲೇ ಇತ್ತು ಮನಸ್ಸು.

ಶಾಂತಿ ನಡೆಯಲಾರದೇ ನಡೆದು ಹುಲ್ಲಿನ ಜೊಂಡು ಮುಂಬೆಳೆದು ಹರಡಿದ್ದ ಅಂಗಣವನ್ನು ಹಾಯ್ದು ಮನೆಯ ಮೆಟ್ಟಲೇರುವ ಮುನ್ನ ಸುತ್ತಮುತ್ತಲೂ ಮತ್ತೊಮ್ಮೆ ಪಕ್ಷಿನೋಟ ಬೀರಿದಳು. ಮಧ್ಯಾಹ್ನ ಮೂರು ಗಂಟೆಗೇ ಶಾಲೆಯಿಂದ ಹಿಂದಿರುಗಬೇಕಾಗಿದ್ದ ಶ್ಯಾಮು ಈ ಪರಿಸರದಲ್ಲೆಲ್ಲೂ ಕಾಣಿಸುತ್ತಲೇ ಇಲ್ಲ. ತಗ್ಗಿನ ಮೈದಾನದ ಕಡೆ ಹರಿಯಿತು ದೃಷ್ಟಿ. ಎಲ್ಲಾ ಮಕ್ಕಳೂ ಆಡುವುದು ಅಲ್ಲೇ. ಇವನ ದಂಡು ಮಾತ್ರ ಕಣ್ಣಿಗೆ ಬೀಳಲಿಲ್ಲ. ಅವನಾದರೂ ಸರಿಯಾಗಿದ್ದಿದ್ದರೆ ಮುಂದೆ ಅವನನ್ನು ಆಶ್ರಯಿಸಬಹುದಾಗಿತ್ತು ಎಂಬ ಯೋಜಿತ ಆಸೆ ಮನಸಲ್ಲಿ. ಈಗೀಗ ಅದೂ ಮಣ್ಣುಗೂಡುತ್ತಿದೆ. ಅವನು ತನ್ನ ಮಾತನ್ನು ಕೇಳುವವನೇ ಅಲ್ಲ. ಓರಗೆಯವರೊಂದಿಗೆ ಪೋಲಿ ಅಲೆಯುವುದೇ ದಿನಚರಿ. ಉಪಾಧ್ಯಾಯರಿಂದಲೂ ದೂರು ಬಂದಿದೆ. ಅತ್ಯಂತ ಭಂಗ ಬವಣೆಯಲ್ಲಿ ಬೆಂದು ಕಂಬನಿಯಲ್ಲಿ ಈಜಾಡಿ ಹೊತ್ತು ಹೆತ್ತು ಸಾಕಿದ ಮಗ ಬೀದಿ ಪಾಲಾದನೆ? ಎಂಬ ಚಿಂತೆ ಮನಃಪ್ರಾಣಗಳಲ್ಲಿ. ನಮ್ಮ ಪ್ರತಿಯೊಂದು ಭಂಗವನ್ನು ಅರಿತ ಹುಡುಗ ಗತಿಗೆಟ್ಟುದುದೇ ಅರ್ಥವಾಗುತ್ತಿಲ್ಲ...

ನೀಳವಾದ ನಿಟ್ಟುಸಿರು ಬಿಟ್ಟು ಒಳಹೆಜ್ಜೆಯಿಟ್ಟಳು. ಚಿಂತೆಯ ಕೀಟ ಮನ ವನ್ನು ಭೈರಿಗೆಯಂತೆ ಕೊರೆಯುತ್ತಲೇ ಇತ್ತು. ಹಗ್ಗದ ಮೇಲಿದ್ದ ಸೀರೆಯ ತುಂಡೊಂದನ್ನು ತೆಗೆದು ಮೈಕೈ ಒರಿಸಿಕೊಂಡಳು. ಮಾನಸಿಕ ನೋವನ್ನು ಮಾತ್ರ ಒರಿಸುವಂತಿಲ್ಲ. ಒಳಗಡೆ ಬಂದರೆ ಒಲೆಯ ಬುಡದಲ್ಲಿ ಬೂದಿಯನ್ನು ಹರಡಿಕೊಂಡು ಅದರ ಮೇಲೆ ಕಡ್ಡಿಯಾಡಿಸುತಿದ್ದ ಮಗಳು ದೃಷ್ಟಿಗೆ ಬಿದ್ದಳು. ನಿತ್ಯವೂ ಅವಳು ಮಾಡುವುದು ಇಷ್ಟೇ. ಕಿವುಡಿ–ಮೂಗಿಯಾದ ನಾಗು ತಾನೇ ತಾನಾಗಿ ಯಾವ ಕೆಲಸವನ್ನೂ ಮಾಡಲಾರಳು ಕೂಡ. ಹಾಸಿಗೆ ಬಿಟ್ಟರೆ ಅಲ್ಲಿ–ಇಲ್ಲಿ ಕುಳಿತು ನಿಂತು ಕಾಲಹರಣ ಮಾಡುವುದೇ ದಿನಚರಿ. ತನ್ನ ತಲೆ–ಮೈ–ಬಟ್ಟೆಗಳನ್ನು ಒಪ್ಪ ಮಾಡಿಕೊಳ್ಳುವ ಗೋಜೂ ಇಲ್ಲ. ಆಸ್ಥೆಯೂ ಇಲ್ಲ. ಹನ್ನೊಂದು ಸಂವತ್ಸರಗಳು ಕಳೆದಿವೆ. ದೈಹಿಕ ಬೆಳವಣಿಗೆ ಇದ್ದರೂ ಮಾನಸಿಕ ಬೆಳವಣಿಗೆ ಇಲ್ಲವೇ ಇಲ್ಲ. ಮನುಕುಲದಲ್ಲಿ ಹುಟ್ಟಿಯೂ ಜೀವನ ವ್ಯರ್ಥ. ಸಂಸಾರಕ್ಕೊಂದು ಹೊರೆ. ಬಡತನದ ಬವಣೆಗೊಂದು ಉಣ್ಣುವ ಬಾಯಿ. ಆದರೂ, ಹೆತ್ತ ಕರುಳು ಕರುಣೆಯಿಂದ ಮಿಡಿಯುತ್ತದೆ, ಬಿಸು ಸುಯ್ಲು ತನಗರಿಯದಂತೆಯೇ ಹರಿದಾಡುತ್ತದೆ, ಮೈಮನಗಳು ನಡುಗು ವಂತೆ.

ದೇವರು ನನಗಿಂಥ ಭಾರವನ್ನೇಕೆ ಕೊರಳಿಗೆ ಕಟ್ಟಿದ? ಹುಟ್ಟಿದಾಗಲೇ ಮಗು ಸತ್ತಿದ್ದರೆ ನನಗೆ ಈ ಕಷ್ಟವೇ ಇರುತ್ತಿರಲಿಲ್ಲ. ನಾನು ಮಗುವನ್ನು ಬಿಟ್ಟು ಸತ್ತರೆ ಯಾರು ನೋಡಬೇಕು? ಎಂಬ ಪ್ರಶ್ನೆ ಸದಾ ತಲೆಯಲ್ಲಿ. ದೇವರು ಕುಡುಕ–ದುಷ್ಟ ಗಂಡನನ್ನೂ ಕೊಟ್ಟು, ಇಂಥ ಮಗುವನ್ನೂ ಕೊಟ್ಟು ಬಾಳಿನ ಹಾದಿಗೆ ಮುಳ್ಳನ್ನು ನೆಟ್ಟ. ಕುಲಪುತ್ರನನ್ನು ಕೊಟ್ಟು ಬೀದಿ ಪಾಲು ಮಾಡಿದ…ಈ ಬದುಕು ಯಾರಿಗೆ ಬೇಕು?

ನಮ್ಮಪ್ಪನಿಗೆ ಮಗಳನ್ನು ಅವನಿಗೆ ಕೊಡಬೇಡ. ತೀರ ದುಷ್ಟ–ಕೇಡಿ. ಮೊದಲ ಹೆಂಡತಿಯನ್ನು ಹೊಡೆದು ಬಡಿದು ಕೊಂದವನು. ಮಗಳಿಗೆ ಮದುವೆ ಇಲ್ಲದಿದ್ದರೆ ಕೇಡೇನಲ್ಲ ಎಂದು ಜನ ಎಷ್ಟೆಷ್ಟು ಹೇಳಿ–ಕೇಳಿ ಬಡು ಕೊಳ್ಳಲಿಲ್ಲ? ಕೋಳಿ ಸಾಕಿ ತೋಳನಿಗೆ ಕೊಟ್ಟ ಅಪ್ಪ. ಇಳಿವಯಸ್ಸಾಗಿದ್ದರೂ ಗಂಡನಿಗೆ ಮೈಯೆಲ್ಲಾ ಉರಿಗಣ್ಣು. ದುರ್ವ್ಯಸನಗಳ ಕಾಮನೆ. ಕ್ರೂರ

ರೊಳಗೆ ಅತ್ಯಂತ ಕ್ರೂರಿ ಹೀಗಿದ್ದರೆ ಯಾರಿಗೆ ಬೇಕು? ಮನಸ್ಸು ದಿಕ್ಕೆಟ್ಟು ಓಡುತ್ತಲೇ ಇತ್ತು...ಮನುಷ್ಯರಿಗೆ ಕಣ್ಣಿಲ್ಲವೆಂದರೆ ದೇವರಿಗೂ ಕಣ್ಣಿಲ್ಲವೇ? ಅವನೇಕೆ ನನ್ನನ್ನು ಈ ದುರ್ಗತಿಗೆ ತಳ್ಳಿದ....? ನಾನು ಮಾಡಿದ ತಪ್ಪೇನು? ....ಓ, ಈಗ ಅರ್ಥವಾಯಿತು....ತಪ್ಪು ಮಾಡಿದವರನ್ನೆಲ್ಲಾ ಹೆಣ್ಣಾಗಿ ಹುಟ್ಟಿಸುತ್ತಾನಂತೆ ಸ್ವಾಮಿ....ಪೂರ್ವ ಜನ್ಮದಲ್ಲಿ ನಾನೇನು ತಪ್ಪು ಮಾಡಿದೆನೋ ನನಗೀ ಜನ್ಮ ಬಂತು. ಜನ್ಮ ಋಣ ತೀರಿಸುವ ತನಕ ಭಂಗ ಬನ್ನಗಳು ತಪ್ಪುವಂತಿಲ್ಲ...ನಾನು ಕಾಡಿ ಬೇಡಿದರೆ ಭಗವಂತ ಏನು ಮಾಡಿಯಾನು? ಎಂತಹ ಕರ್ಮವೋ ಅಂತಹ ಫಲ. ನಾನೇ ತಪ್ಪುಮಾಡಿ ಯಾರನ್ನೆಲ್ಲಾ ಏಕೆ ದೂರಬೇಕು? ಇದುವರೆಗೆ ಅರ್ಥವೇ ಆಗಿರಲಿಲ್ಲ. ಈಗ ತಿಳಿಯಿತು. ಸಾಕಪ್ಪಾ ಸಾಕು...ಎದೆಯ ಹಕ್ಕಿ ಚೀರುತ್ತಲೇ ಇತ್ತು.

ತಲೆಯಲ್ಲಿ ಹಲವಾರು ಚಿಂತೆಯನ್ನು ತುಂಬಿಕೊಂಡೇ ಹಾದಿಯ ಕಡೆ ಮತ್ತೊಮ್ಮೆ ದೃಷ್ಟಿ ಹಾಯಿಸಿದಳು ಶಾಂತಿ. ಎಲ್ಲಿಯೂ ಮಗನ ಸುಳಿವಿಲ್ಲ. ಕಣ್ಣುಗಳು ತಟ್ಟನೆ ಹನಿತುವು. ಒಳ ಮನೆಯಲ್ಲಿ ನೀರಿನ ಬಿಂದಿಗೆ ಖಾಲಿ. ಡಬ್ಬಿಗಳಲ್ಲಿ ಅಕ್ಕಿ ನುಚ್ಚು ರಾಗಿ ಇದ್ದರೆ ಇತ್ತು ಇಲ್ಲದಿದ್ದರೆ ಇಲ್ಲ. ಮಗಳ ಕೂದಲನ್ನು ನೇವರಿಸಿ ಚದರಿದ ಕೂದಲನ್ನು ಬಾಚಿ ಜಡೆ ಹಾಕಿದಳು. ಇನ್ನು ತೊರೆಗೆ ಹೋಗಿ ನೀರು ತರಬೇಕು. ಈ ಮಗು ಅದನ್ನೂ ಮಾಡಲಾರದು. ಮಗುವಿನ ಜಾತಕದ ಪ್ರಕಾರ ಜೋಯಿಸರು 'ನಾಗಿ' ಎಂದು ಹೆಸರು ಕೊಟ್ಟಾಗ ಅದಕ್ಕೆ ಉತ್ತರಾರ್ಧವಾದ 'ರತ್ನ' ಸೇರಿಸಿ ನಾಗರತ್ನ ಎಂದು ಮಾರ್ಪಡಿಸಿದುದು ಚಿತ್ತಭಿತ್ತಿಯಲ್ಲಿ ಚಲನ ಚಿತ್ರದಂತೆ ಸುಳಿದಳಿಯಿತು. ಆದರೇನು? ತನ್ನ ಆಸೆ ಮಣ್ಣುಗೂಡಿ ಅವಳಿಗೆ ಅನ್ವರ್ಥ ನಾಮವಾದುದು, ನಾಗಿ –ಮೂಗಿ ಅಂತಲೇ. ತೀರಾ ನತದೃಷ್ಟ ಹುಡುಗಿ. ಇವಳಿಗಾಗಿ ಆ ಮಗನಿಗಾಗಿ ನಾನು ಜೀವ ಹಿಡಿಯಬೇಕಾದುದು ನನ್ನ ಕರ್ಮವಲ್ಲದೆ ಮತ್ತೇನಲ್ಲ... ತೀರಾ ನಿರಾಸೆಯಿಂದ ನಿಟ್ಟುಸಿರು ಬಿಟ್ಟಳು ಅವಳು. ಕಣ್ಣುಗಳಲ್ಲಿ ಕಂಬನಿಗಳುಕ್ಕಿದುವು.

ಮನೆಯಲ್ಲಿದ್ದ ಎರಡು ಪ್ಲಾಸ್ಟಿಕ್ ಕೊಡಗಳಲ್ಲಿ ಒಂದು ಈಚೆಗಷ್ಟೇ ಒಡೆದು ಹೋಗಿತ್ತು. ಇನ್ನಿದ್ದ ಒಂದೇ ಒಂದು ಕೊಡದಲ್ಲಿ ನೀರು ತಂದು

ತುಂಬಿಕೊಳ್ಳುವ ಭಂಗ ಸಾಮಾನ್ಯವಲ್ಲ. ಸಂಸಾರಕ್ಕೆ ತಕ್ಕ ಪಾತ್ರೆ ಪಗಡಿಯೂ ಇಲ್ಲ. ನೀರಿನ ಹಂಡೆಯೂ ಇಲ್ಲ. ಎಲ್ಲಾ ಕುಡುಕ ಗಂಡನ ದುರ್ವ್ಯಾಪಾರಕ್ಕೆ ಬಲಿ....ಇಬ್ಬರೂ ಕೆಲಸ ಮಾಡುವುದು ರಾಯರ ತೋಟದಲ್ಲಿ. ಸಿದ್ಧರಾಮ ಗಾಡಿ ಹೊಡೆಯುತ್ತಾನಾದುದರಿಂದ ಎತ್ತು ಗಾಡಿಗಳ ಕ್ಷೇಮ ಅವನಿಗೆ ಸೇರಿದ್ದು. ಎಲ್ಲಿಗಾದರೂ ಗಾಡಿಯು ಹೋಗುವಂತಿದ್ದರೆ ಕೆಲಸ. ಇಲ್ಲದಿದ್ದರೆ ಗಾಡಿಯಲ್ಲಿ ಹುಲ್ಲು ಹಾಸಿ ಸುಖವಾಗಿ ಮಲಗಿಬಿಡುವ. ಮನೆಗೆ ಹಿಂದಿರುಗುವ ಹಾದಿಯಲ್ಲಿ ಮದಿರೆಯ ಗುಡಿಯನ್ನು ಹೊಕ್ಕು ಮನಸೇಚ್ಛೆ ಸೇವೆಮಾಡಿ ಮನ ಮತ್ತತೆಯಲ್ಲಿ ಹಿಂದಿರುಗಿದರೆ ಮನೆಯಲ್ಲಿ ರಾಣಾರಂಪ. ಒಂದಿನವೂ ತಪ್ಪು ವಂತಿಲ್ಲ ಅದು...

ಎಷ್ಟೋ ಸಲ ಶಾಂತಿ ಕೇಳಿದಾಳೆ "ನನ್ನ ಕೂಲಿ ಹಣಕ್ಕೆ ನೀನು ಕೈ ಹಾಕಬೇಡಣ್ಣ ನಾನು ದುಡಿದುದನ್ನೂ ನೀನು ಕುಡಿಯುವುದಾದರೆ ಹೊಟ್ಟೆ ಬಟ್ಟೆಯ ಗತಿಯೇನು?"

ಆದರೆ, ಆ ಪಾಶಾಂಡಿ ಕೇಳಬೇಕಲ್ಲ, ಅವಳ ಬೆನ್ನಿಗೊಂದು ಗುದ್ದಿ ತಾನೇ ಕೈಯೊಡ್ಡಿ ಕಾಸು ಕೈಕೊಳ್ಳುವ. ಹಗಲೆಲ್ಲ ಮಳೆಗಾಳಿ ಬಿಸಿಲಿನಲ್ಲಿ ದುಡಿದು ದಣಿವ ಜೀವಕ್ಕೆ ದಯೆ ಕರುಣೆಗಳು ಮೈಲಿ ಮೈಲಿ ದೂರ. ಅರೆ ಹೊಟ್ಟೆ, ಅರೆಬಟ್ಟೆಗಳ ಬದುಕು....

ಕಣ್ಣುಗಳಲ್ಲಿ ಉಕ್ಕಿಬಂದ ಕಂಬನಿಗಳನ್ನು ತೀಡಿಕೊಳ್ಳುತ್ತಲೇ ನಡೆದಳು. ತೊರೆಯ ಬಳಿಗೆ. ಗದ್ದೆಯಾಚೆಯ ತಗ್ಗಿನಲ್ಲಿ ಹರಿಯುತ್ತದೆ ಸಾಮಾನ್ಯತೊರೆ. ಮಳೆಗಾಲದಲ್ಲಿ ನೀರು ಸಮೃದ್ಧಿ. ಅನಂತರ ದಿನ ದಿನಕ್ಕೂ ಬತ್ತುತ್ತ ಬೇಸಿಗೆ ಯಲ್ಲಿ ಕಾಣಸುವುದು ಕಲ್ಲು ಮರಳುಗಳ ರಾಶಿಯೇ. ಜನ ನೀರಿಗಾಗಿ ಮಧ್ಯೆ ಮಧ್ಯೆ ಹೊಂಡ ತೋಡುವುದರಿಂದ ಅಲ್ಲಲ್ಲಿ ಅಷ್ಟಿಷ್ಟು ನೀರು ತುಂಬಿರುತ್ತದೆ. ಪುನಃ ಮಳೆಗಾಲ ಬರುವತನಕ ಆ ನೀರೇ ಗತಿ ಎಲ್ಲರಿಗೆ. ನೀರು ಗೋಚಿ ತುಂಬಿಕೊಳ್ಳುವಾಗ ಮಣ್ಣೂ ಮರಳೂ ತುಂಬಿಕೊಳ್ಳುವುದು ಸಹಜ. ಮನೆ ಯಲ್ಲಿ ಸೋಸಿಯೇ ಬಳಸಬೇಕು. ಪರಿಸ್ಥಿತಿ ಹೀಗಿರುವಾಗ ರಾಯರಲ್ಲಿ ತನ್ನ ಗೋಳನ್ನು ತೋಡಿಕೊಂಡು ಹಂಡೆ ಮತ್ತು ಬಿಂದಿಗೆಯನ್ನು ನೀವೇ ಕೊಡಿಸಿ

ಆವನ ಕೈಗೆ ಸಂಬಳ ಕೊಡಬೇಡಿ ಎಂದು ಕೇಳಿಕೊಳ್ಳುವ ಇಚ್ಛೆ ಮೂಡಿತು ಮನದಲ್ಲಿ. ಮನೆಗಾಗಿ ಬಟ್ಟೆ ಬರೆಗಾಗಿ ಚಿಕ್ಕಾಸು ಉಳಿಯುವುದಿಲ್ಲ...ಗಂಡ ನೋಡಿದರೆ ಹಾಗೆ. ಮಕ್ಕಳು ನೋಡಿದರೆ ಹೀಗೆ. ಯಾರಿಗಾಗಿ ಈ ಬದುಕು? ಒಡನೆ ತಂಗಾಳಿ ಸುಯ್ಯಿತು...ಯಾರಿಗಾಗಿ ಈ ಬದುಕು ? ಈ ದುಷ್ಟ ಗಂಡನ ಹೊಡೆತ ಬಡಿತ ಜೇರೆ. ನನಗೆ ಸಾಕಾಗಿದೆ ಈ ಜನ್ಮ. ಒಡನೆ ಪಕ್ಷಿಯೊಂದ್ಯ ಚೀರು ದನಿಯಲ್ಲಿ ಚೀರಿತು ನನಗೆ ಸಾಕಾಗಿದೆ ಈ ಜನ್ಮ!

ಒಡಲ ಸಂಕಟವನ್ನು ತೋಡಿಕೊಳ್ಳುತ್ತಲೇ ನೀರಿನ ಕೊಡದೊಂದಿಗೆ ಮನೆ ಸೇರಿದಳು ಶಾಂತಿ, ಶಾಂತಿರಸವಾಗಿ.

ಒಲೆಗೆ ಸೌದೆ ಅಡಕಿ ಹೋಗಿದ್ದುದರಿಂದ ಹಸಿ ಸೌದೆ ಉರಿಯದೆ ಮನೆ ತುಂಬ ಹೊಗೆ ತುಂಬಿದ್ದು ಕಣ್ಣು ಬಿಡುವಂತೆಯೇ ಇರಲಿಲ್ಲ. ಕಣ್ಣು ಮೂಗು ಗಂಟಲು ಕಟ್ಟಿಸುವಷ್ಟು ಭಯಂಕರ ಕ್ಷಾರ. ಒಡಲಾಳದಿಂದ ಕೆಮ್ಮು ನುಗ್ಗಿ ಬಂತು. ಕೆಮ್ಮುತ್ತಲೇ ಊದುಗೊಳವಿ ಕೈಕೊಂಡು ಊದ ತೊಡಗಿದಳು. ಊದಿದಷ್ಟೂ ಬೆಂಕಿಕಿಡಿ ಬೂದಿ ಹಾರುತ್ತಿದ್ದುವೇ ಹೊರತು ಬೆಂಕಿ ಹೊತ್ತದು. ಕೊಟ್ಟಿಗೆಗೆ ಹೋಗಿ ನೋಡಿದರೆ ಆ ಗತಿಗೆಟ್ಟ ಕೊಟ್ಟಿಗೆಯೂ ಸೋತು ಒದ್ದೆ ಮುದ್ದೆಯಾಗಿದೆ. ಅದರಲ್ಲೇ ಕೆಲವು ಕಡ್ಡಿ ದರುಗೆಲೆಗಳನ್ನು ಹೆಕ್ಕಿ ತಂದು ಒಲೆ ಯೊಳಗೆ ಅಡಕಿ ಮತ್ತೆ ಊದ ತೊಡಗಿದಳು. ಆಗ ಹೊತ್ತಿಕೊಂಡಿತು ಬೆಂಕಿ ಆದರೇನು? ಹಸಿ ಸೌದೆಗಳಿಗೆ ಬೆಂಕಿ ಹೊತ್ತ ಬೇಕಾದರೆ ಹೆಣಗಿ ಹೋರಾಡಲೇ ಬೇಕು. ಕಣ್ಣು ಮೂಗುಗಳಲ್ಲಿ ನೀರು ಸುರಿದು ಹೋಗುತ್ತದೆ. ಗಂಟಲಾರಿ ಕೆಮ್ಮು ಗಂಟಲೊತ್ತುತ್ತದೆ.

ಬೆಂಕಿಯನ್ನು ಊದಿ ಊದಿ ಉರಿಸಿ ಪ್ರಜ್ವಲಿಸುವಂತೆ ಮಾಡುತ್ತ ಆತ್ಮ ಜ್ಯೋತಿಯನ್ನು ನಂದಿಸಿಕೊಳ್ಳುವ ಸ್ತ್ರೀಜಾತಿಗೆ ಜ್ಞಾನವೂ ಇಲ್ಲ, ಮುಕ್ತಿಯೂ ಇಲ್ಲ. ಭಾರತ ವರ್ಷದಲ್ಲಿ ನಿರಕ್ಷರಿಗಳೂ ಅಮಾಯಕರೂ ಅಜ್ಞಾನಿಗಳೂ ಆದ ನಾರೀಮಣಿಯರು ಸ್ವಾತಂತ್ರ ಯಜ್ಞವೇದಿಯನ್ನು ಏರಿದರೆಂದರೆ ಯಜ್ಞ ಕುಂಡಕ್ಕೆ ಹವಿಸ್ಸು ಮತ್ತು ಸಮಿತ್ತುಗಳೇ ತಾವಾಗಿ ಸುಟ್ಟುರಿದು ಹೋಗು ವುದೇ ವಿನಾ ಮತ್ತೇನೂ ಆಗದು. ಜೀವನ ಮಾರ್ಗಯೋಗದಲ್ಲಿ ಅವಳು

ರಥದ ಗಾಲಿಗಳಾದರೆ ಆತ ಉರಟಣೆಯನ್ನು ಹಾಡುವ ಗಾಡಿಗನಾಗುತ್ತಾನೆ. ಅದು ಸಂಪ್ರದಾಯಬದ್ಧ ನೀತಿ ರೀತಿಗಳ ಪ್ರಣಾಳಿಕೆಯಲ್ಲಿ ಮುದ್ರಿತ ಮುದ್ರಣ, ಬಾಳಿನ ಪುಟಗಳಿಗಾಗಿ.

ಅಂತೂ, ಒಲೆ ಉರಿಯಿತು, ದಹುಗೆಲೆ ಒಣ ಕಡ್ಡಿಗಳನ್ನು ಸೇರಿಸುತ್ತಲೆ ಇದ್ದುದರಿಂದ. ಅನುಕ್ರಮವಾಗಿ ಒಲೆಯಲ್ಲಿಯೇ ಸೌದೆ ಒಣಗುತ್ತ ಬಂದುವು. ಅಗ್ನಿದೇವ ಹುರುಪು ತಾಳಿದ.

ಅನ್ನಕ್ಕೆ ನೀರಿಟ್ಟು ಅಕ್ಕಿಯನ್ನು ಸುರಿದಳು ಶಾಂತಿ. ಅನ್ನ ಕೊತ ಕೊತ ಕುದಿಯಿತು. ಸಾರಿಗಾಗಿ ಯಾವ ಕಾಳು ಕಡ್ಡಿಯೂ ಇಲ್ಲ. ಬಸಿದ ಗಂಜಿಗೆ ಮೆಣಸು ಜೀರಿಗೆ ಅರೆದು ಬೆರೆಸಿಕೊಳ್ಳುವ ಯೋಚನೆಯಲ್ಲಿ ಕೈ ಹಚ್ಚಿದಾಗಲೇ ಪತಿ–ಸಿದ್ಧರಾಮ ತಲೆಬಾಗಿಲ ಬಳಿ ಕೆಮ್ಮಿ ಕ್ಯಾಕರಿಸಿ ಅತ್ತ ಉಗುಳಿದ ಸದ್ದು ಕೇಳಿಸಿತು. ನೋಟವನ್ನು ಅತ್ತ ಹರಿಸುವುದೇ ಬೇಡ ಎಂಬಷ್ಟು ಜಿಗುಪ್ಸೆ ಮನಸ್ಸಿಗೆ. ಎಪ್ಪತ್ತರ ಗಡಿಯನ್ನು ದಾಟಿದ್ದ ಸಿದ್ಧರಾಮನಿಗೆ ಇಪ್ಪತ್ತರ ಹುರುಪು ಮಡದಿಯ ಮೇಲಿನ ಅಧಿಕಾರಕ್ಕೆ. ತನ್ನಂಕೆಯಲ್ಲಿರಲೆಂದೇ ತನ್ನ ಕಣ್ಣೋಟದ ಅಳತೆಯಲ್ಲೇ ಮಡದಿಗೆ ಕೆಲಸ ಹಿಡಿಸಿದ್ದ.

ಸಿದ್ಧರಾಮ ಒಳಗೆ ಹಣಕಿ ಹೊಸ್ತಿಲ ಬಳಿಯೇ ನಿಂತು "ಆ ನೀರಿನ ಕೊಡ ಇತ್ತಕೊಡು" ಎಂದ. ಹೆಂಡದ ದುರ್ನಾತವನ್ನು ಕಕ್ಕಿತು ಗೊರ ಗೊರದನಿ.

ಮೆಣಸನ್ನು ಅರೆಯುತಿದ್ದ ಮಡದಿ ಕೊಡದ ಕಡೆ ದೃಷ್ಟಿ ಹಾಯಿಸಿ ದಳು. ಅದರಲ್ಲಿ ಆಗಲೇ ನೀರು ಖರ್ಚಾಗಿದ್ದು ತಳದಲ್ಲಿ ಸ್ವಲ್ಪ ಮಾತ್ರವಿತ್ತು. ಅದನ್ನೀಗ ಕೈಕಾಲು ತೊಳೆಯಲು ಕೊಟ್ಟರೆ ಕಾರದ ಕಲ್ಲು ತೊಳೆಯಲು ಮತ್ತೆ ನೀರು ತರಲು ತೊರೆಗೆ ಓಡಬೇಕು. ಆತ ಮನೆಯಲ್ಲಿ ಕಿಂಚಿತ್ ಸಹಾಯ ಮಾಡುವವನಲ್ಲ. ಜೀವಮಾನವೆಲ್ಲಾ ಇದೇ ಆಯಿತು. ಮುಂದೆಯೂ ಹೀಗೆಯೇ. ಮನಸ್ಸು ಮೌನವಾಗಿ ರೋದಿಸಿತು. ಎದೆಯ ಹಕ್ಕಿ ವಿೀತಗಾನ ವನ್ನು ಹಾಡಿತು, ಶಾಂತಿ ತಲೆಯೆತ್ತದೇ ಹೇಳಿದಳು,

"ಅದರಲ್ಲಿಲ್ಲ ನೀರು. ಸ್ವಲ್ಪ ಮಾತ್ರವಿದೆ. ಕಾರದ ಕಲ್ಲು ತೊಳೆಯಲು ಬೇಕು."

ಸಿದ್ಧರಾಮು ಕೆಕ್ಕರಿಸಿ ನೋಡಿದ. ಗಂಡ ಮನೆಗೆ ಬಂದಾಗ ಕೈಕಾಲಿಗೆ ನೀರು ಕೊಟ್ಟು ಪಾದ ತೊಳೆಯುವುದು ಸತೀಧರ್ಮ. ಇರಲಿ, ನಾನೀಗ ಬೇಡಿದರೂ ಇಲ್ಲವಲ್ಲಾ...ಎಂತಹ ಹೆಣ್ಣು!

"ಏನೇ ನೀನು ಹೇಳಿದ್ದು...?"

ಶಾಂತಿ ಕೇಳಿಸಿದರೂ ಕೇಳಿಸದವಳಂತೆ ಸುಮ್ಮನಿದ್ದು....ಬರುವಾಗ ತೊರೆಯಲ್ಲಿಳಿದು ಕೈಕಾಲು ತೊಳೆದುಕೊಂಡಿದ್ದರೆ ಏನಾಗುತಿತ್ತು. ಹೆಣ್ಣಿನ ಕಷ್ಟ ಸ್ವಲ್ಪವೂ ಅರ್ಥವಾಗಬಾರದೇ ಎಂದುಕೊಂಡಳು ಮನದಲ್ಲಿ. ತುಟಿಗಳು ಪ್ರಯತ್ನಿಸಿದರೂ ಬಿರಿಯಲಿಲ್ಲ.

"ಅದೇಕೆ ಸುಮ್ಮನೆ ಕುಳಿತಿದ್ದಿ ಮೂಗಿ? ಆ ನೀರಿನ ಬಿಂದಿಗೆ ಕೊಡು ಇತ್ತ" ದನಿ ಜೋರಾಗಿ ಮೊಳಗಿತು.

"ಸೂರಿನ ನೀರೊಡ್ಡಿ ತೊಳೆದುಕೊಳ್ಳುವುದು ಲೇಸು. ಸ್ವಲ್ಪ ನೀರಿದೆ ಕೊಡದಲ್ಲಿ. ನಾನು ಈ ಮಳೆಯಲ್ಲಿ ಪುನಃ ಹೋಗಿ ತರಲಾರೆ" ಇಳಿದನಿಯಲ್ಲಿ ನುಡಿದಳು ಶಾಂತಿ.

ಆ ಮಾತುಗಳು ಸ್ವಾರ್ಥಪೂರ್ಣವಾದ ಮನಸ್ಸಿಗೆ ಕಹಿಯಾಗಿ, ಒಗರಾಗಿ ತೀರ ಉದ್ಧಟತನವಾಗಿ ತೋರಿತು. ಕೂಡಲೇ ಅವನು ಒಳನುಗ್ಗಿ ದಿಡ್‌ದಿಡ್ಡನೆ ಗುದ್ದಿ ಕೊಡವನ್ನು ಕೈಕೊಂಡು ಹೊರಹೋಗಿ ಎಲ್ಲಾ ನೀರನ್ನೂ ಸುರಿದು ಕೈಕಾಲು ತೊಳೆದುಕೊಂಡ. ಮಧಿರೆಯ ಪಿತ್ತವೆಲ್ಲಾ ತಲೆಗೇರಿದಂತೆ ಕಿಡಿ ಕಿಡಿಯಾಗಿ ಉಚ್ಚ ಸ್ವರದಲ್ಲಿ ಅಂದ "ಈ ಮಳೆಯೊಂದು ಮಳೆಯೇ? ಒಂದು ಬಿಂದಿಗೆ ನೀರು ತಾರದಷ್ಟು ಸೋಮಾರಿತನ....ಸೂರಿನ ನೀರಿನಲ್ಲಿ ಕೈಕಾಲು ತೊಳೆಯಲು ಹೇಳುವಷ್ಟು ಎದೆಗಾರಿಕೆ ಬಂತೆ ನಿನಗೆ? ಥುತ್ ಕೀಳು ಹೆಣ್ಣೇ!"

ಅವಳು ಮೌನಭಾರ ವಹಿಸಿದಳು. ಎದೆಯಾಳದಲ್ಲಿ ಕಸಿವಿಸಿ ಮೂಡಿತು. ಮನಸ್ವೀ ಮಾತಾಡುತ್ತ ಒಲೆಯ ಬಳಿ ಕುಳಿತ. ಅವನ ರೋಮ ರೋಮವೂ

ಉದ್ವಿಗ್ನವಾಗಿವೆ. ಗಂಡಸುತನವನ್ನು ಕಕ್ಕುವವನಿ ಮಾಡು ಧೀಂಕಿಡುವಂತೆ ಮೊಳಗುತಿತ್ತು. ಶಾಂತಿ ಮಾತಾಡದೆ ಅಕ್ಕಿಯಲ್ಲಿ ಕೈಯಾಡಿಸಿದಳು. ಅಶ್ರು ಪೂರ್ಣಲೋಚನಗಳಿಗೆ ಕಲ್ಲುಗಳೂ ಕಾಣವು, ನೆಲ್ಲುಗಳೂ ತಿಳಿಯುವು.

೦ ೦ ೦ ೦

ಶರತ್ಕಾಲೀನ ಮಧ್ಯಾಹ್ನ ಬೆಚ್ಚನ್ನ ಬಿಸಿಲು ಮೈಮುದ್ದಿಸುವಷ್ಟು ಹಿತ.

ಆದರೆ....ಪರಿಸರ ಮಾಲಿನ್ಯದಿಂದ ಹೊಮ್ಮುವ ದುರ್ಗಂಧ ತಂಗಾಳಿ ಯಲ್ಲಿ ಸೇರಿ ದೂರದೂರ ಸಾಗುತಿದ್ದರೂ ಮೂರು ಬಾಯಿಗಳಿಗೆ ನುಗ್ಗಿ ವಾಕ ರಿಕೆ ಬರುವಷ್ಟು ಅಹಿತ.

ನಾಗು ಅಂಗಳದಲ್ಲಿ ಬೆಚ್ಚನ್ನ ಬಿಸಿಲಿಗೆ ಮೈಗೊಟ್ಟು ಒಣಕಡ್ಡಿ ದರುಗೆಲೆ ಗಳನ್ನು ಹೆಕ್ಕಿ ಸಣ್ಣ ಬುಟ್ಟಿಗೆ ತುಂಬಿ ಕೊಳ್ಳುತ್ತಿರುವಾಗಲೇ ಶ್ಯಾಮು ಆಗ ಮಿಸಿದ. ತುಂಟರ ಗುರುವಿಗೆ ಮೈಯೆಲ್ಲಾ ಹುಮ್ಮಸ್ಸು. ಅವಳು ಕಡ್ಡಿ ಹೆಕ್ಕುತಿದ್ದುದನ್ನು ನೋಡಿ, ಒಳಹೋಗಿ ಕಡಿಗತ್ತಿ ತಂದು "ಒಲೆ ಉರಿಸಲ್ಕೆ ಒಣಕಡ್ಡಿ ಬೇಕೆ?" ಎನ್ನುತ್ತ ಸೌದೆ ಕಡಿದು ಚಕ್ಕೆ ಏಳಿಸುವ ಕಾರ್ಯದಲ್ಲಿ ತೊಡಗಿದ. ಕಡಿಯುವುದರಲ್ಲಿ ಪರಿಣತನಲ್ಲದ ಅವನು ಕತ್ತಿ ಬೀಸಿದಾಗ ಕೈತಪ್ಪಿ ನಾಗೂ ಕೈಗೆ ಬಡಿದು ದೊಡ್ಡ ಗಾಯವನ್ನೇ ಮಾಡಿತು. ನಾಗು ನೋವಿನಿಂದ ಚೀರಿಕೊಂಡಳು. ಇನ್ನು ತಾನಲ್ಲಿದ್ದರೆ ಏಟು ತಿನ್ನುವೆನೆಂದು ಹೆದರಿ ಶ್ಯಾಮು ಅಲ್ಲಿಂದ ದೌಡಾಯಿಸಿ ಓಡಿದ. ನಾಗುವಿಗೆ ಕೈಗೆ ಬಟ್ಟೆ ಸುತ್ತುವುದೂ ತಿಳಿ ಯದೆ ಅಳುತ್ತ ಒಳಹೋದಳು. ಉದ್ದಕ್ಕೂ ರಕ್ತ ಹನಿಕಿತು. ಅಮ್ಮ ಬಂದಾಳೇನೋ ಎಂಬಾಸೆ ಮನದಲ್ಲಿ. ದೃಷ್ಟಿ ಬಾರಿ ಬಾರಿಗೂ ಬಾಗಿಲ ಕಡೆ ಹರಿಯುತಿತ್ತು ತಾನೆ ತಾನಾಗಿ. ನೆತ್ತರು ಬಟ್ಟೆಯ ಮೇಲೆ ನೆಲದಲ್ಲಿ ಸೂಸಾ ಡಿತು. ಖಿನ್ನ ಮುಖಿಯಾದಳು ಹುಡುಗಿ.

ನೆರೆಮನೆಯ ಲಚ್ಚಿ ಅಂಗಣಕ್ಕೆ ಬಂದಾಗ ಅಲ್ಲಿ ಬಿದ್ದಿದ್ದ ಕಡಿಗತ್ತಿ ಯನ್ನೂ ನೆತ್ತರ ಹನಿಗಳನ್ನೂ ಕಂಡು ಭಯಾಶ್ಚರ್ಯಗಳಿಂದ ಏನಿರಬಹು ದೆಂದು ತನ್ನಲ್ಲೇ ಯೋಚಿಸಿ ಕಡಿಗತ್ತಿಯನ್ನು ಹೆಕ್ಕಿಕೊಂಡು ಒಳಬಂದು ಕೇಳಿದಳು "ಇದೇನಾಯ್ತು?"

ನಾಗು ಅವಳ ಪ್ರಶ್ನೆಯನ್ನು ಅರ್ಥಮಾಡಿಕೊಂಡು ಮುಂಗೈ ಗಾಯವನ್ನು ತೋರಿದಳು ಕೈ ಮುಂದೆ ಮಾಡಿ. ಅದೇ ವೇಳೆಗೆ ಶ್ಯಾಮು ಒಳಬಂದ. ಹಿಂದೊಮ್ಮೆ ಲಚ್ಚಿಯಿಂದ ಚೆನ್ನಾಗಿ ಎರಡು ಪೆಟ್ಟುಗಳನ್ನು ತಿಂದಿದ್ದ. ಅದನ್ನೀಗ ತೀರಿಸಿಕೊಳ್ಳುವ ಛಲ ಮೂಡಿತು. ಕಪಟ ಕೋಪದಿಂದ ಅತ್ಯಂತ ಸಹಜವಾಗಿ ಎಂಬಂತೆ ನುಡಿದ "ಹೇಗೆ ಕೈ ಕಡಿದೆ ಮಾವಿ? ನಿನಗೇಕೆ ಈ ದುರ್ಬುದ್ಧಿ?"

"ಎಲಾ ಹುಡುಗ, ನಾನು ಏನಾಯ್ತೆಂದು ನೋಡಲು ಬಂದರೆ ನನ್ನ ಮೇಲೆಯೇ ಹೇಳುತಿದ್ದಿ ? ನೀನೇ ಕೈ ಕಡಿದಿರಬೇಕು ಅಲ್ಲವೇ ?"

ಆಗ ಮಾತಿಗೆ ಮಾತು ಬೆಳೆಯಿತು. ಅವನಿಗೆ ನಾಲ್ಕು ಬಿಗಿಯೋಣ ಎನಿಸಿದರೂ ದುಷ್ಟನ ಸಹವಾಸ ಕಷ್ಟ ಎನಿಸಿ ಸುಮ್ಮನಾದಳು ಲಚ್ಚಿ. ಮಾತು ಬಾರದ ನಾಗಿ ಮಿಕಿಮಿಕಿ ನೋಡಿದಳು ಅವಳಿಗೆ ಏನೂ ಅರ್ಥವಾಗಲಿಲ್ಲ.

ಶ್ಯಾಮು "ಕೈಯಲ್ಲಿ ಕತ್ತಿ ಹಿಡಿದಿದ್ದಿಯೆ! ನೀನಲ್ಲದೆ ಇಲ್ಲಿ ಕತ್ತರಿಸುವವರು ಯಾರು?" ಎಂದು ತೀರ ಕಟುವಾಗಿ ನುಡಿದು ಅಂದ "ಇಂದು ಅಪ್ಪನಿಗೆ ನಾನೇ ಹೇಳುವೆ."

"ಹೋಗಿ ಹೇಳಿಕೋ ಇದು ನಿನ್ನ ಕೃತ್ಯವಲ್ಲದೆ ಮತ್ತ್ಯಾರದೂ ಅಲ್ಲ. ನಿನ್ನ ತಪ್ಪನ್ನು ನನ್ನ ಮೇಲೆ ಹೊರಿಸಿ ನುಣುಚಿಕೊಳ್ಳಲು ಪ್ರಯತ್ನಿಸುತಿದ್ದಿ ಅಬ್ಬಾ! ಎಂಥ ದುಷ್ಟ ನೀನು ?"

ಲಚ್ಚಿ ಅವನನ್ನು ಆತ್ತ ತಳ್ಳಿ ನಾಗುವಿನ ಕೈಗೆ ಹಳೆ ಬಟ್ಟೆಯೊಂದನ್ನು ಸುತ್ತಿ ಸುರಿಯುವ ನೆತ್ತರಿಗೆ ತಡೆ ಹಾಕಿ ಹೊರಡುತಿದ್ದಂತೆಯೇ ಕೆಲಸವನ್ನು ಮುಗಿಸಿ ಮನೆಗೆ ಮರಳಿದ ಶಾಂತಿ ಎದುರಾದಳು. ಆ ಕೂಡಲೇ ಶ್ಯಾಮು ಅವಳೆಡೆಗೆ ನುಗ್ಗಿ "ಅಮ್ಮಾ! ನಾಗೂ ಕೈನ ಮಾವಿ ಕಡಿದಿದ್ದಾಳೆ!" ಎಂದು ಉಚ್ಚ ಸ್ವರದಲ್ಲಿ ಹೇಳಿದ, ವಿಷಯವನ್ನು ಯಥಾರ್ಥವಾಗಿ ನುಡಿಯುವಂತೆ, ಶಾಂತಿಗೆ ವಿಷಯ ಗಂಟಲ ಗಾಣವಾಯಿತು. ಲಚ್ಚಿ ಅಂತಹವಳಲ್ಲ. ನಾಗು ಕೈ ಕಡಿಯುವ ಅಗತ್ಯವೇನು? ಇದು ಸುಳ್ಳಿರಬೇಕು ಎನಿಸಿದಾಗಲೇ ಲಚ್ಚಿ

ಸಿಟ್ಟು, ದುಃಖ ದುಗುಡಗಳ ಗಣಿಯಾಗಿ "ಇವನೇ ಕಡಿದಿರಬೇಕು. ನಾನಂತೂ ನೋಡಲಿಲ್ಲ. ನಾಗುವನ್ನು ಮಾತಾಡಿಸಿ ಸಂತೈಸಲೆಂದು ಒಳ ಹೋದೆ ಅಷ್ಟೆ" ಎಂದಳು ವಿಜಾತೀಯವಾದ ದನಿಯಲ್ಲಿ. ಕೂಡಲೇ ಮೈಯಲ್ಲಿ ಚೇಳುಗಳು ಹರಿದಂತಾಯಿತು ಲಚ್ಚಿಗೆ.

ಅವಳ ಮುಖ ಭಾವವನ್ನು ಗಮನಿಸಿ ಇದು ಶ್ಯಾಮುವಿನ ಕೃತ್ಯವೇ ವಿನಾ ಲಚ್ಚಿಯದಲ್ಲ ಎಂಬ ಆಲೋಚನೆಯಿಂದಲೇ ಒಳಹೋಗಿ ಮಗಳನ್ನು ಕಂಡು ಸಂತೈಸಿ "ಇದು ಹೇಗಾಯ್ತು ಮಗೂ? ಲಚ್ಚಿ ಕಡಿದಳೇ?" ಎಂದು ಕೇಳಿದಳು ಶಾಂತಿ. ಆಗ ತಲೆಯಲುಗಿಸಿ ಕೈಗೆ ಬಟ್ಟೆ ಸುತ್ತಿದ್ದ ಅವಳಿಂದು ಸನ್ನೆ ಮೂಲಕ ತೋರಿಸಿದಳು ನಾಗು. ಅದೇ ಸಮಯಕ್ಕೆ ಒಳಬಂದ ಶ್ಯಾಮುವಿನ ಕಡೆಗೆ ಕೈತೋರಿ ಕಡಿದುದು ಅವನೆಂದು ಸನ್ನೆ ಮಾಡಿದಳು. ಆ ಕ್ಷಣ ಶ್ಯಾಮು ಒಂದೇ ಸಮನೆ ದಾಡಾಯಿಸಿ ಓಡಿದ. ಎಲ್ಲಿಗೆ ಯಾವ ಕಡೆಗೆ ಹೋದ ಎಂಬುದೇ ತಿಳಿಯಲಿಲ್ಲ.

ರಾತ್ರಿಯೂ ಮನೆಗೆ ಹಿಂದಿರುಗಲಿಲ್ಲ. ಮರುದಿನವೂ ಪತ್ತೆಯಿಲ್ಲ. ಶಾಂತಿಗೀಗ ಕಷ್ಟಕ್ಕಿಟ್ಟುಕೊಂಡಿತು. ತಂದೆಯಾದ ಸಿದ್ಧರಾಮನಿಗೆ ಸಂಸಾರದ ಬಗ್ಗೆ ಚಿಂತೆಯಾಗಲೀ ವ್ಯಥೆಯಾಗಲೀ ಇಲ್ಲವೇ ಇಲ್ಲ. ಶಾಂತಿ ತನಗೆ ತಿಳಿದವರನ್ನೆಲ್ಲಾ ಕೇಳಿ ಹುಡುಕಾಡಿದಳು. ಹುಡುಗನ ಸುಳಿವು ಎಲ್ಲಿಯೂ ಸಿಗಲಿಲ್ಲ. ಅವನ ಗೆಳೆಯರು ಎಲ್ಲೆಲ್ಲೋ ಹುಡುಕಿ ಇಲ್ಲವೆಂದು ಬಂದು ಹೇಳಿದರು. ಶಾಂತಿಗೆ ಗಂಜಿ ಕುಡಿದರೂ ಇಳಿಯುದಷ್ಟು ಗಂಟಲು ಆರಿತು. ಬತ್ತಿದ ಕಣ್ಣುಗಳಲ್ಲಿ ಕಂಬನಿಯು ಕಡಲು ಬೇಸಗೆಯ ತೊರೆಯಂತೆ ಆರತೊಡಗಿತ್ತು. ಅಳುತ್ತೇನೆಂದರೆ ಈಗೀಗ ಕಣ್ಣಲ್ಲಿ ನೀರಿಲ್ಲ.

ಇತ್ತ ನಾಗುವಿನ ಕೈಗೆ ಔಷಧೋಪಚಾರವೂ ಇಲ್ಲ. ಯಾರೋ ಹೇಳಿದ ಹಸುರು ಮದ್ದನ್ನು ಹಚ್ಚಿ ಬಟ್ಟೆ ಸುತ್ತಿದಳು ತಾಯಿ. ಆದರೂ, ಸಂಜೊತ್ತಿ ಊದಿ ಕೀವಾಯಿತು ಗಾಯ. ದುಃಖ ಸಂಕಟಗಳ ಕಣಜ ಎದೆಯ ಗೂಡು. ಗೋಳು–ಗೋಳು--ಕೊನೆಗಾಣದ ಗೋಳು. ನಾಲ್ಕೈದು ದಿನಗಳ ನಂತರ ಶ್ಯಾಮು ಬಂದ. ಹೊಟ್ಟೆ ಬೆನ್ನಿಗೆ ಹತ್ತಿ ಮುಖಬಾಡಿ ಸೊರಗಿದ್ದ

ಮಗನಿಗೆ ಬಿರು ನುಡಿಯಲು ಮನಸ್ಸಾಗಲಿಲ್ಲ ತಾಯಿಗೆ. ಉಪಚರಿಸಿ ಗಂಜಿ ಯೂಟವಿಟ್ಟಳು. ಅವನೀಗ ಲಚ್ಚಿಯ ಮುಖವನ್ನೂ ನೋಡಲಾರ; ಶಾಂತಿಯ ಬಳಿಯೂ ಸುಳಿಯಲಾರ.

ಶಾಂತಿ ಮಗನನ್ನು ಕುರಿತು "ನೀನು ದಿನದಿನಕ್ಕೂ ಬೆಳೆಯುತಿದ್ದಿ. ಹದಿನಾಲ್ಕು ವರ್ಷ ತುಂಬಿತು. ಮುಂದೆ ಮನೆಯ ಯಜಮಾನಿಕೆ ವಹಿಸಿ ಕೊಳ್ಳಬೇಕಾದವ. ಹೀಗಿದ್ದರೆ ಹೇಗೆ ಹೇಳು! ಅಪ್ಪನ ದುರ್ವ್ಯವಹಾರವನ್ನು ಸ್ವಂತ ಕಣ್ಣುಗಳಿಂದ ನೋಡುತಿದ್ದಿ. ಅಂದಮೇಲೆ, ಬುದ್ಧಿ ಕಲಿಯಬಾರದೇ? ಮುಂದೆ ನಿನ್ನಿಂದಲಾದರೂ ಈ ಜೀವಿತದಲ್ಲಿ ಅಲ್ಪ ಸ್ವಲ್ಪ ಸುಖ ಕಂಡೇನು ಎಂದು ಹಾರೈಸುತಿದ್ದರೆ ನೀನು ಹೀಗಾದೆಯಲ್ಲಾ, ಮುಂದೇನು ಗತಿ ?" ಎಂದಳು ಮ್ಲಾನ ಮುಖದಿಂದ.

ಅವನು ಮಾತಾಡಲಿಲ್ಲ. ರುದ್ರಮೌನವೇ ಉತ್ತರವಾಯ್ತು.

ಅವಳು ತಲೆಯನ್ನು ನೇವರಿಸಿ "ಇಂದು ಮೈಕೈ ತುಂಬಾ ನೋವು. ಒಂದು ಬಿಂದಿಗೆ ನೀರು ತಂದು ಕೊಡು ಮಗನೆ" ಎಂದಳು, ನುಡಿಯಲಾರದೆ ನುಡಿಯುವಂತೆ.

ಅವನು ಬಿಂದಿಗೆಯ ಸಹಿತ ಹೊರಟ. ನೀರು ಹೊತ್ತು ತಂದನೇನೋ ಹೌದು. ಮೆಟ್ಟಿಲು ಹತ್ತುವಾಗ ಕಾಲು ಎಡವಿ ಬಿದ್ದುದರಿಂದ ಇದ್ದೊಂದು ಬಿಂದಿಗೆಯೂ ಒಡೆದು ಹೋಯಿತು ! ಅದೇ ವೇಳೆಗೆ ಸಿದ್ದರಾಮ ಆಗಮಿಸಿದ. ಇದ್ದೊಂದು ಬಿಂದಿಗೆಯು ಒಡೆತ. ನಾಲ್ಕಾರು ದಿನಗಳು ಮನೆಗೆ ಬಾರದೆ, ಕಣ್ಣೆ ಬೀಳದೆ ಇದ್ದ ಪ್ರಸಂಗ ಅವನ ಉರಿಗಣ್ಣಿಗೆ ಕಿಚ್ಚು ಹಚ್ಚಿತು. ಹುಡುಗನ ರಟ್ಟೆ ಹಿಡಿದು ನಾಲ್ಕಾರು ಬಿಗಿದ. ಶ್ಯಾಮು ಕೊಸರಾಡಿ ಕೈ ತಪ್ಪಿಸಿದ ಗಳಿಗೆಯ ಲ್ಲಿಯೇ ಎದ್ದು ಬಿದ್ದು ಓಡಿಹೋದ. ಶಾಂತಿ ಬಾಗಿಲಿಂದಲೇ "ಶ್ಯಾಮೂ.... ಶ್ಯಾಮೂ!" ಎಂದು ಕೂಗಿದ ದನಿ ತಂಗಾಳಿಯಲ್ಲಿ ತೇಲಿಹೋಯಿತು. ಹುಡುಗ ಕಣ್ಮರೆಯಾದ ಶ್ಯಾಮೂ... ಶ್ಯಾಮೂ....

o o o o

ಶಾಂತಿಗೆ ಎಂಟು ಹತ್ತು ದಿನಗಳಿಂದ ಒಂದೇ ಸಮನೆ ಜ್ವರ. ಶರೀರ ಒಣಗಿ ಬತ್ತಿ ಬಾಡಿ ರಸಹೀನವಾಯಿತು. ಮಗ್ಗುಲಲ್ಲೇ ಮಲಗುತಿದ್ದ ನಾಗರತ್ನಳಿಗೂ ಅಂಟಿತು ಜ್ವರದ ಪಿಡುಗು. ಅಷ್ಟೇ ಅಲ್ಲದೆ ಊರಲೆಲ್ಲಾ ವಿಷಮ ಶೀತ ಜ್ವರವೋ ಡಿಂಗೂ ಜ್ವರವೋ ಮಲೇರಿಯಾ ಜ್ವರವೋ ಹರಡಿ ಮನೆ ಮನೆಯಲ್ಲೂ ಆತಿಥ್ಯ ಪಡೆದು ಎಷ್ಟೋ ಮಂದಿಯನ್ನು ಬಲಿ ತೆಗೆದುಕೊಂಡಾಗ ಸಿದ್ಧರಾಮ ನಿಜಕ್ಕೂ ಹೆದರಿ ಕಂಗಾಲಾದ. ಸರಕಾರಿ ಆಸ್ಪತ್ರೆಗೆ ಧಾವಿಸಿ ನೀರೌಷದ ತಂದು ಗಂಜಿ ಕಾಯಿಸುವ ಭಾರವನ್ನು ತಾನೇ ವಹಿಸಿಕೊಂಡ. ಮತ್ತೆ ಮೂರು ನಾಲ್ಕು ದಿನಗಳು ಸಂದುವು. ಆಸ್ಪತ್ರೆ ಔಷಧದಿಂದಲೂ ಜ್ವರ ಬಿಡದೆ ಹಾಸಿಗೆ ಹಿಡಿದಳು ಶಾಂತಿ. ದಿನದಿನಕ್ಕೂ ಎಲುಬಿನ ಹಂದರವಾಗಿ ರಕ್ತಹೀನವಾಗಿ ಜೀವಶ್ಶವವಾದ ಮಡದಿಯನ್ನು ನೋಡಿದರೆ ಬದುಕುಳಿವ ಸಂಭವ ತೋರುತ್ತಲೇ ಇಲ್ಲ. ಸಿದ್ಧರಾಮ ಆಹತನಾದ. ಈ ಇಳಿವಯಸ್ಸಿನಲ್ಲಿ ಮಡದಿಯನ್ನು ಕಳೆದುಕೊಂಡರೆ ತನ್ನ ಗತಿಯೇನು? ಎಂಬ ಪ್ರಶ್ನೆ ಧುತ್ತೆಂದು ಎದುರು ನಿಂತಾಗ ಮೈ ಗಡಗಡ ನಡುಗಿತು. ಜೋಯಿಸರಲ್ಲಿ 'ನಿಮಿತ್ತ' ನೋಡಿಸಿ ಚೌಡಿ ಕಾಟವೋ ರಣದ ಕಾಟವೋ ತಿಳಿದು ತಾಯಿತ ಕಟ್ಟಿಸುವ ಯೋಚನೆ ಬಂತು ಮನದಲ್ಲಿ. ಕೈಯಲ್ಲಿ ಕಾಸಿಲ್ಲದೆ ಹೋದರೆ ಕೆಲಸ ಆಗುವಂತಿಲ್ಲ. ಜೋಯಿಸರು ಸಾಮಾನ್ಯಕ್ಕೆ ಜಗ್ಗುವರಲ್ಲ. ಎಲ್ಲೆಲ್ಲಿ ಹಣ ದಕ್ಕಬಲ್ಲದೋ ಅಲ್ಲೆಲ್ಲಾ ಕೈಯೊಡ್ಡಿ ಬೇಡಿದ್ದಾಗಿದೆ. ಇನ್ನು ರಾಯರ ಪಾದವೇ ಗತಿ. ಜೀವಮಾನವೆಲ್ಲಾ ದುಡಿದರೂ ಮುಗಿಯದ ಸಾಲ.

ಆ ಯೋಚನೆಯಿಂದ ನೀಳವಾದ ಬಿಸಿಯುಸಿರು ಹೊರಬಿತ್ತು. ರಾಯರ ಮನೆಯತ್ತ ದಾಪುಗಾಲು ಹಾಕಿದ. ರಾಯರು ಮೊದಲು ನಿರಾಕರಿಸಿದರೂ ಅವನು ಬಹಳವಾಗಿ ಕಾಡಿಬೇಡಿದ ಮೇಲೆ ಅವಾಚ್ಯ ಶಬ್ದ ಶಪಿಸಿ ಇಪ್ಪತ್ತು ರೂಪಾಯಿಗಳನ್ನು ಕೊಟ್ಟರು.

"ಇಲ್ಲ ಒಡೆಯಾ ನಿಮ್ಮ ಪಾದದಾಣೆ ಇಂದಿಗೆ ಕುಡಿಯುವುದನ್ನು ಬಿಟ್ಟೆ. ಒಮ್ಮೆ ಅವಳು ಸರಿಹೋದರೆ ಸಾಕು. ಅನಂತರ ನಾನಾಯ್ತು ನಿಮ್ಮ ಪಾದವಾಯ್ತು."

ಅಂತಹ ಆಶ್ವಾಸನೆಗಳು ಅದೆಷ್ಟು ಬಾರಿಯೋ. ರಾಯರ ದನಿ ತಿರಸ್ಕಾರ ದಿಂದ ಹೊರಬಿತ್ತು,

"ನಿನ್ನ ಓಡಿಸದೆ ಬಿಟ್ಟಿದ್ದು ನನ್ನ ತಪ್ಪು. ಮಧ್ಯಾಹ್ನದ ನಂತರ ವಾದರೂ ಕೆಲಸಕ್ಕೆ ಬಾ."

ಅವನು ಅಲ್ಲಿಂದ ಓಡುತ್ತಲೇ ಹೋಗಿ ಜೋಯಿಸರ ಮನೆಯಲ್ಲಿ ಬ್ರಾಹ್ಮ ಣಿಯನ್ನು ಕಂಡು ತನ್ನ ಕರುಣ ಕತೆಯನ್ನೆಲ್ಲ ಅವಳ ಮನಮುಟ್ಟುವಂತೆ ಬಣ್ಣಿಸಿ ಹೇಳಿ ಕೇಳಿಕೊಂಡ,

"ಈಗಲೇ ತಾಯಿತ ಮಾಡಿಕೊಡಲು ಜೋಯಿಸರಿಗೆ ಹೇಳಿ ಅವ್ವಾ!"

ಆದರೂ, ಆ ಜೋಯಿಸರು ಹೊರಬರಲು ಒಂದು ಗಂಟೆಯನ್ನೇ ತೆಗೆದುಕೊಂಡರು.

ಜೇಬಿನಲ್ಲಿದ್ದ ದುಡ್ಡು ಮನವನ್ನು ಹೆಂಡದ ಮನೆಯತ್ತ ಸೆಳೆಯುತಿತ್ತು. ಸಿದ್ಧರಾಮ ಜೋಯಿಸರಿಗೆ ಕೈ ಜೋಡಿಸಿದ.

"ಸ್ವಾಮಿ, ಮನೆಯಲ್ಲಿ ಹೆಂಡತಿ ಹಾಸಿಗೆ ಹಿಡಿದಿದ್ದಾಳೆ. ನಿಮಿತ್ತ ನೋಡಿ ಒಂದು ತಾಯಿತ ಮಾಡಿಕೊಡಿ ದೇವರು ನಿಮಗೆ ಕೈ ಮುಗಿವೆ."

ಜೋಯಿಸರು ಇದೀಗಷ್ಟೇ ಸಂಧ್ಯಾವಂದನೆಯನ್ನು ಮುಗಿಸಿದ್ದಾರೆ. ಹಣೆಯಲ್ಲಿ ತ್ರಿಪುಂಡ್ರ ಎದೆ ತೋಳುಗಳಲ್ಲಿ ವಿಭೂತಿ ಪಟ್ಟೆಗಳು. ಜನಿವಾರ ಇವುಗಳಿಂದ ಕೂಡಿದ್ದರೂ ಮುಖದಲ್ಲಿ ಬ್ರಾಹ್ಮಣ್ಯದ ಕಳೆ ಲವಲೇಶವೂ ಇರ ಲಿಲ್ಲ. ಮೂಗಿಗೆ ನಶ್ಯವೇರಿಸಿ ಕೈಕೊಡವಿ ಕೇಳಿದರು,

"ಹಿಂದಿನ ಬಾರಿ ನಿನಗೆ ಕಾಹಿಲೆಯಾದಾಗ ನಿನ್ನ ಮಡದಿ ಅತ್ತು ಕರೆದು ಕಾಲಿಗೆಬಿದ್ದು ತಾಯಿತ ತೆಗೆದುಕೊಂಡು ನೀನು ಹಣ ತಂದುಕೊಡುವುದಾಗಿ ಹೇಳಿ ಹೋಗಿದ್ದಾಳೆ. ಈವರೆಗೆ ಅದರ ಹಣ ಬರಲಿಲ್ಲ. ಈಗ ಮತ್ತೆ ತಾಯಿತ?" ಸಿಟ್ಟಿನಿಂದ ಗುಡುಗಿದರು. ಒಡಲ ಕಿಚ್ಚು ಕಣ್ಣುಗಳಲ್ಲಿ ಕಿಡಿಗಳನ್ನು ಉಮಿಸಿತು. ಅಕ್ಷರ ಅಕ್ಷರಗಳಲ್ಲೂ ತಿರಸ್ಕಾರ ಹೊಮ್ಮಿತು.

"ಅಯ್ಯಾ ಎಂಟ್ಹತ್ತು ದಿನಗಳಿಂದ ಕೆಲಸಕ್ಕೆ ಹೋಗಿಲ್ಲ, ಕೆಲಸಕ್ಕೆ ಹೋದೊಡನೆಯೇ ಮೊದಲು ತೀರಿಸುವುದು ನಿಮ್ಮ ಸಾಲವನ್ನೇ. ಈಗ ನನ್ನ ಹೆಂಡತಿಯನ್ನು ಕಾಪಾಡಿ."

ಕೈಮುಗಿದು ಅಡ್ಡಬಿದ್ದು ಗೋಗರೆದ.

"ನಿನ್ನ ಗ್ರಹಚಾರ ಏನೇನೂ ಚೆನ್ನಾಗಿಲ್ಲ. ನಾನು ಅಂದೇ ತಾಯಿತ ಕೊಡುವಾಗ ನೋಡಿದ್ದೆ. ಚೌಡೇಶ್ವರಿಗೆ ಪೂಜೆ ಇಡಿಸು."

"ಆಗಲಿ, ನನ್ನೊಡೆಯಾ ನೀವು ಹೇಳಿದಂತೆಯೇ ಆಗಲಿ."

"ಈಗ ದುಡ್ಡು ತಂದಿರುವೆಯಾ ?"

"ರಾಯರ ಮನೆಗೆ ಹೋದೆ ಅವರಿರಲಿಲ್ಲ ಇನ್ನೊಮ್ಮೆ ನಾನೇ ತಂದು ಕೊಡುವೆ. ಇಲ್ಲದಿದ್ದಲ್ಲಿ ನೀವೇ ರಾಯರಿಂದ ನೇರವಾಗಿ ಪಡೆದುಕೊಳ್ಳಿ. ನಿಮ್ಮ ಹಣಕ್ಕೆ ಎಂದೂ ಮೋಸವಿಲ್ಲ. ದಯವಿಟ್ಟು ನನ್ನ ಹೆಂಡತಿಯ ಪ್ರಾಣ ಉಳಿಸಿ..."

ಅವನು ಗೋಗರೆಯುತ್ತಲೇ ಇದ್ದಾನೆ. ಕೊನೆಮೊದಲಿಲ್ಲದ ಬೇಡಿಕೆ ಸಲಿಸಿ 'ಹೋ' ಎಂದು ಅತ್ತೂಬಿಟ್ಟ. "ನೀವು ಕೊಡುವತನಕ ಹಂದುವುದಿಲ್ಲ ಒಡೆಯಾ" ಎಂದೂ ಹೇಳಿಕೊಂಡ.

ಜೋಯಿಸರು ಅವನ ಕಾಟವನ್ನು ಕಳೆಯುವುದಕ್ಕಾಗಿಯೇ ಕಾಟಾ ಚಾರದ ತಾಯಿತ ಮಾಡಿಕೊಟ್ಟರು. ಕೈಗೆ ತಾಯಿತ ಬಿದ್ದೊಡನೆಯೇ ತಲೆ ಬಾಗಿ ಅಡ್ಡಬಿದ್ದು "ಹಣ ತಂದು ಕೊಡುವೆ" ಎಂದು ದೃಢವಾದ ಆಶ್ವಾಸನೆ ನೀಡಿ ಧಾವಿಸಿದ್ದು ಹೆಂಡದ ಮನೆಗೆ. ಕೈಯಲ್ಲಿರುವ ಹಣ ಕರಗುವವರೆಗೂ ಕಂಠಪೂರ್ತಿ ಕುಡಿದು ತೂರಾಡುತ್ತಾ ಮನೆಯ ಹಾದಿ ಹಿಡಿದ. ದಿನವೂ ನಡೆ ಯುವ ಹಾದಿಯಾದ್ದರಿಂದ ಕಣ್ಮನಗಳ ಸಹಾಯವಿಲ್ಲದಿದ್ದರೂ ಸಾಗುತ್ತದೆ ಹಾದಿ.

ಮನೆ ಮುಟ್ಟಿದಾಗ ಮಡದಿಯೇ ಕೇಳಿದಳು "ತಾಯಿತ ತಂದಿರಾ?"

"ಎಲ್ಲಿಯ ತಾಯಿತ ? ನಿನಗೇನು ತಲೆ ಕೆಟ್ಟಿಲ್ಲವಷ್ಟೆ ?"

ಹೆಂಡದ ದುರ್ನಾತ ಮತ್ತು ಮಾತಿನ ಧಾಟಿ ಉತ್ತರ ಹೇಳಿದುವು. ಶಾಂತಿ ಮರುಮಾತಾಡದೆ ಸುಮ್ಮನಾದಳು. ಒಡಲ ಸಂಕಟ ಕಂಬನಿಯಲ್ಲಿ ಒಸರಿತು.

o o o o

ಸಿದ್ಧರಾಮು ಒಳಬಂದು ಮಡದಿಯನ್ನು ಕುರಿತು ಎಂದಿನಂತೆಯೇ ಕೇಳಿದ "ಜ್ವರ ಬಿಟ್ಟಿದೆಯಾ?"

ದಿನವೂ ಕೇಳುವ ಒಂದೇ ರೀತಿಯ ಪ್ರಶ್ನೆಗೆ "ಇಲ್ಲ" ಎಂದು ಹೇಳಿಹೇಳಿ ಬೇಸರವಾಗಿದ್ದುದರಿಂದಲೋ ಏನೋ ಆಕೆ "ಇಂದು ಬಿಟ್ಟಂತಿದೆ" ಎಂದಳು ಹುಬ್ಬೆತ್ತಿ ನೋಡದೆ. ಮಗ್ಗುಲಲ್ಲೇ ಮೈಮುದುಡಿ ಮಲಗಿದ್ದ ನಾಗು ಮಿಸುಕಾಡಲಿಲ್ಲ. ತಂದೆಯ ಪ್ರೀತಿಯ ಹೊನಲು ಎಂದೂ ಇತ್ತ ಹರಿದಿರಲಿಲ್ಲವಾಗಿ ಆತನ ಪರಿಚಯವೂ ಇರಲಿಲ್ಲ ಆವಳಿಗೆ. ಅಂದಿಂದಿಗೂ ಆತನ ಉಗ್ರ ರೂಪವನ್ನು ಕಂಡೊಡನೆಯೇ ಮನಃಪ್ರಾಣಗಳು ಆಮೆಯಂತೆ ಮುದುಡುತಿದ್ದುವು. ಅವಳಿಗೆ ಜ್ವರ ಬಂದದ್ದೇ ಆಗಲೀ, ಬಿಟ್ಟದ್ದೇ ಆಗಲೀ ಅವನಿಗೆ ತಿಳಿಯದು. ಅವಳನ್ನು ಕರುಣೆಯಿಂದ ಕಂಡವನೇ ಅಲ್ಲ. ಮೂಕಿ ಎಂಬ ಅಸಡ್ಡೆಯೇ ಯಾವಾಗಲೂ. ಹೆತ್ತವಳ ಅಕ್ಕರೆಯೊಂದೇ ಅವಳನ್ನು ಇಲ್ಲಿಯವರೆಗೆ ಬೆಳೆಸಿಕೊಂಡು ಬಂದಿತ್ತು. ಮುಂದೆಯೂ ಅವಳಿರುವ ತನಕ ಬೆಳೆಯುತ್ತದೆ.

ರುದ್ರಕರಾಳ ದಿನಗಳು ಒಂದೊಂದಾಗಿ ಬರುತ್ತಲೇ ಇರುತ್ತವೆ.

ಮನೆ ಗೋಳಿನ ಕಣಜವಾಗಿ ರೋಗದ ಬೀಡಾಗಿ ಬತ್ತಿದ ಕಣ್ಣುಗಳಲ್ಲೂ ಕಂಬನಿ ತರಿಸಿತ್ತು. ಜ್ವರ ಬಿಟ್ಟಿದ್ದರೂ ದೈಹಿಕ ಶಕ್ತಿಯ ಕಣಕಣವನ್ನೂ ಹೀರಿ ಬಿಟ್ಟಿತ್ತು. ಏಳೆಂಟು ದಿನಗಳು ಕಳೆದರೂ ಶ್ಯಾಮುವಿನ ಸುಳಿವಿಲ್ಲ; ಸುದ್ದಿಯೂ ಇಲ್ಲ. ಬದುಕಿರುವನೋ ಇಲ್ಲವೋ ಅದೂ ತಿಳಿಯದು. ಮಲಗಿದಲ್ಲೇ ಬಾಗಿಲಕಡೆ ನೋಡಿ ನೋಡಿ ಕಣ್ಣುಗಳೇ ಬತ್ತಿದುವು.

ದಿನಮಾನಗಳು ಉರುಳುತ್ತಲೇ ಇವೆ. ಅವುಗಳೊಂದಿಗೆ ಬದುಕಿನ ಹುರುಪೂ ಕರಗುತ್ತದೆ. ಜ್ವರದ ಬಾಧೆಯಿಂದ ದೇಹ ಪ್ರಕೃತಿ ಎಷ್ಟು ಕ್ಷೀಣಿಸಿತ್ತೋ ಅದಕ್ಕೂ ಮಿಗಿಲಾಗಿ ಮಾನಸಿಕ ಕ್ಷೋಭೆಯಿಂದ ಕ್ಷೀಣಿಸಹತ್ತಿತು. ಶಾಂತಿ ದುಃಖ ದುಗುಡಗಳ ವಶೀಭೂತಳಾಗಿ ಕಂಬನಿಗರೆಯುತ್ತ ಮಲಗಿರುತಿದ್ದುದನ್ನು ನಾಗು ಯಾವ ರೀತಿ ಅರ್ಥೈಸಿದಳೋ ಏನೋ, ಶಯ್ಯಾಪ್ರಾಂತದಲ್ಲಿ ಕುಳಿತು ಖಿನ್ನಮುಖಿಯಾಗಿ ತಾಯಿಯ ಕ್ಷೀಣಿತವಾದ ಕೈಗಳನ್ನು

ಹಿಡಿದುಕೊಂಡು ಕೈಸನ್ನೆಯಲ್ಲಿ "ನೀನು ದಿನದಿನಕ್ಕೂ ಸೋಲುತ್ತಿದ್ದರೆ ನಿನ್ನ ಗತಿಯೇನು ?" ಎಂಬಂತೆ ಕೈಸನ್ನೆ ಮಾಡಿದಳು.

"ದೈವೇಚ್ಛೆ ಏನಿದೆಯೋ ಹಾಗಾಗುತ್ತೆ ಚಿಂತಿಸಬೇಡ ಮಗಳೇ" ಎಂದಳು ಶಾಂತಿ ಕರುಣ ಕಂಠದಿಂದ.

ಒಂದೆರಡು ದಿನಗಳಿಂದ ಜ್ವರವಿರದುದರಿಂದ ನೀರು ತರುವ ಕೆಲಸವನ್ನೂ ಕಡೆಗಣಿಸಿದ ಸಿದ್ಧರಾಮು. ಬೆಳಗಿನ ಹೊತ್ತು ಎರಡು ಕೊಡ ತಂದಿಟ್ಟರೆ ಮುಗಿಯಿತು. ತದನಂತರ ಮಡದಿಯೇ ಅದರ ಹೊಣೆಗಾರ್ತಿ. ಮನೆಯೊಳಗೆ ಹೆಜ್ಜೆ ತೆಗೆಯುವುದೇ ಕಷ್ಟವಿರುವಾಗ ದೂರದ ತೊರೆಯಿಂದ ನೀರು ತರುವ ಗೋಳನ್ನು ಹಚ್ಚಿಕೊಳ್ಳಲಾಗದೆಯೇ ನೆರೆಹೊರೆಯ ಮನೆಗಳಲ್ಲಿ ಬೇಡಿ ಅಷ್ಟಿಷ್ಟು ನೀರನ್ನು ಈಸಿಕೊಂಡು ಗೃಹಕೃತ್ಯ ಪೂರೈಸಿ ಹಾಸಿಗೆ ಸೇರಿದಳು. ಎಷ್ಟೇ ಪ್ರಯತ್ನಿಸಿದರೂ ಒಡಲ ಸಂಕಟವನ್ನು ಅದುಮಿಡಲಾಗಲಿಲ್ಲ. ಮುಂದೆಯಾದರೂ ಮಗನ ಸುಖಾಶ್ರಯ ಪಡೆದುಕೊಳ್ಳಬಹುದೆಂಬ ದೂರದಾಸೆಗೆ ಕಲ್ಲುಬಿತ್ತು. ಇನ್ನು ಈ ಬದುಕಿಗೆಲ್ಲಿಯ ಬೆಲೆ?

ಕುಲದೀಪಕರಿಲ್ಲದ ಕಡು ಕತ್ತಲೆಯ ಬಾಳಿನಲ್ಲಿ ಬದುಕುವುದಾದರೂ ಏಕೆ? ಎಂಬ ಪ್ರಶ್ನೆ ಏಳುತ್ತಲೇ ಇರುತ್ತದೆ. ಮನವನ್ನು ಕೂರ್ಮುಳ್ಳಿನಿಂದ ತಿವಿಯುವಂತೆ. ಆದರೂ, ಶ್ಯಾಮು ಹಿಂದಿರುಗಿ ಬಂದಾನೇನೋ ಎಂಬ ದೂರದಾಸೆಯೂ ಇಲ್ಲದಿಲ್ಲ. ಅಂತಲೇ ಕಾಲಯಾಪನೆ ನಡೆಯುತ್ತದೆ.

ಹೊತ್ತು ಉರುಳಿತು. ರವಿಯ ಬಿಂಬ ಬಾನೇರುತ್ತಿದೆ.

ಕೇರಿಯ ಹಿರಿಯರೆಲ್ಲಾ ಕೂಲಿಗಾಗಿ ಹೊರಹೋಗಿದ್ದಾರೆ. ಬಯಲಿನಲ್ಲಿ ಮಕ್ಕಳ ನಗೆಚಾಟಿಕೆ ಮಾತುಗಳು ಆಗಾಗ ಕೇಳಿಸುತ್ತಿದೆ. ಮತ್ತಾವ ಸದ್ದೂ ಇಲ್ಲದೆ ಊರೆಲ್ಲಾ ಶಾಂತ ಸಮುದ್ರದಂತೆ ತಣ್ಣಗಿದೆ. ಆದರೇನು ? ಶಾಂತಿಯ ಮನಕೆ 'ಶಾಂತಿ' ದೂರ ದೂರವೇ. ಒಳಗಡೆ ನೀರಿನ ಬಿಂದಿಗೆಯೂ ಖಾಲಿ. ಕಾಳಿನ ಡಬ್ಬಿಯೂ ಖಾಲಿ. ಸಧ್ಯಕ್ಕೆ ಅಕ್ಕಿನುಚ್ಚು ಮಾತ್ರವಿದೆ. ಅದೇ ಜೀವ ನಿರ್ವಹಣೆಗೆ ಸರ್ವಾಧಾರ. ಒಂದು ವಾರದಿಂದ ಅವರಿವರ ಕೈಯೇ ನೀರನ್ನು ಪೂರೈಸಿತ್ತು. ಇಂದು ಹೋಗಿ ನೀರು ತರದೇ ವಿಧಿಯಿರಲಿಲ್ಲ.

ಬೇನೆಬಿದ್ದ ಶರೀರ ತರಗೆಲೆಯಂತೆ ತೂರಾಡುತ್ತಿದೆ. ದಾರಿಯಲ್ಲಿ ಮುಗ್ಗರಿಸಿ ಬೀಳದಿದ್ದರೆ ಸಾಕು....ಎಂಬ ಯೋಚನೆಯಲ್ಲಿ ಶಾಂತಿ ಕೊಡವನ್ನು ಕೈಕೊಂಡು ಮೆಟ್ಟಿಲಲ್ಲಿ ಕುಳಿತಿದ್ದ ನಾಗುವಿನ ತಲೆಯನ್ನು ನೇವರಿಸಿ "ಪಾಪ, ದುರದೃಷ್ಟದ ಮಗು. ಮುಂದೇನು ಗತಿಯೋ....." ಎಂದುಕೊಂಡು ನಿಟ್ಟುಸಿರು ಬಿಟ್ಟು ಮೆಟ್ಟಿಲಿಳಿದಳು...ದೈವಕ್ಕೆ ಕಣ್ಣಿಲ್ಲ. ಕಷ್ಟಕೊಟ್ಟವರಿಗೇ ಮೇಲಿಂದ ಮೇಲೆ ಕಷ್ಟ ಕಾರ್ಪಣ್ಯ. ಮನುಷ್ಯರಿಗಂತೂ ನ್ಯಾಯ–ನೀತಿ ಇಲ್ಲ. ದೇವರಿಗೂ ಇಲ್ಲದೇ ಹೋಯಿತೇ? ಹೆಣ್ಣು ಜೀವ ಎಂಬ ಕರುಣೆಯೂ ಬೇಡವೆ...?

ಎದೆಯ ಹಕ್ಕಿ ಉಲಿಯುತ್ತಲೇ ಇತ್ತು. ಹೇಗೆ ದಾರಿ ಸಾಗಿತೋ ತಿಳಿಯದು. ತೊರೆಯ ತೀರ ಸೇರಿದಾಗಲೇ ಅರಿವು. ಮುಂಗಾರು ಮಳೆಯಿಂದಾಗಿ ತೊರೆ ತುಂಬಿ ಹರಿಯುತ್ತಿದೆ. ಲಚ್ಚಿ ತೊರೆಯಲ್ಲಿ ನೀರು ತುಂಬಿ ಹರಿಯುತ್ತಿದೆ ಎಂದು ಹೇಳಿದ್ದುಂಟು. ಆದರೂ, ಇಷ್ಟು ತುಂಬಿದೆಯೆಂಬ ಕಲ್ಪನೆಯಿರಲಿಲ್ಲ ಮನಸ್ಸಿಗೆ. ಎರಡೂ ದಂಡೆಗಳನ್ನು ಕೊಚ್ಚಿ ಹರಿಯುತ್ತಿರುವುದರಿಂದ ಕೆನ್ನೀರಾಗಿ ಹರಿಯುತ್ತಿದೆ ನೀರು. ನೀರಿನ ರಭಸವನ್ನು ನೋಡುತ್ತ ನೀರನ್ನು ಮೊಗೆದುಕೊಂಡಳು. ತುಂಬಿದ ಕೊಡ ಎತ್ತಿಕೊಳ್ಳುವಾಗ ಜೀವ ತತ್ತರಿಸಿ ಮಗ್ಗರಿಸಿ ಬಿದ್ದ ಶಾಂತಿ ಮಕ್ಕಳನ್ನು ನೆನೆಯುತ್ತ ಪ್ರವಾಹದಲ್ಲಿ ಗಳಿಗೆಯೊಳಗಾಗಿ ಕೊಚ್ಚಿಹೋದಳು.

o o o o

ಈ ಇಳಿ ವಯಸ್ಸಿನಲ್ಲಿ ಮಡದಿ ಕೈಬಿಟ್ಟು ಹೋದಳೇ ಎಂದು ಬಾಯಿ ಬಡಿದುಕೊಂಡು ಬಹಳಷ್ಟು ಗೋಳಾಡಿದ ಸಿದ್ಧರಾಮು. ಬದುಕಿದ್ದಾಗ ಎಷ್ಟು ತಾತ್ಸಾರವೋ ಸತ್ತಾಗ ಅಷ್ಟೇ ಆಕರ ಅಕ್ಕರೆ ಎಲ್ಲಾ. ಆದರೆ, ಅದೆಷ್ಟು ದಿನ? ದುಃಖ ದುಗುಡಗಳು ಒತ್ತಟ್ಟಿಗಿರಲಿ ಹೊಣೆಗಾರಿಕೆ ಹೆಗಲೇರಿದಾಗ ಮುಂದೇನು? ಎಂಬ ಪ್ರಶ್ನೆ ಮನದಲ್ಲಿ. ಅವಳಿದ್ದಾಗ ಗೃಹಕೃತ್ಯ ಸ್ತ್ರೀಜನೋಚಿತವಾದುದು ಎಂಬ ಘೋಷಣೆ–ಬಿಂಕ. ಯಾರಿದ್ದಾರೆ ಇಂದು ಮಾಡಿಕೊಡಲು? ಕೆಲವು ದಿನಗಳೇನೋ ಹಾಗೂ ಹೀಗೂ ಕಳೆದುವು. ಅನಂತರ ಯಾರಾದರೂ ಹೆಣ್ಣು ಕೊಟ್ಟಾರೆಯೆ? ಅಥವಾ ಆ ಹೆಣ್ಣು, ಈ ಹೆಣ್ಣು,

ಯಾವೊಂದು ಗತಿ ತಪ್ಪಿದ ಅಥವಾ ತಪ್ಪಲಿರುವ ಹೆಣ್ಣು ಸಿಕ್ಕೀತೆ? ಎಂಬ ಯೋಚನೆ ಮೂಡಿದುದರಿಂದ ಆ ದಿಶೆಯಲ್ಲಿ ಕಾರ್ಯ ಚಟುವಟಿಕೆ ಆರಂಭವಾದರೂ ಸಫಲತೆ ಮೂಡಲಿಲ್ಲ. ಮೇಲಾಗಿ, ಮೂಗಿ ಮಗಳೊಂದು ತಲೆ ಭಾರ. ಗಂಜಿ ಬೇಯಿಸಿಕೊಂಡಾಗ ಅವಳ ಮುಂದೆ ಒಂದು ತಟ್ಟೆಯಿಟ್ಟರೆ ಮುಗಿಯಿತು.

ನಾಗು ತಾಯಿಯ ಮರಣವನ್ನು ಅಲ್ಪಸ್ವಲ್ಪ ಅರ್ಥಮಾಡಿಕೊಂಡಿದ್ದರೂ ಅವಳು 'ಇನ್ನಿಲ್ಲ' ಎಂಬುದನ್ನು ಅರಿತುಕೊಳ್ಳದೆ ಅಳುತ್ತಾ ಹಾದಿ ನೋಡುವುದೊಂದೇ ದಿನಚರಿಯಂತೆ ಕಣ್ಣಿಡುವಳು ಹಾದಿಯ ಕಡೆಗೆ.

ಸೂರ್ಯ ಪಡುವಣ ಮಟ್ಟಿಗೆ ಇಳಿಯುತ್ತಿದ್ದ.

ಕೋಗಿಲೆಗಳ ಸಂಧ್ಯಾರಾಗಕ್ಕೆ ಮನಮತ್ತ ಭ್ರಮರಗಳ ಗುಂಜಾರವ ಮೊದಲ ಶ್ರುತಿ.

ಮೆಟ್ಟಿಲುಗಳ ಮೇಲೆ ಕುಳಿತು ಹಾದಿಯ ಮೇಲೆ ಕಣ್ಣು ಹರಿಸಿದ್ದ ನಾಗುವನ್ನು ಕಂಡು ಅಲ್ಲಿಗೆ ಬಂದ ಲಚ್ಚಿ ಅವಳ ತಲೆಯನ್ನು ನೇವರಿಸಿ ಬಾಚಿ ಜಡೆ ಹೆಣೆದು "ಪಾಪ...ನಾಗು ದೇವರು ನಿನಗೆ ಈ ಕಷ್ಟ ಕೊಡಬಾರದಿತ್ತು." ಎಂದಳು. ನಾಗು ಮಿಕಿಮಿಕಿ ನೋಡಿದಳು ಮಾತ್ರ. ಅವಳಿಗೇನೂ ಅರ್ಥವಾಗಲಿಲ್ಲ. ಹಳ್ಳಿಯ ಪ್ರಶಾಂತ ವಾತಾವರಣದಲ್ಲಿ ಹಸುರ್ಲೋಕ ವರ್ಣವರ್ಣಮಯವಾಗಿ ವಿಜೃಂಭಿಸುತ್ತಿದೆ. ಗಿಡ–ಮರ–ಬಳ್ಳಿಗಳಿಂದ ಕುಸುಮದಳ–ಕುಸುಮರೇಣು ಚೆಲ್ಲಿದ ವನಭೂಮಿಯು ಚಿತ್ತಾರ ರಂಗವಲ್ಲಿ ಬರೆದಂತೆ ಮನಮೋಹಕ.

ಆದರೆ...!

ಧೀಮಂತಿಕೆಯ ಅಭಾವದಿಂದ ಅಲಕ್ಷ್ಯ–ಅಸಡ್ಡೆ. ದಾರಿದ್ರ್ಯ ದೇವತೆಯ ಉತ್ತಾಲ ನರ್ತನ.

ಮರುದಿನ ದೂರ ದಿಗಂತದಲ್ಲಿ ಅರುಣೋದಯವಾದಾಗಲೇ ನಾಗು ಮೃತಳಾದಳೆಂಬ ಸುದ್ದಿ ಹರಡಿತು. ಮನೆಮನೆಗಳಿಗೆ ಸಿದ್ಧರಾಮ ಕೂಗಿ ಹೇಳಿದ್ದ.

"ನಿನ್ನೆ ಸುಖವಾಗಿದ್ದಳಲ್ಲ, ಇಂದೇನಾಯಿತು ?"

ಸಿದ್ಧರಾಮು ಅಷ್ಟೇ ಉದಾಸೀನದಿಂದ ಉತ್ತರಿಸಿದ "ರಾತ್ರಿಯೆಲ್ಲಾ ಗೊರಗೊರ ಎನ್ನುತಿದ್ದಳು. ಬೆಳಿಗ್ಗೆ ಏಳಿಸಿದಾಗ ಏಳಲಿಲ್ಲ. ಹೋಗಲಿ ಬಿಡಿ, ಬಾಳಲಾರದೇ ಬಾಳುತಿತ್ತು ಹುಡುಗಿ. ಇನ್ನಾದರೂ ಜೀವಕ್ಕೆ ತಣ್ಣಗಾಗಲಿ ನಾನು ಶ್ಯಾಮೂಗೇ ಮರುಗಲಿಲ್ಲ. ಇನ್ನು ಇವಳಿಗೆ ಮರುಗಿ ಮಾಡುವುದೇನು ?"

ಒಳ ಬಂದವರೆಲ್ಲಾ ಹೊದ್ದಿಕೆಯನ್ನೆಳೆದು ನೋಡಿದರೆ ಕಂಡು ಬಂದ ವಿಚಾರವೇ ಬೇರೆ. ಕತ್ತು ಊದಿ ಹಸುರ್‍ಗಟ್ಟಿತ್ತು ! ಕತ್ತಿಗೆ ನೇಣು ಬಿಗಿದು ಮಲಗಿದ್ದಲ್ಲೇ ಕೊಲೆ ಮಾಡಿದ್ದ ಸಿದ್ಧರಾಮು. ಅನೇಕರು ಸಿಡಿದೆದ್ದರೂ ಸಿದ್ಧರಾಮು ಸರ್ವಥಾ ಅಪರಾಧವನ್ನು ಒಪ್ಪಿಕೊಳ್ಳಲು ಸಿದ್ಧನಿರಲಿಲ್ಲ.

"ಅವಳಿಗೆ ಗಂಟಲು ನೋವು ಬಂದಿರಬಹುದು. ಅದರಿಂದಲೇ ಗಂಟಲ ಊತ ನೀವೆಲ್ಲಾ ಕೂಡಿ ಬದನೆಕಾಯಿ ಬ್ರಹ್ಮರಾಕ್ಷಸ ಮಾಡುತಿದ್ದೀರಿ. ಇಂತಹ ಹುಡುಗಿಗೆ ಬದುಕಾದರೂ ಏಕೆ ಬೇಕು? ಹೇಗೂ ಹೋಗಿದ್ದಾಳೆ ಇನ್ನು ಮಣ್ಣು ಕೊಟ್ಟರಾಯಿತು."

ಅವನು ಕೊಟ್ಟ ಕಾರಣ ಮತ್ತು ಧೋರಣೆ ಎರಡೂ ಜನ ಸಮ್ಮತವಾಗಲಿಲ್ಲ. ಸುದ್ದಿ ಕಾಳ್ಗಿಚ್ಚಿನಂತೆ ಹರಡಿತು. ಶವ ಸಂಸ್ಕಾರಕ್ಕೆ ತಡೆ ಬಿದ್ದು ಪೋಲೀಸರು ಬಂದರು. ವೈದ್ಯ ಪರೀಕ್ಷೆಗೆ ಶವ ಹೋಯಿತು. ಅಲ್ಲಿ ನೇಣು ಬಿಗಿದು ಕೊಲೆ ಮಾಡಿದ ವಿಚಾರ ಸಾಬೀತಾಗಿ ಸತ್ಯ ಹೊರಬಿತ್ತು.

ಅಪರಾಧಿಗೆ ಜೀವಾವಧಿ ಕಠಿಣಶಿಕ್ಷೆ ವಿಧಿಸಿ ಜೈಲಿಗೆ ದಬ್ಬಿತು ಸರಕಾರ.

ಸಿದ್ಧರಾಮು ಅಸಂತುಷ್ಟನೇನೂ ಆಗಲಿಲ್ಲ. ಅಟ್ಟಹಾಸದಿಂದ ನಗುತ್ತ "ನಾನು ಈವರೆಗೆ ಅನುಭವಿಸಿದ್ದು ಕಠಿಣ ಶಿಕ್ಷೆಯೇ. ಇನ್ನು ಮುಂದಿನದು ಏನೇನೂ ಹೆಚ್ಚಲ್ಲ. ಸಧ್ಯ ಒಲೆ ಊದಿ ಗಂಜಿ ಕಾಯಿಸಿಕೊಳ್ಳುವ ಗೋಜಿಲ್ಲ. ಇಳಿ ವಯಸ್ಸಿನಲ್ಲಿ ಸಾಲ ತೀರಿಸುವ ತೊಂದರೆಯಿಲ್ಲ. ಮೂಗಿ ಕಿವುಡಿ ಮಗಳ ಹೊಣೆಗಾರಿಕೆಯಿಲ್ಲ. ಸಾಮಾಜಿಕ ಕಾಟವಿಲ್ಲ. ರಾಯರ ಕೋಪತಾಪಗಳಿಲ್ಲ. ಶಕ್ತಿಯಿದ್ದಷ್ಟು ಕೆಲಸ ಮಾಡಿ ಹೊಟ್ಟೆ ತುಂಬುವೆ. ಅಷ್ಟೇ ಸಾಕು, ದೈನೇಚ್ಛೆಗೆ ಯಾರೂ ಹೊಣೆಯಲ್ಲ...."

— ೦ —

ಭಾಗೀರಥಿಯ ಪತ್ರ

೧೦

ಅಸತೋಮಾ ಸದ್ಗಮಯ

....ಈ ಪತ್ರವನ್ನು ಬರೆಯಲು ಎಷ್ಟೆಷ್ಟು ದಿನಗಳಿಂದ ಪ್ರಯತ್ನಿಸುತ್ತಿರುವೆನೋ, ಅದು ದೇವರಿಗೇ ಗೊತ್ತು. ಬೆಂದೊಡಲ ಬೇಗುದಿಯಲ್ಲಿ ಬರೆಯುವುದೆಂದರೆ ವಿಷಯ ನಿಚ್ಚಳವಾಗಿ ಹೊಳೆಯುವುದೇ ಇಲ್ಲ. ಒಮ್ಮೆ ಲೇಖನಿಯನ್ನು ಕೈಕೊಂಡು ಎಷ್ಟೋ ಹೊತ್ತು ಯೋಚಿಸಿದೆ. ಮನಸ್ಸು ಸಂಕೋಚದಿಂದ ಮುದುಡಿತು. ಬರೆಯಲಾಗಲಿಲ್ಲ. ಪ್ರಯತ್ನಿಸಿಯೂ ನಾನು ಸೋತು ಹೋದೆ. ಹೀಗೆ ಎಷ್ಟೋ ದಿನ ಕಳೆಯಿತು. ಈ ಸಲ ಧೈರ್ಯ ಮಾಡಿರುವೆ. ಆದರೆ, ಇದನ್ನೆಲ್ಲಾ ಒಂದೇ ಸಲಕ್ಕೆ ಬರೆದು ಮುಗಿಸಿದೆ ಎಂದುಕೊಳ್ಳಬೇಡ. ಆಗಾಗ–ಅಷ್ಟಿಷ್ಟು ಬರೆಯುತ್ತಾ ಬಂದಿರುವೆ...ಎನ್ನುವುದಕ್ಕೆ ನನಗೆ ತುಂಬಾ ಸಂಕೋಚ, ದುಃಖ ಇನ್ನೂ ಏನೇನೋ...

ಏನು ಮಾಡಲಿ ಹೇಳು ? ಪರಿಸ್ಥಿತಿಯ ಕೂಸಾದ ನಾನು ಬರೆಯುವುದು ವ್ಯರ್ಥ. ಆದರೂ, ಇದೊಂದು ನನ್ನ ಸಾಹಸಕಾರ್ಯ ಎನ್ನಬಹುದು. ಅಂದರೆ, ನನ್ನ ಬೆನ್ನನ್ನು ನಾನೇ ತಟ್ಟಿಕೊಂಡಂತೆ. ಇರಲಿ, ಇದು ಅಂತಹ ಕೆಟ್ಟದೆಂದೇನೂ ನಾನು ಭಾವಿಸಲಾರೆ. ಸಂಕಟ–ಸಂಕಷ್ಟಗಳಿಂದ ಉಸಿರಾಡುವ ಜೀವ ಯಾವ ಆದೇಶ ನೀಡುತ್ತದೋ ಅದು ಲೇಖನಿಯ ಮಸಿಯಲ್ಲಿ ಹರಿಯುವುದು ಸತ್ಯ. ನೀನು ಲೋಕ ಪ್ರಜ್ಞೆ ಉಳ್ಳವಳು. ಜೀವನ ಪರಿಸ್ಥಿತಿಯನ್ನು ತೂಗಿ ನೋಡಬಲ್ಲೆ. ಮರುಗಿ ಕನಿಕರಗೊಂಡರೆ ಕಂಬನಿ ಮಿಡಿ. ಇದೆಲ್ಲಾ ಅನಿವಾರ್ಯ ಎಂದು ಉದಾಸೀನಗೊಳ್ಳುವುದಾದರೂ ಸರಿ. ಕೆಲವೊಮ್ಮೆ ನೀನು ಪೂರ್ತಿ ಪತ್ರವನ್ನು ಸಮಾಧಾನದಿಂದ ಓದುವೆಯೋ ಇಲ್ಲವೋ ಎಂಬ ಯೋಚನೆಯೂ ಬರುತ್ತೆ. ನೀನು ಓದಿದರೆ ನಿನ್ನ ಅಭಿಪ್ರಾಯವನ್ನು ಬರೆದು ತಿಳಿಸು. ಹಿತ

ವಾದರೂ ಸರಿಯೆ; ಅಹಿತವಾದರೂ ಸರಿಯೆ. ತಿಳಿಸುವುದರಲ್ಲಿ ಸಂಕೋಚ ಬೇಡವೇ ಬೇಡ. ನಾನು ಸುಖ–ದುಃಖಗಳಿಗೆ ಪಕ್ವಾದವಳು. ನಿನ್ನ ಪ್ರತಿಕ್ರಿಯೆಯನ್ನು ಪ್ರೀತಿಯಿಂದ ಒಪ್ಪಿಕೊಳ್ಳುವುದು ಮಾತ್ರವಲ್ಲ, ಹೃದಯದಲ್ಲಿ ಭರಿಸುವೆ.

ನಾನೊಬ್ಬ ಓದುಗಳು. ಸ್ವಲ್ಪ ಸಮಯ ಸಿಕ್ಕಿದರೂ ಓದುವುದೊಂದು ನನ್ನ ಹವ್ಯಾಸ. ಹಾಗೆ ಓದುವುದರಿಂದ ಅಲ್ಪಸ್ವಲ್ಪ ಪ್ರಪಂಚ ಪ್ರಜ್ಞೆ ಪಡೆದಿರುವೆ. ಇಲ್ಲವಾದಲ್ಲಿ ನನ್ನ ಬದುಕೊಂದು ಕೂಪಕೂರ್ಮವೇ ಆಗುತಿತ್ತು. ಈಗಲೂ ಅದಕ್ಕಿಂತ ಕೇವಲ ಒಂದೆರಡು ಹೆಜ್ಜೆ ಮುಂದೆ ಅಷ್ಟೆ... ಆನಂದ ಮಠದಿಂದ ಇಂದಿನವರೆಗಿನ ಅನೇಕ ಕಾದಂಬರಿಗಳನ್ನು ಓದಿರುವೆ; ಓದುತ್ತಿರುವೆ. ಅವುಗಳ ಮುಖೇನ ಪ್ರಪಂಚ ಪರಿಚಯ ಸಾಕಷ್ಟು ಆಗಿದೆ. ಒಂದೊಂದು ಕಾದಂಬರಿಯೂ ಸ್ತ್ರೀ ಶೋಷಣೆಯ ಸ್ಪಷ್ಟ ಚಿತ್ರ. ನಾನು ನನ್ನ ಜೀವನವೊಂದು ನರಕವಿರಬಹುದು.... ನನ್ನಷ್ಟು ಸಂತ್ರಾಸಿತರು ಮತ್ತಾರೂ ಇರಲಾರರು ಎಂದುಕೊಳ್ಳುತಿದ್ದ ದಿನಗಳೆಷ್ಟೋ.... ಈಗೀಗ ನಮ್ಮ ಸಮಾಜದ ರೂಪುರೇಷೆಗಳು ಸ್ತ್ರೀದುರಂತಕ್ಕಾಗಿಯೇ ರೂಪಿಸಲ್ಪಟ್ಟಿವೆ ಎಂಬುದರ ಅರ್ಥ ಚಿತ್ರವತ್ತಾಗಿ ತೋರುತ್ತಿದೆ. ಆದ್ದರಿಂದ ಈ ಅನಿಷ್ಟವನ್ನು ಸರಿಪಡಿಸುವಂತಾದ್ದಲ್ಲ ಎಂಬುದು ಖಚಿತ.

....ನಾನು ಐದುಮಂದಿ ಅಣ್ಣ ತಮ್ಮಂದಿರೊಂದಿಗೆ ಜನ್ಮ ತಳೆದ ಒಬ್ಬಳೇ ಮಗಳು. ಏಳನೆಯ ಇಯತ್ತೆಯವರೆಗೆ ಓದಿರುವೆ. ಶಾಲೆಯಲ್ಲಿನ ಎಲ್ಲಾ ಮಕ್ಕಳಿಗೂ ಮುಂಚೂಣಿಯಲ್ಲಿರುತಿದ್ದ ಹುಡುಗಿ. ಅದೇ ಅಣ್ಣ ತಮ್ಮಂದಿರು ಹಾಗಲ್ಲ. ಓದು ವಿದ್ಯೆಗಳಲ್ಲಿ ಬಲೂ ಹಿಂದೆ. ಆಟ ಊಟ ತಂಟೆಗಳಲ್ಲಿ ಬಹಳ ಮುಂದೆ. ಶಾಲಾವರದಿ ಅವರ ಕಡು ಮೂರ್ಖತೆಯನ್ನು ಸಾರಿ ಹೇಳುತಿತ್ತು. ಅಪ್ಪ ಎಲ್ಲರನ್ನೂ ಹೊಡೆದು ಬಡಿದು ಒತ್ತಾಯ ಪೂರ್ವಕವಾಗಿ ಶಾಲೆಗೆ ಕಳುಹಿಸುತಿದ್ದರು. ಸಲಸಲಕ್ಕೂ ಸೋಲು ಕಟ್ಟಿಟ್ಟ ಬುತ್ತಿ. ಒಂದೊಂದು ತರಗತಿಯನ್ನು ದಾಟಬೇಕಾದರೆ ಎರಡು ಮೂರು ವರ್ಷಗಳ ಅವಧಿ ಎಲ್ಲರಿಗೂ. ಅಂತೆಯೇ, ಅವರಿಗೆ ಬಲಾತ್ಕಾರ ಮಾಘ ಸ್ನಾನದಿಂದ ವಿದ್ಯೆ ಲಭ್ಯ. ಕುಟುಂಬದಲ್ಲಿ–ಸಮಾ

ಜದಲ್ಲಿ ಗೌರವ ಘನತೆಗಳ ರಾಜೋಪಚಾರ. ಅದೇ ಸ್ತ್ರೀಗಣಕ್ಕೆ ಅಡಿಗೆಮನೆಯ ಮುಸುರೆಯ ಅದ್ಭುತ ಭಂಡಾರ. ಅವಳಿಗೆ ದಾಸ್ಯದ ಕಬ್ಬಿಣದ ಸಂಕೋಲೆ. ನಾನು ಈ ಸಂಕಷ್ಟದಿಂದ ಪಾರಾಗಲೆಂದೇ ವಿದ್ಯೆ ಕಲಿತು ಸ್ವಾತಂತ್ರ್ಯ ಜೀವನ ನಡೆಸಿಕೊಳ್ಳುವ ಉದ್ದೇಶ ಹೊಂದಿದ್ದೆ. ಅಣ್ಣಂದಿರಂತೆಯೇ ನಾನೂ ವಿದ್ಯೆ ಕಲಿಯುತ್ತೇನೆಂದು ನಮ್ಮವರನ್ನು ಕಾಡಿ ಬೇಡಿದೆ. ವರ್ತಮಾನ ಯುಗ ಧರ್ಮವನ್ನು ಅರಿತವರೆಂದು ಅಣ್ಣಂದಿರಿಗೂ ದುಂಬಾಲ ಬಿದ್ದೆ. ಯಾರಿಗೂ ನನ್ನ ಮೇಲೆ ಕರುಣೆ ಹುಟ್ಟಲಿಲ್ಲ. ಅಪ್ಪನ ಕಿಡಿಗಣ್ಣ ನೋಟ ಮತ್ತು ಉಚ್ಚ ದನಿಯ ಕಿರುಚಾಟ ನನ್ನ ಆಸೆಯ ಕುಡಿಯನ್ನು ಸುಟ್ಟು ಭಸ್ಮಗೊಳಿಸಿತು. ನಾನು ನಿರಾಸೆಯ ಕುಂಡದಲ್ಲಿ ಮುಳುಗೆದ್ದು ಪುನರ್ಜನ್ಮ ಕಂಡೆ. ಪೂರ್ವೋಚಿತ ವಾದ ಸಂಸ್ಕಾರಕ್ಕೆ–ರೂಢಿಗೆ ತಲೆ ಮಣಿದೆ.

ಸಂಸಾರ ಬಂಧನ....ನಮ್ಮ ರಾಷ್ಟ್ರದಲ್ಲಿ ಹೆಣ್ಣು ವಿವಾಹ-ಬಂಧನವಿಲ್ಲದೆ ಬದುಕಲಾರಳೇ ಎಂಬ ಪ್ರಶ್ನೆ ಯಾವಾಗಲೂ ಏಳುತ್ತಿರುತ್ತದೆ. ಎಷ್ಟೇ ಯೋಚಿ ಸಿದರೂ ಅದಕ್ಕೆ ಸರಿಯಾದ ಉತ್ತರ ಇನ್ನೂ, ಈವರೆವಿಗೂ ಸಿಕ್ಕಿರುವುದಿಲ್ಲ. ಅಂದಿಂದಿಗೂ ಜೀವನದಲ್ಲಿ ಸರ್ವಾಧಿಕಾರತ್ವ ಮರ್ದನದಿಂದ ಸತ್ವ ಹೀನತೆಯಲ್ಲಿ ಬದುಕುತ್ತಿದೆ ಸ್ತ್ರೀವರ್ಗ. ವಿದ್ಯೆ ಬುದ್ಧಿಗಳಿಂದ ಹೊರತಾಗಿ ಆಲೋಚನಾರಹಿತ ರಾಗಿ ಮೃಗಜೀವನಕ್ಕೆ ಸಕ್ಕಾಗಿ ಸಾಗಿ ಬರುತ್ತಿದೆ ಕರುಣಾಜನಕ ಜೀವನ ಧಾರೆ. ಈ ಪೈಶಾಚಿಕ ನೀತಿ ಪುರಾತನ ಕೊಡಿಗೆಯೇನೋ ಹೌದು. ಇಂದೂ, ಈ ವರ್ತಮಾನ ಯುಗದಲ್ಲಿಯೂ ಅದೇ ಆ ದುರದೃಷ್ಟಕರ ಪೈಶಾಚಿಕ ನೀತಿ ಸಾರೋದ್ಧಾರವಾಗಿ ನಡೆಯುತ್ತಿರುವುದು ಶೋಚನೀಯ. ಪ್ರಾಪಂಚಿಕ ಅನು ಭವ ಏನೇನೂ ಇಲ್ಲದ ಕಾಲದಲ್ಲಿಯೇ ನನ್ನನ್ನು ಸಂಸಾರ ಬಂಧನದಲ್ಲಿ ಕೂಡಿ ಪರದಾಸ್ಯದ ಕತ್ತರಿಗೊಡ್ಡಿದರು ಹೆತ್ತವರು. ಹೋಗಲಿ, ಪಾಣಿಗ್ರಹಣ ಮಾಡಿ ಕೊಂಡವರ ವರದ ಹಸ್ತದಡಿಯಲ್ಲಿ ನಿಶ್ಚಿಂತೆಯಿಂದಿರಬಹುದು ಎಂಬ ನಂಬಿಗೆ ಇದ್ದುದು ಸತ್ಯ. ಕ್ರಮುಕ್ರಮೇಣ ಬಾಳಿನ ಕೃಪಾಛತ್ರ ಭ್ರಮನಿರಸನವಾಗಿ ಪರಿಣಮಿಸಿ ನಾನು ಕಂಗಾಲಾದೆ. ಜೀವನ ಸೌಖ್ಯ ಗಗನ ಕುಸುಮ. ಆಸೆ–ಆಕಾಂಕ್ಷೆಗಳು ಕೈಗೆಟುಕದ ನಕ್ಷತ್ರಗಳ ಮಾಲೆ.

ನನ್ನ ಹಿತಕ್ಕಾಗಿಯೇ ಈ ಸಂಸಾರ ಜೀವನ ಎಂದು ಅಪ್ಪ–ಅಮ್ಮ

ಪೂರ್ಣ ನಂಬಿದ್ದಲ್ಲದೆ ಸಂತಸದಿಂದ ಆನಂದ ಬಾಷ್ಪ ಸುರಿಸಿದ್ದರು. ಮಂಗಳ ವಾದ್ಯ ಕಿವಿಗಡಚಿಕ್ಕುವಂತೆ ಮೊಳಗಿತ್ತು. ವಡೆ ಪಾಯಸಗಳ ಭೂರಿ ಭೋಜನ ಬೇರೆ. ಬಂದವರೆಲ್ಲಾ ಸಂತಸದಿಂದ ಉಂಡು ಹೋದರು. ನಾನು ನಾಲ್ಕು ಗೋಡೆಗಳ ಕೋಟೆಯಲ್ಲಿ ಬಂದಿಯಾದೆ.

ಅದನ್ನೆಲ್ಲಾ ಈಗ ಏಕಾಂತ ಚಿಂತನೆಯಲ್ಲಿ ನೆನೆದರೆ ಕರುಳು ಕತ್ತರಿಸಿ ದಂತೆ, ಹೃದಯಕ್ಕೆ ಚೂರಿ ಇರಿದಂತೆ, ಕಣ್ಣು ಕುಕ್ಕಿದಂತೆ ಅಗಾಧವಾದ ನೋವುಂಟಾಗುತ್ತದೆ. ದಾರುಣ ವ್ಯಥೆಯಿಂದ ಬಾಡಿ ಬಳಲುತ್ತದೆ ಜೀವ. ಕಣ್ಣುಗಳು ಬತ್ತಿದ ಕಡಲಾಗುತ್ತವೆ, ಸೋದರಿ.

ಈ ಲೇಖನಿ ಮುಂದುವರಿದಂತೆಲ್ಲಾ ಕಣ್ಣುಗಳು ತುಂಬಿ ಅಕ್ಷರಗಳು ಕಾಣದಾಗುತ್ತವೆ. ಸಲಸಲಕ್ಕೂ ಕಂಬನಿಯನ್ನು ತೀಡಿಕೊಂಡು ಮುಂಬರಿ ಯುವೆ. ಆದರೂ, ಮತ್ತೆಮತ್ತೆ ಇದೇ ಗೋಳು. ಹೃದಯಾಂತರಾಳದಲ್ಲಿ ದುಃಖ ಸಲಿಲದ ಮಹಾಪೂರ... ಈ ದುಃಖ ಸಂಕಟ ಭರಿತ ಹೃದಯದ ಭಾರವನ್ನು ಹೊತ್ತು ಬರೆಯಲು ಲೇಖನಿ ಓಡದು. ಆಗಾಗ, ಅಷ್ಟಿಷ್ಟು ಬರೆದು ನಿಲ್ಲಿಸಿ ಬಿಡುವೆ. ಇದನ್ನು ಯಾರೂ ನೋಡದಂತೆ ಬರೆಯುವುದು–ಮುಚ್ಚಿಡುವುದು ನಿಜಕ್ಕೂ ಮಹಾಕಷ್ಟಕರವಾದ ಕೆಲಸ, ಎಂದರೆ ನೀನು ನಂಬಿದರೆ ನಂಬು ; ಇಲ್ಲದಿದ್ದರೆ ಬಿಡು.

ಅಲ್ಲದೆ, ಈ ಪತ್ರವನ್ನು– ನನ್ನ ಜೀವನೀಯ ದಾರುಣ ಕಥಾ ಸಾರ ವನ್ನು–ಪೂರ್ತಿ ಬರೆದು ತುಂಬುವ ಧೈರ್ಯವಂತೂ ಇಲ್ಲ. ಆದರೂ, ಇದೊಂದು ಸಣ್ಣ ಪ್ರಯತ್ನ. ನನ್ನ ವ್ಯಥೆಯ ಕಥೆ ನಾಲ್ಕೈದು ಪುಟಗಳಲ್ಲಿ ಬರೆದು ಮುಗಿಸುವಷ್ಟು ಚಿಕ್ಕದೂ ಅಲ್ಲ. ಸ್ವಲ್ಪದರಲ್ಲಿ ನಿನಗೊಪ್ಪಿಸಿ, ಆತ್ಮ ನಿವೇದನೆ ಮಾಡಿಕೊಂಡರೆ ಹೃದಯ ಹಗುರವಾಗಬಹುದು. ಕಿಂಚಿತ್ ಮನಃಶಾಂತಿಯೂ ಲಭಿಸಬಹುದು ಎಂಬ ನಂಬಿಗೆಯಿಂದ ಲೇಖನಿ ಓಡುತ್ತಿದೆ.

ಭಗಿನೀ, ನೀನೂ ನನ್ನಂತೆಯೇ ಭಂಗ ಬನ್ನಗಳನ್ನುಂಡವಳಾದುದರಿಂದ ನನ್ನ ಸ್ಥಿತಿಗತಿಯನ್ನು ಅರ್ಥ ಮಾಡಿಕೊಳ್ಳಬಲ್ಲೆ, ಎಂಬ ಧೈರ್ಯ ಎನಗುಂಟು.

ಈ ಜೀವನ ಎಲ್ಲರಿಗೂ ಸುಖವನ್ನೇ ಪ್ರಾಸಾದಿಸುತ್ತದೆ ಎಂದೇನೂ ನಂಬಿದವ ಳಲ್ಲ ನಾನು. 'ಚಕ್ರವತ್ ಪರಿವರ್ತಂತೇ ದುಃಖಾನಿಚ ಸುಖಾನಿಚ' ಎಂಬುದು ನನಗೂ ಗೊತ್ತು. ಆದರೆ, ನನ್ನ ದಾಸ್ಯ ಜೀವನದಲ್ಲಿ ಆ ಸುಖ ಎಂಬುದು ಹೊಸ್ತಿಲಾಚೆಯೇ. ನನಗೆ ಆರ್ಥಿಕ ಸ್ವಾತಂತ್ರ್ಯ, ವೈಯಕ್ತಿಕ ಸಾತಂತ್ರ್ಯ ಇಲ್ಲವೇ ಇಲ್ಲ. ಹೋಗಲಿ ವಾಕ್ ಸ್ವಾತಂತ್ರ್ಯವಾದರೂ ಇದ್ದರೆ ನನ್ನ ಸಂಕಷ್ಟ ವನ್ನು ಮುಂದಿಡಬಹುದಾಗಿತ್ತು. ಅದಕ್ಕೂ ದಾರಿಯಿಲ್ಲ. ಮಾನ ಮುಚ್ಚಿ ಕೊಳ್ಳುವ ಉಡುಪಿನ ತೂತುಗಳಿಗೆಲ್ಲ ತೇಪೆ....ತೇಪೆ. ಆಧುನಿಕ ಗೃಹ ಸಲಕರ ಣೆಗಳು ಮೈಲಿ ಮೈಲಿ ದೂರ. ಸತ್ ಸಾಹಿತ್ಯವಂತೂ ಇಲ್ಲವೇ ಇಲ್ಲ. ಮಕ್ಕ ಳನ್ನು ಕಾಡಿಬೇಡಿ ಶಾಲೆಯ ಲೈಬ್ರರಿಯಿಂದ ಪುಸ್ತಕಗಳನ್ನು ತರಿಸಿಕೊಳ್ಳುವೆ. ಅವರಿಗೂ ದಿವ್ಯ ಉದಾಸೀನ. "ಹೋಗಮ್ಮ, ಯಾರು ಹುಡುಕಿ ತರುತ್ತಾರೆ?" ಎನ್ನುವುದೇ ಹೆಚ್ಚು. ಆದರೆ, ನಾನು ಅಷ್ಟಕ್ಕೆ ಅವಕಾಶ ಕೊಡುತ್ತಿಲ್ಲ. ತರಲೇ ಬೇಕೆಂಬ ಕಡ್ಡಾಯ ಹೇರುವುದರಿಂದ ತರುತ್ತಾರೆ. ಇಂದು, ಚಿಕ್ಕವರು. ನನ್ನ ಒತ್ತಾಯಕ್ಕೆ ಮಣಿಯುತ್ತಾರೆ ಎನ್ನೋಣ. ಮುಂದೆ....? ಈ ಮಕ್ಕಳು ದಾಸ್ಯ ದಿಂದ ಮುಕ್ತಗೊಳಿಸುವರೆಂಬ ನಂಬುಗೆ ನನಗೆ ಇಲ್ಲವೇ ಇಲ್ಲ. "ಪಿತಾ ರಕ್ಷತಿ ಕೌಮಾರೇ ಭರ್ತಾ ರಕ್ಷತಿ ಯೌವ್ವನೇ ಪುತ್ರೋ ರಕ್ಷತಿ ವಾರ್ಧಕ್ಯೇ ನ ಸ್ತ್ರೀ ಸ್ವಾತಂತ್ರ್ಯ ಮರ್ಹತಿ" ಎಂಬ ಸೂಕ್ತಿಯ ಸಾರ ಭಾರತದಲ್ಲಿ ಅಂದಿಂದಿಗೂ ಸಾರೋದ್ಧಾರವಾಗಿ ನಡೆದು ಬಂದಿದೆ. ಮುಂದೆ ಎಂದೆಂದಿಗೂ ನಡೆಯುತ್ತದೆ. ಆದರೆ, ನಮ್ಮ ಮೂರು ಮಜಲುಗಳಲ್ಲಿಯೂ ಸುಖಶಾಂತಿಗಳು ಆತ್ಮಗತವಾ ಗಿದ್ದಲ್ಲಿ ನಮಗೆ ಮತ್ತೊಂದು, ಮಗದೊಂದು ಏಕಾದರೂ ಬೇಕು? ಜನ್ಮ ಜನ್ಮಕ್ಕೂ ಹೆಣ್ಣಾಗಿ ಹುಟ್ಟೋಣ ಎಂಬ ಆಸೆ ಹುಟ್ಟೀತು. ಆದರೆ... ಈ ಜೀವ ನವೇ 'ಆದರೆ' ಮಯ. ಮೂರು ಹಂತಗಳೂ ಅಜ್ಞಾನಮಯವಾದ ಇಕ್ಕಳಗಳ ಬಿಗಿ ಮುಷ್ಟಿಯಲ್ಲಿ ಸಿಕ್ಕಿ ಒದೆತ ತಿಂದು ದಾಸ್ಯಕೂಪದಲ್ಲಿ ಕಣ್ಣೀರಿನ ಕೂಳುಂಡು ಬದುಕುವ ಪರಿಪಾಡು ಯಾರಿಗೆ ಬೇಕು? ಈಗೀಗ, ನಾನೇ ಮಾತಾಡಿಕೊಳ್ಳುವೆ. ನನಗರಿಯದಂತೆ, ನನ್ನ ಹತೋಟಿಗೆ ಸಿಕ್ಕದಂತೆ ಎಷ್ಟೋ ಬಾರಿ ಕೆಟ್ಟ ಮಾತುಗಳನ್ನೇ ಆಡಿರುವೆ. ಆಗ ತಕ್ಷಣ ಎಚ್ಚತ್ತು "ಅಯ್ಯೋ, ಯಾರಾದರೂ ಕೇಳಿಸಿಕೊಂಡಿದ್ದರೆ...? ಎಂಬ ಭಯದಿಂದ ಸುತ್ತಮುತ್ತ ನೋಡಿ ನನ್ನನ್ನು ನಾನೇ ಸಾವರಿಸಿಕೊಳ್ಳುವೆ... ಮುಂದೆ ಹುಚ್ಚಿಯಾದರೆ...?

ಆ ಯೋಚನೆ ಬಂದೊಡನೆಯೇ ದೇಹದಾದ್ಯಂತ ಚಿಲ್ಲನೆ ಚಳಿಯ ಅಲೆ ಹರಿದಾಡಿ ಹೋಗುತ್ತದೆ. ಆ ತಕ್ಷಣವೇ ಭಗವಂತನಿಗೆ ನನ್ನ ಮಾನಸಿಕ ಸ್ವಾಸ್ಥ್ಯಕ್ಕಾಗಿ ಎರಡೂ ಕೈಗಳನ್ನು ಮುಗಿದು ಬೇಡಿಕೊಳ್ಳುವೆ. ಅದಕ್ಕಿಂತ ನಾನಿನ್ನೇನು ಮಾಡಬಲ್ಲೆ ಹೇಳು? ಆ ಪ್ರಾರ್ಥನೆಯೊಂದೇ ನನ್ನ ಮನಸ್ಸಿಗೆ ಕಿಂಚಿತ್ ಶಾಂತಿಯನ್ನು ನೀಡಬೇಕಾದರೆ. ಎಷ್ಟೋ ಸಲ ನನ್ನ ಮಾನವೀಯ ಗುಣಗಳು ಮಾಯವಾಗುತ್ತಿವೆ ಎನಿಸುತ್ತೆ ನನಗೆ. ಹಿಂಸೆಗೆ ಪ್ರತಿ ಹಿಂಸೆಯ ರೂಪವೇ ಎಂಬ ಪ್ರಶ್ನೆಯೂ ಏಳುತ್ತದೆ. ಮರುಕ್ಷಣದಲ್ಲೇ ನನ್ನ ಅಸ್ತಿತ್ವವನ್ನೇ ಕೊಚ್ಚಿಕೊಂಡು ಹೋಗುತ್ತದೆ ಮಾನಸಿಕ ಹಿಂಸೆ–ಆತ್ಮಿಕ ಹಿಂಸೆ. ಓಹ್, ತಾಳಲಾರದ ಹಿಂಸೆ. ನಾನು ದಿನದಿನಕ್ಕೂ ಕಲ್ಲಾಗಿ ಮರವಾಗಿ ಚತುಷ್ಪಾದಿಯಾಗಿ ಓ, ಇನ್ನೂ ಏನೇನೋ ಆಗಿ ಪರಿವರ್ತಿತಳಾಗುತ್ತಿರುವೆ....ಎನಿಸುತ್ತದೆ. ಆದರೂ ಸಹ, ನನ್ನನ್ನು ಹತೋಟಿಯಲ್ಲಿಟ್ಟುಕೊಳ್ಳಲಾಗದ ಪರಿಸ್ಥಿತಿ– ಅಬಲತೆ ಏನಾದರೂ ಅನ್ನು. ನೀನು ಎಂದಾದರೂ ನನ್ನ ನೋಡಬಂದೆಯಾದರೆ ನನ್ನ ಆಂತರ್ಯವನ್ನು ನೀನು ಅರಿತುಕೊಳ್ಳಬಲ್ಲೆ. ದೂರದಲ್ಲಿರುವುದರಿಂದ ನನ್ನರಿವು ನಿನಗಿಲ್ಲ.

ನಾಲ್ಕು ಗೋಡೆಗಳ ಮಧ್ಯೆ ನಾನೊಂದು ಹೆರುವ ಯಂತ್ರ ಮತ್ತು ಸಂಬಳ ರಹಿತ ತೊತ್ತು. ಮನೆಯ ಖರ್ಚು ವೆಚ್ಚಗಳೆಲ್ಲಾ ಮೊಣಕಾಲ ಕೆಳಗೇ ಇದ್ದು, ದಿನನಿತ್ಯ ಸಮೃದ್ಧಿಯ ಊಟೋಪಚಾರಗಳು ನಡೆಯಲೇ ಬೇಕು. ಹೇಗೆ? ಎಷ್ಟೋ ಸಲ ಇಲ್ಲಿಂದ ಓಡಿಹೋಗಬಾರದೇಕೆ ಎಂಬ ಪ್ರಶ್ನೆ ಮನದಲ್ಲಿ ನಿಮಿರಿ ನಿಲ್ಲುತ್ತದೆ. ಅದಕ್ಕಿಂತ ಕೆರೆ ಬಾವಿ ಹಾರಿದರೆ ಮುಂದಿನ ಯಾವ ಜಂಜಡವೂ ಇಲ್ಲ. ಯಾವ ಮಾರ್ಗ ಹಿಡಿಯಲಿ? ಇಲ್ಲಿ ನನ್ನ ಆತ್ಮೀಯರಾಗಿ, ಅಂತರಂಗ ಸಲಹೆಗಾರರಾಗಿ ಯಾರೂ ಇಲ್ಲ. ನೀನೇನಾದರೂ ನನ್ನ ಸಂಕಷ್ಟ ಪರಿಹಾರಕ್ಕೆ ಸಲಹೆ ನೀಡಬಲ್ಲೆಯಾ? ಅಷ್ಟು ಉಪಕರಿಸಲಾರೆಯಾ? ಯೋಚಿಸಿ ಹೇಳು.

ಸೋದರೀ, ನನ್ನ ಸ್ವಭಾವವನ್ನು ನೀನು ಅರಿಯದವಳಲ್ಲ. ಬಾಲ್ಯದ ಒಡನಾಡಿಗಳು ನಾವು. ನಿನ್ನ ಪ್ರತಿಯೊಂದು ಗುಣಾವಗುಣಗಳನ್ನೂ ನಾನು ಬಲ್ಲೆ. ನನ್ನಂತೆಯೇ ನೀನು. ಅಂದಮೇಲೆ, ನಮ್ಮನಮ್ಮೊಳಗೆ ಯಾವ ಮುಚ್ಚು

ಮರೆಯೂ ಇರಬಾರದು. ನಿನ್ನ ಮುಖ ನೋಡಿ ಯಾವ ಕಾಲವೋ.... ನಿನ್ನ ನೆನಪಾದಾಗ ಬಾಲ್ಯದ ಚಿತ್ರವನ್ನು ನೋಡಿ ಸುಖ ದುಃಖಗಳನ್ನು ಮನಸ್ಸಿಗೆ ತುಂಬಿಕೊಳ್ಳುವೆ. ನಾವು ಆತ್ಮೀಯ ಗೆಳತಿಯರಾಗಿಯೂ ನಿನ್ನ ಒಂದು ಒಳ್ಳೆಯ ಚಿತ್ರವೂ ನನ್ನಲ್ಲಿಲ್ಲ. ಬಹಳ ಹಿಂದಿನ ಚಿತ್ರ ಮಬ್ಬು ಮಬ್ಬಾಗಿ ಮಾಸಿದೆ. ನಿನ್ನ ಈಚಿನ ಚಿತ್ರವನ್ನು ಕಳುಹಿಸಿಕೊಟ್ಟಯಾದರೆ ತುಂಬ ಉಪಕಾರ. ನಿನ್ನಂತಹ ಆತ್ಮೀಯರನೇಕರು ದೂರ ಸಿಡಿದು ಹೋಗಿದ್ದಾರೆ. ಈಗ ನನ್ನ ಸುತ್ತಮುತ್ತ ಇರುವವರೆಲ್ಲಾ ತೋಳ–ಕರಡಿಗಳು. ಇವರಿಗೆ ಹೆಣ್ಣು ಹೃದಯದ ಆಳ ನೀಳಗಳು ಹೇಗೆ ಅರ್ಥವಾಗಬೇಕು ? ಸ್ವಾರ್ಥವೇ ಪರಮಾರ್ಥ.

ಶೋಷಣೆ–ಶೋಷಣೆ–ಶೋಷಣೆ !

ಅನಾದಿಯಿಂದ ಒಂದಲ್ಲ, ಒಂದು ಬಗೆಯಲ್ಲಿ ಸ್ತ್ರೀ ಶೋಷಣೆ ನಿಷ್ಕರುಣೆ–ನಿರ್ದಾಕ್ಷಿಣ್ಯಗಳಿಂದ ನಡೆಯುತ್ತ ಬಂದಿದೆ, ಸಾರ್ವೋದ್ಧಾರವಾಗಿ. ಇದಕ್ಕೆ ಈ ಪವಿತ್ರ ಭೂಮಿಯಲ್ಲಿ ಎಂದಿಗೂ ಕೊನೆಯಿಲ್ಲ ಎಂಬುದು ಸತ್ಯ. ಹಿಂಸೆ ಆಜನ್ಮ ಹಕ್ಕು ಎಂಬಂತೆ ವಿಚಿತ್ರ ದೋರಣೆ ಜೀವನದಲ್ಲಿ; ಅಥವಾ ಸಂಸಾರದಲ್ಲಿ. ಅಥವಾ ರೂಢಿಯಲ್ಲಿ. ಎಲ್ಲಕ್ಕೂ ಪುರುಷ ಪೌರೋತ್ಯ.

ವಾತ್ಸಲ್ಯಮಯೀ ಇಲ್ಲಿ ಕೇಳು !

ಪುರುಷ ಪ್ರಧಾನವಾದ ದೇಶದಲ್ಲಿ ಆಡಳಿತ ನ್ಯಾಯ, ಕಾನೂನು ನ್ಯಾಯ, ಆರ್ಥಿಕ ನ್ಯಾಯ ಜೀವನ ನ್ಯಾಯ ಇವುಗಳನ್ನು ರೂಪಿಸಿ ನಿರ್ಧರಿಸುವುದು ಪುರುಷ ಮಂಡಳಿಯೇ. ನಿರ್ಣಯ ತಮ್ಮ ಮೂಗಿನ ನೇರಕ್ಕೇ ಎನ್ನೋಣ. ಹೆಣ್ಣು ಅಂಗೈಲಾಡುವ ಗಿಳಿಯಾಗಿ, ತೊತ್ತಾಗಿ, ಸೊತ್ತಾಗಿ ತಮ್ಮ ಕ್ರೂರ ಹಸ್ತಗಳ ಕೃಪಾಶಯದಲ್ಲಿಯೇ ಉಳಿಸಿಕೊಳ್ಳುವ ಕ್ರಮವನ್ನು ಹುಟ್ಟು ಹಾಕುವುದು ಸ್ವಲಾಭಕ್ಕಾಗಿ. ಕುರುಬ ಕುರಿ, ಕೋಳಿಗಳನ್ನು ಸಾಕುವಂತೆ. ಈ ಕುರಿ ಕುರುಬ ನ್ಯಾಯವನ್ನು ಇಂದಿನ ಆಧುನಿಕ ಮಹಿಳಾ ಮಣಿಯರು ಅರಿತುಕೊಂಡಿಲ್ಲವಲ್ಲಾ ಏಕೆ? ಈಗ ಮನೆ ಮನೆಯಲ್ಲಿಯೂ ಡಿಗ್ರಿಗಳ ಹಣೆ ಪಟ್ಟಿ ಕಟ್ಟಿಕೊಂಡ ಮಹಿಳೆಯರಿದ್ದಾರೆ. ಬಹುತೇಕ ಸ್ತ್ರೀಯರಿಗೆ ನನ್ನಂತೆಯೇ ನಾಲ್ಕು ಗೋಡೆಗಳ ಮಧ್ಯೆ ಜೀವನಯಾತ್ರೆ. ಎಲ್ಲೋ ಕೆಲವರಿರುತ್ತಾರೆ ಪುಣ್ಯವಂತರು. ಎಲ್ಲರೂ ಹಾಗಿರುವುದಿಲ್ಲ ಎಂದರೆ ತಪ್ಪಲ್ಲ. ಸಿರಿತನವಿದ್ದವರು ಚಿನ್ನದೊಡವೆ

ಗಳನ್ನು ಸಿಕ್ಕಿಸಿಕೊಂಡು ಒಡವೆಗಳ ತೋರುಗಂಬವಾಗುವುದು ರೂಢಿ. ಬಡತನದ ಹೆಣ್ಣುಮಕ್ಕಳಿಗೂ ಒಡವೆಗಳ ಗೀಳು. ಗಿಲೀಟಿನ ಒಡವೆಗಳನ್ನಾದರೂ ಸಿಕ್ಕಿಸಿಕೊಳ್ಳಬೇಕು. ಹರಕಲು ಸೀರೆ, ನಕಲಿ ಒಡವೆ. ಜಡ್ಡುಗಟ್ಟಿದ ಮನಃಬುದ್ಧಿಗಳು. ಅಹಹ! ಇದಕ್ಕೇನೆನ್ನೋಣ? ನಮ್ಮ ರಾಷ್ಟ್ರ ಸ್ವಾತಂತ್ರ್ಯ ಪಡೆದು ನಾಲ್ಕು ದಶಕಗಳು ಕಳೆದು ಹೋದರೂ ಸ್ಥಿತಿಗತಿ ಹೀಗಿದೆ. ಅವಿದ್ಯೆ–ಅಜ್ಞಾನ–ಅಜಾಗೃತಿ–ಅನೀತಿ–ಅನ್ಯಾಯಗಳ ಕೋಟಿ! ಇಂತಹ ಬದುಕು ಇದ್ದರೂ ಒಂದೇ. ಇಲ್ಲದಿದ್ದರೂ ಒಂದೇ. ಭಾರತೀಯರು ನಾವು ಎಂದು ಎದೆ ತಟ್ಟಿ ಹೇಳುವಂತಹ ಸಾಮರ್ಥ್ಯ–ಸಂಸ್ಕೃತಿ–ಸಂಪನ್ನತೆ–ಆಧ್ಯಾತ್ಮ ಇದೇ ಏನಃ ?

ನಮ್ಮದಂತೂ ಹೀಗಾಯಿತಲ್ಲ, ನಮ್ಮ ಮಕ್ಕಳಾದರೂ ಮುಂದಿರಲಿ ಎಂದರೆ ಅವರಿಗೂ ಇದೇ ಗಿಣಿಪಾಠ. ಸಾಮಾಜಿಕ ರೀತಿನೀತಿಗಳ ಲಕ್ಷ್ಮಣ ರೇಖೆಯನ್ನು ದಾಟಲೇ ಒಲ್ಲದು ಜನರಾಶಿ. ಇದು ಯಾವಯಾವ ಮುನಿ ಋಷಿಗಳ ಅಭಿಶಾಪವೋ....

ಹಾ, ಅನುಭವಿಸಲಾರೆ. ಸಾಯಲೂ ಆರೆ.

ಮಡಿಲು ತುಂಬ ಮಕ್ಕಳನ್ನು ಭರಿಸಿ ಸತ್ತರೆ...? ನನಗೆ ಮುಂದಿನ ದಾರಿಯನ್ನು ದೇವರೇ ತೋರಬೇಕು.... ಈ ಪತ್ರದ ಪುಟಪುಟವನ್ನೂ ತುಂಬ ಬೇಕಾದರೆ ಎಷ್ಟು ದಿನಗಳ ಕೃಷಿಯೋ.... ಕೆಲವು ಪಂಕ್ತಿಗಳನ್ನು ಗೀಚಿ ಬೇರೆ ಕೆಲಸದತ್ತ ಗಮನ ಹರಿಸಿ ವಿರಮಿಸುವುದು. ಅನಂತರ ಇನ್ನೆರಡು ಪಂಕ್ತಿಗಳ ಸೇರ್ಪಡೆ. ಹೀಗಿದೆ ನನ್ನ ಅಂದಿಂದಿನ ದಿನಚರಿ. ಸಾಕೋ ಸಾಕು ಈ ಜನ್ಮ.

ಏತನ್ಮಧ್ಯೆ, ನಮ್ಮವರಿಗೆ ಆರೋಗ್ಯ ಕೆಟ್ಟಿತು. ಆಸ್ಪತ್ರೆ–ಮನೆಗಳ ಚಾಕರಿ.... ಅವರು ಪಥ್ಯ ಪಾನಾದಿಗಳಲ್ಲಿ ಗಮನ ಇಡುವವರಲ್ಲ. ಯಾವತ್ತೂ ಅಪಥ್ಯ. ಕಂಡ ಕಂಡದ್ದನ್ನೆಲ್ಲಾ ರುಚಿ ನೋಡಲೇ ಬೇಕು. ಇದೊಂದು ಬಗೆ ಹರಿಯದ ಸಮಸ್ಯೆ. ನಿನಗೆ ಬರೆದ ಪತ್ರ ಅರ್ಧಕ್ಕೆ ನಿಂತು ಹೋಗಿದೆ. ಕೈ ಬಿಡುವಾದಾಗ ಬರೆದು ಮುಗಿಸುವೆ. ಕೈ ಕೂಸಿಗೆ ಹಠ ಜಾಸ್ತಿ ಇರುವುದರಿಂದ ಎಲ್ಲ ಕೆಲಸಕ್ಕೂ ಅಡ್ಡಗಟ್ಟಿ. ಸುಧಾರಿಸುವ ಕಷ್ಟ ಹೇಳತೀರದು.

ನಮ್ಮವರ ವ್ಯವಹಾರ ಸಣ್ಣದೇನೂ ಅಲ್ಲ. ಜಮೀನು ಆಸ್ತಿ ಸಾಕಷ್ಟು ಉಂಟು. ಅಣ್ಣ ತಮ್ಮಂದಿರು ದಾಯಾದಿಗಳು ಇರುವುದರಿಂದ ಆಸ್ತಿಗಾಗಿ ಕಿತ್ತಾಟ ಇದ್ದದ್ದೇ. ಸ್ವಂತ ಲೇವಾದೇವಿ ಬೇರೆ. ಈಚೆಗೆ ಅವರ ಆರೋಗ್ಯ ಕೆಟ್ಟು ಹೋಗಿದೆ. ವ್ಯವಹಾರ ಕಷ್ಟ. ಎಲ್ಲಾ ಭಾರವನ್ನೂ ತಾನೇ ಹೊತ್ತು ನನ್ನನ್ನು ಕತ್ತಲೆಯಲ್ಲಿಟ್ಟಿರುವುದರಿಂದ ನನಗದರ ಗಂಧ ಹತ್ತದು. ದಾಯಾದಿ ಮಚ್ಚರವೆಂದರೆ ಸಾಮಾನ್ಯವೇ? ಮುಂದೆ ಈ ಗಂಡಾಂತರದಿಂದ ಹೇಗಾದರೂ ಪಾರಾದರೆ ಸಾಕೆಂದು ಬೇಡುವ ಅಂಶ ಮಾತ್ರ ನನ್ನದು... ಮೂರು ದಿನಗಳಿಂದ ನಿನ್ನ ಪತ್ರವನ್ನು ಮುಟ್ಟಲಾಗಲಿಲ್ಲ. ಯೋಚಿಸಿಯೂ ಸುಮ್ಮನಾದೆ ದುಃಖದೊತ್ತಡದಿಂದ.

ನಮ್ಮವರಿಗೆ ಈಗೀಗ ಇನ್ನಷ್ಟು ಸಿಟ್ಟು ಕಿನಿಸಿಗೆ. ಆಸ್ಪತ್ರೆ–ಔಷಧ–ಡಾಕ್ಟರುಗಳಿಗಾಗಿ ವಿಪರೀತ ಹಣ ತಗಲುತ್ತಿದೆಯೆಂದು. ಅದು 'ತನಗಾಗಿ' ಎಂಬ ಯೋಚನೆಯೂ ಬೇಡವೇ? ಅಷ್ಟೊಂದು ಲೋಭಿತನದಿಂದ ಉಳಿಸಿದ ಹಣಕ್ಕೆ ಯಾವ ಹದ್ದು ಎರಗುತ್ತೋ.... ಅವರಿಗೆ ಹೇಳುವರಾರು? ಇದೊಂದು ಅನುಭವಿಸಲಾಗದ ದುಃಖ. ನಾವು ಕುರಿಗಳು. ನಿತ್ಯ ಕುರಿಗಳು. ಕುರಿಗಳು... ಕುರಿಗಳು! ಜನ್ಮಜನ್ಮಾಂತರಕ್ಕೂ ನಮ್ಮ ಕುರಿಜನ್ಮ ಹೀಗೆಯೇ ಉಳಿಯುವಂತಾದ್ದು.

ಅಂದರೆ ಒಪ್ಪುತ್ತೀಯಷ್ಟೆ?

ನನ್ನ ಹಿರಿಯ ಮಗಳು ಜಲಜಳಿಗೆ ಇದೀಗಷ್ಟೆ ಹದಿನಾಲ್ಕು ತುಂಬಿತು. ಕೊನೆಯ ಮಗು ಇನ್ನೂ ಕೈಕೂಸು. ಈ ಸಣ್ಣಪುಟ್ಟ ಮಕ್ಕಳನ್ನೆಲ್ಲಾ ಹೇಗೆ ತೀರ ಹಚ್ಚುವೆನೋ ದೇವರಿಗೇ ಗೊತ್ತು. ಇನ್ನು ಶಾಲೆಯ ಫೀಜಿನ ಕಥೆ... ಹತ್ತು ತಿಂಗಳ ಫೀಜು ಪುಸ್ತಕ–ಪೆನ್ಸಿಲ್‌ಗಳನ್ನು ಒಮ್ಮೆಗೇ ಕೊಳ್ಳುವುದರಿಂದ ಮಧ್ಯೆ ಮಧ್ಯೆ ಹಣ ಕೇಳುವ ಅಗತ್ಯವಿಲ್ಲವೆಂಬುದು ನಮ್ಮವರ ವಾದ. ಅಥವಾ ನಂಬಿಗೆ. ಆದರೆ, ದಿನವೂ ಏನಾದರೂ ಇದ್ದೇ ಇರುತ್ತೆ ಎಂಬುದು ಅವರ ತಲೆಗೆ ಹೋಗದ ವಿಷಯ. ಕಾಸು ಕಾಸಿಗೂ ಮಾರಾಮಾರಿ! ನನಗೀ ಜನ್ಮ ಸಾಕಾಗಿದೆ... ಗಳಿಸಿದ ಕಾಸು ಸ್ವಕಾರ್ಯ–ಸ್ವಂತಿಕೆ–ಸ್ವಜೀವನಕ್ಕಲ್ಲದೆ ಮತ್ತಾರಿಗೆ? ಇಂತಹ ಸಂಕಷ್ಟ ಮತ್ತಾರಿಗೂ ಬಾರದೇ ಇರಲಿ.... ಎಂದು ನನ್ನಲ್ಲೇ ಬೇಡಿ

ಕೊಳ್ಳುವುದೊಂದು ನನ್ನ ಪ್ರಾರ್ಥನೆ; ಮತ್ತೇನೂ ಮಾಡಲಾರೆ. ತೀರಾ ನಿಸ್ಸಾಯಕತೆ. ಮಕ್ಕಳಿಗೂ ಒಂದಲ್ಲ, ಒಂದು ಬಗೆಯ ಗೋಳು. ನೆಗಡಿ ಕೆಮ್ಮು ಜ್ವರ ಭೇದಿ ಇತ್ಯಾದಿ, ಇತ್ಯಾದಿಗಳ ಕಾಟ. ಮೇಲಾಗಿ, ಶಾಲೆಯ ಖರ್ಚು ವೆಚ್ಚಗಳಿಗಾಗಿ ಎಲ್ಲಾ ಮಕ್ಕಳ ಬೇಡಿಕೆ ಆಗಾಗ ಇದ್ದೇ ಇರುತ್ತೆ. ಸಂಸಾರದ ಅಗತ್ಯಗಳೂ ಸಹ. ನಾನು ಯಾರನ್ನು ಬೇಡಲಿ? ಎಷ್ಟೋ ಸಲಿ ಬೇಡಿಕೆಯಿಂದ ಲತ್ತೆಗಳನ್ನು ತಿಂದುದೂ ಉಂಟು. ಸುತ್ತುಮುತ್ತು ಆರೇಳು ಮಕ್ಕಳ ಕಾಟ. ಶಿವನಿಗೇ ಪ್ರೀತಿ....

ಹಾ! ದುರ್ವಿಧಿಯ ಪಾಶಕ್ಕೆ ಸಿಕ್ಕಿ ನನ್ನ ಮಂಗಳ ದ್ರವ್ಯ ಹರಿದು ವಾರ ವೊಂದು ಗತಿಸಿತು. ಬಾಲ್ಯದಿಂದಲೂ ಮೆಚ್ಚಿಕೊಂಡಿದ್ದ ಮಂಗಳ ದ್ರವ್ಯ ವಿಧಿ ವತ್ತಾಗಿ ಕೈ ಬಿಟ್ಟಿತು.

ಕೇಳು, ಸತಿ ಮೃತಿ ಹೊಂದಿದರೆ ಪತಿಗೆ ಯಾವ ವಿಧುರ ವೇಶವೂ ಇಲ್ಲ. ಆತ ಆರಾಮ. ದುಃಖವೂ ಇಲ್ಲ. ಮತ್ತೊಂದು ಹೆಣ್ಣಿನ ಕಡೆ ವಾಲುತ್ತಾನೆ. ಸತಿಗೇಕೆ ಈ ಗೋಳು? ನೀನೇ ಯೋಚಿಸಿ ನೋಡು. ಈ ಸಾಮಾಜಿಕ ರೀತಿ ನೀತಿಗಳಿಗೇನೆನ್ನೋಣ? ಅದರಲ್ಲೂ ಮುಖ್ಯವಾಗಿ ಮಹಿಳೆಯರೇ ಮುಂದಾಗಿ ನನ್ನ ಮಂಗಳ ದ್ರವ್ಯಹರಣ ಮಾಡಿದರಲ್ಲಾ, ಸಾಮೂಹಿಕವಾದ ಒಪ್ಪಿಗೆ ಯಿಂದ? ನಮ್ಮವರಿಗೆ ಕಾಲಾನುಕಾಲದಿಂದ ನಡೆದು ಬಂದ ಗಿಳಿಪಾಠವನ್ನು ನೀನೇ ಪರಾಮರಿಸು. ಅಲ್ಲದೆ, ಪ್ರತಿಯೊಂದನ್ನು ಮೂಕ ಪಶುಗಳಾಗಿ ಸಹಿಸಿ ಕೊಂಡು ಪರಿಪಾಲಿಸುತ್ತ ಬಂದಿರುವ ಸ್ತ್ರೀಜನರನ್ನು ಕುರಿತು ನೀನು ಪರ್ಯಾ ಲೋಚಿಸು. ಪಾಶ್ಚಾತ್ಯರು ಹೇಗಿದ್ದಾರೆ, ನಾವು ಹೇಗಿದ್ದೇವೆ? ಲಜ್ಜೆಗೇಡು! ಬುದ್ಧಿಗೇಡು!

ಇದಕ್ಕೇನೆನ್ನುತ್ತಿ? ನಿನ್ನ ಡಿಗ್ರಿಗಳು ಏನು ಹೇಳುತ್ತವೆ? ಸರಿಯೆಂದೇ??

ನನ್ನ ಸಂಕಟ ಅರಣ್ಯ ರೋದನ ಎಂದರೆ ತಪ್ಪಲ್ಲ. ಆತ್ಮೀಯರ ಸೋಗಿ ನಲ್ಲಿ ಬರುವ ಗೋಮುಖ ವ್ಯಾಘ್ರಗಳನ್ನು ನೋಡಿದರೆ ನನಗೆ ಮೈಯೆಲ್ಲಾ ನಡುಕ. ನನ್ನ ಕೈಗೆ ಯಾವೊಂದು ವ್ಯವಹಾರವನ್ನೂ ಕೊಡದೆ ಎಲ್ಲವನ್ನೂ ತಮ್ಮೊಳಗೇ ಮುಚ್ಚಿಟ್ಟುಕೊಂಡು ನನ್ನನ್ನು ಸಂಪೂರ್ಣ ಅಂಧಕಾರದಲ್ಲಿಟ್ಟು

ನೇಪಥ್ಯವೇರಿದ ಅವರು ಆತ್ಮಶಾಂತಿ ಪಡೆದಿರಬಹುದೇ ?.... ಇರಲಿ, ಮನೆಯಲ್ಲಿ ಕಾಸಿಲ್ಲ. ಬ್ಯಾಂಕಿನ ವ್ಯವಹಾರ ರೀತ್ಯ ಹಣ ದೊರೆಯಬೇಕಾದರೆ ಎರಡು ಮೂರು ತಿಂಗಳೇ ಬೇಕಾಗಬಹುದು.... ಇನ್ನು ಲೇವಾದೇವಿಯ ವ್ಯವಹಾರ ರಕ್ಕೂ ಸರಿಯಾದ ದಾಖಲೆಯಿಲ್ಲ. ಎಷ್ಟೋ ಜನ ಹಣ ನುಂಗಿದ್ದಾರೆಂದು ಸುದ್ದಿ. ಬ್ಯಾಂಕಿನಲ್ಲಿ ಹಣದ ಲೆಖ್ಖಾಚಾರಕ್ಕೆ ಅಣ್ಣ ತಮ್ಮಂದಿರು ದಾಯಾ ದಿಗಳು ಹದ್ದಿನಂತೆ ಎರಗಿದ್ದಾರೆ. ಅವರೆಲ್ಲ ನನಗೆ ಹಣ ದಕ್ಕದಿರಲು ಏನೆಲ್ಲಾ ಮಾರೊಡ್ಡು ಹಾಕುತ್ತಾರೋ ಹೇಳಲಾರೆ. ಎಲ್ಲರಲ್ಲೂ ಪೈಶಾಚಿಕ ಪ್ರವೃತ್ತಿಯೇ ಕಂಡು ಬರುತ್ತದೆ. ಮನಃಚಿತ್ತಗಳಿಗೆ ಮುಳ್ಳು ಮುರಿಯುವಂತಹ ಸನ್ನಿ ವೇಶ. ಪ್ರಸ್ತುತ ಪರಿಸ್ಥಿತಿಯ ಅವಲೋಕನದಿಂದ ನಾನು ಅರ್ಧ ಸತ್ತು ಹೋಗಿರುವೆ ಎಂದರೆ ಅತ್ಯುಕ್ತಿಯಲ್ಲ. ಅವರು ಆಸ್ಪತ್ರೆಯಲ್ಲಿ ನರಳುವಾಗ ಹಣಿಕಿ ನೋಡದ ಜನ ಇಂದು ಹಣಕ್ಕೆ–ಆಸ್ತಿಗೆ ತಿಥಿಯೂಟಕ್ಕೆ ಮುಂದೆ. ನಾನು ಬರೀ ಪೂಜೆ–ಪ್ರಾರ್ಥನೆ ಮಾಡಿ ಆತ್ಮಶಾಂತಿ ಕೋರೋಣವೆಂದರೆ ಕೇಳು ವವರಾರು ? ಬಂಧುಗಳು ತಿಥಿಯೂಟ ಆಗಲೇ ಬೇಕೆಂದುದರಿಂದ ನನ್ನ ಮಾಂಗ ಲ್ಯಸರವನ್ನು ಅಡವಿಟ್ಟು ಹಣ ತಂದಿರುವೆ. ಇದು ಇಂದಿನ ಪರಿಸ್ಥಿತಿ. ನನಗೆ ಕಲಹ–ಕಾಳಗನೆಂದರೆ ಮೂರ್ಛೆ ಬಂದೀತು. ಮುಂದೇನು ಮಾಡಲಿ ಹೇಳು ? ಈ ರಣಹದ್ದುಗಳ ಮಧ್ಯೆ ನನ್ನ ವಾಸ ಏಳು ತಬ್ಬಲಿ ಮಕ್ಕಳೊಂದಿಗೆ. ಅತ್ತೂ ಅತ್ತೂ ಒಡಲ ಕಡಲ ನೀರು ಬರಿದಾಗಿರುವುದರಿಂದ ಅಳುತ್ತೇನೆಂದರೂ ಈಗ ಕಣ್ಣೀರು ಬರುವುದಿಲ್ಲ. ಈ ದುರವಸ್ಥೆಯನ್ನು ಸರಿ ಪಡಿಸುವವರಾರು....? ನೀನೇನಾದರೂ ಸಹಾಯ ಮಾಡಬಲ್ಲೆಯಾ ? ದಯವಿಟ್ಟು ಅಷ್ಟು ಉಪಕಾರ ಮಾಡು. ನೀನು ಸಹಾಯ ಮಾಡದಿದ್ದರೂ ಚಿಂತೆಯಿಲ್ಲ. ನನ್ನೊಂದಿಗೆ ಕೆಲವು ದಿನ ಇರುವಷ್ಟು ಉಪಕಾರ ಮಾಡು. ನಿನ್ನ ಸಹವಾಸದಿಂದ ಸ್ವಲ್ಪ ಮನಶ್ಶಾಂತಿಯಾದರೂ ಬಂದೀತು.

ಹತ್ತು ವಾರಗಳ ನಂತರ ಅರ್ಧ ಬರೆದಿದ್ದ ಕಾಗದವನ್ನು ಇಂದು ಬರೆದು ಪೂರೈಸಿರುವೆ.... ಇದರಿಂದಲೇ ನನ್ನ ಸಂಕಷ್ಟವನ್ನು ನೀನು ಪರಾಮರಿಸ ಬಹುದು.... ಹೆಸರು ನೋಡಿದರೆ ಭಾಗೀರಥಿ. ಬಾಳು ಬದುಕು ನರಕ. ಇತಿ ನಿನ್ನವಳೇ ಆದ ದೌರ್ಭಾಗ್ಯವತಿ.

ಇರಲಿ, ಕೊನೆಯದಾಗಿ ನಿನಗೊಂದು ಮಾತು ನಾನು ಹೇಳಲೇಬೇಕು. ನಮ್ಮ ಇಂದಿರಾಗಾಂಧಿ ಬಹುಕಾಲ ರಾಜ್ಯ ಆಳಿದಳಲ್ಲ; ಅಂತಹ ಒಂದೇ ಒಂದು ಸಣ್ಣ ಅವಕಾಶ ನನಗೆ ಸಿಕ್ಕಿದ್ದಿದ್ದರೆ ಎಲ್ಲಾ ವಿಧದಿಂದಲೂ ಸ್ತ್ರೀಯರಿಗೆ ಸರಿ ಸಮಾನತೆಯನ್ನು ನೀಡಿ ಸ್ತ್ರೀ ಶೋಷಣೆಗೆ ಅಗತ್ಯವಾದ ತಡೆಗಟ್ಟೆ ಹಾಕಿ ದಿವ್ಯೋಪಕಾರ ಮಾಡುತಿದ್ದ ಸ್ತ್ರೀ ಜಾತಿಗೆ! ನಮ್ಮನಮ್ಮೊಳಗೆ ಶೋಷಿತರು–ಶಾಸಿತರು ಪ್ರಭೇದ ಹೋಗಲೇ ಬೇಕು. ಅಂದರೆ ನೀವು-ವಿದ್ಯಾ ಸರಸ್ವತಿಯರು ಯೋಚಿಸಿ ಸಿಡಿದೇಳಬೇಕು. ಕಾಳಿಯಂತೆ–ದುರ್ಗಿಯಂತೆ ಸಿಡಿದೇಳಬೇಕು! ಸಿಡಿದೇಳಬೇಕು! ಇದು ಖಡಾ ಖಂಡಿತವಾಗಿಯೂ ಯೋಚಿಸಬೇಕಾದ ವಿಚಾರ! ನೀನು ಪರ್ಯಾಲೋಚಿಸು, ಭಗಿನೀ! ನಿನ್ನೊಳಗೇ ಗಾಢವಾಗಿ ಯೋಚಿಸು. ನಮ್ಮಲ್ಲಿ ಎಂತೆಂತಹ ವಿಭೂತಿಗಳು ಆಗಿ ಹೋಗಿದ್ದಾರೆ....? ಯಾರಿಗಾದರೂ ನಮ್ಮ ಸಂಕಷ್ಟದ ಅರಿವು ಮೂಡಿತೇ....? ಇದೆಂದಾದರೂ ಕೊನೆಗೊಳ್ಳಬಹುದೇ? ಹಿಂದೂಸ್ಥಾನದಲ್ಲಿ ಇದು ಸಾಧ್ಯವೇ??

— o —

ಲಾರಿ ತೋಷಿಕೊ

೧೧

ಆತ್ಮೈವಹ್ಯಾತ್ಮನೋ ಬಂಧುಃ

...ಟೋಕಿಯೋ ನಗರದ ಡೋನಾಲ್ಡ್ ಕೀನ್ ರಸ್ತೆ ತೀರಾ ಸಾಮಾನ್ಯ ಬೀದಿ.

....ಮನೆಗಳೂ ತುಂಬಾ ಹಳೆಯವು; ಹಳೆಹಳೆಯ ರೂಪುರೇಷೆಯೇ ಇಡೀ ಬೀದಿಯಲ್ಲಿ.

ನಕಮುರ ಸಣ್ಣಮನೆಯ ಮುಂದೆ ಬಾಗಿಲನ್ನು ಕಟಕಟ ಸದ್ದು ಮಾಡಿದ.

"......."

ಪುನಃ ಸದ್ದು ಮಾಡಿದ ಕಟ. ಕಟ. ಕಟ. ಕಟ.

"......."

"ತೋಷಿಕೊ, ಲಾರಿ ತೋಷಿಕೊ...."

ಮನೆಯ ಕದ ತೆರೆಯಿತು. ಮುದ್ದು ಮಡದಿ ಹಣಿಕಿದಳು. ಪತಿಯ ದರ್ಶನ ಮಾತ್ರದಿಂದ ಮುಖಬಿಂಬ ಅರಳಿ ದಳಬಿರಿದ ಹೂವಾಯಿತು. ಆದರೆ, ಅವನ ತೀವ್ರಗತಿಯ ಅವಸರ ಮನಕ್ಕೆ ಜೋಂಕನೆ ಮುಳ್ಳು ಮುರಿಯಿತು, ಮೊನಚಾಗಿ. ನಿಶ್ಚಲ ಗತಿಯಲ್ಲಿ ಅವನನ್ನೆ ದಿಟ್ಟಿಸಿ ನೋಡಿದಳು.

"ನಿನ್ನ ನೋಡಿದರೆ ತುಂಬಾ ಅವಸರದಲ್ಲಿದ್ದಂತೆ ತೋರುತ್ತಿ? ಹೌದೇ, ಒಕಮುರ?"

"ಹೌದು ಮೈ ಡಿಯರ್, ನಾನಿಂದು ಪ್ರವಾಸ ಹೊರಡಲೇಬೇಕು. ದಯವಿಟ್ಟು ಮುನಿಯಬೇಡ. ನನಗೆ ನಿನ್ನನ್ನು ಸದಾ ಖುಷಿಯಾಗಿಡಬೇಕು ಎಂಬ ಆಶೆ ಮನದಲ್ಲಿ. ನಿನಗೆ ಏನೆಲ್ಲಾ ಬೇಕೋ ಅದನ್ನು ಪಟ್ಟಿಮಾಡಿ ಕೊಡು. ಈ ಸಲಿ ಖಂಡಿತ ತರುವೆ. ಬೇಸರಿಸಬೇಡ, ಆಯಿತೇ?"

ಪ್ರೀತಿಯ ತನಿರಸವಾಗಿ ಹರಿದುಬಂತು ದನಿಯ ಮೊಳಗು.

ಅವಳು ಅಸಮಾಧಾನದಿಂದ ಒಳ ಸರಿದಳು. ಅವನೂ ಹಿಂದೆಯೇ ಬಂದ. ಕೈಯಲ್ಲಿ ತುಂಬಾ ಭಾರವಾದ ಬ್ಯಾಗು.

"ನೀನು ಯಾವಾಗಲೂ ಅನ್ನುವುದೇ ಹಾಗೆ. ತರದಿದ್ದುದಕ್ಕೆ ಏನಾದರೊಂದು ಕಾರಣ ಹೇಳುತ್ತಿ. ಹೋಗು, ಹೋಗು. ಈ ಸಲಿ ನನಗೇನೂ ಬೇಡ !" ತೀವ್ರ ಅಸಮಾಧಾನದಿಂದ ನುಡಿ ಹೊರಬಿತ್ತು.

"ಸಿಟ್ಟಾಗಬೇಡ ಹನಿ ! ಉದ್ದಿಮೆ ಅಂದರೆ ಸುಮ್ಮನೆ ಆದೀತೇ ? ಹಗಲಿರುಳೂ ಓಡಾಡಬೇಕು. ಅತಿಯಾಗಿ ದುಡಿಯಬೇಕು. ವಸ್ತುಗಳ ಬಗ್ಗೆ ವಿವರಣೆ–ಭಾಷಣ. ಹೀಗೆ ಮಾತಾಡಿ ಮಾತಾಡಿ ನನಗೆ ಸಾಕುಬೇಕಾಗುತ್ತೆ. ತಲೆ ಸುತ್ತುವ ಕೆಲಸ. ಏನು ಮಾಡಲಿ ಹೇಳು ? ಮರೆಯುವುದು ಸಹಜ. ಆದರೆ, ಇಲ್ಲಿ ಕೇಳು ನನ್ನ ಚಿನ್ನ! ನಾನು ವಸ್ತುಗಳನ್ನು ಮರೆತರೂ ನಿನ್ನನ್ನು ಮಾತ್ರ ಮರೆಯಲಾರೆ. ಎಲ್ಲಿದ್ದರೂ ನನಗೆ ಸರ್ವದಾ ನಿನ್ನದೇ ಗೀಳು."

ಮಡದಿಯನ್ನು ತಬ್ಬಿ ಮುದ್ದಿಸಿ ಮುದ್ದಿನ ಮಳೆ ಕರೆದು ನುಡಿದ "ಇವಿಷ್ಟು ಸಾಮಾನನ್ನು ನನ್ನೊಂದಿಗೆ ಪ್ಯಾರಿಸ್ಸಿಗೆ ಒಯ್ಯಬೇಕು. ಇನ್ನೂ ಕೆಲವನ್ನು ಸ್ಟೋರಿಂದ ತರಬೇಕು. ನನಗೆ ಹೆಚ್ಚು ಸಮಯವಿಲ್ಲ. ರಾತ್ರಿಯ ರೈಲಿಗೆ ಟಿಕೆಟ್ ಕೊಂಡಾಗಿದೆ. ಸ್ಟೋರಿಗೆ ಹೋಗಿ ಇನ್ನಷ್ಟು ತರುವುದುಂಟು. ಸ್ವಲ್ಪ ಹೊತ್ತಿನೊಳಗಾಗಿ ಬರುವೆ. ಅಷ್ಟರೊಳಗಾಗಿ ನನ್ನ ಸೂಟ್‌ಕೇಸಿಗೆ ನಾಲ್ಕು ಜೋಡಿ ಬಟ್ಟೆ ಹಾಕಿಡು ಮೈಲವ್. ಆದೀತೇ ? ನಿನಗೆ ಬೇಸರವಿಲ್ಲವಷ್ಟೆ ?"

ದನಿಯಲ್ಲಿ ಹಾಲ್ಸಕ್ಕರೆಯ ತನಿರಸವನ್ನು ಸ್ಫುರಿಸಿದ ನಕಮುರ. ಅವಳಿಗೆ ಒಡಲೆಲ್ಲ ಸಂಕಟ. ಅವನು ಯಾವತ್ತೂ ನೋಡಿ ಮಾತುಗಳಲ್ಲಿ

ಮರುಳು ಮಾಡುವವನೇ. ತನಗೆ ಒಬ್ಬಳೇ ಇದ್ದು ಸಾಕಾಗಿದೆ. ಇನ್ನು ತಾಳಲಾರೆ ಎಂದು ಚೀರಿತು ಮನಸ್ಸು. ಮೈಗೆ ಆರೋಗ್ಯವಿಲ್ಲ. ಸುಸ್ತು ಸಂಕಟಗಳ ಗುಡಾಣ ಒಡಲು. ದೇಹ ಕುಸಿಯುವಂತಿದೆ.

"ಈ ಸಲಿ ಎಷ್ಟು ದಿನ ಹೋಗುತ್ತಿ?"

"ಸುಮಾರು ಎಂಟ್ಹತ್ತು ದಿನ..."

ಒಡನೆ ಅವಳ ಮುಖ ಬಾಡಿಹೋಯಿತು. ಒಮ್ಮೆಲೇ ಉಸಿರಿಡಿದು ನುಡಿದಳು "ನೋಡು, ನನ್ನ ಆರೋಗ್ಯ ಏನೇನೂ ಚೆನ್ನಾಗಿಲ್ಲ. ಯಾವಾಗ ಕುಸಿಯುವೆನೋ ಹೇಳಲಾರೆ. ದೈಹಿಕ ಶಕ್ತಿ ಸ್ವಲ್ಪವೂ ಇಲ್ಲವೇ ಇಲ್ಲ. ನಾನಿಲ್ಲಿ ನರಳುತಿದ್ದರೆ ನೀನು ಊರೂರು ಸುತ್ತಿಕೊಂಡು ಮಜಾ ಮಾಡುತ್ತಿ. ನಿನಗೆ ಸ್ವಲ್ಪವೂ ದುಃಖ-ದುಗುಡಗಳಿಲ್ಲ. ಕರುಣೆಯೂ ಇಲ್ಲ ಬಿಡು."

"ಅಯ್ಯೋ, ಡಿಯರ್ ಹಾಗೆಂದರೆ ಹೇಗೆ? ನೀನೇ ನನ್ನ ಜೀವಾಳ, ಪ್ರಾಣಪದಕ ಎಲ್ಲಾ. ನೀನು ನರಳಿದರೆ ನನ್ನ ಪ್ರಾಣ ಗಂಟಲೊತ್ತುತ್ತೆ. ನೀನು ನಾಳೆಯೇ ಹೋಗಿ ಖಂಡಿತಾ ಆಸ್ಪತ್ರೆಗೆ ಸೇರಿಕೋ. ಡಾಕ್ಟರು ಏನೆಲ್ಲಾ ಹೇಳುತ್ತಾರೋ ಚಾಚೂ ತಪ್ಪದೆ ತೆಗೆದುಕೊ. ಉದಾಸೀನ ಮಾಡಬೇಡ. ಖರ್ಚು ಎಷ್ಟಾದರೂ ಆಗಲಿ, ಅದರ ಚಿಂತೆ ಬೇಡ. ಶಿಂಟೋ ದೇವತೆ ನಿನಗೆ ಒಳಿತನ್ನೇ ಮಾಡುತ್ತಾಳೆ. ನೀನು ಅವಳನ್ನು ಪೂರ್ಣ ನಂಬು. ಕೊರಗಿ ಆರೋಗ್ಯ ಕೆಡಿಸಿಕೊಳ್ಳಬೇಡ. ನಿನ್ನ ಒಂದು ರೋಮ ನಲುಗಿದರೂ ನಾನು ಸತ್ತು ಹೋದೇನು ಎಂಬುದನ್ನು ಮರೆಯಬೇಡ ಮೈಲವ್" ಎಂದು ಅವಳ ಕೆಂಗೂದನ್ನು ನೇವರಿಸಿ ಮುದ್ದಿಟ್ಟು "ಈಗಲೇ ಬರುವೆ" ಎಂದಷ್ಟು ನುಡಿದು ಬಿರುಗಾಳಿಯಂತೆ ಆ ಕ್ಷಣವೇ ಓಡಿದ ಓಕಮುರ.

ಮ್ಲಾನಮುಖಿಯಾಗಿ ಲಾರಿತೋಷಿಕೊ ಮುಂಬಾಗಿಲನ್ನು ಮುಚ್ಚಿ ಕೊಂಡು ಒಳಬಂದಳು. ಅವನೆಂದಂತೆ ಬಟ್ಟೆಗಳನ್ನು ಬ್ಯಾಗಿಗೆ ತುಂಬಿಡುವುದ ರಲ್ಲೇ ಬಳಲಿತು ಶರೀರ. ಒಳಹೋಗಿ ಒಲೆಹಚ್ಚಲು ಯತ್ನಿಸಿದರೆ ಅಲ್ಲೇ ಕುಸಿದು ಬೀಳುವಂತಾಯಿತು ತಲೆ ಭಾರವಾಗಿ. ಹಾಗೇ ಹಾಸಿಗೆಯ ಮೇಲೆ

ಬಿದ್ದುಕೊಂಡಳು. ಜೀವ ಒಳಗಿಂದೊಳಗೇ ಸಣ್ಣಗೆ ನಡುಗಿತು ಅಂತರಂಗವೆಲ್ಲಾ ಮುದುಡುವಂತೆ. ನಿಧಾನವಾಗಿ ಉಸಿರಾಡುತ್ತ ಮಲಗಿದಳು ಲಾರಿತೋಷಿಕೊ.

ನಕಮುರ ಅಂತಹ ಸಹಕಾರಿಯೇನಲ್ಲ ಯಾವತ್ತೂ ಮನೆಯ ವ್ಯವಹಾರ ದಲ್ಲಿ ಸಹಾಯ ಹಸ್ತ ನೀಡುವವನಲ್ಲ. ಎಲ್ಲವನ್ನೂ ಅವಳೇ ನೋಡಿಕೊಳ್ಳ ಬೇಕು. ಮೊದಮೊದಲು ಇದ್ದರೀತಿಯೇ ಬೇರೆ. ಅನಂತರ ಬಹಳ ನಿರ್ಲಕ್ಷ್ಯ. ತನ್ನ ಕೆಲಸವನ್ನೂ ಉಪಾಯದಿಂದ ಅವಳಿಗೆ ವಹಿಸುವುದು ವಾಡಿಕೆ.

ಗೃಹಿಣೀತ್ವವನ್ನು ಹೊಂದುವತನಕ ಅವನ ಉಪಚಾರವೇ ಉಪಚಾರ. ಶಾಲೆಯಲ್ಲಿ ಶಿಕ್ಷಕಿಯಾಗಿದ್ದ ಅವಳು ಮದುವೆಯಾಗಿ ಮಧುಚಂದ್ರ ಮುಗಿಸಿ ದಾಗಲೇ ಗರ್ಭಿಣಿ. ಯಾವ ಕಾರಣವೋ ಐದಾರು ತಿಂಗಳು ಕಳೆಯುವಷ್ಟರಲ್ಲಿ ಗರ್ಭಸ್ರಾವವಾಗಿ ನಿತ್ರಾಣವಾಯಿತು ಶರೀರ. ಅನಂತರ ಹಿಂದಿನ ಆರೋಗ್ಯ ಭಾಗ್ಯ ಕೂಡಿಬರಲಿಲ್ಲ. ಆ ಗೋಳಿನೊಂದಿಗೆ ಮತ್ತೆ ಮೂರು ತಿಂಗಳ ಗರ್ಭಿಣಿ. ದಿನವೂ ನರಳುವುದೇ ಆಗಿದೆ. ಶರೀರ ಸೌಖ್ಯ ಏನೇನೂ ಉಳಿಯಲಿಲ್ಲ. ಮೈಯೆಲ್ಲಾ ಉರಿ–ಸಂಕಟ. ರಕ್ತ ಹೀನತೆ, ಡಾಕ್ಟರೆಡೆಗೆ ಓಡುವವಳೂ ಅವಳೇ. ಮನೆ ನಡೆಸುವವಳೂ ಅವಳೇ.

ನಕಮುರ ಜೀವನೋಪಯುಕ್ತ ವಸ್ತುಗಳ ಮಾರಾಟಗಾರ. ಅವನು ಯಾವತ್ತೂ ಪ್ರವಾಸಿ. ಪರ ಊರುಗಳಿಗೆ ಹೋಗಿ ಬರುತ್ತಲೇ ಇರುತ್ತಾನೆ. ಲಾರಿ ತೋಷಿಕೊ–ಗೆ ಈ ಜೀವನ ಇಷ್ಟೊಂದು ಸ್ವಾರಸ್ಯಹೀನ ಎಂಬುದರ ಅರಿ ವಾದುದು ಶಿಕ್ಷಕಿಯ ಪೀಠವನ್ನು ಬಿಟ್ಟುಕೊಟ್ಟ ಮೇಲೆಯೇ. ನಕಮುರನ ಮಾತಿನ ಮೋಡಿಗೆ ಮರುಳಾದುದರ ಫಲಶ್ರುತಿ ಇಂದಿನ ಶರೀರ ಪರಿಸ್ಥಿತಿ.

ಆಗೆಲ್ಲಾ ನಕಮುರ ಎಷ್ಟು ಪ್ರೀತಿ ವಿಶ್ವಾಸ ತೋರಿಸುತಿದ್ದ? ಮನೆಗೆಲಸ ದಲ್ಲಿ ಪಾಲ್ಗೊಳ್ಳುತಿದ್ದ. ತನ್ನಿಂದ ಸಾಧ್ಯವಾದಷ್ಟು ಸಹಾಯ ಮಾಡುತಿದ್ದ. ಪ್ರೀತಿ ಸಹಕಾರಗಳ ಗಣಿಯಾಗಿರುತಿದ್ದ. ಈಗಿನ ರೀತಿಯೇ ಬೇರೆ. ಅವನು ಉಪಾಯದಿಂದಲೇ ಉಣಿಚಿಕೊಳ್ಳುತ್ತಾನೆ. ಹೀಗೇ ಆದರೆ ಈ ಜೀವನವನ್ನು ನಡೆಸುವುದು ಖಂಡಿತ ಕಷ್ಟವೇ....ತನ್ನಲ್ಲೇ ಯೋಚಿಸಿದ ಲಾರಿ ತೀರಾ ಚಿಂತಾ ಕ್ರಾಂತಳಾದಳು. ಮನಸ್ಸು ದುಃಖದಿಂದ ಮುದುಡಿಹೋಯಿತು.

ಸ್ವಲ್ಪ ಹೊತ್ತು ಚಿಂತೆಯಲ್ಲೇ ಉರುಳಿತು. ಗಡಿಯಾರದ ಮುಳ್ಳು ಏಳರ ಗಡಿಯನ್ನು ದಾಟುವ ಮೊದಲೇ ನಕಮುರ ಆಗಮಿಸಿದ. ಕೈಯಲ್ಲಿದ್ದ ದೊಡ್ಡ ಬ್ಯಾಗಿನ ತುಂಬ ಮಾರಾಟದ ಸಾಮಾನುಗಳನ್ನು ತಂದಿದ್ದ. ಅದ ನ್ನೆತ್ತಿ ಗೋಡೆಯ ಬದಿಯಲ್ಲಿಟ್ಟು ಕೇಳಿದ "ನನ್ನ ಬಟ್ಟೆಗಳನ್ನು ತುಂಬಿಟ್ಟೆಯಾ ಡಾರ್ಲಿಂಗ್?" ದನಿಯಲ್ಲಿ ಹಾಲ್ಜೇನಿನ ಸಿಹಿ ಹರಿದು ಬಂತು.

"ಹೌದು" ಎಂಬಂತೆ ಅವಳು ತಲೆಯಲ್ಲಾಡಿಸಿದಳು ಮಾತಾಡಲಿಲ್ಲ.

"ಏಕೆ ಬಹಳ ಸಪ್ಪೆಯಾಗಿದ್ದಿ? ನಿನಗೆ ಬೇಸರವಾಗಿದ್ದರೆ ನಾನು ಬರುವ ತನಕವೂ ನರ್ಸಿಂಗ್ ಹೋಮಿನಲ್ಲೇ ಇದ್ದುಬಿಡು. ನಿನ್ನ ಬೇಸರ ಹರಿಯು ವುದರೊಂದಿಗೆ ಆರೋಗ್ಯವೂ ಕುದುರುತ್ತೆ ಆಯಿತೇ?" ಒತ್ತಾಯ ಪೂರ್ವಕ ವಾಗಿ ನುಡಿದ "ಆಯಿತೇ ಲಾರಿ?"

ಆಯಿತೇ...ಲಾರಿ? ವಾಕ್ಯದ ಕೊನೆಯ ಮಾತು ಕಿವಿಯಲ್ಲಿ ಮತ್ತೆ ಮತ್ತೆ ಮೊರೆಯಿತು.

"ಆಗಬಹುದು....ಡಾಕ್ಟರನ್ನು ಕೇಳಿ ನೋಡುವೆ."

"ನೀನು ಸರಿಯಾದ ಆಹಾರ ಪದಾರ್ಥ ತೆಗೆದುಕೊಂಡರೆ ಡಾಕ್ಟರೂ ಬೇಡ, ಯಾರೂ ಬೇಡ."

"ಊಟ ತಿಂಡಿಗೇನು ಕೊರತೆ? ಎಲ್ಲರಂತೆಯೇ ನಾನು."

ಅವನು ಬ್ಯಾಗಿನಿಂದ ಕೋಳಿ ಫ್ರೈಯಿದ್ದ ಪ್ಲಾಸ್ಟಿಕ್ ಡಬ್ಬಿಯನ್ನು ತೆಗೆದು "ನಡೆ ಇಂದು ಇದೇ ಸಾಕು ಊಟಕ್ಕೆ" ಎಂದ ಗಂಭೀರ ಪ್ರಸನ್ನತೆ ಯಿಂದ.

ತಾನೇ ಬಿಸಿ ಬಟ್ಟಲುಗಳನ್ನು ಮೇಜಿನ ಮೇಲಿಟ್ಟು ಬ್ರೆಡ್ ಟೋಸ್ಟ್ ಮಾಡಿದ. ಇಬ್ಬರೂ ಊಟ ಮುಗಿಸಿದರು. ಅವನು ಅವಸರಿಸಿ ತನ್ನ ಬ್ಯಾಗುಗಳನ್ನು ಹೊರಬಾಗಿಲಿಗೆ ತಂದಾಗಲೇ ಟ್ಯಾಕ್ಸಿ ಬಂದಿತು. ಅವಳಿ ಗೊಂದು ಹೂಮುತ್ತು ಕೊಟ್ಟು ಟ್ಯಾಕ್ಸಿ ಹತ್ತಿದ ನಕಮುರ.

"ಬಾಯ್ ಬಾಯ್."

"ಬಾಯ್ ಬಾಯ್."

ಹಿಂದೆಯೇ ದಡಾರನೆ ಕದ ಮುಚ್ಚಿಕೊಂಡಿತು. ಅವಳು ಹೋಗಿ ಪಲ್ಲಂಕದ ಮೇಲೆ ಬಿದ್ದುಕೊಂಡಳು.

o o o o

ಸಾಯಂಕಾಲ ಐದು ಗಂಟೆಯ ಸಮಯ.

ಟ್ರೆಣ್, ಟ್ರೆಣ್, ಟ್ರೆಣ್, ಟ್ರೆಣ್.

ಲಾರಿ ತೋಷಿಕೊ ಟೆಲಿಫೋನಿನ ಕರೆಗೆ ಓಗೊಟ್ಟಳು.

"ಹಲೋ"

"ಹಲೋ....! ಒಯೋಷಿ ಮಾತಾಡುತ್ತಿರುವೆ...ಹೇಗಿದ್ದೀ?" ಅಕ್ಕರೆಯಿಂದ ಕೇಳಿದಳು ಒಯೋಷಿ.

"ನಾನು ಇಂದು ನಿನ್ನನ್ನೇ ನೆನೆಯುತಿದ್ದೆ....ನನ್ನ ದೇಹಸ್ಥಿತಿ ಸುಧಾರಿಸುತ್ತಲೇ ಇಲ್ಲ. ಏನು ಮಾಡಲಿ ಹೇಳು? ನಕಮುರ ಊರಲಿಲ್ಲ. ಅವನು ಬರುವ ತನಕ ಆಸ್ಪತ್ರೆಯಲ್ಲಿರಬಹುದೇ? ಸ್ಥಳ ಸಿಕ್ಕೀತೇ?....ನೀನು ಏನು ಹೇಳುತ್ತಿ?" ಕ್ಷೀಣಿತ ದನಿ ಎದೆಯಾಳದಿಂದ ಹೊರಬಿತ್ತು.

"ತುಂಬಾ ಜನ ಒತ್ತಡ. ಜಗಲಿಯಲ್ಲಿಯೂ ಸ್ಥಳ ಸಿಗದು. ಆಸ್ಪತ್ರೆಯಿಂದ ಹೋಗುವಾಗ ನಿನ್ನ ನೋಡಿಕೊಂಡು ಹೋಗುವೆ. ಮನೆಯಲ್ಲಿರುತ್ತಿತಾನೇ?"

"ಖಂಡಿತಾ ಬಾ ಒಯೋಷಿ. ನನ್ನ ಜೀವ ನಿನಗಾಗಿ ತುಡಿಯುತ್ತಿದೆ." ದುಃಖ ಸಂಕಟಗಳಿಂದ ಅತೀ ದೈನ್ಯ ವಾಣಿಯಲ್ಲಿ ಕೇಳಿಕೊಂಡಳು ಲಾರಿ ತೋಷಿಕೊ. ಒಡಲ ಸಂಕಟ ದನಿಯಲ್ಲಿ ಹೊಮ್ಮಿತು. ಪುನಃ "ಬಹಳ ಹೊತ್ತು ಇರುವಂತೆ ಬಾ ಒಯೋಷಿ!"

"ಬಹಳ ಹೊತ್ತು ಇರಲು ರಜಾ ದಿನಗಳಲ್ಲಿ ಬರುವೆ. ಈವೊತ್ತು ಆಗುವುದಿಲ್ಲ."

ಟೆಲಿಫೋನಿನ ಸಂಪರ್ಕ ತುಂಡುಗಡಿಯಿತು.

ಲಾರಿ ತೋಷಿಕೊ ಗೆಳತಿಗಾಗಿ ಕಾದು ಕುಳಿತಳು. ಗೋಡೆಯ ಮೇಲಿನ ಗಡಿಯಾರದತ್ತ ಹರಿಯಿತು ನೋಟ. ಇನ್ನೂ ಆರರ ಸಮಯ. ಅವಳು ನೈಟ್ ಡ್ಯೂಟಿಗೆ ಹೋಗುವವಳಿದ್ದರೆ ಒಂದು ತಾಸು ಇಲ್ಲಿ ಉಳಿಯಲು ಸಾಧ್ಯ ಎಂಬಷ್ಟು ಆಸೆ ಮನದಲ್ಲಿ. ಮೈಯೆಲ್ಲಾ ಮನಸ್ಸಾದಷ್ಟು ಆತುರ–ಕಾತರ. ಆಶಾಯುಕ್ತ ಕಣ್ಣೆವೆಗಳು ಬಾಗಿಲ ಕಡೆಗೆ.

ಒಯೋಷಿ ಬಾಲ್ಯ ಗೆಳತಿ. ಶಾಲೆಯ ವಿದ್ಯಾಭ್ಯಾಸ ಮುಗಿಯುವವರೆಗೆ ಇಬ್ಬರೂ ಕೂಡಿ ಆಡಿ ಒಟ್ಟಿಗೆ ಕಲಿತವರು. ವಿದ್ಯಾಭ್ಯಾಸ ಮುಗಿದ ನಂತರ ಇಬ್ಬರ ಹಾದಿಯೂ ಕವಲೊಡೆಯಿತು. ಅವಳು ಶುಶ್ರೂಕಳಾಗಿ ಕೆಲಸ ಹಿಡಿದು ಅದರಲ್ಲೇ ಮುಂದುವರಿಯುತ್ತಿದ್ದಾಳೆ. ಲಾರಿ ತೋಷಿಕೊ ಶಿಕ್ಷಕಿಯಾಗಿ ಸಾಲ್ಕಾರು ವರ್ಷ ಕೆಲಸ ಮಾಡಿ ಸಂಸಾರಕ್ಕೆ ಕಾಲಿಟ್ಟವಳು. ಅವಳಿನ್ನೂ ಹಾರುವ ಹಕ್ಕಿ. ಇವಳಿಗೆ ಎಲ್ಲಿಲ್ಲದ ಗೋಳು. ಒಯೋಷಿ ಎಳೆ ನಗುವಿನ ಮುಗುಳನ್ನು ಚೆಲ್ಲುತ್ತಲೇ ಒಳಬರುವಳೆಂಬುದು ಗೊತ್ತು. ಅವಳ ಮುಗುಳಿಗೆ ಪ್ರತಿಯಾಗಿ ಪ್ರಸನ್ನ ಮುಖ ತೋರುವ ಶಕ್ತಿಯೇ ತನ್ನಲ್ಲಿಲ್ಲವಲ್ಲಾ ಎಂಬ ಕೊರಗು ಮನಕ್ಕೆ. ಅತೀವ ಸಂಕಟ ಹೃದಯಕ್ಕೆ.

ಒಯೋಷಿ ಸ್ವಲ್ಪ ಹೊತ್ತಿನೊಳಗಾಗಿ ತೋಷಗೋಷಿಣಿಯಂತೆ ಪ್ರಸನ್ನ ಮುಖಿಯಾಗಿಯೇ ಒಳಬಂದಳು. ಲಾರಿ ತೋಷಿಕೊ ತಲೆಬಾಗಿಲಿಗೆ ಹೋಗಿ ಎರಡೂ ಕೈಗಳಿಂದ ಸ್ವಾಗತ ನೀಡಿದಳು. ಹೃನ್ಮನಗಳು ಅರಳಿದುವು. ಆದರೆ, ಪ್ರಾಣ ಹಿಂಡುತ್ತಿದೆ ಮೈಯ ಅಸ್ವಸ್ಥತೆ.

"ನಿನಗೆ ನೈಟ್ ಡ್ಯೂಟಿ ತಾನೆ? ಇಲ್ಲಿ ಒಂದು ಗಂಟೆ ಇರುವಷ್ಟು ಸಮಯವಿರುವುದೆ?"

"ನೋ ನೋ! ನಾನು ಆಸ್ಪತ್ರೆಯಿಂದ ಮನೆಗೆ ಹೋಗುತ್ತಿದ್ದೀನಿ. ರಾತ್ರಿಯಡುಗೆ ಆಗಬೇಕು. ನೀನು ನನ್ನೊಂದಿಗೆ ಹೊರಡು. ಒಂದು ರಾತ್ರಿ ಆರಾಮಾಗಿ ಕಳೆಯಬಹುದು ನನ್ನೊಂದಿಗೆ."

ಆ ಮಾತು ಕಿವಿಗೆ ಎಷ್ಟು ಆಪ್ಯಾಯಮಾನವಾಗಿತ್ತೊ...ಮರು ಮಾತಿಲ್ಲದೆ ಒಪ್ಪಿದಳು ಲಾರಿ ತೋಷಿಕೊ. ಇಬ್ಬರೂ ಮನೆ ಸೇರಿ ಪರಮ ಗೆಳೆತನದ

ಸಾರವನ್ನೆಲ್ಲಾ ಸವಿದರು ಒಂದುಗೂಡಿ. ಮಾತು–ಮಾತು ಅಂದಿಂದಿನ ಮಾತು ಕತೆಯೆಲ್ಲಾ ಸರಾಗದಿಂದ ನಡೆದುವು.

ಂ ಂ ಂ ಂ

ಒಯೋಷಿ ಚಿಗರಿಯಂತಹ ಚುರುಕಿನ ಹುಡುಗಿ. ಕೆಲಸ ಕಾರ್ಯಗಳು ಯಾಂತ್ರಿಕ ಗತಿಯಲ್ಲಿ ಸರಸರನೆ ನಡೆಯುತ್ತವೆ. ಕೆಲಸ ಮಾಡುತ್ತಲೇ ಗೆಳತಿಯ ಆತಿಥ್ಯವನ್ನು ಪೂರೈಸಿದಳು. ಆತ್ಮೀಯತೆಯ ಸನ್ನಿಧಿಯಲ್ಲಿ ಹೊತ್ತು ಸಾನಂದದಿಂದ ಉರುಳಿತು.

“ನೀನಿನ್ನು ಒಕಮುರನಿಗೆ ಗೃಹಕೃತ್ಯದಲ್ಲಿ ಸರಿಯಾದ ತರಬಿಯತ್ತು ಕೊಡಬೇಕು. ಇಲ್ಲವಾದರೆ ನಿನಗೆ ಮುಂದೆಯೂ ಭಂಗ ತಪ್ಪಿದ್ದಲ್ಲ. ನೀನಿರುವ ಸ್ಥಿತಿಯಲ್ಲಿ ಹೆಚ್ಚು ಭಾರ ಹೊರಲಾರೆ. ನಿನ್ನ ಅಶಕ್ತ ಶರೀರವನ್ನು ನೀನಲ್ಲದೆ ಇನ್ನ್ಯಾರು ಕಾಪಾಡಬೇಕು ? ನೀನು ಇದನ್ನೆಲ್ಲಾ ಯೋಚಿಸಬಾರದೆ ? ವರ್ಷ ವರ್ಷವೂ ಮಗುವಿನ ಭಾರವೆಂದರೆ ಸಾಮಾನ್ಯವೇ ? ಗಂಡಸರಿಗೆ ಇದೆಲ್ಲಾ ಅರ್ಥವಾಗುವುದಿಲ್ಲ ಬಿಡು.”

“ನನಗೆ ಅದೇ ಕೊರಳಿಗೆ ಉರುಳು !”

“ನೀನಿನ್ನು ಶ್ರಮಿಕ ಪ್ರವೃತ್ತಿಯನ್ನು ಆದಷ್ಟು ಕಡಿಮೆ ಮಾಡದಿದ್ದರೆ ಸಾಧ್ಯವೇ ಇಲ್ಲ. ನೀನಿರುವ ಸ್ಥಿತಿಯಲ್ಲಿ ನಿನಗೆ ತುಂಬಾ ವಿಶ್ರಾಂತಿ ಬೇಕು. ಖಂಡಿತಾ ನಿರ್ಲಕ್ಷ್ಯ ಮಾಡಬೇಡ. ಒಕಮುರ ಸಿಕ್ಕಿದರೆ ನಾನೇ ಅವನಿಗೆ ಬುದ್ಧಿವಾದ ಹೇಳುವೆ. ಅವನು ಹೀಗಿರಲೇಕೂಡದು. ಇದು ಸರ್ವಥಾ ತಪ್ಪು. ಅವನಿಗಿನ್ನೂ ಅರ್ಥವಾಗಿಲ್ಲ. ಶುದ್ಧ ಹುಡುಗಬುದ್ಧಿ,” ಒತ್ತಾಯಪೂರ್ವಕವಾಗಿ ನುಡಿದಳು ಒಯೋಷಿ. ಹೃನ್ಮನಗಳು ಅಸಮಾಧಾನದ ಮುದ್ದೆಯಾದುವು.

“ಅವನು ಹೆಚ್ಚು ಹೆಚ್ಚು ಪ್ರವಾಸ ಮಾಡುವುದರಿಂದ ಕೈಗೆ ಸಿಕ್ಕುವುದೇ ಇಲ್ಲ. ಎಂದಾದರೊಮ್ಮೆ ಅಷ್ಟಿಷ್ಟು ಮಾಡಿದರೆ ಏನು ಪ್ರಯೋಜನ ? ಅದರಲ್ಲೂ ತೀರಾ ನುಣುಚಿಕೊಳ್ಳುವ ಸ್ವಭಾವ ಬೇರೆ. ನಾನು ನಿತ್ಯ ಹೇಳುತ್ತಲೇ ಇರುವೆ.

ಅವನು 'ಹ್ಞೂಂ' ಎನ್ನುತ್ತಲೇ ಇರುತ್ತಾನೆ ಅಷ್ಟೆ" ಒಲು ಸಂಕಟದಿಂದ ನುಡಿದಳು ಲಾರಿ ತೋಷಿಕೊ. ಒಡಲ ಸಂಕಟವೆಲ್ಲಾ ಮುಖ ಮುದ್ರೆಯಲ್ಲಿ ಬಯಲಾಯಿತು. ಒಂದು ಗಳಿಗೆ ತಡೆದು ಪುನಃ ನುಡಿದಳು "ಅವನು ಮೊದಲೆಲ್ಲ ಹಾಗಿರಲಿಲ್ಲ. ಈಗೀಗ ಬಲೂ ಜಾರಿಕೆಯ ಬುದ್ಧಿ. ಇದು ಬಗೆಹರಿಯದ ಸಮಸ್ಯೆಯಾಗಿದೆ."

"ಹಾಗೆಂದರೆ ಹೇಗೆ ? ಇದರಿಂದ ಸಮಸ್ಯೆ ಬಿಗಡಾಯಿಸುತ್ತದೆ. ನಿನಗೀಗ ಸಂಪೂರ್ಣ ವಿಶ್ರಾಂತಿ ಬೇಕೇ ಬೇಕು. ಚಿಕಿತ್ಸೆಯನ್ನು ಕ್ರಮವತ್ತಾಗಿ ತೆಗೆದುಕೋ ಲಾರಿ. ಇಲ್ಲವಾದಲ್ಲಿ ಜೀವಕ್ಕೇ ಅಪಾಯ. ಮೈಯಲ್ಲಿ ರಕ್ತವಿಲ್ಲ. ನೀನು ಆಸ್ಪತ್ರೆಯಲ್ಲಿದ್ದು ಚಿಕಿತ್ಸೆ ಪಡೆಯಲೇಬೇಕು. ಈ ಸ್ಥಿತಿಯಲ್ಲಿ ಮನೆಯ ಭಾರ ಹೊತ್ತರೆ ನಿನಗೆ ನೀನೇ ಮಾರಕವಾಗುತ್ತಿ."

ಆ ವಿಚಾರ ಧಾರೆ ಎದೆಯಾಳಕ್ಕೆ ಬಾಣದಂತೆ ಹೊಕ್ಕಿತು. ಲಾರಿ ತೋಷಿಕೊ ಭಾವಸಾತ್ಮಕ ಚಿಂತೆಯಿಂದ ಭಾರಕ್ರಾಂತ ಹೃದಯಳಾದಳು. ಪ್ರಯತ್ನಿಸಿದರೂ ತುಟಿಗಳು ಬಿರಿಯಲಿಲ್ಲ. ಒಂದು ಕಾಲದಲ್ಲಿ ಒಕಮುರನಿಗೆ ಪ್ರೀತಿಯ ದ್ಯೋತಕವಾಗಿ ಆತ್ಮಾರ್ಪಣೆ ಮಾಡಿದ್ದಾಗಿದೆ. ಒಲವು ಹಣ್ಣಾಗಿ ಜೀವನಾನುಬಂಧ ಬಿಗಿಗೊಂಡಿದೆ. ಅವನನ್ನು ಬಿಟ್ಟು ಇರಲಾರೆ ಎಂಬಷ್ಟು ಪ್ರೀತಿ–ವಿಶ್ವಾಸ. ಅವನಿಗೂ ಅಷ್ಟೇ, ಬಲೂ ಪ್ರೀತಿ....? ಪ್ರೀತಿಯೇ ಮೈವೆತ್ತು ಬಂದ ಅವನನ್ನುಳಿದು ನಾನಾದರೂ ಹೇಗಿರಲಿ ? ಎಂಬ ಪ್ರಶ್ನೆ ಸಲಸಲಕ್ಕೂ ಏಳುತ್ತದೆ ಹೃದಯ ಕುಂಡದಲ್ಲಿ...."

"ಅವನಿಗೆ ಬಿಡುವಿಲ್ಲಧಿರುವುದೂ ನಿಜವೇ...." ಎಂದಳು ಯೋಚಿಸಿ.

"ಹಾ ! ಅದು ಕೂಡದು ಲಾರಿ ! ಇಬ್ಬರೂ ಒಟ್ಟುಗೂಡಿ ಜೀವನ ನಡೆಸುತ್ತೀರಷ್ಟೆ ? ಪ್ರತಿಯೊಂದು ಕೆಲಸವೂ ಇಬ್ಬರಿಗೂ ಸೇರಿದ್ದು. ಅವನು ಮನೆಯಲ್ಲಿದ್ದಷ್ಟು ಕಾಲ ಸಹಾಯಕನಾಗಿರಬೇಡವೇ ? ಎಲ್ಲವನ್ನೂ ನೀನೇ ನಿರ್ವಹಿಸುವುದೆಂದರೆ ಹೇಗೆ ? ಹಿಂದೆ, ನಾರೀ ಶಕ್ತಿ ಗೃಹಕೃತ್ಯದಲ್ಲಿಯೇ ಕೊಳೆತು ನಾರುವ ಪರಿಪಾಡು ಹೊಂದಿತ್ತು. ಅವಿದ್ಯೆ–ಅಜ್ಞಾನಗಳಿಂದ ಸ್ತ್ರೀ ಜನ ಮುಗ್ಧದುಗ್ಧತೆಯಲ್ಲಿ ದಿಕ್ಕಾಣದಾಗಿದ್ದರು. ದುಡಿಯುವುದೊಂದು

ಹೊರತು ಮತ್ತೇನೂ ತಿಳಿದಿರಲಿಲ್ಲ. ಗಂಡಸಿನ ಭೋಗವಸ್ತುವಾಗಿ ಮನೆಗೊಂದು ಪಗಾರವಿಲ್ಲದ ತೊತ್ತಾಗಿ ಬಾಳುವುದನ್ನೇ ಧರ್ಮವೆಂದು ನಂಬಿ ದಾಸಾನುದಾಸರಾಗಿರುತಿದ್ದರು. ಈಗ ಕಾಲ ಸಂಪೂರ್ಣ ಬದಲಾಗಿದೆ. ನಿನ್ನ ಆತ್ಮಶಕ್ತಿಯನ್ನು ವ್ಯಯಿಸಬೇಕಾದರೆ ಪಾತ್ರಾಪಾತ್ರತೆಯನ್ನು ಅರಿತುಕೊಳ್ಳಬೇಕು. ಹಾಗೆ ಅರಿತುಕೊಳ್ಳದೆ ಹೋದರೆ ನಿನ್ನನ್ನೇ ನೀನು ತೇಯ್ದು ತೇಯ್ದು ಶಂಡಳಾಗುತ್ತಿ. ಮನುಷ್ಯ ಜನ್ಮವೆತ್ತಿ ಬದುಕು ಬರಡಾದರೆ ಹೇಗೆ ಹೇಳು? ಹಿಂದೆ ನೀನು ಶಿಕ್ಷಕಿಯಾಗಿದ್ದಾಗಿನ ಜೀವನ ಹೇಗಿತ್ತು? ಈಗ ಹೇಗಿದೆ? ನಿನಗೆ ವೈಯ್ಯಕ್ತಿಕ ಸ್ವಾತಂತ್ರ್ಯ ಬೇಡವೇ? ಆರ್ಥಿಕ ಸ್ವಾತಂತ್ರ್ಯ ಬೇಡವೇ? ಇದನ್ನೆಲ್ಲಾ ನೀನು ದೀರ್ಘವಾಗಿ ಆಲೋಚಿಸು...."

ಅವಳ ವ್ಯಾಖ್ಯಾನ ಧಾರೆ ಹರಿಯುತ್ತಲೇ ಇತ್ತು. ಲಾರಿ ಕೇಳಿದಳೋ ಬಿಟ್ಟಳೋ 'ಹ್ಞೂಂ' ಎಂದಳು ಮಾತ್ರ. ತನುಮನಗಳಲ್ಲಿ ಆಸಕ್ತಿ ಪೂರ ಕಮರಿ ಹೋದಷ್ಟು ನೀರಸಭಾವ : ನಿರಾಸಕ್ತಿ.

ಒಯೋಷಿ ಪುನಃ ಮುಂದುವರಿದಳು "ಕೇಳು, ತೋಷಿಕೊ....ನೀನು ಮೊದಲನೆಯದಾಗಿ ಕಾಲಜ್ಞಾನವನ್ನು ಅರಿತುಕೊಳ್ಳಲಿಲ್ಲ. ನೀನು ಶಾಲೆ ಬಿಟ್ಟು ಎರಡು ಮೂರು ವರ್ಷಗಳೇ ಆದುವು. ನಿನ್ನ ವೈಯ್ಯಕ್ತಿಕ ಬೆಲೆಯನ್ನು ಅರಿತುಕೋ....ನಿನ್ನ ನೀನರಿತುಕೊಂಡರೇನೇ ಜೀವನ ಸಾಮರಸ್ಯ. ಇಲ್ಲದಿದ್ದರೆಲ್ಲಿ? ಜೀವನದಲ್ಲಿ ನಿನ್ನ ಅರ್ಧ ಭಾರವನ್ನು ಇಳಿಸುವುದೇ ಗಂಡಿನ ಜೀವನ ಧರ್ಮ. ಹಾಗಲ್ಲದ ಮೇಲೆ ಅಂತಹ ಬಾಳಾದರೂ ಏಕೆ ಬೇಕು? ನೀನೇನು ಅವನಿಗೆ ತೊತ್ತೇ! ಸೊತ್ತೇ? ನೀನು ಇದೆಲ್ಲವನ್ನೂ ಯೋಚಿಸಬಾರದೇ? ಜೀವನ ಧರ್ಮವನ್ನು ಅರಿತುಕೊಳ್ಳದೆ ಜೀವನಕ್ಕೆ ಕಾಲಿಟ್ಟರೆ ಆಗುವುದೇ ಹೀಗೆ..."

ಅವಳ ವಾಕ್ಯಧಾರೆ ಎದೆಯಾಳಕ್ಕೆ ಇಳಿದು ಕೈಯಾಡಿಸಿತು.

"ನಕಮೂರ ಸರಿಯಾದ ಹೊಣೆಗಾರನಲ್ಲ. ಅವಸರದಲ್ಲಿ ಅಷ್ಟಿಷ್ಟು ಕೈಯಾಡಿಸಿ ಹೋಗಿಬಿಡುತ್ತಾನೆ. ಬಿಡುವು ದೊರೆಯದಿರುವುದೂ ನಿಜವೇ. ನಾನು

ಸಂಸಾರಕ್ಕೆ ಕಾಲಿಟ್ಟು ತಪ್ಪು ಮಾಡಿದೆ. ಈಗ ಏನು ಮಾಡಲಿ ಹೇಳು ?" ನೀರಸ ದನಿಯಲ್ಲಿ ನುಡಿದಳು ಲಾರಿ ತೋಷಿಕೊ.

"ಹಾಗೆಂದರೆ ಹೇಗೆ ? ಅವನು ಬಿಡುವು ಮಾಡಿಕೊಳ್ಳಲೇಬೇಕು. ಸಂಗಾತಿ ಬೇಕು ಎಂದರೆ ಮಾಡಿಕೊಳ್ಳದಿದ್ದರೆ ಹೇಗೆ ? ನೀನೇಕೆ ಸುಮ್ಮನಿರುತ್ತಿ ? ನಿನಗೆ ಆರೋಗ್ಯವಿಲ್ಲ. ಗರ್ಭಿಣಿ ಬೇರೆ. ಇದಕ್ಕೆಲ್ಲಾ ಅವನಲ್ಲವೇ ಜವಾಬ್ದಾರ ?" ಸಿಟ್ಟಿನಿಂದ ಕೇಳಿದಳು ಒಯೋಷಿ.

"ಹೌದು...."

"ಅಂದಮೇಲೆ ನೀನೇಕೆ ತೆಪ್ಪಗಿದ್ದಿ ? ಇದು ಜೀವನದ ಪ್ರಶ್ನೆ. ಯೋಚಿಸಿ ನೋಡು. ನೀನೇನೂ ಚಿಕ್ಕವಳಲ್ಲ."

"ನಾನು ಅವನಿಗೆ ಹೇಳುತ್ತಲೇ ಇರುವೆನಲ್ಲ. ಅವನು ಸುಮ್ಮನೆ 'ಹ್ಞೂಂ' ಎನ್ನುತ್ತಾನೆ. ಇದೇ ದಿನ ಚರಿಯಾಗಿದೆ...." ತುಂಬಾ ಬೇಸರದಿಂದ ನುಡಿದಳು ಲಾರಿ ತೋಷಿಕೊ.

"ಅವನಿಗೆ ನಾನೊಮ್ಮೆ ವಿವರವಾಗಿ ಹೇಳುವುದಿದೆ."

"ಅಷ್ಟು ಉಪಕಾರ ಮಾಡು ಒಯೋಷಿ."

ದೈನ್ಯಭಾವದಿಂದ ನುಡಿದಳು ಲಾರಿ ತೋಷಿಕೊ.

"ನಿನ್ನ ದೇಹಸ್ಥಿತಿ ಸರಿ ಹೋದನಂತರ ಹೀಗೆ ಮನೆಯಲ್ಲೇ ಬಿದ್ದಿರಬೇಡ. ಮೊದಲಿನಂತೆ ಕೆಲಸ ಹಿಡಿದುಕೊ...ಅನಂತರ ಎಲ್ಲಾ ಸರಿಹೋಗುತ್ತೆ."

"ಅದು ಸರಿ. ಒಪ್ಪಿಕೊಳ್ಳುವೆ. ಒಂದರ ಮೇಲೊಂದು ಬಸಿರುತನ ಬಂದು ಆರೋಗ್ಯ ಕೆಟ್ಟುದುದರಿಂದ ಹಿಂದುಳಿದೆ. ಇನ್ನು ಮುಂದೆ ಸರಿಪಡಿಸಿ ಕೊಳ್ಳುವೆ."

ο ο ο ο

ಲಾರಿ ತೊಷಿಕೊ ಅವನಲ್ಲಿಟ್ಟ ಪ್ರೇಮ ಅಪಾರ. ಅದು ಈ ಜನ್ಮಕ್ಕೆ ಕಡಿಯುವಂತಾದ್ದಲ್ಲ. ತನ್ನ ಜೀವವನ್ನಾದರೂ ಕೊಟ್ಟು ಅವನನ್ನು ರಕ್ಷಿಸುವ ಪ್ರೇಮ ಕಾತರತೆಯೇ ಶಿಕ್ಷಕಿಯ ಕೆಲಸವನ್ನು ಬಿಟ್ಟುಕೊಡಲು ಕಾರಣ.

ಒಕಮುರನ ಪರಿಚಯುವಾದುದು ಶಾಲೆಯಲ್ಲಿ. ಅವನು ತಂಗಿಯರನ್ನು ಶಾಲೆಗೆ ಕರೆತರುತಿದ್ದ. ಸಾಯಂಕಾಲ ಕರೆದೊಯ್ಯುವಾಗ ಶಿಕ್ಷಕಿಯ ಭೇಟಿ ಯಾಗುತಿತ್ತು. ತಮ್ಮ ತಮ್ಮ ದಾರಿ ಕವಲೊಡೆಯುುವವರೆಗೂ ಒಟ್ಟಿಗೆ ನಡೆ ಯುತಿದ್ದರು ರಸ್ತೆಯಲ್ಲಿ. ಕಾಲಾಂತರದಲ್ಲಿ ಸ್ನೇಹಬಂಧದಿಂದ ಪ್ರೇಮಾಂಕುರ ವಾಯಿತು. ವಾಸಕ್ಕಾಗಿ ಒಂದು ಸಣ್ಣ ಮನೆಯನ್ನು ಪಡೆದುಕೊಳ್ಳಬೇಕಾದರೆ ವರ್ಷವೇ ಕಳೆಯಿತೇನೋ....ಅಷ್ಟರಲ್ಲಿ ಪ್ರೇಮಧಾರೆ ಎರಡೂ ಹೃದಯಗಳನ್ನು ಬೆಸೆಯಿತು. ಇಬ್ಬರೂ ಪ್ರೇಮದ ಹಕ್ಕಿಗಳಾಗಿ, ಸುಂದರ ಸಂಭ್ರಮಿಗಳಾಗಿ, ಆನಂದದ ಗಣಿಗಳಾಗಿ ಸಂಸಾರ ಹೂಡಿದರು.

ಒಯೋಷಿ ಆಗಲೂ ಒಮ್ಮೆ ಎಚ್ಚರಿಸಿದ್ದಳು.

ಒಯೋಷಿ ಬಾಲ್ಯ ಗೆಳತಿ ಮಾತ್ರವಲ್ಲ. ಹಿತೈಷಿಯೂ ಹೌದು. ಬಾಡಿ ಬತ್ತಿದೆಡೆಗೆ ಜೀವವಾಹಿಯನ್ನು ಹರಿಸುವಂತಹ ಪ್ರೇಮ–ಸ್ನೇಹಗಳ ಗಣಿ.

ಅವಳು ಗೆಳತಿಗೆಂದಳು "ನೋಡು ಲಾರಿ, ನಾನು ನಿನ್ನಂತೆ ಪಕ್ಕನೆ ನಂಬಿ ಕೆಡುವುದಿಲ್ಲ. ನಮ್ಮ ಆಸ್ಪತ್ರೆಯಲ್ಲಿ ಕತೊಶೂಸನ್ ಒಳ್ಳೆಯ ಡಾಕ್ಟರು. ಒಳ್ಳೆ ಯವನು ಕೂಡ. ಅವನು ನನ್ನ ಎಷ್ಟು ಪ್ರೇಮಿಸುತ್ತಿದ್ದಾನೆಂದರೆ ನನ್ನನ್ನು ನೋಡದೆ ಒಂದಿನವೂ ಇರಲಾರ. ಮದುವೆಗಾಗಿ ಹಾತೊರೆಯುತಿದ್ದಾನೆ. ನಾನು ನಿಧಾನಿಸುತ್ತಲೇ ಇರುವೆ. ಅವನನ್ನು ಪೂರ್ತಿ ಅರಿತುಕೊಳ್ಳದೆ ನಾನು ಮದುವೆಗೊಪ್ಪುವುದಿಲ್ಲ, ಅವನು ನನ್ನ ಬುದ್ಧಿವಂತಿಕೆಯನ್ನು ಮೆಚ್ಚಿ ಕೊಂಡಿದ್ದಾನೆ. ನನ್ನ ಹಿಂಜರಿತದಿಂದ ಅವನಿಗೆ ಖಂಡಿತ ಬೇಸರವಿಲ್ಲ. ಅವನು ಎಷ್ಟು ದಿನಗಳಾದರೂ ಕಾಯಲು ಸಿದ್ಧ."

"I wish you good luck."

ಇಬ್ಬರ ಮುಖದಲ್ಲೂ ಹೂ ನಗೆ ಅರಳಿತು.

o o o o

ಒಯೋಷಿ ಗೆಳತಿಗಾಗಿ ಆಸ್ಪತ್ರೆಯಲ್ಲಿ ಖಾಲಿ ವಾರ್ಡಿದೆಯೇ ಎಂಬುದರ ತೀವ್ರ ತಪಾಸಣೆಯಲ್ಲಿ ತೊಡಗಿಯೂ ವಿಫಲತೆಯ ಕಹಿ ಉಂಡಳು. ಎಲ್ಲಾ

ಕಡೆಯೂ ಭರ್ತಿ, ಕಟ್ಟಕಡೆಗೆ ಎರಡು ಮೂರು ದಿನಗಳಲ್ಲಿ ಬಿಡುಗಡೆ ಹೊಂದುವ ಪೇಶಂಟ್ ಇದ್ದುದು ತಿಳಿಯಿತು. ಅದು ತಕ್ಕುದಾದ ಚಿಕ್ಕ ಕೋಣೆಯೂ ಆಗಿದ್ದುದರಿಂದ ಅನುಕೂಲ. ಅದನ್ನು ಮೊದಲೇ ಹಿಡಿದಿಟ್ಟಳು ಒಯೋಷಿ. ಗೆಳತಿಯ ಶ್ರದ್ಧೆ ಪ್ರೀತಿ ವಿಶ್ವಾಸಗಳನ್ನು ಎಂತು ತೀರಿಸುವೆನೋ ಎಂಬ ಯೋಚನೆಯೂ ಬರುತ್ತೆ. ಆನಂದಾಶ್ರುಗಳನ್ನು ಶ್ರವಿಸುತ್ತವೆ ನಯನದ್ವಯಗಳು.

ವಾರ್ಡು ಖಾಲಿಯಾದೊಡನೆಯೆ ಚೊಕ್ಕಟಗೊಳಿಸಿದ ಬಳಿಕ ಗೆಳತಿಯನ್ನು ಬರಮಾಡಿಕೊಂಡಳು ಒಯೋಷಿ. ಆಸ್ಪತ್ರೆಯಲ್ಲಿಯೇ ಊಟ ತಿಂಡಿಗಳಿಗೆ ಏರ್ಪಾಡು ಮಾಡಿದಳು. ಹಿರಿಯ ವೈದ್ಯರಿಂದ ಚಿಕಿತ್ಸೆ ಆರಂಭವಾಯಿತು. ಆದರೂ, ಕ್ಷಿಪ್ರ ಸುಧಾರಣೆ ಕಂಡುಬರಲಿಲ್ಲ ಹುಡುಗಿಯಲ್ಲಿ. ಒಯೋಷಿ ತನ್ನ ಕೆಲಸದ ಮಧ್ಯೆ ಮಧ್ಯೆ ಬಂದು ವಿಚಾರಿಸಿ ನಕ್ಕು ನಲಿಸಿ ಹೋಗುತ್ತಾಳೆ ಮತ್ತೆ ಕೆಲಸಕ್ಕೆ.

ಎರಡು ಮೂರು ದಿನಗಳು ಕಳೆದುವು ಸರಾಗವಾಗಿ.

ಅನಂತರ ಎದೆಯ ನೆಲೆಯಲ್ಲಿ ಉಸಿರಾಟದ ತೊಂದರೆ ಕಾಣಿಸಿಕೊಂಡಿತು ಲಾರಿ ತೋಷಿಕೊ–ಗೆ. ಕುಳಿತುಕೊಳ್ಳುವುದೂ ಕಷ್ಟ. ಮಲಗುವುದೂ ಕಷ್ಟ. ತಾಳಲಾರಳು ; ಅನುಭವಿಸಲಾರಳು. ಲಾರಿ ತೋಷಿಕೊ ಬಳಲಿ ಬೆಂಡಾಗಿ ಹಣ್ಣು ಹಣ್ಣಾದಳು.

ವೈದ್ಯಕೀಯ ತಪಾಸಣೆ ನಡೆಯುತ್ತಲಿತ್ತು. ಮಾತ್ರೆ ಇಂಜೆಕ್ಷನ್‌ಗಳು ಮೈ ಸೇರಿದುವು. ವೈದ್ಯರು ಸವಿ ನುಡಿಗಳಿಂದ ಸಮಾಧಾನ ಹೇಳುತ್ತಾರೆ. ಒಯೋಷಿಯೂ ಧೈರ್ಯದ ಮಾತುಗಳಿಂದ ಸಂತೈಸುತ್ತಾಳೆ. ಗೆಳತಿಯನ್ನು ಕಂಬನಿ ತುಂಬಿದ ಕಣ್ಣುಗಳಿಂದ ನೋಡುತ್ತ ಲಾರಿ ತೋಷಿಕೊ ಅತ್ಯಂತ ಗದ್ಗದ ಭರಿತ ದನಿಯಲ್ಲಿ ನುಡಿದಳು,

"ಒಯೋಷಿ....ನನ್ನಿಂದ ನಿನಗೆ ಅಪಾರವಾದ ತೊಂದರೆಯಾಯ್ತು. ದಯವಿಟ್ಟು ಕ್ಷಮಿಸು ಒಯೋಷಿ."

"ಛೀ ! ಹಾಗೇಕೆನ್ನುತ್ತಿ ? ಶುಶ್ರೂಕರಿರುವುದೇ ಶುಶ್ರೂಷೆ ಮಾಡುವುದಕ್ಕಾಗಿ ಎಂಬುದನ್ನು ನೀನು ಸಲಸಲಕ್ಕೂ ಮರೆಯುವಂತಿದೆ. ಸದ್ಯ ಮನದಲ್ಲಿ

ಯಾವ ಸಂಕೋಚವೂ ಇಟ್ಟುಕೊಳ್ಳಬೇಡ, ನೀನು ಹಿಂದಿನ ಆರೋಗ್ಯವನ್ನು ಪಡೆದುಕೊಳ್ಳುವುದನ್ನು ಮಾತ್ರ ಗಮನಿಸು. ಇತರ ಯಾವ ವಿಚಾರವನ್ನೂ ಮನಸ್ಸಿಗೆ ಹಾಕಿಕೊಳ್ಳಬೇಡ."

ಲಾರಿ ತೋಷಿಕೊ ನೀಳವಾದ ನಿಟ್ಟುಸಿರನ್ನು ಬಿಟ್ಟು ಸುಮ್ಮನಾದಳು. ಕಣ್ಣುಗಳ ಅಂಚಿನಲ್ಲಿ ಸಣ್ಣಗೆ ಬೆಳ್ಳಿಯ ಗೆರೆಯಂತೆ ನೀರಾಡಿತು ಮರು ನುಡಿಯಲು ಮನಸ್ಸು ಬರಲಿಲ್ಲ. ಮುಖಬಿಂಬ ವಿವರ್ಣವಾಯಿತು. ಮುಂದೇನು ? ಎಂಬ ಪ್ರಶ್ನೆ ತಲೆಯನ್ನು ಹೊಕ್ಕಿದೆ....ಉತ್ತರ ಮಾತ್ರ ದೊರೆಯುತ್ತಲೇ ಇಲ್ಲ. ಭಾವ ಗಂಭೀರತೆಯಿಂದ ಮಂತ್ರಮುಗ್ಧತೆಯಲ್ಲಿ ಮುಳುಗಿ ಹೋದಳು.

o o o o

ಒಕಮುರ ಪ್ರವಾಸವನ್ನು ಮುಗಿಸಿ ಮನೆಗೆ ಬಂದಾಗ ಮನೆಯಲ್ಲಿ ಮಡದಿಯಿರಲಿಲ್ಲ. ಬೀಗ ತೆಗೆದು ಒಳಗೆ–ಹೊರಗೆ ಎಲ್ಲಾ ಕಡೆಯೂ ಕಣ್ಣು ಹಾಯಿಸಿ ನೋಡಿದ. ಎಲ್ಲಾದರೂ ಕಾಗದ ಬರೆದು ಇಟ್ಟಿದ್ದಾಳೆಯೇ ಎಂಬ ಯೋಚನೆಯಿಂದ ಹುಡುಕಾಡಿದ. ಯಾವೊಂದು ಸುಳಿವೂ ಸಿಕ್ಕಲಿಲ್ಲ. ಹುಡುಕುಡುಕಿ ಬೇಸತ್ತ ಮೇಲೆ ಅಂದು ಅವಳಿಗೆ 'ಆಸ್ಪತ್ರೆಯಲ್ಲಿರು' ಎಂದು ಹೇಳಿದ್ದರೆ ನೆನಪು ಮೂಡಿತು. ಆದರೆ, ಯಾವ ಆಸ್ಪತ್ರೆ ಎಂಬುದೊಂದು ಸಮಸ್ಯೆಯೇ. ಸ್ವಲ್ಪ ಹೊತ್ತು ಯೋಚಿಸಿದ ನಂತರ ಅವಳ ಗೆಳತಿ ಒಯೋಷಿ ಕೆಲಸ ಮಾಡುವ ಕಡೆಯೇ ಇದ್ದರೂ ಇರಬಹುದು ಎಂಬುದನ್ನು ಮನದಟ್ಟು ಮಾಡಿಕೊಂಡು ಅದೇ ಆಸ್ಪತ್ರೆಯ ಕಡೆ ಹೊರಟ. ಮನವೆಲ್ಲಾ ಮುಜುಗರ....ಹೇಗಿದ್ದಾಳೋ ಎಂಬ ಕೊರಗು....ಎಷ್ಟೊತ್ತಿಗೆ ನೋಡೇನು ಎಂಬ ಆಕರಃ ಕರುಣೆಯ ಆಕ್ರಂದನ.

ಮೊದಲೆಲ್ಲ ಎಷ್ಟು ಆರೋಗ್ಯವಾಗಿದ್ದಳು ? ಚಿಗುರಿಯಂತಹ ಚಟುವಟಿಕೆ; ಎಷ್ಟು ಉತ್ಸಾಹ....ಎಂತಹ ಕೆಲಸಗಾತಿ....ಈಗೇಕೆ ಹೀಗಾಗಿದ್ದಾಳೆ ಎಂಬುದೇ ಅರ್ಥವಾಗುತ್ತಿಲ್ಲ....ಚಿಂತನಾವೇಶದಲ್ಲಿ ಯೋಚನೆಯ ಗತಿ ಮಂದಮಂದ. ರಾಜಮಾರ್ಗದಲ್ಲಿ ಹಾದಿ ಸಾಗುವುದೇ ಕಷ್ಟ. ಹೆಜ್ಜೆಹೆಜ್ಜೆಗಳಿಗೂ ಕಾಲ್ತೊಡಕು.

ಅತೀವ ಜನ ವಾಹನಾದಿಗಳ ಅಡಚಣೆ. ಒಮ್ಮೆ ಆಸ್ಪತ್ರೆ ಮುಟ್ಟಿದರೆ ಸಾಕು ಎಂದು ಘೀಳಿಡುತ್ತದೆ ಮನಸ್ಸು. ಹಲವಾರು ಚಿಂತೆಗಳಲ್ಲಿ ಮುಳುಗಿ ಹಾದಿ ಸವೆಸಿದ.

ದೂರದಲ್ಲಿ ಹಿರಿಯ ಕಟ್ಟಡ ಗಗನಚುಂಬೀ ವೇಶದಲ್ಲಿ ದೃಷ್ಟಿಗೆ ಬಿತ್ತು. ಕಾರಿಡಾರಿನಲ್ಲಿ ಒಯೋಷಿ ಕಣ್ಣಿಗೆ ಬಿದ್ದಾಳೆ ಎಂಬ ಕುತೂಹಲ. ಎಲ್ಲಿಯೂ ಅವಳ ದರ್ಶನವಾಗಲಿಲ್ಲ. ಒಯೋಷಿಯನ್ನು ಕಾಣಲು ಆ ಬೃಹದ್ ಆಸ್ಪತ್ರೆಯ ಉದ್ದಗಲಕ್ಕೂ ಒಳ ಹೊರಗೆ ಸುತ್ತಿ ಸುತ್ತಿ ಬಳಲಿದರೂ ಮಡದಿಯಾಗಲೀ ಒಯೋಷಿಯಾಗಲೀ ದೃಷ್ಟಿಗೆ ಬೀಳಲಿಲ್ಲ. ಒಯೋಷಿಗಾಗಿ ಕಂಡಕಂಡವರನ್ನೆಲ್ಲಾ ಕೇಳಿ ಹುಡುಕಿದ. ಎಲ್ಲಿಯೂ ಸಿಗದೇ ಹೋದಾಗ ಜಗಲಿಯ ಅಂಚಿನಲ್ಲಿ ಕಾಲು ಇಳಿಬಿಟ್ಟು ಚೂಪಗೆ ಕುಳಿತುಕೊಂಡ ಒಕಮುರ. ಮನದ ತುಂಬೆಲ್ಲಾ ಕಳವಳ–ತಳಮಳ.

ಒಯೋಷಿಯನ್ನು ಕಾಣುವತನಕ ಮಡದಿಯ ಸುದ್ದಿ ತಿಳಿಯುವುದು ಸಾಧ್ಯವಿಲ್ಲವೆಂಬುದು ಖಚಿತವಿರುವಾಗ ಅವಳನ್ನು ನೋಡದೆ ಹಿಂದಿರುಗುವಂತಿಲ್ಲ. ರಣರಣಿಸುವ ಸುಡುಬಿಸಿಲಿನಲ್ಲಿ ಮೆಟ್ಟಲಿಳಿಯುವುದೂ ಬೇಡವಾಗಿ ಸ್ವಲ್ಪ ಹೊತ್ತು ಅಲ್ಲಿಯೇ ಕಳೆಯಿತು. ಇನ್ನು ದಾದಿಯರು ತಮ್ಮ ವಿಶ್ರಾಂತಿ ಕೊಠಡಿಗೆ ಬರುತ್ತಾರೆಂಬುದು ಗೊತ್ತು. ವೇಳೆ ಕೂಡಿ ಬರುವವರೆಗೂ ಕಾದಿದ್ದು ಅನಂತರ ದಾದಿಯರ ವಿಶ್ರಾಂತಿ ಕೊಠಡಿಯತ್ತ ನಡೆದ. ಕಾರಿಡಾರಿನ ತುತ್ತ ತುದಿಯಲ್ಲಿ ಶುಶ್ರೂಕರ ವಿಶ್ರಾಂತಿ ಕೊಠಡಿ. ಮಧ್ಯಾಹ್ನದ ಹೊತ್ತು ಅವರಿಗೆ ತೊಂದರೆ ಕೊಡಬಾರದೆಂಬುದು ಮನವರಿಕೆಯಾಗಿದ್ದರೂ ವಿಧಿಯಿರಲಿಲ್ಲ. ಒಕಮುರ ಸಣ್ಣಗೆ ಕದ ತಟ್ಟಿದ.

ಟಕ. ಟಕ. ಟಕ. ಟಕ.

ಬೇರೊಬ್ಬ ಅಪರಿಚಿತ ನರ್ಸ್ ಕದ ತೆರೆದಳು.

"ಕ್ಷಮಿಸಿ, ನರ್ಸ್ ಒಯೋಷಿ ಇದ್ದಾರಾ ?"

"ಅವರಿಂದು ರಜೆಯಲ್ಲಿದ್ದಾರೆ."

"ಲಾರಿ ತೋಷಿಕೊ ಒಕಮುರ ಎಂಬ ಪೇಷೆಂಟ್ ಇಲ್ಲಿದ್ದಾರೆಯೇ?"

"ಯಾವ ವಿಭಾಗದಲ್ಲಿ ?"

"ಕ್ಷಮಿಸಿ, ನಾನು ಊರಿನಲ್ಲಿಲ್ಲದಿದ್ದಾಗ ಬಂದು ಅಡ್ಮಿಟ್ ಆಗಿದ್ದಾಳೆ. ಯಾವ ವಿಭಾಗ ಎಂಬುದು ತಿಳಿಯದು."

"ರಿಸೆಪ್ಷನಿಸ್ಟ್ ಕೇಳಿ ನೋಡಿ."

"ಬೆಳಿಗ್ಗೆಯೇ ಅಲ್ಲಿ ವಿಚಾರಿಸಿದ್ದೆ. ಅಲ್ಲಿ ಹೆಸರು ದಾಖಲಾಗಿಲ್ಲ."

"ಹಾಗಾದರೆ ಇಲ್ಲಿ ಸೇರ್ಪಡೆಯಾಗಿಲ್ಲ."

ಒಕಮುರ ಪೆಚ್ಚಾದ. ಒಡಲಾಳದಲ್ಲಿ ಕಸಿವಿಸಿ ಮೂಡಿತು.

ಂ ಂ ಂ ಂ

ಒಯೋಷಿಯ ಮನೆ ಗೊತ್ತಿಲ್ಲವಾದ್ದರಿಂದ ಮೂರು ನಾಲ್ಕು ದಿನಗಳು ಹುಡುಕುವುದರಲ್ಲಿ ಕಳೆಯಿತು. ಕಡೆಗೊಮ್ಮೆ ಆಸ್ಪತ್ರೆಯ ಬಾಗಿಲಲ್ಲಿ ಅವಳನ್ನು ಕಂಡು ತನ್ನ ಹುಡುಕುವಿಕೆಯ ಭಂಗವನ್ನು ಕಳಕಳಿಯಿಂದ ಬಿತ್ತರಿಸಿದ.

"ನೀನು ಇದನ್ನೇ ಕಷ್ಟ ಎನ್ನುವವನು ಹೆಂಡತಿಯನ್ನು ಯಾವ ರೀತಿಯಲ್ಲಿ ಕಾಪಾಡುವೆಯೋ ದೇವರಿಗೇ ಗೊತ್ತು. ನಾಲ್ಕು ತಿಂಗಳ ಗರ್ಭಿಣಿ. ಮೈಯಲ್ಲಿ ರಕ್ತವಿಲ್ಲ. ತುಂಬ ನಿತ್ರಾಣಿಯಾಗಿದ್ದಾಳೆ. ಹೃದಯದ ಬಲಭಾಗದಲ್ಲಿ ಕವಾಟದ ತಂತುವೊಂದು 'ಬ್ಲಾಕ್' ಆಗಿರುವುದರಿಂದ ಆಪರೇಷನ್ ಆಗಬೇಕಾಗುತ್ತೆ."

"ಓ ! ಆಪರೇಶ್ರ ಆಗಲೇಬೇಕೇ ?" ಮಿಡುಕಿದ ಒಕಮುರ."

"ಹೌದಪ್ಪಾ....ಹೌದು."

"ಅದರ ವೆಚ್ಚ ಎಷ್ಟಾಗಬಹುದು ?"

"ಬಹುಶಃ ಇಪ್ಪತ್ತು ಸಾವಿರ ಯೆನ್‌ಗಳಾಗಬಹುದು, ಎನ್ನುತ್ತಾರೆ ಸರಿಯಾಗಿ ತಿಳಿಯದು."

"ಅಮ್ಮಮ್ಮ ಇಪ್ಪತ್ತು ಸಾವಿರ ಎಲ್ಲಿಂದ ತರಲಿ ?"

"ಹೌದು ಮತ್ತೆ. ಹೃದಯ ಕವಾಟ ಎಂದರೆ ಸಾಮಾನ್ಯವೇ ?"

“ಈಗ ಎಲ್ಲಿದ್ದಾಳೆ? ನಾನು ನೋಡಬಹುದೇ?”

ಒಯೋಶಿ ಅವನನ್ನು ವಾರ್ಡಿಗೆ ಕರೆದುಕೊಂಡು ಹೋದಳು. ನೋಡಿದರೆ, ನೆತ್ತರಾರಿದ ಹೆಣ್ಣು ಬೆಳ್ಳಗೆ ಬಿಳಿ ಬಟ್ಟೆಯಂತೆ ಬಿಳಿಚಿಕೊಂಡಿದ್ದಾಳೆ. ಅವಳೊಡನೆ ಮಾತಾಡುವುದಕ್ಕೆ ಮೊದಲೇ ಕಣ್ಣುಗಳು ಕಂಬನಿಯಿಂದ ತೊಯ್ದುವು. ಶಯ್ಯಾ ಪ್ರಾಂತ್ಯದಲ್ಲಿ ಕುಳಿತು ನಲ್ಮೆಯಿಂದ ಕೈ ಹಿಡಿದುಕೊಂಡು ಕೇಳಿದ “ನೀನೇಕೆ ಹೀಗಾದೆ? ನಾನು ಊರು ಬಿಡುವಾಗ ನೀನು ಚೆನ್ನಾಗಿಯೇ ಇದ್ದೆ. ಏಕಾಏಕಿ ಹೀಗಾಗಲು ಕಾರಣ? ಹೇಳು, ಏನಾಯಿತು ಡಾರ್ಲಿಂಗ್?”

“ಹೃತ್ ತಂತುಗಳು ಕಟ್ಟಿದುದರಿಂದ...”

ಮುಂದೆ ಮಾತು ಹೊರಡದೆ ಗದ್ಗದಿಸಿದಳು ಲಾರಿ ತೋಷಿಕೊ. ಕಣ್ಣುಗಳಲ್ಲಿ ಕಂಬನಿ ಕೋಡಿಗಟ್ಟಿ ಹರಿಯಿತು. ದುಃಖ ಭಾರದಿಂದ ಎದೆ ತಿದಿಯಂತೆ ಏರಿ ಇಳಿಯುತ್ತಿದೆ.

ಅವಳ ಸ್ಥಿತಿಯನ್ನು ನೋಡಲಾರದೇ ನೋಡಿದ ಒಕಮುರ ಹಣೆಯ ಮೇಲೆ ಹೂ ಮುತ್ತನೊತ್ತಿ ನುಡಿದ “ಡಾಕ್ಟರನ್ನು ಕಂಡು ಏನೆಲ್ಲ ಆಗಬೇಕೋ ಮಾತಾಡಿಕೊಂಡು ಬರುವೆ. ಬಹುಶಃ, ಹೆರಿಗೆ ಆದಮೇಲೆ ಆಪರೇಶನ್ ಮಾಡಬಹುದು. ಎಲ್ಲವನ್ನೂ ಕೂಲಂಕಶವಾಗಿ ಮಾತಾಡಿ ತಿಳಿದುಕೊಳ್ಳುವೆ. ನಿನ್ನ ಆಪರೇಶನ್ನಿಗೆ ಹಣ ಹೊಂಚಿಕೊಳ್ಳಬೇಕಲ್ಲಾ? ನಾನೀಗ ಹೋಗಲೇ, ನನ್ನ ಮುದ್ದು ರಾಣಿ?”

“........”

“ಊಟ ಮಾಡಿದೆಯಾ?”

“ಸೇರುವುದಿಲ್ಲ....ಸ್ವಲ್ಪ ಮಾಡಿದೆ.”

“ಸಾಯಂಕಾಲ ಬಂದು ನೋಡುವೆ.”

ಅವಳು ಹಿಡಿದ ಕೈ ಬಿಡಲೇ ಒಲ್ಲಳು. ಬಿಗಿಯಾಗಿ ಅಮುಕಿ ಹಿಡಿದುಕೊಂಡು ಬಿಕ್ಕಿದಳು.

"ಹೋಗಬೇಡ ಡಿಯರ್. ನಾನಿಲ್ಲಿ ಸಾಯುತ್ತಿರುವೆ. ದಯವಿಟ್ಟು ಇಲ್ಲಿಯೇ ಇರು. ನನ್ನ ಖಂಡಿತ ಬಿಟ್ಟು ಹೋಗಬೇಡ. ನೀನು ಇಲ್ಲದೆ ನಾನಿರಲಾರೆ. ನನ್ನ ಸ್ಥಿತಿ ನೋಡಿದರೆ ನಿನಗೆ ಅರ್ಥವಾಗದೇ? ಉದಾಸೀನ ಮಾಡಬೇಡ ಒಕಮುರ ಬೇಗ ಬಂದುಬಿಡು. ನಿನ್ನನ್ನು ಬೇಡಿಕೊಳ್ಳುವೆ." ಅವನ ಎದೆಯಲ್ಲಿ ಮುಖವನ್ನು ಹುಗಿದುಕೊಂಡಳು ಆವಳು.

"ಸಾಯಂಕಾಲ ಬರುವೆ, ಚಿಂತೆ ಮಾಡಬೇಡ ಮೈಲವ್! ನೀನು ಕಂಬನಿ ಕರೆದರೆ ನನ್ನ ಪ್ರಾಣವೇ ಚಿಮ್ಮುತ್ತೆ!" ಕಂಬನಿ ಮಿಡಿದ ಒಕಮುರ. ನರನಾಡಿಗಳಲ್ಲಿ ನೆತ್ತರು ತಣ್ಣಗೆ ಹರಿದಾಡಿತು ಮೈಯಲ್ಲಿ ಚಳಿ ಮೂಡಿಸುವಂತೆ.

ಒಕಮುರ ಒಂದು ಗಳಿಗೆ ತನ್ನಲ್ಲೇ ಆಳವಾಗಿ ಯೋಚಿಸಿದ. ಮೈಮನಗಳಲ್ಲಿ ಭಯ ಭೀತಿಯು ರಸ ಜುಂ ಜುಮ್ಮನೆ ಹರಿದಾಡಿತು. ಒಡಲಲ್ಲಿ ದುಃಖ-ಸಂಕಟಗಳು ತುಂಬಿ ತುಳುಕಿದುವು. ಮುಂದೇನು? ಎಂಬುದು ಅಗಾದವಾದ ಪ್ರಶ್ನೆ. ಬಗೆ ಹರಿಸಲಾಗದ ಸಮಸ್ಯೆ. ತನ್ನನ್ನು ತಾನು ಹತೋಟಿಯಲ್ಲಿಟ್ಟುಕೊಳ್ಳಲು ಸಾಹಸಪೂರ್ವಕವಾಗಿ ಪ್ರಯತ್ನಿಸಿದ. ತಲೆಯ ತುಂಬ ಯೋಚನೆಯ ಝುರಿ ಹರಿದಾಡಿತು. ಚಿಂತೆ, ತೊಡೆಯುಲಾಗದ ಚಿಂತೆ. ಪ್ರಯತ್ನಪೂರ್ವಕವಾಗಿ ತನ್ನನ್ನು ತಾನು ಹತೋಟಿಯಲ್ಲಿಟ್ಟುಕೊಳ್ಳುತ್ತ ಒಲ್ಮೆಯ ದನಿಯಲ್ಲಿ ನುಡಿದ,

"ನನ್ನ ಮುದ್ದಿನ ರಾಣಿ, ನಿನಗಾಗಿ-ನಿನ್ನ ಒಳ್ಳಿತಕ್ಕಾಗಿ ಶಿಂಟೋ ದೇವತೆಯನ್ನು ಅನುಗಾಲವೂ ಪ್ರಾರ್ಥಿಸುವೆ. ಆಕೆ ದಯಾವಂತೆ. ಹೆಣ್ಣಿನ ನೋವನ್ನು ಅರಿತವಳು. ಖಂಡಿತ ನಿನ್ನನ್ನು ಆಶೀರ್ವದಿಸುತ್ತಾಳೆ. ನೀನೂ ಸಹ, ಆಕೆಯನ್ನು ನಂಬು. ನೀನೊಮ್ಮೆ ಆರೋಗ್ಯ ಭಾಗ್ಯವನ್ನು ಪಡೆದುಕೊಂಡು ಮನೆಗೆ ಬಂದರೆ ಸಾಕು. ನಿನಗೆ ಏನೆಲ್ಲಾ ಬೇಕೋ, ಯಾವ ಯಾವ ಸಹಾಯ-ಸೌಕರ್ಯ ಬೇಕೋ ಎಲ್ಲವನ್ನೂ ನನ್ನ ಮನಸೇಚ್ಛೆ ಮಾಡುವೆ. ನೀನು ನನ್ನ ಪ್ರಾಣದ ಪದಕ. ಬಾಳಿನ ಬೆಳಕು. ಪ್ರೇಮದ ಅರಗಿಳಿ. ನಿನ್ನ ಬಿಟ್ಟು ಅರೆಗಳಿಗೆಯೂ ಇರಲಾರೆ. ನೀನಿಲ್ಲದ ಕ್ಷಣವನ್ನು ನೆನೆಯಲಾರೆ ಕೂಡ. ನೀನಿರದ ಪ್ರಪಂಚ ನನಗೆ ಬೇಡವೇ ಬೇಡ. ಶಿಂಟೋ

ದೇವತೆ ದಯಾಮಯಿ. ಆಕೆ ನಮ್ಮಿಬ್ಬರ ಪ್ರೇಮ ಜೀವನಕ್ಕೆ ಅಡ್ಡಿಯುಂಟು ಮಾಡಳು. ತಿಳಿಯಿತೇ? ನೀನೂ ಅವಳನ್ನು ಮನಮುಟ್ಟಿ ಪ್ರಾರ್ಥಿಸು. ದೇವರು ದೀನರ ಕಡೆಗೆ.

ಅವನ ಎದೆಯಾಳದ ವಾಕ್ಪ್ರವಾಹ ನಿಂತಾಗ ಅವಳ ಎರಡೂ ಕೈಗಳನ್ನು ಹಿಡಿದುಕೊಂಡು ಕಣ್ಣುಗಳಿಗೆ ಒತ್ತಿ ಹೂಮುತ್ತನಿಟ್ಟು ಮುದ್ದಿಸಿದ. ಪ್ರೇಮದಾವೇಗದಿಂದ ಅಪ್ಪಿ ಆಲಂಗಿಸಿ ಹೃದಯಕ್ಕೆ ಹೃದಯವನೊತ್ತಿ ಮುಖ ಕಣ್ಣುಗಳನ್ನು ಕರವಸ್ತ್ರದಿಂದ ಒತ್ತಿ ಒರಸಿ ಅಂತರಂಗಿಕ ಕರುಣೆ–ಕಾತರಗಳನ್ನು ಹೊರಚೆಲ್ಲಿದ. ಎರಡೂ ಹೃದಯಗಳ ಆತ್ಮೀಯ ಭಾವದ ನಡುವೆ ಹೊತ್ತು ಸದ್ದಿಲ್ಲದೆ ಉರುಳಿ ಹೋಯಿತು.

○ ○ ○ ○

ಅವನು ಡಾಕ್ಟರನ್ನು ಕಂಡು ಮಡದಿಯ ಅನಾರೋಗ್ಯದ ಬಗ್ಗೆ ಅತೀವ ಅನುಕಂಪವನ್ನು ಸೂಸಿ ಮುಂದೆ ಏನೇನು ಆಗಬೇಕೆಂಬುದನ್ನು ಕೇಳಿ ತಿಳಿದುಕೊಂಡ ಬಳಿಕ ಖರ್ಚುವೆಚ್ಚದ ಮಾಹಿತಿಯನ್ನೂ ಪಡೆದುಕೊಂಡು ಮಡದಿಯ ವಾರ್ಡಿಗೆ ಬಂದ.

ಲಾರಿ ತೋಷಿಕೊ ಕಿಟಕಿಯ ಬಳಿ ಕುಳಿತು ಹೊರಜಗತ್ತಿನಲ್ಲಿ ದೃಷ್ಟಿ ನೆಟ್ಟಿದ್ದಳು. ಸೋತು ಹೋದಂತೆ ನಿಧಾನವಾಗಿ ತಡೆತಡೆದು ಉಸಿರಾಡುತಿತ್ತು ಜೀವ.

"ಲಾರೀ..." ಬಾಗಿಲಿಂದಲೇ ಕೂಗಿದ ಒಕಮುರ.

ಅವಳು ಹುಬ್ಬೆತ್ತಿ ನೋಡಿದಳು. ಅವನ ಮುಖದರ್ಶನ ಮಾತ್ರದಿಂದಲೇ ಮನಃಪ್ರಾಣಗಳು ಪುಳಕಿತವಾದುವು. ಮುಖಬಿಂಬ ಅರಳಿ ಹೂವಾಯಿತು.

ಒಕಮುರ ಅವಳನ್ನು ನೆಟ್ಟದಿಟ್ಟಿಯಿಂದ ನೋಡುತ್ತ ಬಳಿಗೆ ಬಂದು ಮೈಗೆ ಮೈ ಹಚ್ಚಿ ಕುಳಿತುಕೊಂಡು ನುಡಿದ "ನಾನೀಗ ಡಾಕ್ಟರ ಬಳಿಯಿಂದ ಬರುತ್ತಿರುವೆ. ಆಪರೇಶ ಆದರೆ ಶೀಘ್ರವಾಗಿ ಗುಣ ಹೊಂದುತ್ತಿ ಎಂದು

ಸಂಪೂರ್ಣ ಭರವಸೆ ಕೊಟ್ಟಿದ್ದಾರೆ. ನೀನೇನೂ ಚಿಂತೆ ಹಚ್ಚಿಕೊಳ್ಳಬೇಡ. ನಿನ್ನ ನಗೆ ಮುಖ ನೋಡದಿದ್ದರೆ ನಾನು ಸತ್ತುಹೋದೇನು! ನೀನು ಸದಾ ನಗುತ್ತಿರಬೇಕು. ಎಂದೂ ಜೋಲು ಮುಖ ಹಾಕಿಕೊಳ್ಳಬೇಡ. ನಾನು ನಿನಗಾಗಿ–ನಿನ್ನ ಜೀವನ ಸೌಖ್ಯಕ್ಕಾಗಿ ಪ್ರಾರ್ಥಿಸುವೆ. ನನಗೀಗ ದಯವಿಟ್ಟು ಅಪ್ಪಣೆಕೊಡು. ನಾನು ನಿನಗೆ ಬೇಕುಬೇಕಾದ ಸಕಲ ಔಷಧಗಳನ್ನು ಕೊಂಡು ತರುವೆ. ಈ ಸಂಜೆಯೇ ಎಲ್ಲವನ್ನೂ ಕೊಂಡುಕೊಳ್ಳಬೇಕು. ನಾಳೆ ಭಾನುವಾರ. ಆದ್ದರಿಂದ ನನ್ನನ್ನು ಈಗಲೇ ಹೋಗಗೊಡು” ಸವಿದನಿಯಲ್ಲಿ ನುಡಿದ ಒಕಮುರ.

“ಮಧ್ಯಾಹ್ನ ಬರಲಾರೆಯಾ?”

ನಾನು ಕೆಲವು ವಸ್ತುಗಳನ್ನು ರೈಲಿನಲ್ಲಿ ಕಳುಹಿಸಲು ‘ಪ್ಯಾಕ್’ ಮಾಡಬೇಕಾಗಿದೆ. ಮೊದಲು ನಿನ್ನ ಔಷಧ ಕೊಳ್ಳುವಿಕೆ. ಅನಂತರ ನಾಲ್ಕೈದು ಕಡೆಗೆ ಪ್ಯಾಕೆಟ್ಟನ್ನು ಕಳುಹಿಸಬೇಕು. ಸಂಜೆ ಐದು ಗಂಟೆಯ ರೈಲಿಗೆ ಕಳುಹಿಸಿದ ನಂತರ ಬಂದು ನಿನ್ನನ್ನು ಕಾಣುವೆ ಆಯಿತೇ?”

ಆ ಕೊನೆಯ ವಾಕ್ಯ...ನಿನ್ನನ್ನು ಕಾಣುವೆ ಆಯಿತೇ ಸಿಹಿಯಾಗಿ ಸವಿಯಾಗಿ ಕರ್ಣ ಗಹ್ವರದಲ್ಲಿ ಮತ್ತೆ ಮತ್ತೆ ಮೊರೆಯಿತು.

“ಓ, ನನ್ನ ಒಕಮುರ ನನ್ನನ್ನು ನೋಡಲು ತಡಮಾಡಬೇಡ. ನನ್ನ ಜೀವ ನಿನ್ನ ಬಳಿಯೇ ಇದೆ. ಕಳೆದ ಎರಡು ವಾರಗಳು ನೀನಿಲ್ಲದೆ ಹೇಗೆ ಜೀವ ಹಿಡಿದೆನೋ ದೇವರಿಗೇ ಗೊತ್ತು. ಈಗೀಗ ನೀನು ಒಂದು ಗಳಿಗೆ ಕಾಣದಿದ್ದರೂ ಜೀವ ತುಡಿಯುತ್ತೆ. ನಾನು ತಾಳಲಾರೆ...ಒಕಮುರ! ನೀನು ನನ್ನ ಕಷ್ಟ–ಸಂಕಟಗಳನ್ನು ಅರ್ಥಮಾಡಿಕೊ....ನಿನ್ನನ್ನು ಸಂಪೂರ್ಣ ನಂಬಿರುವೆ.”

ಅವನು ಎರಡೂ ಕೈಗಳಿಂದ ತಬ್ಬಿಹಿಡಿದ. ಅವಳು ಸಣ್ಣಗೆ ಬಿಕ್ಕಿದಳು. ಕಣ್ಣುಗಳಲ್ಲಿ ನೀರಾಡಿತು.

“ಛಿಃ! ಛಿಃ! ಅಳುವುದೇಕೆ? ಬೇರಾರಿಗೂ ಬಾರದಿದ್ದ ಕಷ್ಟ ನಿನಗೆ ಬಂದಿದೆಯೇ? ಏಕೆ ಇಷ್ಟೊಂದು ಅಧೈರ್ಯ? ನೀನು ತೀರಾ ಪುಕ್ಕಲು. ಅದಕ್ಕೇ ಹೀಗೆ.”

"ನನ್ನ ಬಗ್ಗೆ ಅಧೈರ್ಯವಿಲ್ಲ...ನಿನ್ನ ಬಿಟ್ಟಿರಲಾರೆ ಅಪ್ಪೈ....ಅದೇ ನನಗೆ ಹೆಚ್ಚಿನ ಕಷ್ಟ. ಅಥವಾ ದುಃಖ ಅಥವಾ ಚಿಂತೆ ಏನಾದರೂ ಅಂದುಕೋ."

"ನೀನೇಕೆ ಹೀಗಾದೆ ಮೈ ಡಾರ್ಲಿಂಗ್? ಚಿಂತೆಯೇ ನಿನ್ನ ನೇತ್ರರಾರಿಸುತ್ತಿದೆ."

"ನೀನು ಸದಾ ನನ್ನ ಕಣ್ಮುಂದಿರು....ದೂರ ಹೋಗಬೇಡ ಅಪ್ಪೈ."

ಅವನು ನಕ್ಕು ಬಿಟ್ಟ.

° ° ° °

ಹೊತ್ತು ಉರುಳಿತು ಸಂಜೆ ಅಡರುತ್ತಿದೆ.

ಇನ್ನಷ್ಟು ಹೊತ್ತಿನೊಳಗಾಗಿ ಕತ್ತಲು ಕವಿಯಿತು. ಪತಿಯ ಪ್ರತೀಕ್ಷೆಯಲ್ಲಿ ಕಣ್ಣುಗಳು ಬತ್ತಿಹೋದುವು. ಬಾಗಿಲ ಕಡೆ ಹರಿದ ದೃಷ್ಟಿ ಚಲಿಸಲಿಲ್ಲ. ಹಗಲಿನ ಪಾಳಿಯ ದಾದಿಯರು ನಿರ್ಗಮಿಸಿ ರಾತ್ರಿ ಪಾಳಿಯ ದಾದಿಯರು ಆಗಮಿಸಿದರು. ಒಕಮೂರ ಪತ್ತೆಯೇ ಇಲ್ಲ. ಅವನು ಆ ದಿನವಿರಲಿ ಮತ್ತೆ ಮೂರು ದಿನಗಳು ಉರುಳಿದರೂ ಪತ್ತೆಯೇ ಇಲ್ಲ. "ಏನಾಯ್ತು? ಏಕೆ ಬರಲಿಲ್ಲ? ಯಾವುದಾದರೂ ವಾಹನಾಪಘಾತಕ್ಕೆ ಒಳಗಾದನೇ ಹೇಗೆ? ಹ್ಹಾ ನಾನು ತಾಳಲಾರೆ ಒಕಮೂರ" ಎಂದು ತನಗೆ ತಾನೇ ಹಲವು ಬಾರಿ ಹೇಳಿಕೊಂಡಳು ಅನಳು. ಹೃದಯ ಈಗಲೀಗ ಬಿರಿಯುವಷ್ಟು ಸಿಡಿತ. ಬೆಳಿಗ್ಗೆ ಒಯೋಷಿ ಬಂದಾಗ ತನ್ನ ಒಡಲ ಸಂಕಟವನ್ನು ತೋಡಿಕೊಂಡಳು ಲಾರಿ ತೋಷಿಕೊ "ಏನು ತೊಂದರೆಯಾಯ್ತೋ ಊಹಿಸಲಾರೆ ಒಯೋಷಿ, ಮನೆಗೆ ಹೋಗಿ ನೋಡಿ ಬರೋಣವೆಂದರೆ ಹೊಸ್ತಿಲು ದಾಟುವ ತ್ರಾಣವಿಲ್ಲ. ಏನು ಮಾಡಲಿ ಹೇಳು? ಬಹುಶಃ ಯಾವುದಾದರೂ ವಾಹನಾಪಘಾತಕ್ಕೆ ಒಳಗಾದನೋ ಎಂಬ ಭಯ ನನ್ನನ್ನು ಕಾಡುತ್ತಿದೆ."

"ಛಿಃ! ಹಾಗೇಕೆ ಯೋಚಿಸುವೆ. ನೀನು ಅಷ್ಟೊಂದು ಚಿಂತೆ ಹಚ್ಚಿಕೊಳ್ಳಬೇಡ. ಒಂದೆರಡು ದಿನ ಕಾದು ನೋಡೋಣ. ವ್ಯಾಪಾರದ ಒತ್ತಡವೋ ಏನೋ....ಸುಮ್ಮನೆ ಏಕೆ ಬೇಸರ?"

"ನಾನು ಈ ಸಂಕಟಭರಿತ ಹೃದಯವನ್ನು ಭರಿಸಲಾರೆ. ನೀನು ಸಂಕಟವನ್ನು ಬಹುಶಃ ಅರ್ಥಮಾಡಿಕೊಳ್ಳಲಾರೆ...ನೀನು 'ಪ್ರೀತಿ-ಪ್ರೇಮ'ಗಳನ್ನು ಅರಿಯದವಳು. ನನ್ನನ್ನು ನೋಡಿದರೆ ನೀನು ನಗಬಹುದು....ನಗು. ನಾನು ತಾಳಿಕೊಳ್ಳಲಾರೆ. ನನಗೆ ಒಕಮೂರ ಬೇಕು" ದುಃಖಾರ್ತಳಾಗಿ ನುಡಿದಳು ಅವಳು.

"ನೀನು ಅಷ್ಟೊಂದು ಹಚ್ಚಿಕೊಳ್ಳಬೇಡ. ನಿನಗಾಗಿ ನಾನು ಹೋಗಿ ನೋಡಿಕೊಂಡು ಬಂದೇನು. ಆದರೆ, ಅಂತಹ ಅವಸರವೇನಿಲ್ಲ ಬಿಡು."

ಒಯೋಷಿ ಅವಳ ಚಿಕಿತ್ಸೆಗನುಗುಣವಾದ ಔಷಧವನ್ನು ಕೊಟ್ಟು ಸಂತೈಸಿ ಇತರ ಕಾರ್ಯಾರ್ಥವಾಗಿ ಹೊರಟುಹೋದಳು. ಗೆಳತಿಯ ಮಾನಸಿಕ ಸ್ಥಿತಿಗತಿಗಾಗಿ ಮನಮರುಗಿದಳು ಒಯೋಷಿ. ತಾನೇನು ಕೆಲಸ ಮಾಡುತ್ತಲಿದ್ದರೂ ಮನದಲ್ಲೆಲ್ಲಾ ಅವಳೇ ತುಂಬಿ ಹೋಗಿದ್ದಾಳೆ.

ಮತ್ತೆರಡು ದಿನಗಳು ಸಂದು ಹೋದುವು. ಲಾರಿ ತೋಷಿಕೊ-ಳ ಸ್ಥಿತಿ ದಿನದಿನಕ್ಕೂ ಹದಗೆಡುತ್ತಲೇ ಇತ್ತು. ಸಕಾಲಿಕವಾದ ಔಷಧೋಪಚಾರದ ಕೊರತೆ ಮತ್ತು ತುರ್ತು ಆಪರೇಶನ್ನಿನ ಅಗತ್ಯ ಇವುಗಳಿಂದ ನರಳುತ್ತಿದೆ ಜೀವ. ದಿನವೂ ಲಾರಿ ತೋಷಿಕೊ-ಳ ಅಳು-ಗೋಳು ಮನಕ್ಕೆ ಮುಳ್ಳು ಮುರಿಯುವಂಥ ಕಷ್ಟ. ಈ ದಿನ ಎಷ್ಟೊತ್ತಾದರೂ ಅವನನ್ನು ಪತ್ತೆ ಮಾಡಿಯೇ ತೀರುವೆ ಎಂಬ ದೃಢ ನಿಶ್ಚಯಕ್ಕೆ ಮಣಿದ ಒಯೋಷಿ ಗೆಳತಿಗೆಂದಳು "ಇಂದು ನಿನ್ನ ಮನೆಗೆ ಹೋಗಿ ನೋಡಿಕೊಂಡು ಬರುವೆ ನೀನು ಆರಾಮವಾಗಿರು."

"ನಿನ್ನ ಉಪಕಾರ ಎಂದೂ ಮರೆಯಲಾರೆ ಒಯೋಷಿ."

"ಸಧ್ಯ, ನೀನು ಗುಣಹೊಂದು ಅನಂತರ ಉಪಕಾರ ಸ್ಮರಣೆ."

ಅವಳು ಹೊರಟಳು. ಲಾರಿ ಹೊಸ್ತಿಲ ಬಳಿ ನಿಂತು ಬೀಳ್ಕೊಟ್ಟಳು.

o o o o

ಒಯೋಷಿ ದಾರಿಯ ಮಧ್ಯೆ ಗೆಳತಿಯ ಮನೆಗೆ ಹೋಗಲು ಬಸ್ಸು ಇಳಿದು ಆ ಮನೆಯ ಹಾದಿ ಹಿಡಿದಳು. ಹತ್ತು ನಿಮಿಷದ ನಡಿಗೆ. ತಲೆಯಲ್ಲಿನ ಯೋಚನೆಗಳ ತುಮುಲದಲ್ಲಿ ಹಾದಿ ಕಳೆದುದರ ಅರಿವೇ ಇಲ್ಲ. ಮನೆ ಮುಟ್ಟಿದಾಗಲೇ ಅತ್ತ ಗಮನ. ಮುಂಬಾಗಿಲು ಮುಚ್ಚಿತ್ತು. ತೆರೆದ ಕಿಟಿಕಿಗಳಿಂದ ಒಳಗಿನವರ ಮಾತುಕತೆಯ ಸದ್ದು ಕೇಳಿಸುತ್ತಿದೆ. ಏನಾಶ್ಚರ್ಯ! ದನಿ ಬೇರೆ!

ಒಯೋಷಿ ಬಾಗಿಲನ್ನು ತಟ್ಟಿ ಕಟಕಟ ಸದ್ದು ಮಾಡಿದಳು. ಸ್ವಲ್ಪ ಹೊತ್ತಿನಲ್ಲಿ ಅಪರಿಚಿತ ಸ್ತ್ರೀಯೊಬ್ಬಳು ಕದ ತೆರೆದು ಹೊರ ತಲೆ ಹಾಕಿದಳು. ನೋಡಿದರೆ ಸುತ್ತ ಮುತ್ತ ಮಕ್ಕಳಿದ್ದ ಬೇರೊಂದು ಸಂಸಾರದ ಒಕ್ಕಲು! ಒಯೋಷಿ ಆಶ್ಚರ್ಯ ಕುಂಡದಲ್ಲಿ ಮುಳುಗಿ ಅರಳುಗಣ್ಣುಗಳಿಂದ ನೋಡಿದಳು.

"ಯಾರು ಬೇಕು ನಿನಗೆ?"

ಆ ಮುಹೂರ್ತದಲ್ಲಿ ನಾನೇನಾದರೂ ತಪ್ಪಿದೆನೆ ಎಂದು ಎಡಬಲ ಮನೆಗಳ ಕಡೆಗೂ ಕಣ್ಣು ಹಾಯಿಸಿ ವಸ್ತುಸ್ಥಿತಿಯನ್ನು ದೃಢಪಡಿಸಿದ ನಂತರ "ಒಕಮುರ ಎಲ್ಲಿ? ಇದೇನು, ನೀವಿಲ್ಲಿದ್ದೀರಿ?"

"ಅವನು ಮನೆಯನ್ನು ಬಿಟ್ಟುಕೊಟ್ಟಿದ್ದಾನೆ. ನಾವು ಒಂದು ವಾರದಿಂದ ಇಲ್ಲಿದ್ದೇವೆ...ನೀವು ಯಾರು?"

"ಇರಲಿ, ಅವನೆಲ್ಲಿದ್ದಾನೆ?"

ಬಹುಶಃ ಪ್ಯಾರಿಸ್‌ನಲ್ಲಿ."

ಆ ಕ್ಷಣವೇ ಅವಳು ಅವನು ವ್ಯವಹರಿಸುತಿದ್ದ ಬ್ಯಾಂಕಿಗೂ ಹೋಗಿ ಲೆಖ್ಖಾಚಾರದ ತನಿಖೆ ಮಾಡಿದಳು. ಅಲ್ಲಿದ್ದುದು ಸೊನ್ನೆ ಮಾತ್ರ. ಒಯೋಷಿ ಅಲ್ಲಿಂದ ಆಸ್ಪತ್ರೆಗೆ ಬಿರುಗಾಳಿಯಂತೆ ಧಾವಿಸಿದಳು. ರಕ್ತಚಲನೆ ಇಮ್ಮಡಿಯಾಗಿ ಮೈಬೆವರಿ ತೊಯ್ದು ಹೋಯಿತು. ಇಡೀ ಗಂಡು ಜಾತಿಯನ್ನು ಶಪಿಸಿ ಹೀನಾಯವಾಗಿ ಭಾವಿಸುತ್ತ ದಡದಡನೆ ಮೆಟ್ಟಿಲು ಹತ್ತಿದಳು. ತಿರಸ್ಕಾರದಿಂದ ಮೈ ಉರಿಯ ಹತ್ತಿತು. ಕೋಪ–ರೋಷ–ದುಃಖಗಳು ಒಮ್ಮೆಲೇ ಗೊಂದಲ ಹೂಡಿದುವು.

ರಿಜಿಸ್ಟರಿನಲ್ಲಿ ಸಹಿ ಹಾಕುವುದನ್ನು ಮರೆಯುವಂತಹ ಪ್ರಸಂಗ ಅವಳಿಗೆ.

ಅಲ್ಲಿಂದ ಗೆಳತಿಯು ವಾರ್ಡಿನತ್ತ ಧಾವಿಸಿದಳು. ಅವಳ ಪ್ರತ್ಯಾಸಿತ ದೃಷ್ಟಿ ಬಾಗಿಲ ಕಡೆಗೇ ಇತ್ತು.

"ಹಾಯ್, ಒಯೋಷಿ ಒಕಮುರ ಸಿಕ್ಕಿದನೆ?"

ಆ ಮಾತಿಗೆ ತಟ್ಟನೆ ಏನುತ್ತರಿಸಬೇಕೋ ಹೊಳೆಯಲಿಲ್ಲ. ತಾಮಸ–ರಜೋಗುಣಗಳೆಲ್ಲಾ ಮುಖಕ್ಕೆ ನುಗ್ಗಿ ಬಂದಂತೆ ಕೆಂಪು–ಕಪ್ಪುಗಳ ಮಿಶ್ರಣವಾಯಿತು ಮುಖಬಣ್ಣ. ಬಾಯ್ದೆರೆಯುವುದರೊಳಗಾಗಿಯೇ ಅವಳು ಮತ್ತೆ ಪ್ರಶ್ನಿಸಿದಳು "ಏನಾಯ್ತು ಒಯೋಷಿ?"

ಅವಳು ತೀರಾ ಅಶಕ್ತೆ. ಈಗ ಸುದ್ದಿ ತಿಳಿದರೆ ಮನಸ್ಸಿಗೆ ಆಘಾತವಾದೀತೆಂಬ ಭಯವೂ ಇದೆ. ಆದರೂ ವಿಷಯವನ್ನು ಮುಚ್ಚಿಡಲಾರದಂತಹ ಕಠಿನ ಪರಿಸ್ಥಿತಿ.

"ನೀನು ತೀರಾ ಮುಗ್ಧೆ. ಪ್ರಾಪಂಚಿಕ ವ್ಯವಹಾರ ಅರಿಯದಂತಹ ಮುದ್ದುಗಿಳಿ! ಇಷ್ಟು ಮಾತ್ರ ಹೇಳಬಲ್ಲೆ."

"ಛೀ! ಹಾಗೆಂದರೇನು? ಏನಾಯ್ತು ಹೇಳಿಬಿಡು."

"ಏನೆಂದು ಹೇಳಲಿ?"

"ಬಹುಶಃ ನೀನು ನಮ್ಮ ಮನೆಗೆ ಹೋಗಿಯೇ ಇಲ್ಲವೆಂದು ತೋರುತ್ತೆ, ನಿಜವೇ?"

"ಲಾರೀ! ನೀನಂತೂ ಬುದ್ಧಿಹೀನೆ ಎನ್ನದೆ ವಿಧಿಯಿಲ್ಲ. ಸದಾ ಗಂಡ–ಗಂಡ ಎಂದು ಬಿದ್ದು ಸಾಯುತ್ತಿ!" ಎಂದಳವಳು ತುಟಿಕಚ್ಚಿ "ನಿನ್ನಲ್ಲಿರುವಷ್ಟು ಒಲುಮೆ ಪ್ರೀತಿಗಳು ಅವನಲ್ಲಿಲ್ಲ...ಅಷ್ಟೇ."

"ಅಂದರೆ....ಅವನು ಸಿಕ್ಕಿದ್ದನೇ?" ಕಂಠಸ್ವನದಲ್ಲಿ ಆಶೆ–ನಿರಾಶೆಗಳ ಝುರಿಯೇ ಹರಿದುಬಂತು. ಎಲ್ಲೋ ಅಲಕ್ಷಿತ ಶಾಂತಿಯ ಛಾಯೆ ತಕ್ಷಣವೇ ಒದವಿ ಬಂದಂತೆ ಥಳಥಳ ಮಿನುಗಿತು ಮುಖಬಿಂಬದಲ್ಲಿ.

ಒಯೋಷಿ ಅವಳನ್ನೇ ಒಂದು ಗಳಿಗೆ ನಿಟ್ಟಿಸಿ ನೋಡಿ,

"ಎಷ್ಟು ಆಸೆಯಿಂದ ಕೇಳುತಿದ್ದಿ ತೋಷಿಕೊ....ನಾವು ಯಾವುದ ರಲ್ಲಿಯೂ ಹೆಚ್ಚು ಆಸೆಯನ್ನು ಇಟ್ಟುಕೊಳ್ಳಬಾರದು. ಭಗವಂತ ಕೊಟ್ಟು ದುದರಲ್ಲಿ ತೃಪ್ತಿ ಪಟ್ಟುಕೊಳ್ಳಬೇಕು."

"ಆದರೆ...ಆದರೆ ಅವನನ್ನು ನೋಡದೆ ತುಂಬ ದಿವಸವಾದುವಲ್ಲ ಒಯೋಷಿ?"

ಆ ಕೇಳಿಕೆ...ಆ ಬೇಡಿಕೆಗಳು ಎದೆಯಾಳದಿಂದ ದೈನ್ಯಪ್ರೇಮಗಳ ಝರಿ ಯಾಗಿ ಹರಿದು ಬರುತಿದ್ದರೆ ಏನೆನ್ನಬೇಕೋ...ಒಂದು ವೇಳೆ ನಿಜ ಸುದ್ದಿ ಯನ್ನು ಅರುಹಿದರೆ ಅವಳ ಕತೆ ಏನಾದೀತೋ ಎಂಬ ಭಯ ಮನಸ್ಸಿಗೆ. ನಿಧಾ ನಿಸಿ ಹೇಳುವುದೇ ಸರಿಯೆಂಬ ತೀರ್ಮಾನಕ್ಕೆ ಬಂದರೂ ಅಪರೀಕ್ಷ ಸಮಸ್ಯೆ ಯೊಂದಿದೆಯಲ್ಲಾ? ಈಗೇನು ಮಾಡುವುದು? ಎಂಬ ಪ್ರಶ್ನೆ ಧುತ್ತೆಂದು ಮುಂದೆ ನಿಂತಿತು. ಒಯೋಷಿ ಹಾಗೂ ಹೀಗೂ ಸಮಾಧಾನ ಹೇಳುತ್ತ ಒಂದೆರಡು ದಿನಗಳನ್ನು ನೂಕಿದಳು. ಆದರೆ, ಅವಳ ಕೇಳಿಕೆ–ಬೇಡಿಕೆಗಳು ಹೆಚ್ಚುತ್ತ ಹೋದುವು. ಆಗ ವಿಧಿಯಿಲ್ಲದೆ ವಿಷಯವನ್ನು ಮುಂದಿಟ್ಟು ನುಡಿದಳು ಒಯೋಷಿ,

"ಅವನು ಶತ ಮೂರ್ಖ! ಅಂತಹವನಿಗಾಗಿ ಎಷ್ಟೊಂದು ಪರಿತಪಿಸು ತಿದ್ದಿ? ಹೆಣ್ಣು ಜನ್ಮ ಯಾವತ್ತೂ ಹೀಗೆಯೇ ತನ್ನನ್ನೇ ತೇಯ್ದು ಗಂಡನ್ನು ಸಂತೋಷಿಸುತ್ತಾಳೆ. ಅದರ ಫಲಶ್ರುತಿ ಇಷ್ಟೇ...ಇದು ಪ್ರಪಂಚ."

ಆ ವ್ಯಾಘಾತದಿಂದ ಹೃದಯ ಒಡೆದು ಹೋಗಬೇಕಾಗಿದ್ದರೂ ಆವ ದೈವದ ಕೃಪೆಯೋ ಹುಡುಗಿ ಕಣ್ಮುಚ್ಚಿ ನಿಧಾನವಾಗಿ ಉಸಿರಾಡಿದಳು. ಏನು ಹೇಳಲೂ ಬಾಯಿ ಬರಲಿಲ್ಲ. ಕೆಲಸಬಿಟ್ಟು ಅವನನ್ನು ನಂಬಿದ್ದಕ್ಕಾಗಿ ತನ್ನನ್ನೇ ತಾನು ಶಪಿಸಿಕೊಂಡಳು. ಒಡಲ ಸಂಕಟವೆಲ್ಲಾ ಮನಃಚಿತ್ತಗಳನ್ನು ಮುತ್ತಿತು. ನಿರ್ಜೀವಿಯಂತೆ, ಬಿಸುವಳಿದವಳಂತೆ ಬಿದ್ದುಕೊಂಡಳು. ಆಗ ಒಯೋಷಿ ನಲ್ಮೆಯ ಆಗರವೇ ತಾನಾಗಿ ನುಡಿದಳು,

"ಇಲ್ಲಿ ಕೇಳು, ಲಾರಿ ತೋಷಿಕೊ. ಇನ್ನು ಚಿಂತೆ ಮಾಡಬೇಡ. ನೀನು ಇಲ್ಲಿಯೇ ಇದ್ದು ಆಪರೇಶ್ನ ಮಾಡಿಸಿಕೊ. ಬ್ಯಾಂಕಿನಲ್ಲಿರುವ ನಿನ್ನ ವಜ್ರದ ನೆಕ್‌ಲೇಸನ್ನು ಒತ್ತೆಯಾಗಿಟ್ಟು ಹಣ ಪಡೆದುಕೊ. ನಿನ್ನ ದೇಹಸ್ಥಿತಿ ಸರಿಯಾದ ಮೇಲೆ ನಿನ್ನ ಹಿಂದಿನ ಕೆಲಸ ಹಿಡಿದು ನಿಧಾನವಾಗಿ ಒಡವೆ ಬಿಡಿಸಿಕೊ. ಇನ್ನು ಆ ಶುದ್ಧ ಮುಠ್ಠಾಳನನ್ನು ನೆನೆಯಬೇಡ. ಮನೆಯನ್ನೇ ಖಾಲಿ ಮಾಡಿ ಬೇರೆಯವರಿಗೆ ಬಿಟ್ಟು ಬ್ಯಾಂಕಿನಲ್ಲಿರುವ ಎಲ್ಲಾ ಹಣವನ್ನು ತೆಗೆದಿದ್ದಾನೆ. ನಿನ್ನ ಒಡವೆಗಳನ್ನು ಕೇಳಿದ್ದಾನೆ ಧೂರ್ತ! ಅದರ ಬೀಗದ ಕೈ ನಿನ್ನಲ್ಲಿದ್ದುದರಿಂದ ಒಡವೆ ಉಳಿಯಿತು ಅಷ್ಟೆ. ಮುಂದೆ ಅವನೆಂದಾದರೂ ಬಂದು ಬಣ್ಣದ ಮಾತಾಡಿ ಬೀಗದ ಕೈಯನ್ನು ಕೇಳಿದರೆ ಕೊಡಲೇ ಬೇಡ ತಿಳಿಯಿತೇ? ಅವನೀಗ ಪ್ಯಾರಿಸಿನಲ್ಲಿ ಯಾವ ಹೆಣ್ಣಿನೊಂದಿಗೆ ಮಜ ಮಾಡುತಿದ್ದಾನೋ ದೇವರಿಗೇ ಗೊತ್ತು!"

ಲಾರಿ ತೋಷಿಕೊ–ಳ ಕಣ್ಣುಗಳಲ್ಲಿ ಕಂಬನಿಗಳುಕ್ಕಿದುವು.

— ೦ —

ಮಣಿಕರ್ಣಿಕಾ

೧೨

'ಕ್ಷಮಯಾ ಧರಿತ್ರೀ ...

'ಜಗನ್ಮಿತ್ರ' ಪತ್ರಿಕಾಲಯದ ಮೂರನೆಯ ಮಹಡಿ.

ಅದರ ಉದ್ದಗಲಕ್ಕೂ ಇದ್ದ ಬೃಹದ್ ಕೊಠಡಿಯಲ್ಲಿ ಆರು ಮಂದಿ ಉಪ ಸಂಪಾದಕರಿಗೂ ಸ್ಥಳಾವಕಾಶ. ಸಾಲಾಗಿ ಮೂರು ಮೂರು ಮೇಜುಗಳು ಗೋಡೆಯ ಬದಿಯಲ್ಲಿ.

ಅದರ ಪಕ್ಕದಲ್ಲಿದ್ದ ಕೊಠಡಿಯಲ್ಲಿ ಸಂಪಾದಕರ ಕಛೇರಿ.

ಪ್ರಚಲಿತ ಪತ್ರಿಕಾ ಪ್ರಪಂಚದಲ್ಲಿ ಪ್ರಥಮ ಸಾಲಿನಲ್ಲಿ ನಿಲ್ಲಬಲ್ಲ ಜಗನ್ಮಿತ್ರ ಕಾರ್ಯಾಲಯವು ಹಿರಿದು. ಕಾರ್ಯನಿರ್ವಾಹಕ ಸಿಬ್ಬಂದಿಯ ದಂಡಿನಿಂದ ತುಂಬಿ ತುಳುಕುವ ಮಹಾಲಯ ಸದಾ ಗಜಿಬಿಜಿ. ಕ್ರಮವತ್ ನಡೆಯುವ ಕಾರ್ಯವಾಹಿಯಲ್ಲಿ, ಬಿಡುವಿಲ್ಲದ ತೀವ್ರಗತಿಯ ದುಡಿಮೆ. ನಾನಲ್ಲಿ ನಿರ್ವಹಿಸುವುದು ಜಾಹೀರಾತಿನ ಕಾರ್ಯ. ಕೆಲವೊಮ್ಮೆ ಜಾಹೀರಾತಿಗಾಗಿ ಹೊರ ಹೋಗುವ ಪ್ರಸಂಗ ಬರುತ್ತದೆ. ಜಾಹೀರಾತುಗಳ ಸಂಗ್ರಹ ಮತ್ತು ಅವುಗಳಿಗೆ ಅಗತ್ಯವಾದ ಸಾಹಿತ್ಯ ರಚನೆ. ಅವು ಕ್ಲುಪ್ತ ಕಾಲದಲ್ಲಿ ಸಿದ್ಧವಾಗಬೇಕಾದರೆ ಚಿಗರಿಯ ಚುರುಕು ಇರಲೇಬೇಕು. ಅವಸರಿಸಿದರೆ ಸಾಹಿತ್ಯ ಅಂದಗೆಡುವ ಸಂಭವವುಂಟು. ಅದಕ್ಕಾಗಿ ಅನೇಕ ವೇಳೆ ಇತರೆಯರ ಸಹಾಯ ಪಡೆಯದೆ ಗತ್ಯಂತರ ಇಲ್ಲ ಎಂದೇ ಹೇಳಬೇಕು. ಹಾಗೆಂದು ಹೇಳಿಕೊಳ್ಳುವುದರಲ್ಲಿ ನನಗೆ ಸಂಕೋಚವಾಗಲೀ ಲಜ್ಜೆಯಾಗಲೀ ಖಂಡಿತ ಇಲ್ಲ. ನನಗೆ ಸಾಹಿತ್ಯ ರಚನೆಯಲ್ಲಿ ಅಂತಹ ಪಾಂಡಿತ್ಯವಿದೆ ಎಂದು ಹೇಳಿಕೊಳ್ಳಲಾರೆ. ನಾವು ಆರು ಜನ ಉಪ ಸಂಪಾದಕರಲ್ಲಿ ಒಬ್ಬಳಾದ ಮಣಿಕರ್ಣಿಕಾ ಎಂ.ಎ. ಪದವೀಧರೆ,

ಪಿ.ಹೆಚ್.ಡಿ.ಗಾಗಿ ಕಲಿತು ಬರೆಯುತಿದ್ದಾಳೆಂದು ಕೇಳಿ ಬಲ್ಲೆ. ಅವಳು ಬರವಣಿಗೆಯಲ್ಲಿ ನಿಷ್ಣಾತೆ. ಆಗಲೇ ಅನೇಕ ಉತ್ತಮ ಗ್ರಂಥಗಳನ್ನು ರಚಿಸಿ ಪ್ರಕಟಿಸಿದುದು ಎಲ್ಲರಿಗೂ ತಿಳಿದ ವಿಷಯ. ಅವಳ ಉಲ್ಲೇಖನಗಳು ಪತ್ರಿಕೆಯನ್ನು ಉತ್ತುಂಗಕ್ಕೇರಿಸುತ್ತವೆ ಎಂಬುದು ಪತ್ರಿಕಾ ಪ್ರಪಂಚಕ್ಕೇ ಗೊತ್ತು. ಅಂತಲೇ ಅವಳಿಗೆ ಅಪಾರವಾದ ಗೌರವ ಸಲ್ಲುತ್ತದೆ ಸಂಪಾದಕ ತನದಲ್ಲಿ. ಅವಳಿಗೆ ತನಗೊಂದು ಪ್ರತ್ಯೇಕ ಕೊಠಡಿ ಬೇಕೆಂಬ ಬಯಕೆ. ಆದರದು ಸಧ್ಯಕ್ಕೆ ಸಾಧ್ಯವಿಲ್ಲವಾದ್ದರಿಂದ ನಮ್ಮ ಜೊತೆಯಲ್ಲಿಯೇ ಅವಳ ಕಾರ್ಯಭಾರ. ನಾನು ಈ ಸಾಲಿನಲ್ಲಿ ಕೊನೆಯವನಾದರೆ ಅವಳು ಎದುರುಗಡೆಯ ಸಾಲಿನಲ್ಲಿ ಆ ಕೊನೆಯವಳು. ಅವಳ ಪತಿ ಸುಬ್ಬರಾಜು ಮತ್ತು ನಾನು ಬಾಲ್ಯಗೆಳೆಯರು. ಶಾಲಾ ಕಾಲೇಜುಗಳಲ್ಲಿ ಒಂದಿಗೇ ಓದಿದವರು. ಅವನು ಜಾಹೀರಾತು ಕಂಪನಿಯ ಉದ್ಯೋಗಿ. ಫೋಟೋಗ್ರಫಿಯಲ್ಲಿಯೂ ನುರಿತ ಕೈ. ಕೈ ತುಂಬಾ ಗಳಿಕೆ. ಸುಜೀವನದಿಂದ ಬದುಕು ಸರಾಗ ಮತ್ತು ನಿಶ್ಚಿಂತೆ.

ಮಣಿಕರ್ಣಿಕಳನ್ನು ನಾನು ಕಂಡದ್ದು ಸಂಪಾದಕ ಮಂಡಳಿಗೆ ಸೇರಿದ ಮೇಲೆ. ಉಲ್ಲೇಖನ ಕೃಷಿಯಲ್ಲಿ ಅವಳನ್ನು ಅರ್ಥಾತ್ ಮೀರಿಸಿದವರಿಲ್ಲ ನಮ್ಮಲ್ಲಿ. ನನ್ನ ಜಾಹೀರಾತುಗಳಿಗೆ ಅನೇಕ ವೇಳೆ ಸುಂದರ ಸಾಹಿತ್ಯ ರಚನೆಗೆ ಅವಳದ್ದೇ ಸಹಾಯ. ಅವಳ ಲೇಖನಕ್ಕಾಗಿ ಕಾದಿರುತ್ತಾರೆ ನಮ್ಮ ಬಾಸ್. ಸ್ತ್ರೀಲೋಕದ ಕಷ್ಟಕಾರ್ಪಣ್ಯಗಳನ್ನು ವಿವರಿಸಿ ಬರೆಯುವುದೇ ಹೆಚ್ಚು. ಪ್ರತಿ ಸಂಚಿಕೆಯಲ್ಲೂ ಅವಳ ಉಲ್ಲೇಖನಗಳಿರುತ್ತವೆ. ಅವುಗಳು ಕ್ರಮೇಣ ಪುಸ್ತಕ ರೂಪದಲ್ಲಿ ಹೊರಬರುತ್ತವೆ. ಮೇಲಾಗಿ, ಇತರ ಸಾಮಾಜಿಕ ಚಟುವಟಿಕೆಗಳೂ ಉಂಟು.

ಮಣಿಕರ್ಣಿಕಾ ಸ್ವಭಾವದಲ್ಲಿ ತೀರಾ ಗಂಭೀರೆ–ಮಿತಭಾಷಿ. ಅದರ ಹಿನ್ನೆಲೆಯಲ್ಲಿ ಯಾವುದೋ ನೋವು ತುಂಬಿರುವುದು ಸೂಕ್ಷ್ಮವಾಗಿ ಕಂಡು ಬರುತ್ತದೆ ಮುಖ ಮುದ್ರೆಯಲ್ಲಿ. ಏನೆಂಬುದನ್ನು ನನಗೆ ಊಹಿಸಲಾಗಲಿಲ್ಲ. ಬಾಬು ಹತ್ತು ವರ್ಷದ ಮಗ. ವಿದ್ಯಾವಂತ ಪತಿ. ನೋಡಿದರೆ ಸರಸ ಸುಂದರವಾಗಿರಬೇಕಾದ ಸಂಸಾರ.

ಆದರೆ...ಯಾವ ಹುತ್ತದೊಳಗೆ ಯಾವ ಹಾವೊ?

ಅವಳ ಎದೆಯುಳಲನ್ನು ಆ ಪರಮಾತ್ಮ ಮಾತ್ರ ಬಲ್ಲ ಎನಿಸುತ್ತೆ ನನಗೆ. ನಾನು ಅವಳನ್ನು ಬಾಯಿ ಬಿಟ್ಟು ಏನೂ ಕೇಳಲಿಲ್ಲ.

ಪೂರ್ಣಪ್ರಜ್ಞಾಲಯ ವಿದ್ಯಾಕ್ಷೇತ್ರದಲ್ಲಿ ವಾರಕ್ಕೆರಡು ದಿನ ಫ್ರೀ ಸರ್ವೀಸ್ ಮಾಡುವುದಕ್ಕೋಸ್ಕರ ನಗರದಿಂದ ಹೊರವಲಯದಲ್ಲಿರುವ ಶಾಲೆಗೆ ಹೋಗಿ ಬರುವ ಪ್ರವೃತ್ತಿ ಅವಳಿಗೆ. ಪತ್ರಿಕಾಲಯದಲ್ಲಿ ಶಿಫ್ಟ್ ಕೆಲಸವಿರುವುದರಿಂದ ಅದಕ್ಕೆ ಸಮಯ ಒದಗುತ್ತದೆ. ಅವಳಲ್ಲಿರುವ ಕರ್ತವ್ಯನಿಷ್ಠೆ ಸಮಯ ನಿಷ್ಠೆಗಳನ್ನು ಕಂಡು ನಾನು ಬೆರಗಾಗಿರುವೆ. ಅಲ್ಲದೆ, ಹತ್ತು ವರ್ಷಗಳಿಂದ ಅವಳನ್ನು ಕಂಡಿದ್ದು, ಅವಳೊಡನೆ ಕೆಲಸ ಮಾಡುತ್ತಲಿದ್ದು ಅವಳನ್ನು ಸಂಪೂರ್ಣ ಅರಿತಿರುವೆ ಎಂದು ಮಾತ್ರ ಹೇಳಿಕೊಳ್ಳಲಾರೆ. ಅವಳೊಂದು ಬಂಗಾರದ ಸಂಪುಟ– Golden threshold.

o o o o

ಒಂದು ಜಾಹೀರಾತಿನ ಚಿತ್ರ ಮತ್ತದರ ಸಾಹಿತ್ಯವನ್ನೊಳಗೊಂಡ ಚೌಕಟ್ಟನ್ನು ಪತ್ರಿಕೆಯ ಒಳಪುಟದ ಬಲಭಾಗದಲ್ಲಿ ಹಚ್ಚುವ ಯೋಚನೆಯಿತ್ತು ನನಗೆ. ವರದಿಗಾರ ಕೃಷ್ಣ ಅಂದ,

"ಸರ್, ಇದರ ಸಾಹಿತ್ಯ ಸರಿ ಹೋಗಲಿಲ್ಲ. ಅಲ್ಲದೆ, ನೀವು ಆರಿಸಿದ ಸ್ಥಳವೂ ಸರಿ ಹೋಗಲಿಲ್ಲ. ನೋಡಿ, ಮೂರು ಜಾಹೀರಾತುಗಳಿವೆ. ಎಲ್ಲವನ್ನೂ ಸಾಲಾಗಿ ಪುಟದ ಎಡಭಾಗದಲ್ಲಿ ಹಚ್ಚುವುದು ಸೂಕ್ತ. ಏನು ಹೇಳುತ್ತೀರಿ?"

ನಾನು ಅವನ ಮಾತಿಗೆ ಒಪ್ಪಿದೆ. ಸಾಹಿತ್ಯ ಸರಿ ಹೋಗಲಿಲ್ಲ ಎಂಬುದನ್ನು ಪರಿಶೀಲಿಸಲು ತೆಗೆದುಕೊಂಡೆ. ಅದು ಸಾರವತ್ತಾಗಲಿಲ್ಲ ಎಂಬುದರಲ್ಲಿ ಸತ್ಯಾಂಶವಿತ್ತು. ನಾನದನ್ನು ಮಣಿಕರ್ಣಿಕಳ ಮುಂದಿಟ್ಟು "ಹೇಗಿದೆ ನೋಡಿ" ಎಂದೆ.

ಆ ಕ್ಷಣವೇ ಅದನ್ನು ತಿದ್ದಿ ಒಂದೆರಡು ಹೊಸ ಪಂಕ್ತಿಗಳನ್ನು ಸೇರಿಸಿ ಸುಸುಂದರವಾಗಿ ಮಾರ್ಪಡಿಸಿಕೊಟ್ಟಳು, ಅವಳು.

"ತುಂಬ ಥ್ಯಾಂಕ್ಸ್." ನಯವಂತಿಕೆಯಿಂದ ನುಡಿದೆ.

"ಓ, ಇದೇನು ವಿಶೇಷ ಬಿಡಿ."

ಅಟೆಂಡರ್ ಕಾದಿದ್ದ. ಅವನ ಕೈಗೆ ಜಾಹೀರಾತನ್ನು ಕೊಟ್ಟು ನನ್ನ ಕೆಲಸಕ್ಕೆ ಹಿಂದಿರುಗಿದೆ. ಮಧ್ಯಾಹ್ನ ಮೀಟಿಂಗ್ ಇತ್ತು. ಅದಕ್ಕೆ ಉಳಿಯದೆ ರಜೆ ಚೀಟಿಯನ್ನು ಬರೆದಿಟ್ಟು ಹೋಗಿದ್ದಳು ಮಣಿಕರ್ಣಿಕಾ.

"ಅವರಿದ್ದಿದ್ದರೆ ಚೆನ್ನಾಗಿತ್ತು" ಎಂದ ಕುಲಕರ್ಣಿ.

"ಹೌದು.... ಏನೋ ಸರಿಯಾದ ಕಾರಣವಿರಬೇಕು. ಇಲ್ಲದಿದ್ದರೆ ತಪ್ಪಿಸಿ ಕೊಳ್ಳುತ್ತಿರಲಿಲ್ಲ. ಅವರು."

o o o o

ಮರುದಿನ ಒಂದು ವಾರದ ರಜೆಗಾಗಿ ಬರೆದುಕೊಂಡ ಕಾಗದ ಬಂತು ಮಣಿಕರ್ಣಿಕಳಿಂದ. ವಿಷಯವೇನೆಂಬುದು ತಿಳಿಯಲಿಲ್ಲ. ವಾರದ ರಜೆ ಕಳೆದ ಮೇಲೆ ಕೆಲಸಕ್ಕೆ ಬಂದ ಅವಳ ಮುಖದ ಮೇಲೆ ಏನೋ ಒಂದು ರೀತಿಯ ಆಯಾಸ ಮಿಶ್ರಿತವಾದ ಸಮಾಧಾನವಿತ್ತು. ಅವಳು ರಿಜಿಸ್ಟರಿನಲ್ಲಿ ಸಹಿಹಾಕಿ ಬಂದ ಮೇಲೆ ನಾನು ಕೇಳಿದೆ,

"ರಜೆ ತೆಗೆದುಕೊಂಡ ಕಾರಣವೇನೆಂದು ತಿಳಿಯಬಹುದೇ ? ಎಲ್ಲರೂ ಆರೋಗ್ಯವಷ್ಟೇ ?"

"ದೇವರ ದಯದಿಂದ.... ರಜೆ ಹಾಕಿದ್ದು ಬೇರೆ ಕಾರಣಕ್ಕಾಗಿ."

ನಾನು ಮರು ಪ್ರಶ್ನೆ ಹಾಕದೆ ಅರ್ಥಗರ್ಭಿತವಾಗಿ ಅವಳನ್ನೇ ನೋಡಿದೆ.

"ನಾನು ಸಧ್ಯ ಅಂಗವಿಕಲ ಮಕ್ಕಳ ಸಹಾಯಾರ್ಥವಾಗಿ ಒಂದು ಶಾಲೆ ತೆರೆಯಬೇಕೆಂದಿರುವೆ. ಅದಕ್ಕಾಗಿ ಒಂದು ನಿವೇಶನ ಪಡೆಯಲು ತುಂಬಾ ಹೆಣಗಬೇಕಾಯ್ತು. ಅಂತೂ ಪಡೆದುಕೊಂಡೆ. ಬಹಳ ಕಸರತ್ತು ಮಾಡಿ ಸ್ಬೇಕಾಯ್ತು, ನೋಡಿ."

"ಎಲ್ಲಿ ಪಡೆದುಕೊಂಡಿರಿ ?"

"ಅದು ರೆವೆನ್ಯೂ ಸೈಟು. ನಮ್ಮ ಮನೆಯಿಂದ ಬಹಳ ದೂರವೇನೂ ಇಲ್ಲ. ಕೇವಲ ಎರಡು ಮೈಲಿ ದೂರ ಮಾತ್ರ."

"ಅದೃಷ್ಟ....ಎಷ್ಟು ವಿಸ್ತೀರ್ಣ ಉಳ್ಳದ್ದು ?"

"ಒಂದು ಎಕರೆಗಿಂತ ಸ್ವಲ್ಪ ಹೆಚ್ಚು. ಅಂಗವಿಕಲ ಮಕ್ಕಳ ಶಾಲೆಗಾದುದರಿಂದ ಸ್ವಲ್ಪ ಅಗ್ಗವಾಗಿಯೇ ದೊರೆತಿದೆ."

"ನೀವೇ ಶಾಲೆ ನಡೆಸುವಿರಾ ?"

"ಮೊದಲಿಗೆ ವಂತಿಗೆ ಎತ್ತಬೇಕು. ಅನಂತರ ಒಂದು ಟ್ರಸ್ಟ್ ಮಾಡಿದರೆ ಸಾಮೂಹಿಕವಾದ ಮ್ಯಾನೇಜ್‌ಮೆಂಟಿರುತ್ತೆ. ಪೂರ್ಣಭಾರ ನನಗೇ ಬೀಳುವುದಿಲ್ಲ. ನಾಲ್ಕು ಮಂದಿಯ ಜವಾಬ್ದಾರಿ ಇರುವುದರಿಂದ ಕೆಲಸ ಸರಾಗ."

"ಅಭಿನಂದನೆಗಳು !"

"ಬಿಡಿ, ಇನ್ನೂ ಆರಂಬವಾಗಲಿಲ್ಲ. ಆಗಲೇ ಅಭಿನಂದನೆ...."

"ನೀವು ಈಗಾಗಲೇ ಒಂದು ಅಭಯಾಶ್ರಮ ನಡೆಸುತಿದ್ದೀರಿ ಅಲ್ಲವೇ ?"

"ಹೌದು. ಫೌಂಡೇಶನ್ ನನ್ನದು. ಅದಕ್ಕೂ ಟ್ರಸ್ಟ್ ಮಾಡಿರುವುದರಿಂದ ತೊಂದರೆಯಿಲ್ಲ. ಭಾನುವಾರದ ಜವಾಬ್ದಾರಿ ನನ್ನದು. ಗತಿಗೆಟ್ಟ ಮಹಿಳೆಯರು ಎಪ್ಪತ್ತೆರಡು ಮಂದಿ ಇದ್ದಾರೆ. ಸಮಾಜಕ್ಕೊಂದು ಅಳಿಲ ಮಳಲ ಸೇವೆ."

"ಅಷ್ಟು ಮಾಡುವವರು ಎಷ್ಟು ಮಂದಿ ಇದ್ದಾರು ನಮ್ಮಲ್ಲಿ ?"

"ಇದ್ದಾರೆ.... ಅಷ್ಟು ತೀರಾ ಅಲ್ಲಗಳೆಯುವಂತಿಲ್ಲ."

ನಾನು ಅವಾಕ್ಕಾದೆ.

o o o o

ಇಂದು ಗೆಳೆಯ ಸುಬ್ಬರಾಜನ ಭೇಟಿಯಾದುದು ಅನಿರೀಕ್ಷಿತ.

ನಾನು ಒಂದು ಬಸಿ ಕಾಫಿಗಾಗಿ ಹೋಟೆಲಿಗೆ ಹೋದಾಗ ಹೋಟೆಲಿನ ಒಳಕೋಣೆಯಿಂದ ಹೊರ ಬರುತಿದ್ದ ಸುಬ್ಬರಾಜ ಎದುರಾದ. ಹಿಂದೆಯೇ

ಅರಳು ಮೊಗ್ಗೆಯಂತಿದ್ದ ಸುಂದರ ಹುಡುಗಿಯು ಬರುತಿದ್ದಾಳೆ. ಅವಳನ್ನು ನಾನೆಂದೂ ನೋಡಿರಲಿಲ್ಲ. ಅಚ್ಚರಿಯಿಂದ ನಿಟ್ಟಿಸುತ್ತ ಒಂದು ಕ್ಷಣ ಯೋಚಿಸಿದೆ. ಯಾರೆಂದು ಹೊಳೆಯಲಿಲ್ಲ. ಅಷ್ಟರಲ್ಲೇ ಅವನು ಸಮೀಪಿಸಿದ. ಅವನಿಗೆ ಹಾರ್ದಿಕವಾಗಿ ಹಸ್ತಲಾಘವ ನೀಡಿದೆ.

"ಸುಬ್ಬೂ, ನಿನ್ನ ದರ್ಶನವಾಗಿ ಬಹಳ ಕಾಲವಾಗಿತ್ತು. ಈಗೀಗ ಅಪರೂಪವಾಗುತಿದ್ದಿ...."

"ಎಲ್ಲಪ್ಪಾ ಬಿಡುವು? ಊರೂರು ಸುತ್ತುವುದರಲ್ಲಿ ಕಾಲ ಕಳೆದುದೇ ತಿಳಿಯುವುದಿಲ್ಲ. ಹೇಗಿದ್ದೀ? ನೀನು ಸಿಕ್ಕಿದ್ದು ತುಂಬಾ ಸಂತೋಷ. ಬಾಲ್ಯಗೆಳೆತನವನ್ನು ಮರೆಯುವುದುಂಟೇ?"

"ಈಗ ಎಲ್ಲಿಗೆ ಹೊರಟಿದ್ದೀ? ನಿನ್ನ ಕಾಫಿಯಾಯ್ತೇ? ನನ್ನ ಜೊತೆ ಸ್ವಲ್ಪ ಹೊತ್ತು ಕೂಡು. ನನಗೂ ಒಬ್ಬನೇ ಬೇಸರ. ನಿನ್ನ ಕಂಪನಿ ಇದ್ದರೆ ಒಳ್ಳೆತು."

"ನನ್ನದಾಗಿದೆಯಲ್ಲಾ...."

"ಹತ್ತು ನಿಮಿಷ ಮಾತ್ರ.... ಇದಾರು ನಿನ್ನ ಹಿಂದೆ? ನೀನು ಪರಿಚಯಿಸಲೇ ಇಲ್ಲವಲ್ಲಾ?"

"ನನ್ನ ಕೊಲೀಗ್ ಸುಲೋಚನಾ. ನಿನ್ನೊಡನೆ ಮಾತಿನ ಭರದಲ್ಲಿ ಮರೆತು ಬಿಟ್ಟೆ. ಸುಮ್ಮನೆ ಒಂದು ಕಪ್ ಕಾಫಿಗಾಗಿ ಬಂದೆವು."

"ಓಹೋ, ಸಂತೋಷ...." ನಾನು ವಂದಿಸಿದೆ.

ಅವಳೂ ಸಂತೋಷದಿಂದ ಪ್ರತಿವಂದಿಸಿದಳು. ಇನ್ನೂ ಹದಿನೆಂಟು ಇಪ್ಪತ್ತರ ಮುಗುದೆ.

ಮೂವರೂ ಮೇಜಿನ ಮುಂದೆ ಕುಳಿತೆವು. ಅವರಿಬ್ಬರೂ 'ಏನೂ ಬೇಡ' ಎಂದುದರಿಂದ ನಾನು ನನ್ನ ಕಾಫಿಗಾಗಿ ಆರ್ಡರ್ ಕೊಟ್ಟೆ. ಒಂದು ಬಿಸಿ ಕಾಫಿ ಬರುವುದು ಹೆಚ್ಚು ತಡವೇನೂ ಆಗಲಿಲ್ಲ. ಅವನು ಮಾತಿನ ಮಧ್ಯೆ ಮರೆತ

ನೆಂದು ತೋರುತ್ತೆ ಅವಳ ಕಡೆ ತಿರುಗಿ 'My darling' ಎಂದು ಬಿಟ್ಟೆ! ಕೂಡಲೇ ತುಟಿಕಚ್ಚಿ ನನ್ನೊಡನೆ "ಏನೋ ಹೇಳಲಿಕ್ಕೆ ಹೋಗಿ ಇನ್ನೇನೋ ಹೇಳಿಬಿಟ್ಟೆ." ಎಂದ ವಿಷಾದಪೂರ್ವಕ ದನಿಯಲ್ಲಿ. ಮುಖಬಿಂಬ ಕಳೆಗೆಟ್ಟಿತು ಆ ಕ್ಷಣದಲ್ಲಿ.

ನಾನು ಮಾತಾಡಲಿಲ್ಲ. ಮನಸ್ಸು ಮಣಿಕರ್ಣಿಕಳಿಗಾಗಿ ಮಮ್ಮಲ ಮರುಗಿತು.

o o o o

ಮಣಿಕರ್ಣಿಕಾ ಆಫೀಸು ಸಿಬ್ಬಂದಿಯಿಂದ ಮತ್ತು ಬಾಸ್‌ನಿಂದ ಶಾಲೆಗಾಗಿ ವಂತಿಗೆ ಎತ್ತಿದಳು. ನಾನು ಐನೂರು ರೂಪಾಯಿ ಮಾತ್ರ ಕೊಟ್ಟೆ. ಕಡಿಮೆ ಕೊಟ್ಟಿದ್ದೇನೆಂದು ನನಗೆ ಅನ್ನಿಸಿದರೂ ನನ್ನ ಔದಾರ್ಯ ಅಷ್ಟೇ ಎನ್ನಬಹುದೇನೋ. ಅವಳು ನಕ್ಕು ನುಡಿದಳು,

"ನಾನು ಎಷ್ಟು ಹಣ ಹಾಕಿರಬಹುದು ಊಹಿಸಿ."

"ನಿನಗೆ ಹಣದ ಕೊರತೆಯಿಲ್ಲ ಬಿಡು. ದಂಪತಿಗಳಿಬ್ಬರೂ ದುಡಿಯುತ್ತೀರಿ. ಅದರಲ್ಲೂ ಸುಬ್ಬರಾಜ ಹಣದ ಕಣಜ ಕಟ್ಟಿದ್ದಾನೆ!"

"ಅವನ ಔದಾರ್ಯ ಸೊನ್ನೆ. ಅವನ ದುಡಿಮೆ ಸ್ವಂತ ಹವ್ಯಾಸಕ್ಕೇ ಮೀಸಲು."

ಖಿನ್ನ ಮುಖದಿಂದ ನುಡಿದರೂ ದೃಢವಾಗಿತ್ತು ಧ್ವನಿ.

ಕೆಲಸದ ವೇಳೆಯ ಬಳಿಕ ಅವಳು ವಂತಿಗೆ ಸಂಗ್ರಹಿಸಲು ನಿಂತುದರಿಂದ ಮೀರಿತು ಸಮಯ. ನಾನು ಬಾಗಿಲ ಬಳಿ ಸ್ವಲ್ಪಹೊತ್ತು ಕಾದಿದ್ದು ಅವಳ ಆಗಮನವನ್ನು ನಿರೀಕ್ಷಿಸಿದೆ. ಅವಳು ಬೇಗ ಬೇಗನೆ ಮೆಟ್ಟಿಲುಗಳನ್ನು ಇಳಿದು ಬಂದಳು.

"ನಿಮಗೆ ಲಿಫ್ಟ್ ಬೇಕೆ?" ನಾನು ಕೇಳಿದೆ.

"ಅಯ್ಯೊ, ಆ ಯೋಚನೆ ಬಿಡಿ. ನಿಮ್ಮ ಮನೆ ದಕ್ಷಿಣ ಧ್ರುವ. ನನ್ನದು ಉತ್ತರ ಧ್ರುವ. ನನಗೆ ಬಸ್ಸಿನಲ್ಲಿ ಹೋಗುವುದೇ ಕ್ಷೇಮ."

"ಆ ಜನ ಒತ್ತಡದಲ್ಲಿ ಪಯಣಿಸುವುದು ಕಷ್ಟ."

"ಪರವಾಯಿಲ್ಲ. ಹೇಗೆಂದರೆ ಹಾಗೆ ಸಮಯೋಚಿತವಾಗಿ ವರ್ತಿಸುವುದರಲ್ಲಿ ಅರ್ಥವಿದೆ."

"ಸುಬ್ಬರಾಜನಿಗೆ ಒಂದು ಕಾರು ಕೊಂಡು ಕೊಡಲು ಹೇಳಿ."

"ನಾನು ಡ್ರೈವ್ ಮಾಡಿ ಯಾರನ್ನಾದರೂ ಕೊಲ್ಲುವುದು ಇಷ್ಟವಿಲ್ಲ ಬಿಡಿ."

ನಾನು ನಕ್ಕು ನುಡಿದೆ "ಡ್ರೈವರ್ ಇಟ್ಟುಕೊಂಡರಾಯ್ತು."

"ಅದರಿಂದ ಡಬ್ಬಲ್ ಖರ್ಚು. ಇಷ್ಟರ ಮೇಲೆ ನಮಗೆ ಅಲ್ಲಿ–ಇಲ್ಲಿ ಓಡಾಡಲು ಸಮಯವಾದರೂ ಎಲ್ಲಿದೆ ? ಆಫೀಸು–ಮನೆ ಎರಡಲ್ಲದೆ ಮತ್ತೊಂದಿಲ್ಲ. ಮನೆಯ ಪಕ್ಕದಲ್ಲೇ ಅಂಗಡಿ ಮತ್ತೊಂದು ಮಗದೊಂದು ಎಲ್ಲಾ ಇರುವುದರಿಂದ ವಾಹನದ ಅವಶ್ಯಕತೆ ಬರುವುದೇ ಇಲ್ಲ."

"ಈಗ ಶಾಲೆಗಾಗಿ ಓಡಾಡುತ್ತಿದ್ದೀರಲ್ಲ ?"

"ಟ್ರಸ್ಟ್ ಮಾಡುವುದರಿಂದ ಅದಕ್ಕೂ ಅಂತಹ ಅಗತ್ಯ ಬೀಳುವುದಿಲ್ಲ ಅಂದುಕೊಂಡಿರುವೆ."

"ಇಲ್ಲಿ ನಿಮ್ಮ ಬಂಧು ಮಿತ್ರರು ಆತ್ಮೀಯರು ಯಾರೂ ಇಲ್ಲವೇ ?"

"ಇಲ್ಲ.... ಎಲ್ಲಾ ಮದರಾಸಿನಲ್ಲಿ." ತಲೆಯಾಡಿಸಿದಳು ಅವಳು.

"ಸ್ನೇಹ ಬೆಳೆಸಿಕೊಂಡರಾಯ್ತು. ಸಮಯ–ಸಂದರ್ಭಗಳಲ್ಲಿ ಯಾರಾದರೂ ಇರುವಂತಿದ್ದರೆ ಒಳ್ಳೆಯದಲ್ಲವೇ ?"

ಅವಳು ಯಾವುದೋ ವಿಚಾರ ಮಂಥನದಲ್ಲಿ ಮನವಿಟ್ಟು ಭಾವನಾತ್ಮಕವಾಗಿ ನುಡಿದಳು,

"ಸುವ್ಯರ್ಥ...."

ಅಷ್ಟರಲ್ಲೇ ಆಟೋ ಸಿಕ್ಕಿತು. ಅವಳು ಹೊರಟಳು.

ಅಂದಿಂದಿಗೂ ಅವಳ ವ್ಯಕ್ತಿತ್ವದಲ್ಲಿ ಸ್ವಲ್ಪವಾದರೂ ಏರು ಪೇರು ಕಾಣ

ಲಿಲ್ಲ. ಬಾಹ್ಯ ವೃತ್ತಿ ಎಷ್ಟು ಗಂಭೀರವೋ ಆಂತರಂಗಿಕ ಪ್ರವೃತ್ತಿ ಅಷ್ಟೇ ಗಂಭೀರ ಎಂದರೆ ಸಲ್ಲುತ್ತದೆ ಅವಳಿಗೆ. ಅದೇ ಸುಬ್ಬರಾಜ....?

○ ○ ○ ○

ಮೀಟಿಂಗ್‌-ನಲ್ಲಿ ದೃಢ ಕಂಠದಿಂದ ಹೇಳಿದಳು ಮಣಿಕರ್ಣಿಕಾ.

"ಸಂಪಾದಕ ಮಂಡಳಿಯಲ್ಲಿ ಇನ್ನೂ ಕೆಲವು ಮಹಿಳೆಯರಿಗೆ ಅವಕಾಶ ಕೊಡುವುದು ನ್ಯಾಯ. ಪುರುಷ ಪ್ರಧಾನವಾದ ಈ ರಾಷ್ಟ್ರದಲ್ಲಿ ಮಹಿಳೆಯರಿಗೆ ಯಾವ ಕ್ಷೇತ್ರದಲ್ಲೂ ಸಮಾನಾವಕಾಶ ಇಲ್ಲವೇ ಇಲ್ಲ. ವಿದ್ಯೆ-ಬುದ್ಧಿಗಳಿದ್ದು ಜ್ಞಾನ ಸಂಪತ್ತಿದ್ದು ಹೆಣ್ಣು ಕೇವಲ ಭೋಗ ವಸ್ತುವಾಗಿಯೇ ಉಳಿಯುವುದೆಂದರೆ ಎಂತಹ ಶೋಚನೀಯ? ನಮ್ಮ ದೇಶದಲ್ಲಿ ಹೆಣ್ಣಾಗಿ ಹುಟ್ಟುವುದು ನರಕ ಜೀವನಕ್ಕೆ ಎಂದರೆ ವಿಶೇಷವೇನಿಲ್ಲ."

ಆ ಮಾತಿಗೆ ಕುಲಕರ್ಣಿ ಉತ್ತರಿಸಿದ, ಹಾಸ್ಯ ಪ್ರಧಾನವಾಗಿ ಹುಬ್ಬುಗಳು ಏರಿದುವು.

"ಅದು ನಿಜ ಮೇಡಂ. ಆದರೂ, ಮಹಿಳೆಯರೆಲ್ಲ ಉದ್ಯೋಗಸ್ಥರಾದರೆ ಮಕ್ಕಳು ಮರಿಗಳ ಗತಿಯೇನು ಹೇಳಿ?"

"ನಿಮ್ಮ ವ್ಯವಹಾರ ಜ್ಞಾನ ಹೀಗಿರುವುದುದರಿಂದಲೇ ಸ್ತ್ರೀಯರಿಗೆ ಕುರುಡು ಜೀವನ."

ಅದಕ್ಕೆ ನಾನೆಂದೆ "ಮೇಡಂ, ಸಕಲ ವಿದ್ಯಾವಂತರಾದ ಮಹಿಳೆಯರೂ ಕೂಡ ಇಂದು ಒಡವೆ ವಸ್ತ್ರಗಳ ವ್ಯಾಮೋಹದಿಂದ ಬಿಡುಗಡೆಯಾಗಿಲ್ಲ. ಅದು ಮಾತ್ರವಲ್ಲ, ವಿಶಾಲ ಮನೋಭಾವ ಬೆಳೆಸಿಕೊಳ್ಳಲಿಲ್ಲ. ಕೇವಲ ಹಳೆಯ ಕಟ್ಟುಪಾಡಿಗೇ ಅಂಟಿಕೊಂಡಿದ್ದಾರೆ. ಅವರೇ ಬಿಡುಗಡೆ ಹೊಂದುವುದಿಲ್ಲ. ಅದೇ ವಿಶೇಷ ...."

"ಅದಕ್ಕೂ ಕಾರಣವಿಲ್ಲದಿಲ್ಲ. ಯೋಚಿಸಿ ನೋಡಿ, ಸಾಮಾಜಿಕ ಕಟ್ಟುಕಟ್ಟಳೆ ಮತ್ತು ಗಿಳಿಪಾಠ." ಎಂದಳು ಅವಳು. ಧ್ವನಿಯಲ್ಲಿ ಶೋಕರಸ ಹರಿದು ಬಂತು.

"ತಲತಲಾಂತರದಿಂದ ರೂಢಿ ಬದ್ಧರಾಗಿಯೇ ಜೀವನ ನಡೆಸಿಕೊಂಡು ಬಂದ ಸ್ತ್ರೀ ಜನರ ರಕ್ತದಲ್ಲಿ ಹರಿಯುತ್ತಿರುವುದು ಮುಗ್ಧ ದುಗ್ಧ ಭಾವನೆಯ ರಸ. ಗಂಡ ಧಾರಾಳಿಯಾದರೆ ಮೈ ತುಂಬಾ ಒಡವೆ ಹೇರಿಕೊಳ್ಳುತ್ತಾರೆ. ನಿಮ್ಮಂತಹವರು ಎಷ್ಟು ಮಂದಿ ಸಿಕ್ಕುತ್ತಾರೆ ಹೇಳಿ?" ನಾಗರಾಜ ಸಮಾಜದ ವಾಸ್ತವಿಕ ಚಿತ್ರವನ್ನು ಮುಂದಿಟ್ಟ.

"ಚಿನ್ನಾಭರಣಗಳ ವ್ಯಾಮೋಹ ತಪ್ಪು ನಿಜ. ಇದು ತಲತಲಾಂತರ ಗಳಿಂದ ರಕ್ತಕ್ಕೆ ಅಂಟಿದ ರೋಗ. ಅದು ಅಷ್ಟು ಸುಲಭವಾಗಿ ಹೋಗುವು ದಿಲ್ಲ. ಎಂಬುದರಲ್ಲಿ ಸತ್ಯವಿದೆ. ಅದನ್ನು ಅಲ್ಲಗಳೆಯಲಾರೆ. ಆದರೆ ಇದಕ್ಕೆ ಮೂಲಕಾರಣ ಪುರುಷ ಪ್ರಧಾನತೆ. ಸ್ತ್ರೀ ಜನರಿಗೆ ಸುತ್ತಮುತ್ತ ಬೇಲಿ. ಅವರಿಗೆ ಎಲ್ಲಿಯೂ ಸಮಾನಾವಕಾಶವಿಲ್ಲ. ಆದ್ದರಿಂದ ಮನೋ ವಿಕಾಸವಾ ಗಲೀ ಆತ್ಮ ವಿಕಾಸವಾಗಲೀ ಆಗಲು ಅವಕಾಶ ದೊರೆಯಲಿಲ್ಲ. ಸ್ತ್ರೀಲೋಕ ಕುರುಡಾದುದೇ ನಿಮ್ಮಗಳಿಂದ.... ಯಾವತ್ತೂ ಬೇಕು-ಬೇಡಗಳ ಸೂತ್ರಗಳು ಶಾಸ್ತ್ರಗಳ ಸಂಕೋಲೆಗಳು ಸುತ್ತಿಕೊಂಡಿರುತ್ತವೆಯಾದ್ದರಿಂದ ಅವರಿಗೆ ಸ್ವಂತಿ ಕೆಯ ಜ್ಞಾನಚಕ್ಷು ತೆರೆಯಲಿಲ್ಲ. ತೆರೆಯಮರೆಯಲ್ಲಿಟ್ಟುದುದರ ಪರಿಣಾಮ ಇದು. ಹಿಂದೂಸ್ಥಾನವಲ್ಲಿ ಶೇಕಡಾ ತೊಂಭತ್ತು ಮಂದಿ ಹೆಂಗಳೆಯರ ಜೀವನ ಕತ್ತಲೆಯಲ್ಲಿಯೇ ಕೊಳೆಯುತ್ತಿರುವುದು ಸಹಜ. ಯೋಚಿಸಿದರೆ ಕರುಳು ಸಂಕಟದಿಂದ ಮಿಡಿಯುತ್ತದೆ. ಪಾಶ್ಚಾತ್ಯರ ಕಡೆ ನೋಡಿ. ನಮ್ಮಲ್ಲೂ ಹಾಗಿರಬೇಡವೇ."

"ಅದು ಬಲುದೂರದ ಮಾತು...."

ನನ್ನ ಮಾತನ್ನು ಮುಂದುವರಿಯಗೊಡದೆ ಅವಳು ಮುಂದುವರಿದಳು.

"ಹಾಗೆನ್ನುತ್ತ ಶತಮಾನಗಳೇ ಉರುಳಿ ಹೋದುವು. ಸ್ತ್ರೀಯರನ್ನು ಭೋಗವಸ್ತುಗಳನ್ನಾಗಿಯೇ ಉಳಿಸಿಕೊಳ್ಳುವ ಉದ್ದೇಶ ಎಂದೆಂದಿಗೂ ಅಳಿಯದು ನಮ್ಮಲ್ಲಿ. ಅದನ್ನು ಸ್ತ್ರೀಯರು ಒಪ್ಪಿಕೊಂಡೇ ಬಂದಿರುವುದು ನಿಜವಾಗಿಯೂ ವ್ಯಸನಕರ. ಶಾಸ್ತ್ರ ಸೂತ್ರಗಳಿಗೆ ತಲೆಬಾಗಿ ಜೀವನದಲ್ಲಿ ದಾಸಾನುದಾಸಿಯರಾಗಿ ಬಾಳುತ್ತಿರುವುದು ಎಂತಹ ಹೀನ ಪ್ರವೃತ್ತಿ? ಅದನ್ನು ಸ್ತ್ರೀಯರು ಅರ್ಥಮಾಡಿಕೊಳ್ಳಲಾರರಲ್ಲ ಎಂಬ ದುಃಖ ಸಂಕಟ ನನಗೆ. ಹೆಣ್ಣಿಗೆ

ವೈಯಕ್ತಿಕ ಸ್ವಾತಂತ್ರ್ಯ, ಆರ್ಥಿಕ ಸ್ವಾತಂತ್ರ್ಯ ಬೌದ್ಧಿಕ ಸ್ವಾತಂತ್ರ್ಯ ಇಲ್ಲವಾಗಿರುವುದರಿಂದಲೇ ಎಲ್ಲರೂ ಹೇಡಿಗಳಾಗಿ ತೆರೆಯಮರೆಯಲ್ಲೇ ಉಳಿಯಲು ಕಾರಣ. ಅವರಿಗೆ ತಮ್ಮ ವ್ಯಕ್ತಿತ್ವದ ಅರಿವೇ ಇಲ್ಲ. ದಾಸ್ಯ ಜೀವನವೇ ಜೀವನ. ಅದರ ಲಕ್ಷ್ಮಣರೇಖೆಯನ್ನು ದಾಟಿ ಗೊತ್ತೇ ಇಲ್ಲ. ಪುರುಷರ ಪೌರುಷೇಯ ಪ್ರವೃತ್ತಿ ಅವರನ್ನು ಪತಿಗತಿ ಹೀನರನ್ನಾಗಿ ಮಾಡಿದೆ. ಸ್ತ್ರೀ ಸಮಾಜ—ಸ್ತ್ರೀ ಸಂಘ ಇಂತಿಂತಹ ಜಾಗೃತ ಮಹಿಳಾ ಕೂಟಗಳು ಎಚ್ಚೆತ್ತು ಕೆಲಸ ಮಾಡಬೇಕು. ಏನೋ ಅಷ್ಟಿಷ್ಟು ಕೈಗಾರಿಕೆ ಕಲಿಸಿದರೆ ಸಾಲದು. ಹೆಣ್ಣು ಮಕ್ಕಳನ್ನು ಪ್ರಚೋದನೆಗೊಳಿಸಿ ಅವರವರ ವ್ಯಕ್ತಿತ್ವದ ಅರಿವು ಮೂಡಿಸಿ ಎಚ್ಚೆತ್ತುಕೊಳ್ಳುವಂತೆ ಮಾಡಬೇಕು. ಅಂದರೆ ಒಬ್ಬಿಬ್ಬರನ್ನು ಮಾತ್ರವಲ್ಲ. ಸಾಮೂಹಿಕವಾದ ಉಗ್ರ ಪ್ರತಿಭಟನೆ ತೋರುವಂತೆ ಚೋದಿಸದಿದ್ದರೆ ಸ್ತ್ರೀ ಜೀವನ ಯಾವತ್ತೂ ಹೀಗೆಯೇ. ಪುರುಷನ ಅಂಗೈಲಾಡುವ ಗಿಣಿಯಾದರೇನೇ ಅವಳಿಗೆ ಸುಜೀವನ. ಇಲ್ಲದಿದ್ದರೆ ಮಾರಣ ಹೋಮಕ್ಕೆ ಅವಳು ತಯಾರಿರಬೇಕು. ಇಂದು, ಎಷ್ಟೇ ಬುದ್ಧಿವಂತಳಿರಲಿ ಸ್ವತಂತ್ರ ಜೀವನ ಬಂದೀತೇ ? ಹೇಗಿದ್ದರೂ ಅವಳ ಜುಟ್ಟು ಅವನ ಕೈಯಲ್ಲಿ. ನಾಯಿಗೆ ರೊಟ್ಟಿ ತೋರಿದಂತೆ ಅವಳಿಗೆ ಅಷ್ಟಿಷ್ಟು ಹಾಕಿದರೆ ಮುಗಿಯಿತು. ಅಷ್ಟೂ ಅರ್ಥ ಮಾಡಿಕೊಳ್ಳಲಾರದ ಸ್ಥಿತಿಯಲ್ಲಿದ್ದಾರೆ ನಮ್ಮ ಸ್ತ್ರೀಜನ. ರಾಷ್ಟ್ರ ಸ್ವಾತಂತ್ರ್ಯಕ್ಕಾಗಿ ಮನೆಮನೆಯ ಸ್ತ್ರೀಯರು ಶ್ರಮಿಸಿದ್ದಾರೆ. ಕೊನೆಗೂ ರಾಷ್ಟ್ರಕ್ಕೆ ಸ್ವಾತಂತ್ರ್ಯ ಲಭಿಸಿತು. ಆ ಸ್ವಾತಂತ್ರ್ಯದಲ್ಲಿ ಕಿಂಚಿತ್ತಾದರೂ ಸ್ತ್ರೀಯರ ಬಳಿಗೆ ಬಂತೆ? ಯೋಚಿಸಿ ನೋಡಿ."

ಧ್ವನಿ ಎದೆಯಾಳದಿಂದ ಹರಿದು ಬಂದರೂ ಆವೇಶವಿರಲಿಲ್ಲ. ಸಾವಧಾನದಿಂದಲೇ ನುಡಿದಿದ್ದಳಾಕೆ. ಕಣ್ಣುಗಳಲ್ಲಿ ಸಾತ್ವಿಕತೆಯ ಕಳೆ ಮಿನುಗಿತು ಥಳಥಳನೆ. ಗಂಭೀರ ಭಾವದಿಂದ ಮುಖಕೆಂಪು ತಳೆಯಿತು.

ನಾನು ತಲೆಯಾಡಿಸಿ ಸಮ್ಮತಿ ಸೂಚಿಸಿ ಅಂದೆ,

"ನಮ್ಮ ರಾಷ್ಟ್ರೀಯರು ಇಂಥ ಮಹತ್ತರ ಸುಧಾರಣೆಗಾಗಿ ಸಾಮೂಹಿಕವಾಗಿ ತಯಾರಾಗುವುದು ಕನಸಿನ ಮಾತು. ನಮ್ಮಲ್ಲಿ ಅಂತಹ ಸಾಮರ್ಥ್ಯ ಇಲ್ಲವೇ ಇಲ್ಲ, ಎಂಬುದು ಸತ್ಯ. ಅದಕ್ಕೆ ದೃಢವಾದ ಕಾರಣವೆಂದರೆ ವಿದ್ಯೆ

ಯಿಂದ ವಂಚಿತರಾಗಿರುವುದು ಒಂದಾದರೆ ಎರಡನೆಯದು ಸ್ವಾತಂತ್ರ್ಯ ಜೀವನ ಅನುಭವಿಸಿ ಗೊತ್ತೇ ಇಲ್ಲ ಬಿಡಿ. ಮನೋದೌರ್ಬಲ್ಯ ದೈಹಿಕ ದೌರ್ಬಲ್ಯ ಒಂದಕ್ಕೊಂದು ಬಿಗಿದ ನಂಟು ಸಾಮಾನ್ಯವಲ್ಲ."

ಕುಲಕರ್ಣಿಯ ಮಾತಿಗೆ ಅವಳು ವಿಷಾದವಾಣಿಯಲ್ಲಿ ನುಡಿದಳು "ನಮ್ಮಂತಹ ಒಬ್ಬಿಬ್ಬರು ಹೊಡೆದಾಡಿದರೆ ಏನಾದೀತು ಹೇಳಿ... ಇಡೀ ಸ್ತ್ರೀ ಲೋಕವೇ ಸರ್ವತ್ರ ಆಲೋಚನಾ ಶೀಲರಾಗಬೇಕು. ಲೋಕಪ್ರಜ್ಞೆ ಇಲ್ಲದೆ ಕೊಚ್ಚೆಯ ಹುಳುವಾಗಿ ಬಾಳುವುದಕ್ಕಿಂತ ಸಾಯುವುದು ಲೇಸು. ಬಿ. ಎ. ಓದಿಯೂ ಸ್ವಂತಿಕೆಯೇ ಇರುವುದಿಲ್ಲ ಎಂದಮೇಲೆ ಎಂತಹ ನಾಚಿಕೆಗೇಡು. ಯೋಚಿಸಿ ನೋಡಿ."

"ನಿಜ ... ಮೇಡಂ."

"ಜಗತ್ತು ವಿಶಾಲವಾಗಿದೆ. ಅವಳು ಸಮಾಜ ಸೇವಕಿಯಾಗಿ ಅಂದಿಂದಿಗೂ ಸೇವೆ ಸಲ್ಲಿಸಿದ್ದಾಳೆ. ಮುಂದೆಯೂ ಸಲ್ಲಿಸುವವಳೇ. ಅದರಲ್ಲಿ ಅನುಮಾನವಿಲ್ಲ. ಆದರೆ, ಅವಳನ್ನು ಕತ್ತಲೆಯಲ್ಲಿ ಇಟ್ಟಿರುವುದು ಅಕ್ಷಮ್ಯ ಅಪರಾಧ."

"ಇದು ಒಬ್ಬಿಬ್ಬರ ಸಮಸ್ಯೆಯಲ್ಲ. ರಾಷ್ಟ್ರಕೋಶವೇ ಹಾಗಿದೆ. ಧೀಮಂತ ಮಹಿಳೆಯರು ಒಗ್ಗಟ್ಟಿನಿಂದ ಹೋರಾಡಿ ಸರಿ ಪಡಿಸಿಕೊಳ್ಳಬೇಕು. ಇಲ್ಲದಿದ್ದರೆ ಕಾಲಕಾಲಾಂತರವೂ ಹೀಗೆಯೇ..." ನಾನೆಂದೆ.

"ಹೋರಾಟಯಜ್ಞವೆಂದರೆ, ಯಜ್ಞಕಾರ್ಯಕ್ಕೆ ಹವಿಸ್ಸು-ಸಮಿತ್ತು ಆಗುವುದಷ್ಟೇ ವಿನಾ ಮತ್ತೇನಿಲ್ಲ ನಮ್ಮಲ್ಲಿ."

o o o o

ಎಡಗೈದಳದ ಮೇಲೆ ಶಿರೋಭಾರವನ್ನಿಳುಹಿ ಮ್ಲಾನಮುಖಿಯಾಗಿ ಲೇಖನ ಕೃಷಿ ನಡೆಸಿದ್ದಾಳೆ ಮಣಿಕರ್ಣಿಕಾ. ಮುಖಬಿಂಬದ ಮೇಲೆ ಗಂಭೀರ ಭಾವಧಾರೆ ಹರಿದಾಡುತ್ತಿದೆ, ಅಲೆಯಲೆಯಾಗಿ. ದುಃಖಿನಿಯಾಗೊಮ್ಮೆ, ಚಿಂತಿತಳಾಗೊಮ್ಮೆ, ವಿಚಾರಶೀಲೆಯಾಗೊಮ್ಮೆ ಕಾಣಿಸುವುದು ದಿಟ. ಅವಳ

ಕಡೆ ನೋಡಬಾರದೆಂದು ಯೋಚಿಸಿದರೂ ಸೋಲು ಕಟ್ಟಿಟ್ಟದ್ದು. ಅದಕ್ಕಾಗಿಯೇ ಎದ್ದು ಕೆಳಗಡೆ ಹೋದೆ. ಮನದಲ್ಲಿ ಅವಳ ಸಂಕಷ್ಟವೇನಿರಬಹುದೆಂದು ಊಹಿಸಲಾರದೇ ಹೋದೆ.

ಸಂಜೆಯಲ್ಲಿ ಐದೂವರೆಗೆ ಆಫೀಸು ಮುಗಿಯಿತು. ಎಲ್ಲರೂ ಹೊರಬಿದ್ದರು. ಜೊತೆಯಲ್ಲಿ ಮೆಟ್ಟಿಲಿಳಿಯುತ್ತಿದ್ದ ಮಣಿಕರ್ಣಿಕಳನ್ನು ಕುರಿತು ನಾನೆಂದೆ "ಸುಬ್ಬರಾಜು ಇಂದು ಮನೆಯಲ್ಲಿರುತ್ತಾನೆಯೇ ?"

"ಊರಿನಲ್ಲಿಲ್ಲ."

"ಅವನು ಬರುವುದು ಯಾವಾಗ ?"

"ಅವನ ವಿಷಯ ಹೀಗೇ ಎಂದು ಹೇಳುವುದು ಕಷ್ಟ." ಗೊಣಗಿ ಆಡಿಸಿದಳು ಅವಳು.

"ಬಂದರೆ ಇಲ್ಲಿ ಎಷ್ಟು ಸಮಯ ಇರುತ್ತಾನೆ ?"

"ವಾರಗಟ್ಟಲೆ ಇರುವುದುಂಟು...." ಮುಂದೆ ಏನನ್ನು ಹೇಳ ಬಯಸಿದ್ದಳೋ ತುಟಿಗಳು ಬಿರಿಯಲಿಲ್ಲ. ಮುಖಭಾವದಲ್ಲಿ ಏನೋ ಒಂದು ಬಗೆಯ ಬಿಗುಮಾನ ಕಂಡಿತು. ನಾನು ಅಷ್ಟಕ್ಕೇ ಸುಮ್ಮನಾದೆ. ಅವಳು 'ಬಾಯ್' ಎನ್ನುತ್ತ ಹೊರಟೇ ಹೋದಳು.

ನಾನು ರಜೆಹಾಕಿ ಎರಡು ವಾರಗಳ ಕಾಲ ಮಂಗಳೂರು ಗೋವಾ ಕಾರವಾರ ಪಾಂಡಿಚೆರಿಗಳ ಕಡೆ ಪ್ರವಾಸ ಹೊರಟೆ ಸಂಸಾರ ಸಹಿತ. ಪ್ರಪಂಚದ ಗೋಡವೆಯೇ ಇರಲಿಲ್ಲ ಮನಸ್ಸಿಗೆ. ದುಃಖ ದುಗುಡಗಳಿಂದಲೂ ದೂರ. ಕೆಲಸ ಕಾರ್ಯಗಳ ಜಂಜಡವೂ ಇರಲಿಲ್ಲ.

ಸಾಗರ ತೀರದ ನಗರಿಗಳು ವಾತಾವರಣ ಮತ್ತು ಸಾಗರ ಹವೆ ಬಲೂ ಆಪ್ಯಾಯಮಾನ ಮನಸ್ಸಿಗೆ.

ಕಾರವಾರದ ಸಾಗರ ತೀರದಲ್ಲಿ ರವಿಯ ಅಸ್ತಮಾನೋತ್ಸವದ ಸಮೀಕ್ಷೆಯಲ್ಲಿ ಮನನೆಟ್ಟು, ಮರಳಿನ ಹಾಸಿನಲ್ಲಿ ಮಡದಿ ಮಕ್ಕಳ ಸಹಿತ ಕುಳಿತಿದ್ದೆ.

ಭೋರ್ಗರೆವ ಸಾಗರದಲೆಗಳು ನುಗ್ಗಿ ಬಂದು ತೀರಕ್ಕೆ ಅಪ್ಪಳಿಸುವ ರೀತಿಯನ್ನು ನೋಡಿದರೆ ತನುಮನಗಳು ಪುಟಿಯುವಷ್ಟು ರುದ್ರ ರಮಣೀಯ.

ಇನ್ನೂ ಸೂರ್ಯ ತಂಗಿರಲಿಲ್ಲ. ಹೊಂಗಾಂತಿಯು ಹರಿದು ಮಹಾ ಜಲಧಿಯು ಓಕುಳಿಯಂತೆ ಚಂದನ ವರ್ಣದಿಂದ ಕಂಗೊಳಿಸುತ್ತಿತ್ತು. ಪರಿ ದೃಶ್ಯಮಾನ ಸೌಂದರ್ಯದಿಂದ ಮೈ ಮರೆತಿದ್ದವನು ಒಮ್ಮೆ ಬಲಗಡೆ ತಿರುಗಿ ದಾಗ ಸುಬ್ಬರಾಜು ಕುಳಿತಿದ್ದುದು ದೃಷ್ಟಿಗೆ ಬಿತ್ತು. ಜೊತೆಗೊಬ್ಬ ನೀಲಿ ಕನ್ನಡಕದ ಚೆಲ್ಲೆಗಾತಿ. ದೂರದೃಷ್ಟಿಗೆ ಮಣಿಕರ್ಣಿಕಳೇ ಇರಬಹುದು ಎಂದು ಕೊಂಡು ಬಳಿಗೆ ಹೋದೆ. ಇಬ್ಬರೂ ಮೈಗೆ ಮೈ ಹಚ್ಚಿ ಕುಳಿತು ಪರಸ್ಪರ ಪ್ರೇಮ ಸಲ್ಲಾಪದಲ್ಲಿದ್ದುದರಿಂದ ನನ್ನನ್ನು ಗಮನಿಸಲಿಲ್ಲ. ಹತ್ತಿರಕ್ಕೆ ಹೋಗಿ 'ಸುಬ್ಬೂ' ಎಂದಾಗಲೇ ಗೊತ್ತು ಆಕೆ ಪರಸ್ತ್ರೀಯೆಂದು. ಅವನು ನನ್ನ ಕರೆ ಯಿಂದ ಎಚ್ಚೆತ್ತು ಸ್ವಲ್ಪ ಸರಿದು ನನ್ನ ಕಡೆ ನೋಡಿದ. ತಕ್ಷಣ ಮುಖ ಬಣ್ಣಗೆಟ್ಟು ದಿಗ್ಭ್ರಾಂತನಾಗಿ ತಡಬಡಿಸಿ,

"ಓ, ರಘು! ಯಾವಾಗ ಬಂದೆ?" ಎಂದ, ನುಡಿಯಲಾರದೇ ನುಡಿ ಯಿತು ನಾಲಿಗೆ.

ನೀಲಿ ಕನ್ನಡಕದ ಹೆಣ್ಣು ತಕ್ಷಣ ಅಲ್ಲಿಂದೆದ್ದು ಹೋದಳು. ನೋಡಿ ದರೆ ಇವಳು ಸುಲೋಚನ ಅಲ್ಲ! ಬೇರೆ ಪ್ರೌಢೆ.

"ಮಣಿಕರ್ಣಿಕ ಎಂದುಕೊಂಡಿದ್ದೆ. ಸಾರಿ...."

"ಪರವಾಯಿಲ್ಲ. ನಮ್ಮ ಹಳೆಯಕಾಲದ ಸ್ನೇಹ....ಅಷ್ಟೆ, ಇನ್ನೇನಿಲ್ಲ. ಬಾ...."

"ನನಗೆ ಅವನೊಂದಿಗೆ ಕುಳಿತುಕೊಳ್ಳಲು ಏನೋ ಒಂದು ಬಗೆಯ ಮುಜು ಗರ. ಹಿಂದಿರುಗಲೇ ಎಂದುಕೊಂಡಾಗಲೇ ಅವನೆಂದ "ಕುಳಿತುಕೊಳ್ಳಯ್ಯಾ, ಸಂಕೋಚವೇಕೆ?"

ನಾನು ಕುಳಿತುಕೊಳ್ಳಲೇ ಬೇಕಾಯಿತು ಕುಳಿತುಕೊಂಡೆ.

ಅವನು ಉದ್ಯೋಗವನ್ನು ಕುರಿತು ಬಹಳ ಸ್ವಾರಸ್ಯವಾಗಿ ಮಾತಾಡಿದ.

"ಈಗೀಗ ನಾನು ಜಾಹೀರಾತುಗಳಿಗಾಗಿ ಫೋಟೊ ತೆಗೆಯುವುದರೊಂದಿಗೆ ಪ್ರಾಣಿ ಪಕ್ಷಿಗಳ ಚಿತ್ರಗಳನ್ನೂ ತೆಗೆಯುತ್ತಿರುವೆ. ಕಳೆದ ವರ್ಷ ಬೊಂಬಾಯಿಯಲ್ಲಿ ಚಿತ್ರ ಪ್ರದರ್ಶನ ಏರ್ಪಡಿಸಿದ್ದೆ. ಈ ಸಲಿ ಬೆಂಗಳೂರಿನ ಚೌಡಯ್ಯ ಮೆಮೋರಿಯಲ್ ಹಾಲ್‌ನಲ್ಲಿ ಏರ್ಪಡಿಸುವ ಯೋಚನೆಯಲ್ಲಿರುವೆ. ನೀನು ಖಂಡಿತಾ ಬರಬೇಕು."

"ಆಗಲಿ.... ಯಾವಾಗ ಪ್ರದರ್ಶನ ?"

"ಬಹುಶಃ ಮಾರ್ಚಿನಲ್ಲಿ ಎನಿಸುತ್ತೆ. ಇನ್ನೂ ದಿನ ನಿರ್ಧಾರವಾಗಿಲ್ಲ." ಒಂದೆರಡು ಗಳಿಗೆ ತಡೆದು ಪುನಃ ಮುಂದುವರಿದ "ಪ್ರಾಣಿ ಪಕ್ಷಿಗಳ ಚಿತ್ರ ತೆಗೆಯುವುದೆಂದರೆ ಸಾಮಾನ್ಯವಲ್ಲ. ಕಾಡು ಮೇಡುಗಳಲ್ಲಿ ಒಬ್ಬನೇ ಅಲೆಯಬೇಕು. ಎಷ್ಟೋ ಸಲಿ ಗಂಡಾಂತರಗಳನ್ನು ಎದುರಿಸಬೇಕಾಗುತ್ತೆ. ಜೀಪು ಎಲ್ಲಿಯವರೆಗೆ ಹೋಗುವುದೋ ಅಲ್ಲಿಯವರೆಗೆ ಮಾತ್ರ ವಾಹನ ಸೌಕರ್ಯ. ಅನಂತರ ಕಾಲ್ನಡಿಗೆಯೇ ಎಲ್ಲೆಡೆಗೂ. ಎಂತೆಂತಹ ದಟ್ಟವಾದ ಕಾಡುಗಳಲ್ಲಿ ಅಲೆದಿರುವೆ ಗೊತ್ತೇ ? ಅನೇಕ ವೇಳೆ ಕಷ್ಟಪಟ್ಟರೂ ಪ್ರಾಣಿ ಪಕ್ಷಿಗಳು ದೃಷ್ಟಿಗೆ ಬೀಳುವುದೇ ಇಲ್ಲ. ಬಿದ್ದರೂ ಆ ಕ್ಷಣವೇ ಮಿಂಚಿನಂತೆ ಕಣ್ಮಾಯವಾಗಿ ಬಿಡುತ್ತವೆ. ಸದ್ದಿಲ್ಲದೆ ಹೋಗಿ ಅವುಗಳ ನಾನಾ ಭಂಗಿಯನ್ನು ಫೋಟೋ ತೆಗೆಯುವುದೆಂದರೆ ಸಾಮಾನ್ಯವಲ್ಲ. ಅದಕ್ಕಾಗಿ ನಾನು ಪಟ್ಟಿರುವ ಪರಿಶ್ರಮ ಅಗಾಧ. ಕೆಲವೊಮ್ಮೆ ಜೊತೆಗೆ ಹಳ್ಳಿಗರು ಸಿಗುತ್ತಾರೆ. ಕೆಲವೊಮ್ಮೆ ಯಾರೂ ಸಿಗುವುದಿಲ್ಲ. ಕೈಯಲ್ಲೊಂದು ಪಿಸ್ತೂಲು ಸಹ ಇಲ್ಲದೆ ಅಲೆಯುವೆ. ನನ್ನ ಗೆಳೆಯರೆಲ್ಲ ಪಿಸ್ತೂಲು ಕೊಂಡುಕೊ ಎಂದು ಒತ್ತಾಯಿಸುತ್ತಾರೆ. ನಾನೇ ಇನ್ನೂ ಮನಸ್ಸು ಮಾಡಿಲ್ಲ."

"ತೆಗೆದುಕೋ, ಅದಕ್ಕೇಕೆ ಹಿಂಜರಿತ ?"

"ಅಂತಹ ಅಗತ್ಯವಿಲ್ಲ ಎನಿಸುತ್ತೆ ನನಗೆ."

"ಅಪಾಯ ಹೇಳಿ–ಕೇಳಿ ಬರುವುದಿಲ್ಲ. ಮೊದಲೇ ಜಾಗರೂಕರಾಗಿರುವುದು ಲೇಸು."

"ನೋಡೋಣ..."

ಕತ್ತಲು ಮುಸುಗುತ್ತ ಬಂತು. ತಾನು ಹೊರಡಲು ಎದ್ದೆ.

"ಗುಡ್ ಈವಿನಿಂಗ್ ರಘು!"

"ಗುಡ್ ಈವಿನಿಂಗ್, ಬಾಯ್ ಬಾಯ್ !"

೦ ೦ ೦ ೦

ಅಂದು ಭಾನುವಾರ ಆಫೀಸಿಗೂ ಬಿಡುವು ಶಾಲೆಗೂ ಬಿಡುವು.

ಬಾಬು ಪ್ರಾತಃಸ್ಫೂರ್ತಿಯಿಂದ ಕುಣಿಕುಣಿಯುತ್ತ ಆಟದ ಬಯಲಿಗೆ ಹೊರಟ. ಓರಗೆಯ ಹುಡುಗರ ತಂಡ ಅವನಿಗಾಗಿ ಕಾದಿತ್ತು. ಮನೆಯ ಎದುರುಗಡೆಯೇ ವಿಶಾಲವಾದ ಆಟದ ಬಯಲು. ಹುಡುಗರ ನಗೆ–ನಲಿವುಗಳ ಮೋಹಕ ಕೂಟದಲ್ಲಿ ಆವನು ಬೆರೆತುದನ್ನು ಸ್ವಲ್ಪ ಹೊತ್ತು ನಿಂತು ನೋಡಿದಳು ತಾಯಿ ಮಣಿಕರ್ಣಿಕಾ. ಬಯಲಿನ ತುಂಬ ಹುಡುಗರ ಜಿಗಿದಾಟವೇ ಜಿಗಿದಾಟ. ಒಕ್ಕೊರಲಿನ ಕೇಕೆಗಳು, ಮಾತಿನ ಮಧುರ ಧ್ವನಿ ಬಲೂ ರಾಮಣೀಯಕ. ಒಳಗಡೆ ಕೆಲಸವಿಲ್ಲದಿದ್ದರೆ ಇನ್ನಷ್ಟು ಹೊತ್ತು ನಿಂತು ನೋಡುತಿದ್ದಳೇನೋ... ಆದರೆ, ಅವಳ ಕೈಗೆ ಬಿಡುವಾದರೂ ಎಲ್ಲಿ? ಹೆಚ್ಚುಹೊತ್ತು ನಿಲ್ಲಲಾಗದೆ ಮುಂದಿನ ಕದ ಮುಚ್ಚಿಕೊಂಡು ಒಳ ಹೋಗಿ ಕಳೆದುಳಿದ ಕೆಲಸವನ್ನು ಬೇಗನೆ ಮುಗಿಸಿಕೊಂಡಳು. ಇನ್ನು ಶಾಲೆಗಾಗಿ ಚಂದಾ ಎತ್ತಲು ಹೋಗು ವುದುಂಟು. ಹತ್ತು ಗಂಟೆಗೆ ರಾಧಾಬಾಯಿ ಮತ್ತು ಚಂಪಾ ಬರುವವರಿ ದ್ದಾರೆ. ಮುಂದಿನ ಕೆಲಸ ಪಾಶ್ಚಾತ್ಯರ ಗತಿಯಲ್ಲಿ ನಡೆಯಬೇಕು. ಅವರಲ್ಲಿರುವ ಪ್ರಜಾನ–ವಿಜ್ಞಾನ–ಸಾಹಸ–ಜಾಗೃತಿ–ತ್ವರಿತಗತಿ–ವಿಶಾಲದೃಷ್ಟಿ ನಮ್ಮಲ್ಲಿ ಇಲ್ಲವೇ ಇಲ್ಲ. ಸ್ವತಂತ್ರ ಭಾರತದಲ್ಲಿ ರಜೋಗುಣಗಳ ವೈಭವೀಕರಣ. ಅದೇ ವ್ಯಸನ.......ಗೋಡೆಯ ಮೇಲಿನ ಗಡಿಯಾರ ಒಂಭತ್ತು ಬಾರಿಸಿ ದಾಗಲೇ ಪತಿ ಸುಬ್ಬರಾಜು ಬಾಗಿಲ ಕರೆಗಂಟೆ ಒತ್ತಿದ. ರಾಧಾಬಾಯಿ ಇಷ್ಟು ಬೇಗನೆ ಬಂದುಬಿಟ್ಟರೇ ಎಂದುಕೊಳ್ಳುತ್ತಲೇ ಕದ ತೆರೆದರೆ ಸುಬ್ಬ ರಾಜು ಸೂಟ್‌ಕೇಸ್ ಸಹಿತ ನಿಂತಿದ್ದ. ಮುಖದ ಮೇಲೆ ಪ್ರಯಾಣದ ಆಯಾಸ ಮುದ್ರೆಯೊತ್ತಿತ್ತು. ಮುಗುಳ್ನಗೆಯೊಡನೆ ಒಳಬಂದು "ಹೇಗಿದ್ದಿ ಮಣೀ ?" ಎಂದ.

ಆ ಪ್ರಶ್ನೆಗೆ ಉತ್ತರಿಸಲು ಹೇಸಿತು ಮನಸ್ಸು. ಒಂದು ಗಳಿಗೆ ತಡೆದು "ಈಗ ತಿಂಡಿ ಸರಿ ಮಾಡಲೇ ?" ಎಂದಳು ಅವಳು. ಧ್ವನಿ ಕಾರ್ಯಕಾರಣೋಚಿತವಾಗಿ ಹೊಮ್ಮಿತು.

"ತಿಂಡಿ ಆಗಿದೆ. ಮೊದಲು ಸ್ನಾನ. ಅನಂತರ ಎಲ್ಲಾ."

ಹೃನ್ಮನಗಳು ಥೂತ್ಕರಿಸಿದಾಗಲೇ ಕಾಲುಗಳು ಯಾಂತ್ರಿಕವಾಗಿ ಒಳ ನಡೆದುವು.

"ಬಾಬೂ....ಬಾಬು ಎಲ್ಲಿ ಮಣೀ?"

"ಆಟಕ್ಕೆ ಹೋಗಿದ್ದಾನೆ." ಒಳಗಿನಿಂದಲೇ ಉತ್ತರಿಸಿದಳು ಅವಳು.

ಸಂತೋಷದ ಒಂದೇ ಒಂದು ಮಾತು ಕತೆಯೂ ನಡೆಯಲಿಲ್ಲ. ಅವನು ಸ್ನಾನಕ್ಕೆ ಹೋದ. ಚಹ ತಯಾರಿಸಲು ಒಲೆಗೆ ಸೀರಿಟ್ಟಾಗಲೇ ತಲೆಬಾಗಿಲ ಕರೆಗಂಟೆ ಮತ್ತೆ ಬಾರಿಸಿತು.

ಬಂದವರು ರಾಧಾಬಾಯಿ–ಚಂಪಾ. ಅವರನ್ನು ಆತ್ಮೀಯತೆಯಿಂದ ಸ್ವಾಗತಿಸಿ ಚಹ ತಯಾರಿಸಿಕೊಟ್ಟು ತಾನೊಂದು ಚಹವನ್ನು ತೆಗೆದುಕೊಂಡು ನುಡಿದಳು,

"ನಾನು ಆಫೀಸಿನ ರಜೆಗಳನ್ನು ಉಪಯೋಗಿಸಿಕೊಂಡೇ ಇಲ್ಲ. ನಾಳೆ ನಾಡಿದ್ದು ಎರಡು ದಿನ ರಜೆ ತೆಗೆದುಕೊಳ್ಳೋಣ ಎನಿಸಿದೆ. ನೀವು ಬಿಡುವು ಮಾಡಿಕೊಳ್ಳುವುದಾದರೆ ನಾನು ತೆಗೆದುಕೊಳ್ಳಬಹುದು."

ಇಬ್ಬರೂ ಸಮ್ಮತಿ ನೀಡಿದರು. ಅಷ್ಟರಲ್ಲೇ ಸುಬ್ಬರಾಜು ಸ್ನಾನ ಮುಗಿಸಿ ಹೊರಬಂದ. ಆವನಿಗೆ ಚಹ ನೀಡಿ ಗೆಳತಿಯರೊಂದಿಗೆ ಹೊರಟಳು ಮಣಿಕರ್ಣಿಕಾ.

"ಈವೊತ್ತು ಪೇಟೆಯ ಸಾಲಿನಲ್ಲಿ ಚಂದಾ ಎತ್ತೋಣ. ನಮ್ಮ ವ್ಯಾಪಾರಸ್ಥರ ಉದಾರತೆ ಎಷ್ಟಿದೆ ಎಂಬುದು ಅರ್ಥವಾಗುತ್ತದೆ" ಎಂದಳು ರಾಧಾಬಾಯಿ.

○ ○ ○ ○

ಮನೆಯ ಕೆಲಸವನ್ನು ಲಗುಬಗನೆ ಮುಗಿಸಿ ಪತ್ರಿಕಾವಲೋಕನದಲ್ಲಿ ಮನವಿಟ್ಟು ತಲೆ ಬರಹಗಳ ಮೇಲೆ ಕಣ್ಣಾಡಿಸಿದಳು ಮಣಿಕರ್ಣಿಕಾ. ದೇಶದ ಪ್ರಕ್ಷುಬ್ಧ ಪರಿಸ್ಥಿತಿ ಮನಕ್ಕೆ ಮುಳ್ಳು ಮುರಿಯಿತು. ಸ್ವತಂತ್ರ ಭಾರತದಲ್ಲಿ ಶಾಂತಿ ಸಮೃದ್ಧವಾಗಬೇಕಿತ್ತು. ಅದಕ್ಕೆ ವ್ಯತಿರಿಕ್ತವಾಗಿ ನಡೆಯುತ್ತಿರುವ ಕೊಲೆ–ದರೋಡೆ–ಸುಲಿಗೆ–ಮೋಸ–ಅನೀತಿ–ಅನ್ಯಾಯಗಳ ಸಂವೃದ್ಧಿಯಿಂದ ರಾಷ್ಟ್ರದ ಕೀರ್ತಿಯು ಕಳಸವೇ ಮುರಿದುಬಿತ್ತು. ಇಲ್ಲಿಂದ ಪ್ರಪಂಚಕ್ಕೆ ಹರಿಯುತಿದ್ದ ಆಧ್ಯಾತ್ಮಿಕ ಸಾರ ಸರ್ವಸ್ವಕ್ಕೆ ಮಸಿ ಬಳಿಯುವುದು ಎಂತಹ ಹೇಯ ಪ್ರವೃತ್ತಿ? ಛೀ! ಛೀ! ತೊಡೆಯಲಾಗದ ಅಪಕೀರ್ತಿ...ಎಂದು ತನ್ನಲ್ಲೆ ಮರ್ಮರ ಮರುಗಿದಳು ಮಣಿಕರ್ಣಿಕಾ. ಹೃದಯಕುಂಡ ಭಾರ ಭಾರವಾಯಿತು. ಚಿಂತಾಕ್ರಾಂತತೆಯಲ್ಲಿ ಸ್ವಲ್ಪ ಹೊತ್ತು ಉರುಳಿತು. ಚಿತ್ತ ಭಿತ್ತಿಯಲ್ಲಿ ಪತಿ ಸುಬ್ಬರಾಜು ಮೂಡಿನಿಂತ. ಹಿಂದೆ ಕಾಲೇಜು ಸಹಪಾಟಿಯಾಗಿದ್ದಾಗ ಗೆಳೆಯನಾಗಿ ಬೀರಿದ ಆತ್ಮೀಯ ಸ್ನೇಹ ಸೌರಭ ಪರಿಮಳಿಸಿ ಪ್ರೇಮಮಯ ಜೀವನಕ್ಕೆ ಬಿಗಿದ ಬಗೆ ಸಚಿತ್ರವಾಗಿ ಸುಳಿದು ಹೋಯಿತು ಚಿತ್ತ ಭಿತ್ತಿಯ ಮೇಲೆ. ಆಗ ಅವನ ಜೀವನ ಸರ್ವಾಂಗ ಸುಂದರವಾಗಿದ್ದುದು ನಿಜ. ಅಂದು ಅವನ ಸ್ನೇಹ ಸಹಚರ್ಯದಲ್ಲಿ ಪಡೆದುಕೊಂಡ ಅನುಭೂತಿಯೇ ಬೇರೆ. ಇಂದು ಜೀವನ ಭಾಗ ಪತಿಯಲ್ಲಿ ಪಡೆದುಕೊಂಡ ಜೀವನಾನುಭವವೇ ಬೇರೆ. ವಿಷಯ ಹೃದಯ ದ್ರವ್ಯವನ್ನು ಕಾಣದ ಕೈಗಳಿಂದ ಹಿಸುಕಿತು. ಒಡನೆ ಕಣ್ಣು ಮುಖಗಳಲ್ಲಿ ಚಂದನ ಕಾಂತಿಯೊರೆದಂತೆ ರಂಗುಮೂಡಿತು. ಹೃನ್ಮನಗಳು ಮೌನವಾಗಿ ರೋದಿಸಿದುವು....ನನ್ನ ಜೀವನ ಇಷ್ಟು ಹದಗೆಡುತ್ತೆ ಎಂದುಕೊಂಡಿರಲಿಲ್ಲ ನಾನು. ಈ ಜೀವನ ನೆನೆಸಿ ಕೊಂಡರೇನೇ ಜುಗುಪ್ಸೆ–ದುಮ್ಮಾನಗಳು ಅಂತರಂಗವನ್ನು ಸುಡುತ್ತವೆ. ತಾಪಾನುತಾಪಗಳು ನರನಾಡಿಗಳಲ್ಲಿ ಚಿಲ್ಲನೆ ಹರಿದಾಡಿ ನೆತ್ತರನ್ನು ಕುದಿಸುತ್ತವೆ. ಅವನನ್ನು ದೂರೀಕರಿಸುವುದು ಲೇಸು ಎಂಬುದು ಅಂತ್ಯ ತೀರ್ಮಾನ ಮನದಲ್ಲಿ.

ತಲೆಬಾಗಿಲ ಕರೆಗಂಟೆ ಕರೆ ನೀಡಿತು.

ಕುಕ್ಕೂ ಕುಕ್ಕೂ ಕುಕ್ಕೂ ಕುಕ್ಕೂ.

ಮಣಿಕರ್ಣಿಕಾ ಪತ್ರಿಕೆಯನ್ನು ಟೀಪಾಯಿಯ ಮೇಲಿಟ್ಟು ಕದ ತೆರೆದಳು.

ಬಿರುಗಾಳಿಯಂತೆ ಒಳನುಗ್ಗಿ ಬಂದವನು ಬಾಬು. ಉತ್ಸಾಹದ ಚಿಲುಮೆಯೇ ಆದ ಅವನನ್ನು ಕಣ್ತುಂಬ ನೋಡುತ್ತ "ಇದೇನಪ್ಪಾ ಜೆವತು ಹೋಗಿದ್ದೀಯೇ, ಕೈಕಾಲು ಮುಖ ತೊಳೆದುಕೊ ಊಟ ಮಾಡೋಣ" ಎಂದಳು ನಲ್ಮೆಯಿಂದ.

ಅವನು ಮುಖಬಿಂಬದಗಲಕ್ಕೂ ಹರ್ಷದ ಹೊನಲನ್ನು ಹರಿಸುತ್ತ ನುಡಿದ "ಈವೊತ್ತು ಓಟದಲ್ಲಿ ಚೆಂಡಾಟದಲ್ಲಿ ನಾನೇ ಗೆದ್ದುಬಿಟ್ಟೆ. ನಾಳೆಯಿಂದ ಟೆನ್ನಿಸ್ ಅಭ್ಯಾಸ ಮಾಡುವೆ. ನನಗೊಂದು ಟೆನ್ನಿಸ್ ಬ್ಯಾಟ್ ಬೇಕು."

"ಆಗಲಿ, ಸಂಜೆ ಹೋಗಿ ತರೋಣ."

ಅವನು ಓಡುತ್ತಲೇ ಹೋಗಿ ಮುಖಮಜ್ಜನ ಮಾಡಿ ಬಂದ. ಇಬ್ಬರೂ ಊಟಕ್ಕೆ ಕುಳಿತರು. ತಾಯಿ ಮಗನ ಪ್ರೇಮದ ಮಧ್ಯೆ ಹೊತ್ತು ಸಾನಂದದಿಂದ ಉರುಳಿತು.

ಬಾಬು ಪಟಪಟ ಮಾತುಗಳಲ್ಲಿ ಹೇಳಿದ,

"ಅಮ್ಮಾ, ಬಾಳಿಗೆ ಹೊಂದಿಕೊಳ್ಳದವರಿಗಾಗಿ ಚಿಂತಿಸುವುದು ಏನೇನೂ ಸರಿಯಲ್ಲ. ನಿಮಗೇಕೆ ಚಿಂತೆ? ಸುಮ್ಮನಿದ್ದು ಬಿಡಿ. ಅಣ್ಣ ಹೇಗಾದರೂ ಇರಲಿ."

ಅದೇ ಸರಿಯಾದ ಮಾರ್ಗ. ನಾನು ಅನುಸರಿಸುತ್ತಿರುವುದು ಅದನ್ನೇ."

"ಅಂದ ಮೇಲೆ ಚಿಂತೆಯೇಕೆ?"

"ಚಿಂತೆಯೆಂಬುದು ಕಳೆದು ಹೋಗುತ್ತಿರುವ ಮಾನ–ಗೌರವಗಳಿಗಾಗಿ."

"ನೀವು ಸರಿಯಾಗಿ ನಾಲ್ಕು ಮಾತು ಹೇಳಿ ನೋಡಿ."

"ಹೇಳುವುದಿರಲಿ, ಮಾತಾಡುವುದೂ ಬೇಡ ಎನಿಸುತ್ತೆ."

"ಹಾಗೆಂದರೆ ಹೇಗೆ? ನೀವು ಸದವಕಾಶವನ್ನು ಕಳೆದುಕೊಳ್ಳುತ್ತೀರಿ."

"ಅವಕಾಶದ ಕತೆ ಒತ್ತಟ್ಟಿಗಿರಲಿ, ಜೀವನದ ಆಸ್ತೆಯನ್ನೇ ಕಳೆದುಕೊಂಡಂತಾಗಿದೆ ಬಾಬೂ. ಈಗೀಗ ಮನಸ್ಸಿಗೆ ಬಲೂ ಜಿಗುಪ್ಸೆ."

"ಮರಳಿ ಮರಳಿ ಯತ್ನವ ಮಾಡಿದರೆ ಪ್ರತಿಫಲ ಒಳ್ಳೆಯದಾದಿ ತೇನೋ...."

"ಅಡ್ಡಹಾದಿ ಹಿಡಿದ ಮೇಲೆ ಮುಗಿಯಿತು. ಕೆಟ್ಟಬುದ್ಧಿ ಸುಟ್ಟರೂ ಹೋಗುವುದಿಲ್ಲ ಬಿಡು."

"ಹಿಂದೆ ಯೌವ್ವನದಲ್ಲಿದ್ದಾಗ ಸರಿಯಾಗಿದ್ದವನು ಈ ಮಧ್ಯಕಾಲವಲ್ಲಿ ಅಡ್ಡದಾರಿ ಹಿಡಿದುದು ಎಂತಹ ನಾಚಿಕೆಗೇಡು? ಅತೀ ಕುಡಿತ ಗತಿಗೆಡಿಸಿತು."

ಬಾಬು ಸ್ವಲ್ಪ ಹೊತ್ತು ಮಾತಾಡಲಿಲ್ಲ. ಮನಸ್ಸು ಮುದುಡಿತು. ಗಂಭೀರಭಾವದಿಂದ ಸುಮ್ಮನೆ ಕುಳಿತ. ತಲೆ ಬಾಗಿಲ ಕರೆಗಂಟೆ ಕರೆ ನೀಡಿತು. ಬಾಬು ಎದ್ದು ಹೋಗಿ ಬಾಗಿಲು ತೆಗೆದ. ಒಳಬಂದವನು ಸುಬ್ಬರಾಜು.

"ಬಾಬೂ, ಶಾಲೆಗೆ ಹೋಗಲಿಲ್ಲವೇ ?"

"ಈವೊತ್ತು ರಜೆ...." ಅಷ್ಟೆಂದವನೇ ತನ್ನ ಕೊಠಡಿಗೆ ಹೋಗಿ ಪುಸ್ತಕ ತೆಗೆದುಕೊಂಡ. ಅಸಮಾಧಾನದ ಝರಿ ಮೈಯೆಲ್ಲಾ ಜರ್‍ರನೆ ಹರಿದಾಡಿತು.

ಮಣಿಕರ್ಣಿಕಳ ಕೈಗಳಿಗೆ ಬಿಡುವಿಲ್ಲ. ಊಟದ ಮೇಜನ್ನು ಅಣಿಗೊಳಿ ಸುವುದರಲ್ಲಿ ನಿಮಗ್ನೆ. ಬಾಬು ಓಡಿಬಂದು ಅನ್ನ ಹುಳಿ ಪಲ್ಯಗಳನ್ನು ಒಯ್ದು ಮೇಜಿನ ಮೇಲೆ ಇಟ್ಟು ಅಪ್ಪನನ್ನು ಊಟಕ್ಕೆ ಕರೆದ. ಮೂವರೂ ಕುಳಿತು ಊಟಕ್ಕೆ ಕೈ ಹಚ್ಚಿದರು. ಪ್ರೇಮದ ಮಾತುಕತೆಯಾಗಲೀ ಸಂತೋಷದ ಸವಿನುಡಿಗಳಾಗಲೀ ಒಂದೂ ಹೊರ ಬೀಳಲಿಲ್ಲ. ಯಾಂತ್ರಿಕವಾದ ಕ್ರಿಯೆ ಯೊಂದಿಗೆ ಒಳಗುದಿ ಯುದ್ಧವನ್ನು ಅದುಮಿ ಹಿಡಿದುಕೊಂಡೇ ಊಟದ ಕಾರ್ಯವನ್ನು ಮುಗಿಸಿದಳು ಮಣಿಕರ್ಣಿಕಾ. 'ಸಾಕು-ಬೇಕು' ಇಷ್ಟರಲ್ಲೇ ಗಳಿಗೆ ಗಳಿಗೆಗಳು ಉರುಳಿದುವು. ಬಾಬು ಮಾತ್ರ ತಾಯಿಯೊಂದಿಗೆ ಅದೂ-ಇದೂ ಹೇಳಿ-ಕೇಳಿ ರಮಿಸುತಿದ್ದ. ಎಳೆ ನಗುವಿನ ಲಹರಿ ಚಿಮ್ಮಿ ಹರಿಯು ತಿತ್ತು ಎದೆಯಾಳದಿಂದ.

"ನನ್ನ ಗೆಳೆಯ ರಾಮುಗೆ ಯಾವ ಆಟವೂ ಇದುವರೆಗೆ ಕೈಗೂಡಿ ಗೆಲ್ಲುವ ಲಭಿಸಲಿಲ್ಲ, ಚೆನ್ನಾಗಿ ಆಡುತ್ತಾನೆ. ಉತ್ಸಾಹ ತುಂಬಾ ಇದೆ. ಗೆಲ್ಲುವ ಆಸೆ ನೂರ್ಮಡಿಯಿದೆ. ಸಾಸಿಗನೂ ಹೌದು. ಆದರೆ, ಅದೃಷ್ಟ ಖೋತ. ಇದಕ್ಕೇ

ನೆನ್ನೋಣೀ ? ಇನ್ನೇನು ಗೆಲ್ಲಬೇಕು ಎನ್ನುವುದರಲ್ಲೇ ಸೋಲುತ್ತಾನೆ. ಅವನ ಗೋಳು ಹೇಳತೀರದು ಪಾಪ, ರಾಮು !"

"ಅವನಿಗೆ ದಿನವೂ ಚೆನ್ನಾಗಿ ದೇವರ ಧ್ಯಾನ ಮಾಡಲು ಹೇಳು" ಎಂದಳು ತಾಯಿ.

"ಹಾಗಲ್ಲ, ಅವನಿಗೆ ದಿನವೂ ವಿಸ್ಕಿ ಕುಡಿಯಲು ಹೇಳು!" ಎಂದ ಸುಬ್ಬರಾಜು, ವಿಷಯ ಹಾಸ್ಯ ಪ್ರಧಾನವಾಗಿಯಾದರೂ ಗಂಭೀರವಾಗಿ ಹೊರಬಿತ್ತು.

"ಅದೆಲ್ಲಾ ನಿಮ್ಮಂತಹವರಿಗೆ. ನಮಗೇಕೆ?"

ಬಾಬು ಕೈ ತೊಳೆಯಲು ಎದ್ದು ಹೋದ.

o o o o

ನಾನು ಆಫೀಸಿನಿಂದ ಹೊರ ಹೊರಟಾಗಲೇ ಮಣಿಕರ್ಣಿಕಾ ತನ್ನ ಬ್ಯಾಗನ್ನು ಭುಜಕ್ಕೆ ತಗಲಿಸಿ ಕೊಂಡುದುದನ್ನು ಕಂಡೆ. ಅವಳ ಆಚರಣೆಯಲ್ಲಿ ಅವಸರವಿತ್ತು. ಮುಖಬಿಂಬದಲ್ಲಿ ಏನೋ ಒಂದು ಬಗೆಯ ಭಾವ ನಿರೂಪಣೆಯ ಮುದ್ರೆ ದಪ್ಪದಪ್ಪ ಅಕ್ಷರಗಳಲ್ಲಿ ಮೂಡಿದಂತಿತ್ತು. ಅವಸರದಿಂದಲೇ ಹೆಜ್ಜೆ ತೆಗೆದಳು. ಇತರ ಸಹ ಸಂಪಾದಕರು ಹೊರಡುತ್ತಲಿದ್ದರು. ಸಾಲು ಮೆಟ್ಟಿಲುಗಳನ್ನು ಇಳಿಯುತ್ತಲಿದ್ದಾಗ ನಾನು ಕೇಳಿದೆ "ಸುಬ್ಬು ಇದ್ದಾನೆಯೇ?"

"ಕಳೆದವಾರ ಮನೆಯಲ್ಲಿದ್ದ. ಈಗ ಮತ್ತೆ ದೆಹಲಿ ಆಗ್ರಾಗಳ ಕಡೆ ಹೋಗಿದ್ದಾನೆ."

"ಬರುವುದು ಯಾವಾಗ?"

"ಇನ್ನೊಂದು ವಾರದಲ್ಲಿ...."

"ಬಹುಶಃ ನಿಮಗೆ ಪೂರಾ ಬೇಸರವಿರಬಹುದು..."

"ಏನು ಮಾಡೋಣ ಹೇಳಿ?" ದನಿಯಲ್ಲಿ ಲಘು ಕಂಪನ ಸಂಭವಿಸಿತು. ತೋರಗೊಡದೆ ದಡದಡನೆ ಮೆಟ್ಟಿಲಿಳಿದಳು.

"ನಾನವನಿಗೆ ಈ ಉದ್ಯೋಗವನ್ನು ಬಿಟ್ಟು ಬೇರೆ ಉದ್ಯೋಗ ಹಿಡಿದರೆ ಒಳ್ಳೆತು ಎಂಬ ಸೂಚನೆ ಕೊಟ್ಟಿದ್ದೆ. ಅವನು ಮನಸ್ಸು ಮಾಡಲಿಲ್ಲ."

"ನಿಮ್ಮ ಮಾತು ಕೇಳದ ಮೇಲೆ ಇನ್ಯಾರ ಮಾತು ಕೇಳಬಹುದು ?"

ನಾನು ಸುಮ್ಮನೆ ತಲೆಯಾಡಿಸಿದೆ ಮಾತಾಡಲಿಲ್ಲ. ಕೆಳಗಣ ಅಂಗಣಕ್ಕೆ ಬಂದನಂತರ ನಾನು,

"ಅವನ ರೀತಿ ಹೇಗೇ ಇರಲಿ, ನೀವದನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡಿ. ಆದರಿಂದ ನಿಮ್ಮ ಶರೀರ ಸ್ಥಿತಿಯ ಮೇಲೆ ಕೆಟ್ಟ ಪರಿಣಾಮ ಉಂಟಾಗ ಬಹುದು...."

ಅವಳ ಮೂಕ ಮೌನವೇ ಉತ್ತರ ಹೇಳಿತು.

"ಎಲ್ಲರಿಗೂ ಅವರವರದ್ದೇ ಆದ ಅಭಿಪ್ರಾಯಗಳಿರುತ್ತವೆ, ಅಂತಹವ ರನ್ನು ನಿಮ್ಮ ಮಾರ್ಗ ಬದಲಿಸಿ ಎನ್ನುವುದು ಅಷ್ಟೇನೂ ಸಮಂಜಸವಲ್ಲ..."

ಮಾತು ಮುಗಿಯುವುದರೊಳಗಾಗಿ ಆಟೋ ಸಿಕ್ಕಿತು ಅವಳು ಹೊರಟಳು.

ರಾಧಾಬಾಯಿಯೊಂದಿಗೆ ಮಣಿಕರ್ಣಿಕಾ ಚಂದಾ ಹಣಕ್ಕಾಗಿ ಸುಬ್ರ ಮಣ್ಯಂ ಎಂಬ ಭಾರೀ ಶ್ರೀಮಂತ ವ್ಯಕ್ತಿಯ ಮನೆಗೆ ಹೊರಟಳು. ಆಟೋ ದಿಂದ ಇಳಿದು ಗೇಟಿನ ಬಳಿಗೆ ಹೋದಾಗ ಮುಂಬಾಗಿಲು ಮುಚ್ಚಿದ್ದುದು ಕಣ್ಣಿಗೆ ಬಿತ್ತು. ಆ ಬೃಹದ್ ಮಹಲನ್ನು ನೋಡಿದರೆ ಅರಮನೆಯಷ್ಟೇ ಮಿಗಿಲು. ನಾಯಿಗಳಿರಬಹುದೇನೋ ಎಂಬ ಯೋಚನೆಯಿಂದ ಸ್ವಲ್ಪ ಹೊತ್ತು ಅಲ್ಲಿಯೇ ನಿಂತರು. ಮನೆಯ ಮುಂದಿನ ಹೆಮ್ಮರದ ಮೇಲೆ ಹತ್ತಾರು ಕಾಗೆಗಳು ಕಲೆತಿದ್ದು ಕರ್ಕಶ ದನಿಯಲ್ಲಿ ಕೂಗುತ್ತ ಗದ್ದಲವೆಬ್ಬಿಸಿ ದ್ದುವು. ಕೊಂಬೆಯಿಂದ ಕೊಂಬೆಗೆ ಮರದಿಂದ ಮರಕ್ಕೆ ಹಾರಾಡುತ್ತ ಅವು ಚೀರಿಡುವ ರೀತಿ ತುಂಬಾ ಕಿರಿಕಿರಿಯಾಗಿತ್ತು ಮನಃಪ್ರಾಣಗಳಿಗೆ. ಆ ಗದ್ದಲ ವನ್ನು ಕೇಳಿ ಕಿನಿಸಿಗೆಗೊಂಡ ಮನೆಯೊಡತಿ ಹಠಾತ್ತನೆ ಬಾಗಿಲನ್ನು ತೆರೆದು ಹೊರಬಂದು ಆ ಕಾಗೆಗಳಿಗೆ ಗದರಿಸಿದಳು "ಷ್ಹೂ....ಷ್ಹೂ..."

ಆದರೆ ಅವುಗಳು ಗಮನಿಸಬೇಕಲ್ಲ? ಮತ್ತೆ ಮೊದಲಿನಂತೆಯೇ ಕೂಗು ತ್ತಿವೆ ಎಡೆಬಿಡದ ಪರಿಯಲ್ಲಿ.

ಅವಳು ಮತ್ತೆ ಕೈಯೆತ್ತಿಹೊಡೆಯುವಂತೆ ಬೀಸಿದಳು "ಷ್ಲೊ...ಷ್ಲೊ!"

ಅವು ಕಿಂಚಿತ್ತೂ ಗಮನಿಸದೆ ಕೂಗುತ್ತಲೇ ಇದ್ದುವು ರಾಜಾರೋಷವಾಗಿ. ಅವಳು ತೀರ ಅಸಹನೆಯಿಂದ ಇತ್ತ ಇರುಗಿದಾಗ ಬಾಗಿಲ ಬಳಿ ನಿಂತ ಹೆಂಗಳೆ ಯರು ಕಂಡು ಬಂದರು. ಒಂದು ಕ್ಷಣ, ಒಂದೇ ಒಂದು ಕ್ಷಣ ಎವೆಯಿಕ್ಕದೆ ನೋಡಿ "ಯಾರು ನೀವು? ಏಕೆ ಬಂದಿದ್ದೀರಿ?" ಎಂದಳು ಮದರಾಸಿ ಭಾಷೆಯ ಉಚ್ಚಾರಣೆಯಲ್ಲಿ. ಉಟ್ಟುದುದು ಮದರಾಸೀ ಉಡಿಗೆ-ತೊಡಿಗೆ. ಸ್ವಲ್ಪ ಕಪ್ಪು ಬಣ್ಣ. ಅಪಾರ ಚಿನ್ನಾಭರಣಗಳ ರಾಶಿ ಮೈಮೇಲೆ. ಮದರಾಸೀತನ ಪ್ರತಿ ರಕ್ತದ ಕಣದಲ್ಲೂ ತುಳುಕುತ್ತಿರುವಂತೆ ತೋರುವ ಸ್ವಭಾವ.

"ನಾವು ಸುಬ್ರಮಣ್ಯಂ ಅವರನ್ನು ನೋಡಬೇಕಾಗಿತ್ತು."

"ಅವರು ಹಳ್ಳಿಗೆ ಹೋಗಿದ್ದಾರೆ, ಇನ್ನೇನು ಇಷ್ಟರಲ್ಲೇ ಬರಬಹುದು. ಇಲ್ಲೇ ವರಾಂಡದಲ್ಲಿ ಕುಳಿತುಕೊಳ್ಳುವಿರಾ?"

"ಆಗಬಹುದು."

ಅವಳು ಆಶ್ಚರ್ಯ ವಿಸ್ಮೃತನಯನಗಳಿಂದ ನೋಡುತ್ತ ವಿಚಾರ ಶೀಲ ಳಾದಂತೆ ಗಂಭೀರ ಗತಿಯಲ್ಲಿ ಅವರನ್ನು ಸ್ವಾಗತಿಸಿ ಮುಂಬಾಗಿಲನ್ನು ಮುಚ್ಚಿ ಕೊಂಡು ಒಳಹೋದಳು.

ವರಾಂಡದಲ್ಲಿ ಧೂಳೀದೂಸರಿತವಾದ ಸಾಲಾಗಿನ ಕುರ್ಚಿಗಳು. ಭವ್ಯ ಮಹಲಿನಲ್ಲಿ ಸ್ವಚ್ಛತೆಯ ಹೆಸರಿಲ್ಲ. ಆ ಕುರ್ಚಿಗಳ ಮೇಲೆ ಕುಳಿತರೆ ತಮ್ಮ ಮಡಿ ಬಟ್ಟೆಗಳು ಮಾಸುವುದಂತೂ ನಿಜ. ಕುಳಿತುಕೊಳ್ಳುವುದು ಹೇಗೆ ಎಂಬ ಪ್ರಶ್ನೆ ಇಬ್ಬರಿಗೂ.

ಕಾಗೆಗಳ ಗದ್ದಲ ನಡೆದೇ ಇತ್ತು, ಕಿವಿಗೆ ಕರ್ಕಶವಾಗಿ ಮತ್ತೆ ಹೊರ ಬಂದಳು ಅದೇ ಗೃಹಿಣಿ.

"ಇವೇನು ಇಷ್ಟು ಗದ್ದಲ ಮಾಡುತ್ತಿವೆ? ಷ್ಲೊ...ಷ್ಲೊ!"

ಅವು ಅವಳ ಬೆದರಿಕೆಗೆ ಜಗ್ಗಲಿಲ್ಲ. ಒಂದೇ ಸಮನೆ ಗದ್ದಲ ಹೂಡಿವೆ. ಅವಳೊಮ್ಮೆ ಇವರತ್ತ ನೋಡಿ ಒಳ ಹೋಗಿ ಕದ ಮುಚ್ಚಿಕೊಂಡಳು. ಕೆಲವು ಗಳಿಗೆಯೊಳಗಾಗಿ ಮುದುಕಿಯೊಂದು ಬಾಗಿಲನ್ನು ಸ್ವಲ್ಪ ಮಾತ್ರ ತೆರೆದು ಇವರತ್ತ ನೆಟ್ಟ ದೃಷ್ಟಿಯಿಂದ ನೋಡಿ ತೆಕ್ಕನೆ ಕದ ಮುಚ್ಚಿಕೊಂಡಿತು. ಹಿಂದೆಯೇ ಇನ್ನೊಬ್ಬ ಸ್ತ್ರೀ, ಮಗುವಿನೊಂದಿಗೆ ಬಂದು ಕಿಟಕಿಯಲ್ಲಿ ಇಣಿಕಿ ನೋಡಿದಳು. ಮತ್ತೆ ಮತ್ತೆ ನಡೆಯಿತು ಇಣಿಕಿಣಿಕಿ ನೋಡುವ ಮಹಾ ಕಾರ್ಯ.

ಒಳಗಡೆಯಿಂದ ಅಜ್ಜಿಯ ಧ್ವನಿ "ನೋಡಿದ್ಯಾ, ಸುಬ್ರಮಣ್ಯಂ ಏಕೆ ಹೀಗಿದ್ದಾನೆ ಎಂಬುದು ಅರ್ಥವಾಯಿತೇ ?"

"ಹೌದಪ್ಪಾ....ಎಂತೆಂತಹ ಸೌಂದರ್ಯ ರಾಣಿಯರು ?"

"ಈ ಬಣ್ಣದ ಬೊಂಬೆಗಳಲ್ಲವೇ ಮರುಳು ಮಾಡುವುದು ಸಭ್ಯ ಪುರುಷರನ್ನು?"

ಕರ್ಣ ಕಠೋರವಾದ ಆ ಮಾತಾಳಿಗಳು ಮನಕ್ಕೆ ಶೂಲವಾದರು. ಆ ತಕ್ಷಣವೇ ಇಬ್ಬರೂ ದಡದಡನೆ ಮೆಟ್ಟಿಲಿಳಿದು ಹೊರಟುಬಿಟ್ಟರು ಅಲ್ಲಿಂದ.

ಂ ಂ ಂ ಂ

ಮಣಿಕರ್ಣಿಕಾ ಆಫೀಸಿನ ಕಡೆ ಸುಳಿಯಲಿಲ್ಲ. ದೀರ್ಘ ರಜೆ ತೆಗೆದು ಕೊಂಡಿದ್ದಾಳೆಂದು ತಿಳಿಯಿತು. ಅಂಗವಿಕಲರ ಶಾಲೆ ತೆಗೆಯುವುದರಲ್ಲಿ ನಿರತ ಳಾದ ಅವಳಿಗೆ ತೀವ್ರತರವಾದ ಕೆಲಸ. ಶಾಲೆಯಲ್ಲಿ ಊಟ ವಸತಿ ಸೌಕರ್ಯ ವನ್ನೂ ಹೊಂದಿಸಬೇಕಾದ್ದರಿಂದ ಪ್ರಯತ್ನ ಅಗಾಧ. ಎಷ್ಟು ಮಾಡಿದರೂ ಮುಗಿಯದ ಸಾಧನಾವೃತ್ತಿ. ಮಹಿಳೆಯರದೇ ಕಾರ್ಯಭಾರ.

ಆಫೀಸಿನಿಂದ ಹೋಗುವಾಗ ಒಮ್ಮೆ ಆ ಶಾಲೆಯನ್ನು ನೋಡಲೆಂದು ಹೋದೆ. ಮಣಿಕರ್ಣಿಕಾ ಅದೇ ತಾನೇ ಹೊರಟು ಹೋಗಿದ್ದಳು. ಒಳಗೆಲ್ಲಾ ಸುತ್ತಾಡಿದೆ. ಸಾಧ್ಯವಾದಷ್ಟು ಸುವ್ಯವಸ್ಥೆಯಿಂದ ಕೂಡಿತ್ತು. ಸುಮಾರು ನಲವತ್ತೈವತ್ತು ಮಕ್ಕಳಿದ್ದಾರೆ. ಎಲ್ಲರೂ ಚಿಕ್ಕವರೇ. ಅವರಿಗೆಲ್ಲಾ ನಾನಾ

ಬಗೆಯ ಉದ್ಯೋಗ ತರಗತಿಗಳು ಹಲವು. ತರಗತಿಗಳು ಮುಚ್ಚಿದುದರಿಂದ ಮಕ್ಕಳು ಆಟದಲ್ಲಿ ಕೂಡಿದ್ದರು.

ಅಲ್ಲಿನ ವ್ಯವಸ್ಥಾಪಕಿಗೆ ವಂದನೆ ಸಲ್ಲಿಸಿ ನಾನು ಹೊರಟೆ. ಆನಂದಪೂರ್ತ ಮನಸ್ಸು ಮುಗಿಲು ಮುಟ್ಟಿತು. ನಾನು ಅವಳ ಕಾರ್ಯ ನಿರ್ವಹಣೆಯನ್ನು ಮನದಲ್ಲೇ ಮೆಲುಕು ಹಾಕಿದೆ.

ಅದೇ ನೇರಕ್ಕೆ ಯೋಚಿಸಿದರೆ ಪತಿ ಸುಬ್ಬರಾಜು....?

ಈ ಕಟು ಸಮಾಜದ ದೋರಣೆ ರೀತಿ ನೀತಿಗಳು ಬೌದ್ಧಿಕ ಸ್ತರವನ್ನೂ ಅರ್ಥಮಾಡಿಕೊಳ್ಳದಲ್ಲ ಎನಿಸಿ ಮೂಕ ಮೌನಗತಿಯಲ್ಲಿ ರೋದಿಸಿತು ಮನಸ್ಸು. ದುಃಖತಾಪದ ಕಡಲಾಯಿತು ಹೃದಯ. ಏನನ್ನೂ ಯೋಚಿಸಲಾರದೇ ಹೋಯಿತು ಚಿತ್ತಶ್ರೀ.

ಮೂರು ದಿನಗಳ ನಂತರ ಬಸ್ಸು ನಿಲ್ದಾಣದಲ್ಲಿ ಮಣಿಕರ್ಣಿಕಳ ಭೇಟಿ ಯಾಯಿತು ನನಗೆ. ಇನ್ನೂ ಬಸ್ಸು ಬಂದಿರಲಿಲ್ಲವಾಗಿ ಕಾಯುತ್ತಿದ್ದಳು ಅವಳು.

“ಹೇಗಿದ್ದೀರಿ ? ನಿಮ್ಮನ್ನು ನೋಡದೆ ತುಂಬಾ ದಿನಗಳಾದುವು ?”

“ಮದರಾಸಿಗೆ ಹೋಗಿದ್ದೆ ಹಣ ಸಂಗ್ರಹಕ್ಕಾಗಿ. ಅಂತೂ ಶಾಲೆ ತೆರದಿದ್ದಾಯ್ತು. ಇದರ ಹೊಣೆಗಾರಿಕೆ ಅಪಾರ. ಕಣ್ಣಿದ್ದೂ ಕುರುಡು ನಮ್ಮ ಸರಕಾರ. ಅದರ ಕೈ ಯಾವತ್ತೂ ಮೊಟಕೆ.”

“ನಿಜ...”

“ಅಷ್ಟು ಮಾತ್ರವಲ್ಲ, ಬೌದ್ಧಿಕದಾರಿದ್ರ್ಯ ದಯಾ ದಾರಿದ್ರ್ಯಗಳ ಒಕ್ಕೂಟ. ಎಲ್ಲಾ ಕ್ಷೇತ್ರಗಳಲ್ಲೂ ಇದೇ ಎಲ್ಲಾ ಪ್ರಗತಿಗೂ ಉರುಳು.”

ನಾನು ಚಿಂತಾಪರವಶನಾಗಿ ಕೇಳಿದೆ “ಸುಬ್ಬು ಇದ್ದಾನೆಯೇ?”

“ಇದ್ದಾನೆ....” ವಿಷಾದ ವಾಣಿಯಲ್ಲಿ ನುಡಿದ ಅವಳು ಉಗುಳು ನುಂಗಿ ಮುಂದುವರಿದಳು “ಈಗ ಅವನ ವಿಚಾರ ನನಗೊಂದು ಉರುಳು. ಜಾಪಿರಾತಿನಿಂದ ಫೋಟೋಗ್ರಫಿ ಫೋಟೊಗ್ರಫಿಯಿಂದ ಹೆಣ್ಣುಗಳ ಚಟ–ಕುಡಿತ.

ಮೈಯಲ್ಲಿ ಶಕ್ತಿ ಇರುವಾಗ ಏನೂ ಅರ್ಥವಾಗುವುದಿಲ್ಲ ಬಿಡಿ. ಸಧ್ಯ ವಿದೇಶ ಪರ್ಯಟನೆ ಇದೆ. ಇಂಥವರಿಗೆ ಅಲ್ಲಿ ಎಲ್ಲವೂ ಸರಾಗ. ಏಯ್ಡ್ಸ ಬಂದರೆ ಆಶ್ಚರ್ಯವಿಲ್ಲ."

ನಾನು ಏನಾದರೂ ಹೇಳೋಣವೆಂದರೆ ಮಾತೇ ಹೊರಡಲಿಲ್ಲ.

o o o o

ಆಫೀಸು ಮುಗಿದನಂತರ ಹೊರಟೆ. ಸ್ವಲ್ಪದೂರ ಪಯಣಿಸಿದ ಬಳಿಕ ಕಬ್ಬನ್ ಪಾರ್ಕಿನ ಮೂಲಕ ಹಾದು ಹೋಗುವಾಗ ವಾಯುವಿಹಾರದಲ್ಲಿ ತೊಡಗಿದ್ದ ಸುಬ್ಬು ದೃಷ್ಟಿಗೆ ಬಿದ್ದ. ನಾನು ಬೈಕ್ ನಿಲ್ಲಿಸಿದೆ. ಅಂದು ನಾನು ನೋಡಿದ್ದ ಹುಡುಗಿಯೂ ಅವನೊಂದಿಗೆ ಇದ್ದಳು. ಅವಳು ನನ್ನನ್ನು ನೋಡುತ್ತಲೂ ಪದಚಾರಣ ಮಾಡುವ ನೆವದಲ್ಲಿ ಅಲ್ಲಿಂದ ಸರಿದು ಹೋದಳು. ನಾವು ಪರಸ್ಪರ ಹಸ್ತಲಾಘವ ಪಡೆದುಕೊಂಡ ನಂತರ ಕೇಳಿದೆ,

"ಹೇಗಿದ್ದೀ ? ಬಹಳ ದಿನಗಳಿಂದ ಕಾಣಿಸಲಿಲ್ಲ ?"

"ಓ ಫೈನ್! ನೀವೆಲ್ಲಾ ಹೇಗಿದ್ದೀರಿ?" ಮರು ಪ್ರಶ್ನೆ ಹಾಕಿದ ಅವನು.

"ಹೇಗಿದೆ ನಿನ್ನ ಬಿಜಿನೆಸ್ ?"

"ಚೆನ್ನಾಗಿದೆ....ನಾನು ನಾಡಿದ್ದು ವಿದೇಶ ಪ್ರವಾಶ ಹೋಗುತ್ತಿರುವೆ. ಚೀನಾ, ಜಪಾನ್, ಅಮೆರಿಕಾಗಳಿಗೆ ಭೇಟಿ ಕೊಡುವೆ."

"ಎಷ್ಟು ದಿನದ ಪ್ರೋಗ್ರಾಂ ?"

"ಬಹುಶಃ ಆರು ತಿಂಗಳಾಗಬಹುದು."

"ಅಲ್ಲೆಲ್ಲಾ ಸ್ವಲ್ಪ ಸಂಯಮದಿಂದ ಇರಪ್ಪಾ. ಮುಖ್ಯವಾಗಿ ನಿನ್ನ ಆರೋಗ್ಯದ ಮೇಲೆ ಯಾವ ದುಷ್ಪರಿಣಾಮವಾಗದಂತೆ ನೋಡಿಕೊ."

ಅವನು ನಕ್ಕುಬಿಟ್ಟ. ಅಲ್ಲಿಗೆ ಮುಗಿಯಿತು ಭೇಟಿಯ ಪ್ರಕರಣ. ನಾನು ಹೊರಟೆ.

ಬಹಳ ದಿನಗಳ ನಂತರ ಸುಬ್ಬರಾಜು ವಿದೇಶದಲ್ಲಿ ತೀರಿಕೊಂಡ ವಿಚಾರ ತಿಳಿದುಬಂತು. ಗಾಳಿ ಸುದ್ದಿಯಾಗಿ ಹರಡಿದ ಆ ವಿಷಯವನ್ನು ನಂಬಬೇಕೋ ಬಿಡಬೇಕೋ ತಿಳಿಯಲಿಲ್ಲ.

ಸಂಪಾದಕ ಮಂಡಳಿಯಲ್ಲಿ ಒಮ್ಮೆ ನಾನು ವಿಷಾದವನ್ನು ವ್ಯಕ್ತಪಡಿಸಿದಾಗ ಮಣಿಕರ್ಣಿಕ ಒಂದೇ ಮಾತಿನಲ್ಲಿ 'ನಿಶ್ಚಿಂತೆ' ಎಂದುಬಿಟ್ಟಳು.

— ० —

ಆದರ್ಶ

೧೩

ಪರೋಪಕಾರಾರ್ಥಂ...

ನಾನು ಈ ಊರಿಗೆ ಬಂದು ಎರಡು ತಿಂಗಳುಗಳೇ ಉರುಳಿ ಹೋದುವು. ಅವು ಹೇಗೆ ಬಂದುವೋ ಹಾಗೆಯೇ ನಿರ್ಗಮಿಸಿದುವು ನನ್ನ ಅವಗಾಹನೆಗೆ ಬಾರದಷ್ಟು ಸುಲಭವಾಗಿ.

ಚಂದ್ರಾಪುರ ನನ್ನ ಸ್ವಂತ ಊರೇನೂ ಅಲ್ಲ. ಹಿಂದೆ ನಾನಿಲ್ಲಿ ಏಳೆಂಟು ವರ್ಷಗಳಿದ್ದೆ ಸರ್ಕಾರಿ ಸರ್ವೀಸಿನಲ್ಲಿದ್ದಾಗ. ಇಲ್ಲಿನ ವಾತಾವರಣಕ್ಕೆ ಮತ್ತು ಪ್ರಕೃತಿಯ ಸೌಂದರ್ಯಕ್ಕೆ ಮನ ಸೋತಿದ್ದೆ. ಆಗಲೇ ಅಗ್ಗವಾಗಿ ಒಂದು ಮನೆಯು ದೊರಕಿತು. ನಿವೃತ್ತ ಜೀವನಕ್ಕೆಂದು ಕೊಂಡುಕೊಂಡು ಅದರಲ್ಲೇ ವಾಸ್ತವ್ಯ ಹೂಡಿದೆ. ನಂತರ ಇಲ್ಲಿಂದ ಮಂಗಳೂರಿಗೆ ವರ್ಗವಾದಾಗ ನನ್ನ ಗೆಳೆಯನಿಗೆ ಬಾಡಿಗೆ ಕೊಡುವ ಪ್ರಸಂಗ ಬಂತು. ದಯಾವಂತನಾದ ಅವನು ನನ್ನ ಸಮಯಕ್ಕೆ ಸರಿಯಾಗಿ ಮನೆಯನ್ನು ಬಿಟ್ಟುಕೊಟ್ಟುದುದು ನನ್ನ ಪುಣ್ಯ. ಸುಣ್ಣ ಬಣ್ಣ ಮಾಸಿದ್ದು ದುರಸ್ತಿಯ ಅಗತ್ಯವು ಇತ್ತು ನಮ್ಮ ಮನೆಗೆ.

ನಾವು ಒಳಗಡೆ ಇದ್ದುಕೊಂಡೇ ದುರಸ್ತಿಯ ಕೆಲಸ ಹಿಡಿಸದೆ ವಿಧಿಯಿರಲಿಲ್ಲ. ಅದರಿಂದ ಸ್ವಲ್ಪ ತ್ರಾಸವೇ ಉಂಟಾಯಿತು ಎಂದರೆ ತಪ್ಪಲ್ಲ. ಸುಣ್ಣಬಣ್ಣಗಳ ಘಾಟು ಮತ್ತು ಧೂಳು ಕುಡಿದು ನೆಗಡಿ ಕೆಮ್ಮು ಮೈಕೈ ನೋವು ಈ ಬಗೆಯ ಅನಾರೋಗ್ಯ ಮೂಡಿತು ಮೈಯಲ್ಲಿ. ಇಂದಿಗೆ ಒಳಗಣ ಕೆಲಸ ಮುಗಿಯಿತು. ನಾಳೆ ವೈದ್ಯರನ್ನು ನೋಡದೆ ಗತಿಯಿಲ್ಲ.

ಅದೇ ಯೋಚನೆಯಲ್ಲಿ ಸಂಜೆಯ ವಿಹಾರಕ್ಕೆ ಒಬ್ಬನೇ ಹೊರಟೆ. ಸಮೀಪದಲ್ಲಿ ಮಕ್ಕಳ ಆಟದ ಮೈದಾನ. ಅಲ್ಲಲ್ಲಿ ಕಲ್ಲು ಬೆಂಚುಗಳೂ ಇವೆ. ಬಯ

ಲಿನ ಸುತ್ತಲೂ ನಾಲ್ಕು ಸುತ್ತು ಓಡಾಡಿ ಒಂದು ಬೆಂಚಿನ ಮೇಲೆ ಮಂಡಿಸಿದೆ. ಸಂಜೆಯ ಶಾಂತ ವಾತಾವರಣ ಮನಸ್ಸಿಗೆ ಬಲೂ ಹಿತಕರ. ಎಷ್ಟೊತ್ತಾದರೂ ಕೂಡಬಹುದು ಎನಿಸಿತು ಮನಕ್ಕೆ.

ಅದೇ ವೇಳೆಗೆ ನಮ್ಮ ನೆರೆಮನೆಯ ಗೃಹಸ್ಥ ಅಲ್ಲೇ ಸ್ವಲ್ಪ ಹೊತ್ತು ಸುತ್ತಾಡಿ ಬಂದು ನನ್ನ ಪಕ್ಕಕ್ಕೇ ಕುಳಿತರು.

"ನಮಸ್ಕಾರ" ಎಂದೆ.

"ನಮಸ್ಕಾರ ರಾಯರೇ ಚೆನ್ನಾಗಿದ್ದೀರಾ ?"

"ಈಚೆಗೆ ಮನೆ ದುರಸ್ತಿಯ ಧೂಳು ಕುಡಿದು ನೆಗಡಿ ಕೆಮ್ಮು ಕಾಣಿಸಿಕೊಂಡಿದೆ. ಇಂದಿಗೆ ಹೆಚ್ಚಿನ ಕೆಲಸ ಮುಗಿಯಿತು. ನಾಳೆ ವೈದ್ಯರ ಬಳಿಗೆ ಹೋಗಬೇಕಾಗುತ್ತೆ. ಪ್ರಾರಂಭದಲ್ಲಿ ಹೋದರೇನೇ ಒಳ್ಳೆಯದು. ಅನಂತರ ಜ್ವರ ಬಂದರೆ ನಾಲ್ಕು ದಿನ ಮಲಗಿಸಿ ಬಿಡುತ್ತೆ. ಅದು ಯಾರಿಗೆ ಬೇಕು ?"

"ನಿಜ. ನಿಜ. ಮೊದಲೇ ಎಚ್ಚರ ತೆಗೆದುಕೊಳ್ಳಬೇಕು. ಜಯಲಕ್ಷ್ಮೀ ಕಾಲೋನಿಯಲ್ಲಿ ಡಾ|| ಸುಬ್ಬರಾಯರಿದ್ದಾರೆ. ತುಂಬಾ ಆದರ್ಶವಂತ–ದಯಾಳು. ಎಲ್ಲರನ್ನೂ ಚೆನ್ನಾಗಿ ಅಂದರೆ ಪ್ರೀತಿಯಿಂದ ನೋಡಿಕೊಳ್ಳುತ್ತಾರೆ. ಹಸ್ತಗುಣವೂ ಒಳ್ಳೆಯದು. ಹೆಚ್ಚಿನ ದುಡ್ಡಿನಾಸೆ ಇಲ್ಲ. ತುಂಬ ಪ್ರಸಿದ್ಧಿಯಾದ ಡಾಕ್ಟರು. ಸದಾ ಜನಭರಿತವಾಗಿರುತ್ತೆ ಕ್ಲಿನಿಕ್. ನೀವು ಅವರನ್ನೇ ಹೋಗಿ ನೋಡಿದರೆ ಒಳ್ಳಿತು. ನಾನು ಯಾವತ್ತೂ ಹೋಗುವುದು ಅವರಲ್ಲಿಗೇ."

ಅವರು ಡಾಕ್ಟರ ವಿಳಾಸವನ್ನು ಕೊಟ್ಟರು. ನಾನು ಜೇಬಿಗಿಟ್ಟುಕೊಂಡೆ.

"ನಿಮ್ಮ ಪರಿಚಯ ಇದೇ ತಾನೇ ಆಗುತ್ತಿದೆ. ನೀವು ಇದೇ ಊರಿನವರೇನು ?"

"ಅಲ್ಲ, ನಮ್ಮ ಊರು ಮೈಸೂರು. ನಾನಿಲ್ಲಿ ಹಿಂದೆ ಅಸಿಸ್ಟೆಂಟ್ ಕಮಿಷನರ್ ಆಗಿ ಕೆಲಸ ಮಾಡುತಿದ್ದಾಗ ಈ ಮನೆಯನ್ನು ಕೊಂಡುಕೊಂಡಿದ್ದೆ.

ಇಲ್ಲಿಯ ವಾತಾವರಣ ನನಗೆ ತುಂಬಾ ಹಿಡಿಸಿದೆ. ಅಲ್ಲದೆ ಮೈಸೂರಿಗೆ ಹತ್ತಿರ. ಅದಕ್ಕಾಗಿ ಇಲ್ಲಿಯೇ ವಾಸ್ತವ್ಯ."

"ಸ್ವಂತ ಊರಿನಲ್ಲಿರುವುದಕ್ಕಿಂತ ಸ್ವಲ್ಪ ದೂರದಲ್ಲಿರುವುದು ಒಳ್ಳೆಯದು. ಬಂಧುಗಳಿದ್ದ ಕಡೆ ಹೋಗಿ ಬರುವವರ ಕಾಟ ಇರುತ್ತೆ. ನಿವೃತ್ತ ಜೀವನದಲ್ಲಿ ಸುಧಾರಿಸುವುದು ಕಷ್ಟ."

"ಹೌದು.... ಅದು ನಿಜವೇ." ನಾನು ತಲೆ ದೂಗಿದೆ.

ಅವರು ಮುಗುಳು ನಕ್ಕರು.

ಮರುದಿನ ಬೆಳಿಗ್ಗೆ ಡಾ|| ಸುಬ್ಬರಾಯರ ವಿಳಾಸ ಹುಡುಕಿಕೊಂಡು ಹೊರಟೆ. ಜಯಲಕ್ಷ್ಮೀ ಕಾಲೋನಿ ಅಂತಹ ಹತ್ತಿರವೇನಲ್ಲ. ಮೈಗೆ ವ್ಯಾಯಾಮ ಬೇಕಾಗಿದ್ದುದರಿಂದ ನಡೆದುಕೊಂಡೇ ಹೋದೆ. ಅಲ್ಲಿ ಇಲ್ಲಿ ವಿಚಾರಿಸಿದ ಮೇಲೆ ವೈದ್ಯಾಲಯ ಸಿಕ್ಕಿತು. ಆರೇಳು ವರ್ಷಗಳ ಅವಧಿಯಲ್ಲಿ ಊರು ಎಷ್ಟೊಂದು ಬೆಳೆದು ಬಿಟ್ಟಿದೆ ಎನಿಸಿತು. ನನ್ನಲ್ಲೇ ಅಚ್ಚರಿ ಪಟ್ಟುಕೊಳ್ಳುತ್ತ ಊರಿನ ಪ್ರಗತಿಯ ಮೇಲೆ ಕಣ್ಣಾಡಿಸಿದೆ.

ವೈದ್ಯಾಲಯದ ವರಾಂಡದಲ್ಲಿ ತುಂಬಿ ಅಂಗಳದಲ್ಲಿಯೂ ಕೂಡಿದ್ದರು ಜನ. ಅಂಗಳದ ವಾಮಾಂಗದಲ್ಲಿ ಜನರಿಗೆ ಕುಳಿತುಕೊಳ್ಳಲು ಆಸ್ಬೆಸ್ಟಾಸ್ ಶೀಟ್ ಹೊಚ್ಚಿದ ತಣ್ಣನೆಯ ಮತ್ತು ವಿಶಾಲವಾದ ಕೊಠಡಿಯನ್ನು ನಿರ್ಮಿಸಿದ್ದುದನ್ನು ಕಂಡೆ. ನಾನಲ್ಲಿ ಸ್ವಲ್ಪಹೊತ್ತು ನಿಂತಿದ್ದು–ಅಲ್ಲಲ್ಲಿ ಅಡ್ಡಾಡಿ ಸಮಯ ಕಳೆಯಲು ಪ್ರಯತ್ನಿಸಿದೆ. ಅಲ್ಲಿದ್ದವರು ಮಾತ್ರವಲ್ಲ; ಇನ್ನೂ ಬರುತ್ತಲೇ ಇದ್ದಾರೆ ಜನ. ಇನ್ನು ಕಾಯಲಾರೆ ಎನಿಸಿ ಬೇಸರ ಮೂಡಿತು ನನಗೆ. ಬೇರೆ ಯಾವುದಾದರೂ ಕ್ಲಿನಿಕ್–ಗೆ ಹೋಗುವುದು ಒಳ್ಳೆಯದು ಎನಿಸಿ ನಾನು ಗೇಟಿನ ಬಾಗಿಲಿಗೆ ಹೋಗುವುದಕ್ಕೂ ಕೈಯಲ್ಲಿ ತರಕಾರಿಯ ಬುಟ್ಟಿಯನ್ನು ಹಿಡಿದುಕೊಂಡು ಒಳ ಬರುತಿದ್ದ ಪರಿಚಿತ ಮುಖ ದೃಷ್ಟಿಗೆ ಬೀಳುವುದಕ್ಕೂ ಸರಿ ಹೋಯಿತು.

ಆದರೆ....

ಆ ತಕ್ಷಣವೇ ಯಾರೆಂಬುದನ್ನು ಗುರುತು ಹಿಡಿಯಲಾರದೆ ಹೋದೆ.

ಅವನು ಪ್ರಸನ್ನ ಮುಖಿಯಾಗಿ ನಮಸ್ಕರಿಸಿ "ಏನು ಸಾರ್? ಹೇಗಿದ್ದೀರಿ? ಎಷ್ಟು ದಿನಗಳ ಮೇಲೆ ನಿಮ್ಮ ಭೇಟಿ?" ಎಂದ ತೆರೆದ ಮನಸ್ಸಿನಿಂದ.

ನಾನು ಒಂದೆರಡು ಗಳಿಗೆ ಸ್ಮೃತಿ ತಪ್ಪಿದಂತೆ ಅವಾಕ್ಕಾದೆ.

"ಅಯ್ಯೊ, ಸ್ವಾಮಿ! ನಿಮ್ಮ ಮರೆವು ನೋಡಿದರೆ ನನಗೆ ಆಶ್ಚರ್ಯ. ನಿಮ್ಮ 'ಸುಬ್ಬು' ಅಲ್ಲವೇ ನಮ್ಮ ಡಾಕ್ಟರು?" ಎಷ್ಟು ಬೇಗ ಮರೆತು ಬಿಟ್ಟಿದ್ದೀರಿ?"

ಆ ತಕ್ಷಣ ಕತ್ತಲಲ್ಲಿ ದೀಪ ತಂದಂತೆ ನಿಚ್ಚಳವಾಗಿ ಹೊಳಯಿತು ನನ್ನ ನೆನಪು.

"ಓ, ಇಲ್ಲಿಯ ಡಾಕ್ಟರು ಸುಬ್ಬೂನೇ? ಅವನಿಲ್ಲಿರುವುದು ನನಗೆ ಹೇಗೆ ಗೊತ್ತು? ನೋಡಿ ಎಷ್ಟೋ ವರ್ಷಗಳಾದುವು. ನನ್ನ ನೆರೆಯುವರು ಹೇಳಿದರು ಡಾ|| ಸುಬ್ಬರಾಯರ ಬಳಿಗೆ ಹೋಗಿ ಎಂದು. ನೆಗಡಿ–ಕೆಮ್ಮು, ಔಷಧಿಗಾಗಿ ಬಂದವನು. ದಾರಿ ಹುಡುಕಿಕೊಂಡು ಬರ ಬೇಕಾಯಿತು. ಡಾಕ್ಟರ ಮುಖ ಇನ್ನೂ ನೋಡಲಿಲ್ಲ. ನಿನ್ನ ಗುರುತೂ ನನಗೆ ತಕ್ಷಣ ಹತ್ತಲಿಲ್ಲ. ವಯಸ್ಸಾಯ್ತು ಬಿಡು. ಹಾಳು ಮರೆವು ಎಷ್ಟು ಬೇಗ ಅಂಟಿಕೊಂಡಿದೆ?"

"ಬನ್ನಿ, ಬನ್ನಿ. ಒಳಗೆ ಮಾತಾಡೋಣ."

ನಾನು ಅವನ ಹಿಂದೆಯೇ ಒಳಹೋದೆ. ರಾಜೂ ಬಹಳ ಹಿಂದೆಯೇ ಸುಬ್ಬೂಗೆ ಅಡಿಗೆಯವನಾಗಿ ಬಂದವನು. ಅವನ ಆಯಸ್ಸು ಇಲ್ಲಿಯೇ ಕಳೆದಿದೆ. ನನ್ನನ್ನು ಬೈಠಕ್ ಖಾನೆಯಲ್ಲಿ ಕುಳ್ಳಿರಿಸಿ, ಒಳಹೋಗಿ ಕೈಕಾಲು ಮಜ್ಜನ ಮಾಡಿ ಶುಚಿರ್ಭೂತನಾಗಿ ಬಿಸಿಬಿಸಿ ಕಾಫಿಯ ಬಸಿಯೊಡನೆ ಆಗಮಿಸಿದ.

"ಈಗೇಕಪ್ಪಾ, ಈ ತೊಂದರೆ ತೆಗೆದುಕೊಂಡೆ?"

ನಾನು ಹಾಗೆಂದರೂ ನೆಗಡಿಯಿಂದ ಭಾರವಾದ ಮೈಗೆ ಬಿಸಿಬಿಸಿ ಕಾಫಿಯ ಅಗತ್ಯವಿದ್ದುದು ನಿಜವೇ. ನಾನು ಕಾಫಿಯನ್ನು ಹೀರುತ್ತ ಕೇಳಿದೆ,

"ಈಗ ನರೇಂದ್ರ ಎಲ್ಲಿದ್ದಾನೆ?"

"ಅಯ್ಯೊ, ಬಿಡಿ. ಅದೊಂದು ದುರಂತ ಕತೆ!"

"ಅಂದರೆ... ?"

"ಏನು ಹೇಳಲಿ ಸ್ವಾಮಿ? ನಿಮಗೆ ತಿಳಿದಂತೆ ಅಮ್ಮಾವರು ನರೇಂದ್ರ ತಿಂಗಳ ಮಗುವಿರುವಾಗ ಎಳೆ ವಯಸ್ಸಿನಲ್ಲೇ ತೀರಿಕೊಂಡರು. ಆ ಮಗುವಿಗಾಗಿ ಪುನರ್ವಿವಾಹ ಆಗಲಿಲ್ಲ ನಮ್ಮ ಡಾಕ್ಟರು. ಪಸ್ನಾಗ ಪುರದಲ್ಲಿ ಮಗುವಿನೊಂದಿಗೆ ಅಕ್ಕನ ಮನೆಯಲ್ಲೇ ಇದ್ದು ಬಿಟ್ಟರು. ಅಕ್ಕ ಮಗುವನ್ನು ಸಾಕಿದ್ದು ಹೌದಾದರೂ ಮಗುವಿಗೆ ಡಾಕ್ಟರ ಆರೈಕೆಯೇ ಹೆಚ್ಚು. ತಾಯಿಗಿಂತ ತಾಯಿಯಾಗಿ ಸಲಹಿದ್ದಾರೆ ಮಗನನ್ನು. ಇಲ್ಲಿಗೆ ಭಾವನಿಗೆ ವರ್ಗವಾಗಿ ಬಂದಾಗ ಡಾಕ್ಟರು ಸಹ ಇಲ್ಲಿಗೇ ಬಂದರು. ನರೇಂದ್ರ ಇಲ್ಲಿಯೇ ಹೈಸ್ಕೂಲು ವರೆಗೆ ಓದಿದನಂತರ ಮೈಸೂರಿಗೆ ಹೋಗಿ ವೈದ್ಯ ಶಾಸ್ತ್ರ ಓದಿ ಡಾಕ್ಟರಾದ. ಡಾಕ್ಟರ ಅಕ್ಕನಿಗೆ ಮೂವರು ಗಂಡು ಮಕ್ಕಳು. ಕೊನೆಯ ಮಗಳು ಕಲ್ಪನಾ. ಮೈಸೂರಿನಲ್ಲಿ ವೈದ್ಯ ಶಾಸ್ತ್ರ ಓದಿದವಳು. ನರೇಂದ್ರ ಅವಳನ್ನೇ ಮದುವೆಯಾಗಬೇಕೆಂದು ಹಠಹೊತ್ತು ಕಾತರಿಸಿದ. ಡಾಕ್ಟರು ಮತ್ತು ಅಕ್ಕ ಭಾವ ಸಹ ಅವಳ ಓದು ಮುಗಿಯಲಿ ಎಂದು ಹಿತವಾದ ಹೇಳಿದರು. ಏತನ್ಮಧ್ಯೆ, ಅವನಿಗೆ ಅಮೆರಿಕೆಗೆ ಹೋಗಲು ಸ್ಕಾಲರ್‌ಷಿಪ್ ಸಿಕ್ಕಿತು. ನೀನು ಅಮೆರಿಕೆಯಲ್ಲಿ ಎಂ. ಎಸ್. ಮುಗಿಸಿ ಬಾ. ಅಷ್ಟರಲ್ಲಿ ಅವಳ ಎಂ.ಬಿ.ಬಿ.ಎಸ್. ಮುಗಿದಿರುತ್ತೆ. ಅನಂತರ ಮದುವೆಯಾಗು. ಈಗಲೇ ಬೇಕಿದ್ದರೆ ನಿಶ್ಚಿತಾರ್ಥ ಮಾಡಿಕೊಳ್ಳೋಣ ಎಂದರು ಎಲ್ಲಾ. ಅದಕ್ಕೂ ಅವನು ಒಪ್ಪಲಿಲ್ಲ. ಹಾಗೆಂದು ಈ ಒಳ್ಳೆ ಸಂಬಂಧ ಬಿಟ್ಟು ಕೊಡಲು ಯಾರಿಗೂ ಇಷ್ಟವಿರಲಿಲ್ಲ. ಕಲ್ಪನಾ ಬಹಳ ಮುದ್ದಾದ ಹುಡುಗಿ. ನರೇಂದ್ರನೂ ತುಂಬಾ ಚೆನ್ನಾದ ಹುಡುಗ. ಜೋಡಿ ಅಂದರೆ ಜೋಡಿ. ಕೊನೆಗೆ ಎಲ್ಲರೂ ಒಪ್ಪಿಕೊಂಡರು. ಮದುವೆ ವಿಜೃಂಭಣೆಯಿಂದ ನಡೆದು ಹೋಯಿತು. ಸುಮಾರು ಎಂಟು ಹತ್ತು ತಿಂಗಳು ಇಬ್ಬರೂ ಸುಖ ಸಂತೋಷದಿಂದ ಕಾಲ ಹರಣ ಮಾಡಿದರು. ಅನಂತರ ಅವನು ಅಮೆರಿಕೆಗೆ ಹೊರಟ. ಆಗ ಅವಳು ಓದುತಿದ್ದುದು ಮೂರನೆಯ ವರ್ಷದಲ್ಲಿ. ಅವಳೀಗ ಹೌಸ್ ಸರ್ಜೆನ್ಸಿ ಮುಗಿಸಿ ಕೆಲಸ ಮಾಡುತಿದ್ದಾಳೆ ಮೈಸೂರಿನ ಚೆಲುವಾಂಬಾ ಆಸ್ಪತ್ರೆಯಲ್ಲಿ. ಅವನು ಹೊರಟಾಗ ಇವಳು ಐದು ತಿಂಗಳ ಗರ್ಭಿಣಿ. ಎರಡು ವರ್ಷದ ಗಂಡು ಮಗ ಬಾಲ ಕೃಷ್ಣನಂತಿದ್ದಾನೆ. ನರೇಂದ್ರನಿಗೆ ಎಲ್ಲರೂ ಪ್ರೀತಿಯಿಂದ ಬಂದು ಹೋಗಲು ಕಾಗದ ಬರೆಯುತಿದ್ದರು. ಅವನು ಮೊದಲ ಎರಡು ವರ್ಷಗಳು ಕಾಗದ ಪತ್ರಗಳನ್ನು ಬರೆಯುತಿದ್ದ. ಟ್ರಂಕಾಲ್ ಮಾಡು

ತಿದ್ದ. ಅನಂತರ ಉದಾಸೀನ ಕಾಣಿಸ ಹತ್ತಿದನಿಂದಲೇ ಎಲ್ಲರೂ ಅವನಿಗೆ ಬಂದು ಹೋಗಲು ಒತ್ತಾಯಿಸಿದರು. ಕಳೆದ ವರ್ಷ ತಿಂಗಳ ಮಟ್ಟಿಗೆ ಬಂದಿದ್ದ. ಜೊತೆಗೊಬ್ಬ ಪ್ರೇಯಸಿ. ಅವಳನ್ನು ಯಾರ ಕಣ್ಣಿಗೂ ಬೀಳದಂತೆ ಹೋಟೆಲಿ ನಲ್ಲಿ ಇರಿಸಿ ಬಂದಿದ್ದ. ಅದನ್ನು ಯಾರೂ ಗೊತ್ತು ಹಚ್ಚಲಿಲ್ಲ. ಅವನನ್ನು ಬೀಳ್ಕೊಡಲು ವಿಮಾನ ನಿಲ್ದಾಣಕ್ಕೆ ಎಲ್ಲರೂ ಹೋಗಿದ್ದರು. ಯಾರಿಗೂ ಸುಳಿವು ಕೊಡಲಿಲ್ಲ, ನೋಡಿ. ಅನಂತರ ಅವನು ಭಾರತದಲ್ಲೆಲ್ಲಾ ಅವಳೊಂದಿಗೆ ಓಡಾಡಿದ್ದಾನೆಂಬುದು ಸ್ವಲ್ಪ ತಡವಾಗಿ ತಿಳಿಯಿತು. ತೀರ ದುರಾದೃಷ್ಟ. ನಮ್ಮ ಡಾಕ್ಟರನ್ನು ನೋಡಿದರೆ ಆದರ್ಶ ಪುರುಷ. ಅವರಲ್ಲಿ ಯಾವೊಂದು ಗುಣದೋಷವೂ ಇಲ್ಲ. ತಾನಾಯ್ತು ತನ್ನ ಕೆಲಸವಾಯ್ತು. ದಯೆ–ಕನಿಕರ ಗಳ ಗಣಿಯಾದ ದೇವತಾ ಪುರುಷ. ನನ್ನನ್ನು ತಮ್ಮನಂತೆಯೇ ನೋಡಿ ಕೊಂಡಿದ್ದಾರೆ. ನನ್ನ ಮೂರು ಮಕ್ಕಳನ್ನೂ ಅವರೇ ಓದಿಸುತಿದ್ದಾರೆ. ನಾನು ಅವರ ಸೇವೆ ಎಷ್ಟು ಮಾಡಿದರೂ ಸಾಲದು. ಇಂತಹವರ ಹೊಟ್ಟೆಯಲ್ಲಿ ಅಂತಹ ಮಗ! ಎಲ್ಲರ ಸುಖ ಶಾಂತಿಗೂ ಎಳ್ಳು ನೀರು ಬಿಟ್ಟು ದುಃಖದ ಕಡಲಿ ನಲ್ಲಿ ಮುಳುಗಿಸಿದ. ಡಾಕ್ಟರೊಂದಿಗೆ ಅಕ್ಕ–ಭಾವ–ಕಲ್ಪನಾ ಎಲ್ಲರೂ ಸೋತು ಸೊರಗಿದ್ದಾರೆ. ಹೀಗಾಗುತ್ತೆ ಎಂದು ಯಾರೂ ಭಾವಿಸಿರಲಿಲ್ಲ. ಈಗ ಏನೂ ಮಾಡುವಂತಿಲ್ಲ. ಅಮೆರಿಕೆಗೆ ತಾನೂ ಹೊರಡ ಬೇಕಾಗಿದ್ದ ಕಲ್ಪನಾ ಆ ಯೋಚನೆಯನ್ನೇ ಬಿಟ್ಟಿದ್ದಾಳೆ. ಚಿಂತೆ ಹಚ್ಚಿಕೊಂಡು ಸೊರಗಿ ಹಂಚಿ ಕಡ್ಡಿ ಯಾಗಿರುವುದನ್ನು ನೋಡಿದರೆ ಕರುಳಿಗೆ ಚೂರಿ ಇರಿದಷ್ಟು ಸಂಕಟ ಸ್ವಾಮಿ. ಹೇಳುವಂತಿಲ್ಲ ಅನುಭವಿಸುವಂತಿಲ್ಲ. ನೀವು ನಮ್ಮ ಡಾಕ್ಟರೊಂದಿಗೆ ನರೇಂದ್ರನ ವಿಚಾರ ಪ್ರಸ್ತಾಪ ಮಾಡಬೇಡಿ. ಕೇಳಿದರೆ ನೊಂದುಕೊಳ್ಳುತ್ತಾರೆ."

"ಇಲ್ಲಪ್ಪಾ" ಎಂದಷ್ಟು ಮಾತ್ರ ನುಡಿದೆ. ಒಡಲು ಸಂಕಟದಿಂದ ತುಂಬಿ ಹೋಯಿತು. ಎದೆಯಾಳದಿಂದ ಬಿಸು ಸುಯ್ಲೊಂದು ತಪ್ಪಿಸಿಕೊಂಡಿತು, ನನ ಗರಿಯದಂತೆಯೇ.

o o o o

ದೃಷ್ಟಿಯನ್ನು ಗಡಿಯಾರದ ಮೇಲೆ ಹರಿಸಿದೆ. ಮುಳ್ಳು ಒಂದು–ಹದಿ

ನ್ನೈದರ ಗಡಿಯನ್ನು ದಾಟುವುದರಲ್ಲಿತ್ತು. ಇನ್ನು ಅಲ್ಲಿ ಉಳಿಯುವುದು ಸರಿಯಲ್ಲವೆಂದು ಹೊರಡಲು ಎದ್ದುನಿಂತೆ. ಆದರೆ, ಆ ರಾಜು ಕೇಳಬೇಕಲ್ಲ.

"ನೀವು ಬಂದಿದ್ದು ತಿಳಿದರೆ 'ಏಕೆ ಉಳಿಸಿಕೊಳ್ಳಲಿಲ್ಲ?' ಎಂದು ನನ್ನನ್ನೇ ತರಾಟೆಗೆ ತೆಗೆದುಕೊಳ್ಳುತ್ತಾರೆ ಡಾಕ್ಟರು. ನೀವೀಗ ಹೋಗುವುದೇ ಬೇಡ. ಇಷ್ಟರಲ್ಲೇ ಒಳಗಡೆ ಬರುತ್ತಾರೆ ಡಾಕ್ಟರು."

"ನಾಳೆ ನಾನು ಖಂಡಿತ ಬರುವೆ."

"ಸ್ವಾಮಿ, ದಯವಿಟ್ಟು ಕ್ಷಮಿಸಿ" ಎಂದು ಕೈ ಮುಗಿದು ಬಿಟ್ಟ ರಾಜು.

"ಒತ್ತಾಯ ಪಡಿಸಬೇಡ ರಾಜೂ..."

"ಇನ್ನು ಐದೇ ನಿಮಿಷವಿದ್ದು ಹೋಗಿರಿ."

ಆ ಮಾತನ್ನು ನಿರಾಕರಿಸಲು ಸಾಧ್ಯವಾಗಲಿಲ್ಲ. ಅದೇ ಮುಹೂರ್ತದಲ್ಲಿ ಡಾ|| ಸುಬ್ಬು ಒಳಗಡೆ ಪದಾರ್ಪಣೆ ಮಾಡಿದ. ಉದ್ಬುದ್ಧವಾಗಿ ಮುಂಬೆಳೆದ ಬೆಳ್ಳಿಯ ಕೂದಲು. ಬಿಳಿಯ ಕುರ್ತಾ ಬಿಳಿಯ ಚೂಡಿದಾರ್‌ಗಳಿಂದ ದೇಹದಾದ್ಯಂತ ಧವಳ ಕಾಂತಿ ತುಂಬಿ ಕಣ್ಗೆಸೆದಾಗ ನಾನು ನಿಜವಾಗಿಯೂ ಸಂತುಷ್ಟನಾದೆ. ಅವನು ಅತ್ಯಾನಂದದಿಂದ ಹಸ್ತಲಾಘವ ನೀಡಿ ಗಾಢಾಲಿಂಗನೆ ಮಾಡಿಕೊಂಡು ನುಡಿದ,

"ನಿನ್ನನ್ನು ನೋಡದೆ ಎಷ್ಟು ದಿನಗಳಾಗಿತ್ತು ರಾಮು?"

"ನಾನೀ ಊರಿಗೆ ಬಂದು ಎರಡು ತಿಂಗಳಾದುವು. ನೀನಿಲ್ಲಿರುವುದು ನನಗೆ ಗೊತ್ತೇ ಇರಲಿಲ್ಲ. ತಿಳಿದಿದ್ದರೆ, ಅಂದೇ ನಿನ್ನನ್ನು ನೋಡಬಹುದಾಗಿತ್ತು. ನಾನೀಗ ಸರ್ವಿಸಿನಿಂದ ನಿವೃತ್ತಿ ಹೊಂದಿ ವಿರಾಮ ಜೀವನ ನಡೆಸುತ್ತಿರುವೆ. ಹಿಂದೆ ಇಲ್ಲಿ ಸರ್ವೀಸಿನಲ್ಲಿದ್ದಾಗ ಒಂದು ಚಿಕ್ಕ ಮನೆಯನ್ನು ಕೊಂಡುಕೊಂಡಿದ್ದೆ. ಅದರಲ್ಲೇ ಈಗ ವಾಸ."

"ಹಾಗಾದರೆ ಮುಂದೆ ನೀನು ಇಲ್ಲೇ ಇರುತ್ತಿ ಅನ್ನು?"

"ಹೌದು ಸುಬ್ಬೂ...."

"ನಾವಿಬ್ಬರೂ ಮೈಸೂರಿನಲ್ಲಿ ಓದುತಿದ್ದ ದಿನಗಳನ್ನು ವಿರಾಮಕಾಲದಲ್ಲಿ ಎಷ್ಟೋ ಬಾರಿ ನೆನಪಿಸಿಕೊಳ್ಳುತಿದ್ದೆ."

"ಹೌದಪ್ಪಾ, ಆಗಿನ ದಿನಗಳು ಎಷ್ಟು ಶಾಂತಿಯುತವಾಗಿದ್ದುವು.....

ನಾವಾಗ ಆಡುತ್ತಿದ್ದ ಆಟಗಳೇನು? ಚಾಮುಂಡಿ ಬೆಟ್ಟಕ್ಕೆ ಪಂಥ ಕಟ್ಟಿ ಹತ್ತುತ್ತಿದ್ದುದನ್ನು ಮರೆಯುವಂತೆಯೇ ಇಲ್ಲ. ಆಗ ದಿನಗಳು ಲೀಲಾಮಯ ವಾಗಿ ಓಡುತ್ತಿದ್ದುವು."

ಇಬ್ಬರೂ ಅಕ್ಕಪಕ್ಕದಲ್ಲಿ ಸೋಫಾದ ಮೇಲೆ ಕುಳಿತು ಹಳೆಯ ದಿನ ಗಳನ್ನು ಮೆಲುಕು ಹಾಕಿದರು. ತಾರುಣ್ಯದಲ್ಲಿ ಕಾಲೇಜುಗಳು ಬೇರೆ ಬೇರೆ ಯಾಗಿ ಹಾದಿ ಕವಲೊಡೆದರೂ ಸ್ನೇಹ ಸಂಬಂಧ ಹೇಗೇ ಘನವಾಗಿ ಬೆಳೆದಿತ್ತು ಎಂಬುದನ್ನು ಇಬ್ಬರೂ ನೆನೆಸಿಕೊಂಡು ಸಂತಸದ ಸವಿಯನ್ನುಂಡರು.

ಆ ವೇಳೆಗಾಗಲೇ ರಾಜು ಇಬ್ಬರಿಗೂ ಮೇಜಿನ ಮೇಲೆ ತಟ್ಟೆಗಳನ್ನಿಟ್ಟು ಊಟಕ್ಕೆ ಅಣಿಗೊಳಿಸಿದ್ದ. ನಾನು ಬೇಡವೆಂದರೂ ಕೇಳಲಿಲ್ಲ.

"ಇಲ್ಲಿಗೆ ಬಂದು ಮನೆ ದುರಸ್ತಿಯ ಧೂಳಿನಲ್ಲಿ ಸಿಕ್ಕಿ ನೆಗಡಿ ಕೆಮ್ಮುಗಳು ಮೈಕೈಗಳ ನೋವು ಇಂಥ ಸಣ್ಣ ಪೀಡೆಗಳಿಂದ ನರಳುತ್ತಿರುವೆ. ಆದ್ದರಿಂದ ಡಾಕ್ಟರನ್ನು ಹುಡುಕಿಕೊಂಡು ಬಂದವನು. ನೀನಿಲ್ಲಿರುವುದು ರಾಜುವನ್ನು ಕಂಡ ಮೇಲೆಯೇ ಗೊತ್ತು. ಮೊದಲು ರಾಜು ಗುರುತು ಹತ್ತಲಿಲ್ಲ. ಅವನೇ ಮಾತಾಡಿಸಿದ."

"ಭಾವನಿಗೆ ಈ ಊರಿಗೆ ವರ್ಗವಾದಾಗಲೇ ನನಗೂ ಇಲ್ಲಿಗೆ ಕೇಳಿ ವರ್ಗ ಮಾಡಿಸಿಕೊಂಡೆ. ಅವರೊಂದಿಗೇ ನಾನೂ ಇದ್ದು ಬಿಟ್ಟೆ. ನಮ್ಮಿಬ್ಬರಿಗೂ ಚಂದ್ರಾಪುರ ತುಂಬಾ ಒಗ್ಗಿ ಹೋಗಿದೆ. ಇದು ನಮ್ಮೂರಿಗೂ ಹತ್ತಿರ... ಮೈಸೂರಿಗೂ ಹತ್ತಿರ. ವಾತಾವರಣವೂ ಹಿತಕರ. ಈ ಎಲ್ಲಾ ಕಾರಣದಿಂದ ನಿವೃತ್ತಿಯ ನಂತರ ಇಲ್ಲಿಗೇ ಬಂದು ಬಿಟ್ಟೆ. ಈಗ ಭಾವ ನಿವೃತ್ತಿಹೊಂದಿ ಪಟ್ನಾಗ ಪುರದಲ್ಲಿದ್ದಾರೆ. ತುಂಬಾ ಹಳೆಯ ಕಾಲದ ಆಳುಗಳು ಇನ್ನೂ ಇದ್ದಾರೆ ಅವ ರಲ್ಲಿ. ಮಗ ಸೊಸೆಯರೂ ಅಲ್ಲಿಯೇ ಇದ್ದಾರೆ. ಇಲ್ಲಿ–ಅಲ್ಲಿ ಎರಡು ಕಡೆಯೂ ಇರುತ್ತಾರೆ ಅಕ್ಕ–ಭಾವ. ಇಲ್ಲಿ ಅವರಿಗೆ ಬಹಳ ಮಂದಿ ಹಳೆಯ ಬಂಧು ಮಿತ್ರ ರಿರುವುದರಿಂದ ಕಾಲ ಹರಣವು ಸುಲಭ. ನಾನವರನ್ನು ಇಲ್ಲಿಯೇ ಇರಲು ಒತ್ತಾಯಿಸುತ್ತಿರುವೆ...."

"ಅದು ಒಳ್ಳೆತು. ನಿನಗೂ ಕಂಪನಿ ಒದಗುತ್ತೆ. ಅವರಿಗೆ ವೈದ್ಯಕೀಯ ಸೌಲಭ್ಯವೂ ದೊರೆಯುತ್ತೆ."

ಸುಬ್ಬೂ ಟವಲ್ಲನ್ನು ತಂದುಕೊಟ್ಟ "ಏಳು ಊಟ ಮಾಡೋಣ" ಎಂದ.

ಅವನ ಹಿಂದೆಯೇ ಹೋದೆ. ಇಬ್ಬರೂ ಮುಖಮಜ್ಜನ ಮಾಡಿ ಊಟಕ್ಕೆ ಕುಳಿತೆವು. ರಾಜು ಆಗಲೇ ನನಗಾಗಿ ವಿಶೇಷ ಅಡಿಗೆಯನ್ನು ತಯಾರಿಸಿದ್ದ. ಪಾಯಸ, ಬೋಂಡ ಇತ್ಯಾದಿ ಇತ್ಯಾದಿ. ನಗೆ ಮಾತುಗಳೊಡನೆ ಊಟ ಮುಗಿಯಿತು. ಸುಬ್ಬು ಲೋಕಾಭಿರಾಮವಾಗಿ ಮಾತಾಡುತ್ತ,

"ನೋಡು, ರಾಮು ನನಗೆ ಸಿಗರೇಟು ಮತ್ತೊಂದು ಮಗದೊಂದು ಯಾವ ಹಾಳು ಹವ್ಯಾಸವೂ ಇಲ್ಲ. ಹಳ್ಳಿಯಲ್ಲಿದ್ದ ಆಸ್ತಿಯನ್ನು ಮಾರಿ ಅಕ್ಕನಿಗೆ ಎರಡು ಲಕ್ಷ ಕೊಟ್ಟೆ. ಉಳಿದ ಹತ್ತು ಲಕ್ಷವನ್ನು ಸೊಸೆ ಮತ್ತು ಮೊಮ್ಮಗನಿಗೆ ಇಟ್ಟಿರುವೆ. ನನ್ನ ನಂತರ ಈ ಮನೆಯನ್ನು ರೆಡ್‌ಕ್ರಾಸ್ ಸೊಸೈಟಿಗೆ ಕೊಡುವ ಯೋಚನೆಯಲ್ಲಿರುವೆ. ಇನ್ನು ಮುಂದೆ ನಾನು ಮಾಡಬೇಕಾದುದು ಏನೂ ಇರುವುದಿಲ್ಲ. ದೇಹಾಂತ್ಯದವರೆಗೆ ಹೇಗೂ ಪ್ರ್ಯಾಕ್ಟೀಸ್ ಮಾಡಬಹುದು. ಅದೊಂದು ಸಮಾಧಾನ ನನಗೆ. ಇನ್ನೇನು ಬೇಕು ?"

"ನಿಜ...ಕಾಲಹರಣಕ್ಕೆ ಸರಾಗ. ನನ್ನಂತೆ ಆಕಾಶ ನೋಡಬೇಕಿಲ್ಲ."

"ಭಾವ ಬಂದರೆ ಕ್ಲಿನಿಕ್ಕಿನಲ್ಲಿ ನನಗೆ ಸಹಾಯ ಮಾಡುತ್ತಾರೆ. ಅಕ್ಕ ಒಳಗಡೆ ನೋಡಿಕೊಳ್ಳುತ್ತಾಳೆ. ನಮ್ಮ ನಮ್ಮ ಬಾಂಧವ್ಯ ಅನುಪಮ."

ಅವನ ಅನುಭಾವ ಸ್ಫುರಣೆಯ ಹಿಂದೆ ಅಡಗಿದ್ದ ಅಗಾಧವಾದ ನೋವನ್ನು ನಾನು ಕಂಡುಕೊಂಡೆ. ಆದರೆ, ಏನು ಹೇಳಲೂ ಮನಸ್ಸು ಮುಂದಾಗಲಿಲ್ಲ. ನನ್ನ ಒಡಲಾಳದಲ್ಲಿ ಕಸಿವಿಸಿ ಮೂಡಿತು. ನನ್ನನ್ನು ಸಾಹಸಪೂರ್ವಕವಾಗಿ ಹತೋಟಿಯಲ್ಲಿಟ್ಟುಕೊಂಡೆ. ಇಂತಹ ಒಳ್ಳೆಯ ಕುಟುಂಬಕ್ಕೆ ಎಂತಹ ದ್ರೋಹಿ ಮಗ...ಅಂತರ್ವಾಣಿ ಚೀರಿತು.

ಸ್ವಲ್ಪ ಹೊತ್ತು ರುದ್ರಮೌನ ಆವರಿಸಿತು. ಅನಂತರ ಅವನೇ ಮೌನ ಮುರಿದ.

"ನಾವು ಏನೋ ಬಯಸುತ್ತೇವೆ ವಿಧಿ ಇನ್ನೇನೋ ಬಯಸುತ್ತದೆ. ನಾವು ಹೀಗೇ ಎಂದು ಏನನ್ನೂ ನಿರ್ಣಯಿಸಲಾರೆವು. ಧನಕನಕಗಳೇ ಆಗಲೀ, ಧರ್ಮ ಕರ್ಮಗಳೇ ಆಗಲೀ, ಆದರ್ಶವೇ ಆಗಲೀ, ಮನಸ್ಸಿಗೆ ಶಾಂತಿಯನ್ನು ನೀಡುತ್ತೆ ಎಂದು ದೃಢವಾಗಿ ಹೇಳುವಂತಿಲ್ಲ. ಎಲ್ಲವೂ ಕಾಲೋಚಿತ."

"ನಿಜ ಸುಬ್ಬೂ...."

"ನಾನು ಯಾರಿಗೂ ಕೇಡು ಬಯಸಿದವನಲ್ಲ. ಅನ್ಯಾಯ ಮಾಡಿದವನೂ ಅಲ್ಲ. ಆಡಂಬರ–ಬೂಟಾಟಿಕೆಗಳಿಗೆ ಆಸ್ಪದ ಕೊಟ್ಟವನಲ್ಲ. ವೈದ್ಯಶಾಸ್ತ್ರ ದಿಂದ ಜನ ಸೇವೆಯನ್ನು ಕಲಿತುಕೊಂಡೆ. ಸತಿ ಮೊದಲೇ ಗತಿಸಿದುದರಿಂದ ವಿಶ್ವ ಪ್ರೇಮವನ್ನು ಅರಿತುಕೊಂಡೆ. ಈಗ ನನ್ನಲ್ಲಿ ಸ್ವಾರ್ಥಕ್ಕೆ ಎಡೆಯಿಲ್ಲ. ಇನ್ನು ಮುಂದಿನ ಕಾಲ ಬಹಳವೇನಿಲ್ಲ. ಅಲ್ಲಿಯ ತನಕ ಈ ಕೈಕಾಲುಗಳು ಗಟ್ಟಿಯಾಗಿದ್ದರೆ ಸಾಕು....ಅದಷ್ಟೇ ನನ್ನ ಹಾರೈಕೆ.

"ಸುಬ್ಬೂ, ದೇವರು ಖಂಡಿತ ನಿನ್ನಕಡೆಗಿರುತ್ತಾನೆ. ಯೋಚಿಸಬೇಡ. ನಿನಗೆ ಶುಭವಾಗಲಿ ಎಂದು ಹಾರೈಸುವೆ."

"ಅಭಿನಂದನೆಗಳು."

ಅದೇ ವೇಳೆಗೆ ಮನೆಯ ಮುಂದೆ ಅಟೋ ನಿಂತಿತು. ಅಕ್ಕ ಭಾವ ಮೊಮ್ಮಗುವಿನೊಂದಿಗೆ ಇಳಿದರು. ಆಗ ಸುಬ್ಬುವಿಗಾದ ಆನಂದ ಅಷ್ಟಿಷ್ಟಲ್ಲ. ಎರಡೂ ಕೈಗಳಿಂದ ಸ್ವಾಗತ ನೀಡಿ ಮಗುವನ್ನೆತ್ತಿಕೊಂಡು ಲಲ್ಲೆಗೈದ. ಎರಡು ವರ್ಷದ ಮಗು ತಂದೆಯ ತದ್ರೂಪು. ಸುಬ್ಬು ನನ್ನನ್ನು ಅವರಿಗೆ ಪರಿಚ ಯಿಸಿದ.

"ನಮಸ್ಕಾರ..."

"ನಮಸ್ಕಾರ..." ದಂಪತಿಗಳು ಪ್ರತಿವಂದಿಸಿದರು.

"ನಿಮ್ಮನ್ನು ಹಿಂದೆಯೇ ನೋಡಿರುವೆ" ಎಂದರು ರಂಗಸ್ವಾಮಿ.

"ಹೌದು. ನಾನೂ ನಿಮ್ಮನ್ನು ನೋಡಿರುವೆ."

ನಾನು ಮಗುವಿಗೊಂದು ಹೂ ಮುತ್ತನೊತ್ತಿದೆ.

— ೦ —

ಮಲ್ಲಿಕಾ ಕೃತಿಗಳು

(ಕವಿತಾ ಸಂಕಲನ)

(ಸಂಜೀವನ ಕಾವ್ಯ)

(ಪೌರಾಣಿಕ ನಾಟಕ)

(ಸಾನೆಟ್‌ಗಳು)

(ಗದ್ಯ ಕಾವ್ಯ)

(ಉಪನಿಷತ್ಕಥಾ)

(ಶಿಶು ಸಾಹಿತ್ಯ)

ಲಕ್ಷ್ಮೀ ಪ್ರಕಾಶನ

170, ಲ್ಯಾಂಗ್ ಫೋರ್ಡ್ ರೋಡ್, ಬೆಂಗಳೂರು–560 025